prajavani.net prajavani | ಮಂಗಳವಾರ, ಜನವರಿ 13, 2026 | ಬೆಂಗಳೂರು | ₹ 7.00 | ಸಂಪುಟ 79 | ಸಂಚಿಕೆ 13 | ಪುಟ 14 | www.prajavani.net

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಕ್ಷಣ ಕ್ಷಣದ ಅಪ್‌ಡೇಟ್‌ಗಳಿಗಾಗಿ ಸ್ಕ್ಯಾನ್ ಮಾಡಿ

ಸೆನ್ಸೆಕ್ಸ್ 83,878 | ನಿಫ್ಟಿ 25,790 | $/₹ 90.17 | ಚಿನ್ನ (Std. 10g) ₹1,46,400 (ಬೆಂಗಳೂರು) | ಶುದ್ಧ ಬೆಳ್ಳಿ (kg) ₹2,79,100 (ಬೆಂಗಳೂರು)

GOVERNMENT OF INDIA

ವಿಕಸಿತ ಭಾರತ – ಉದ್ಯೋಗ ಖಾತರಿ ಮತ್ತು ಆಜೀವಿಕ ಮಿಷನ್ (ಗ್ರಾಮೀಣ) : ವಿಬಿ–ಜಿ ರಾಮ್ ಜಿ
(ವಿಕಸಿತ ಭಾರತ – ಜಿ ರಾಮ್‌ಜಿ) ಕಾಯ್ದೆ, 2025

125 ದಿನಗಳ
ಖಚಿತ ವೇತನ ಉದ್ಯೋಗ

ಪ್ರತಿ ಗ್ರಾಮದಲ್ಲೂ ಮೂಲ ಸೌಕರ್ಯಗಳ ಸ್ಥಾಪನೆ
ರಸ್ತೆಗಳನ್ನು ನಿರ್ಮಿಸಲಾಗುತ್ತದೆ, ಶಾಲೆಗಳು, ಅಂಗನವಾಡಿಗಳು ಮತ್ತು ಆಸ್ಪತ್ರೆಗಳು ತಲೆಯೆತ್ತುತ್ತವೆ
ಈ ಮೂಲಕ ಪ್ರಗತಿಯನ್ನು ಸೂಕ್ತವಾಗಿ ಯೋಜಿಸಲಾಗಿದೆ

cbc 35101/13/0071/2526

ವಿಕಸಿತ ಗ್ರಾಮ ಪಂಚಾಯತ್‌ಗಳು ವಿಕಸಿತ ಭಾರತದ ಮಾರ್ಗ ರೂಪಿಸುತ್ತವೆ

ಪಾಲಿಕೆ ಚುನಾವಣೆಗೆ ಗಡುವು

ಜೂನ್ 30ರೊಳಗೆ ಪ್ರಕ್ರಿಯೆ ಮುಗಿಸಿ: ರಾಜ್ಯಕ್ಕೆ 'ಸುಪ್ರೀಂ' ನಿರ್ದೇಶನ

ಪ್ರಜಾವಾಣಿ ವಾರ್ತೆ

ನವದೆಹಲಿ: ಗ್ರೇಟರ್ ಬೆಂಗಳೂರು ಪ್ರಾಧಿಕಾರದ (ಜಿಬಿಎ) ವ್ಯಾಪ್ತಿಯ ಐದು ಪಾಲಿಕೆಗಳಿಗೆ ಜೂನ್ 30ರೊಳಗೆ ಚುನಾವಣೆ ಪ್ರಕ್ರಿಯೆ ಮುಗಿಸಬೇಕು ಎಂದು ಸುಪ್ರೀಂ ಕೋರ್ಟ್ ಸೋಮವಾರ ರಾಜ್ಯ ಸರ್ಕಾರಕ್ಕೆ ಗಡುವು ವಿಧಿಸಿದೆ.

ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್ ಮತ್ತು ನ್ಯಾಯಮೂರ್ತಿ ಜಾಯ್‌ಮಾಲ್ಯ ಬಾಗ್ಚಿ ಅವರ ಪೀಠವು, ವಾರ್ಡ್‌ವಾರು ಅಂತಿಮ ಮೀಸಲಾತಿಯನ್ನು ಫೆ.20ರೊಳಗೆ ಪ್ರಕಟಿಸುವಂತೆ ನಿರ್ದೇಶನ ನೀಡಿತು.

ರಾಜ್ಯ ಸರ್ಕಾರದ ಪರ ವಾದ ಮಂಡಿಸಿದ ಹಿರಿಯ ವಕೀಲ ಅಭಿಷೇಕ್ ಮನುಸಿಂಘ್ವಿ, 'ಚುನಾವಣೆಯ ಪೂರ್ವಸಿದ್ಧತೆ ಪ್ರಕ್ರಿಯೆ ಬಹುತೇಕ ಮುಗಿದಿದೆ. ವಾರ್ಡ್‌ವಾರು ಅಂತಿಮ ಮೀಸಲಾತಿ ಪ್ರಕ್ರಿಯೆ ಪೂರ್ಣಗೊಳಿಸಲು ಇನ್ನೊಂದು ತಿಂಗಳು ಬೇಕು. ಈ ಪ್ರಕ್ರಿಯೆಯನ್ನು ಫೆ.20ರೊಳಗೆ ಮುಗಿಸುತ್ತೇವೆ' ಎಂದರು.

ಪಾಲಿಕೆ ಮಾಜಿ ಸದಸ್ಯ ಎಂ.ಶಿವರಾಜು ಮತ್ತಿತರ ಅರ್ಜಿದಾರರ ಪರ ವಕೀಲರು, 'ಬಿಬಿಎಂಪಿಗೆ 2013ರಲ್ಲಿ ಚುನಾವಣೆ ನಡೆದಿತ್ತು. ಸದಸ್ಯರ ಅಧಿಕಾರದ ಅವಧಿ 2019ರಲ್ಲಿ ಮುಗಿದಿತ್ತು. ರಾಜ್ಯ ಸರ್ಕಾರ ಪದೇ ಪದೇ ನೆಪ ಹೇಳಿ ಚುನಾವಣೆ ನಡೆಸದೆ ಕಾಲಹರಣ ಮಾಡುತ್ತಿದೆ' ಎಂದು ದೂರಿದರು.

ರಾಜ್ಯ ಸರ್ಕಾರದ ಅಡ್ವೊಕೇಟ್ ಜನರಲ್ ಶಶಿಕಿರಣ್ ಶೆಟ್ಟಿ, 'ವಾರ್ಡ್ ಮರುವಿಂಗಡಣೆ ಮಾಡಿ ಮೀಸಲಾತಿ ಪಟ್ಟಿ ಅಂತಿಮಗೊಳಿಸಲು ಡಿಸೆಂಬರ್ 15ರ ವರೆಗೆ ಕಾಲಾವಕಾಶ ಕೇಳಿದ್ದೆವು. ಈ ಪ್ರಕ್ರಿಯೆ ಒಂದು ತಿಂಗಳು ತಡವಾಗಿದೆ. ಇನ್ನೊಂದು ತಿಂಗಳ ಕಾಲಾವಕಾಶವನ್ನು ನೀಡಬೇಕು' ಎಂದು ಕೋರಿದರು. ಆದರೆ, ಮತ್ತೆ ಅವಧಿ ವಿಸ್ತರಿಸುವುದಿಲ್ಲ ಎಂದು ಪೀಠ ಸ್ಪಷ್ಟಪಡಿಸಿತು.

ರಾಜ್ಯ ಚುನಾವಣಾ ಆಯೋಗದ ಪರ ವಕೀಲ ಕೆ.ಎನ್.ಫಣೀಂದ್ರ, 'ಐದು ಪಾಲಿಕೆಗಳ ಅಂತಿಮ ಮತದಾರರ ಪಟ್ಟಿ ಮಾರ್ಚ್ 16ರಂದು ಪ್ರಕಟವಾಗಲಿದೆ. ಮಾರ್ಚ್ ಹಾಗೂ ಏಪ್ರಿಲ್ ತಿಂಗಳಲ್ಲಿ ಎಸ್‌ಎಸ್‌ಎಲ್‌ಸಿ, ಪಿಯುಸಿ ಪರೀಕ್ಷೆಗಳು ನಡೆಯಲಿವೆ. ಚುನಾವಣಾ ಪ್ರಕ್ರಿಯೆಗೆ ಶಿಕ್ಷಕರ ಅಗತ್ಯ ಇರುವುದರಿಂದ ಮೇ ಅಂತ್ಯದ ವೇಳೆಗೆ ಚುನಾವಣಾ ಪ್ರಕ್ರಿಯೆ ಆರಂಭಿಸಬಹುದು' ಎಂದು ವಾದ ಮಂಡಿಸಿದರು.

'ಪರೀಕ್ಷೆ ಮುಗಿದ ಬೆನ್ನಲ್ಲೇ ಮಾರ್ಚ್‌ನಲ್ಲಿ ಚುನಾವಣಾ ವೇಳಾಪಟ್ಟಿ ಪ್ರಕಟಿಸಬೇಕು' ಎಂದು ಪೀಠ ನಿರ್ದೇಶನ ನೀಡಿತು. ಆಗ ಕೆ.ಎನ್.ಫಣೀಂದ್ರ, 'ಚುನಾವಣಾ ಕೆಲಸಕ್ಕೆ ಶಿಕ್ಷಕರು ಲಭ್ಯವಾಗುವುದು ಮೇ ಅಂತ್ಯಕ್ಕೆ. ಚುನಾವಣಾ ಪ್ರಕ್ರಿಯೆಯನ್ನು ಒಂದು ತಿಂಗಳಲ್ಲಿ ಮುಗಿಸಲಿದ್ದೇವೆ' ಎಂದು ಬಿನ್ನವಿಸಿದರು. ಆಗ ಪೀಠವು, 'ಚುನಾವಣಾ ಪ್ರಕ್ರಿಯೆಯು ಜೂನ್ 30ರೊಳಗೆ ಪೂರ್ಣಗೊಳ್ಳಬೇಕು' ಎಂದು ಆಯೋಗಕ್ಕೆ ನಿರ್ದೇಶನ ನೀಡಿತು.

ಬಿಬಿಎಂಪಿ ಸದಸ್ಯರ ಅಧಿಕಾರ ಅವಧಿಯು 2020ರ ಸೆಪ್ಟೆಂಬರ್ 10ರಂದು ಮುಗಿದಿತ್ತು. ಆರು ವಾರಗಳಲ್ಲಿ ಬಿಬಿಎಂಪಿ ಚುನಾವಣೆ ನಡೆಸುವಂತೆ ರಾಜ್ಯ ಚುನಾವಣಾ ಆಯೋಗಕ್ಕೆ ಸೂಚಿಸಿ ಹೈಕೋರ್ಟ್ ಹೊರಡಿಸಿದ್ದ ಆದೇಶವನ್ನು ಸುಪ್ರೀಂ ಕೋರ್ಟ್ ಅಮಾನತಿನಲ್ಲಿ ಇರಿಸಿತ್ತು. ಕರ್ನಾಟಕ ಮುನಿಸಿಪಲ್ ಕಾರ್ಪೊರೇಷನ್ (ತಿದ್ದುಪಡಿ) ಕಾಯ್ದೆ– 2020ರ ಅನ್ವಯ ರಚಿಸಲಾಗುವ 243 ವಾರ್ಡ್‌ಗಳ ಬದಲಿಗೆ, ಮೊದಲಿದ್ದ 198 ವಾರ್ಡ್‌ಗಳಿಗೆ ಚುನಾವಣೆ ನಡೆಸುವಂತೆ ಹೈಕೋರ್ಟ್ ನೀಡಿದ್ದ ಆದೇಶದ ಸಿಂಧುತ್ವ ಪ್ರಶ್ನಿಸಿ ಕರ್ನಾಟಕ ಸರ್ಕಾರ ಸುಪ್ರೀಂ ಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿತ್ತು.

198 ವಾರ್ಡ್
2020ರ ಸೆಪ್ಟೆಂಬರ್ 10ರಂದು ಬಿಬಿಎಂಪಿ ಕೌನ್ಸಿಲ್ ಮುಗಿದಾಗ ಇದ್ದ ಕಾರ್ಪೊರೇಟರ್‌ಗಳ ಸಂಖ್ಯೆ

243
2021ರ ಜ.29ರಂದು ಬಿಜೆಪಿ ಸರ್ಕಾರ ಮರುವಿಂಗಡಿಸಿ ಅಧಿಸೂಚನೆ ಹೊರಡಿಸಿದ್ದ ಬಿಬಿಎಂಪಿಯ ವಾರ್ಡ್ ಸಂಖ್ಯೆ

225
2023ರ ಸೆಪ್ಟೆಂಬರ್ 25ರಂದು ಕಾಂಗ್ರೆಸ್ ಸರ್ಕಾರ ಅಧಿಸೂಚನೆ ಹೊರಡಿಸಿದ್ದ ಬಿಬಿಎಂಪಿಯ ವಾರ್ಡ್ ಸಂಖ್ಯೆ



5
2025ರ ಸೆಪ್ಟೆಂಬರ್ 2ರಂದು, ಬಿಬಿಎಂಪಿಯ ಬದಲು ಜಿಬಿಎ ಸ್ಥಾಪಿಸಿ ಅಧಿಸೂಚನೆ. ಜಿಬಿಎಯಲ್ಲಿರುವ ಪಾಲಿಕೆ ಸಂಖ್ಯೆ

369
2025ರ ನವೆಂಬರ್ 19ರಂದು ಅಂತಿಮ ಅಧಿಸೂಚನೆ ಮೂಲಕ ಪುನರ್ ವಿಂಗಡಿಸಲಾದ ಐದು ನಗರ ಪಾಲಿಕೆಗಳ ವಾರ್ಡ್ ಸಂಖ್ಯೆ

(2026ರ ಜನವರಿ 8ರಂದು ವಾರ್ಡ್‌ಗಳ ಕರಡು ಮೀಸಲಾತಿ ಹೊರಡಿಸಲಾಗಿದೆ)

ಪಕ್ಷಗಳ ತಯಾರಿ ಏನು?

ತಂಡ ರಚಿಸಿದ ಬಿಜೆಪಿ

ಜಿಬಿಎ ವ್ಯಾಪ್ತಿಯ ನಗರ ಪಾಲಿಕೆಗಳಿಗೆ ನಡೆಯುವ ಚುನಾವಣೆಗೆ ಬಿಜೆಪಿಯು ಅಕ್ಟೋಬರ್‌ನಲ್ಲೇ ಸಂಯೋಜಕರ ತಂಡವನ್ನು ರಚಿಸಿದೆ. ವಿವಿಧ ಕಡೆಗಳಲ್ಲಿ ಸಭೆ, ಸಮಾವೇಶಗಳನ್ನೂ ನಡೆಸುತ್ತಿದೆ.

ತಂಡದಲ್ಲಿ ಬಿ.ವೈ.ವಿಜಯೇಂದ್ರ, ಆರ್.ಅಶೋಕ, ಛಲವಾದಿ ನಾರಾಯಣ ಸ್ವಾಮಿ, ಡಿ.ವಿ.ಸದಾನಂದಗೌಡ, ಎಸ್. ಸುರೇಶ್‌ಕುಮಾರ್, ಶೋಭಾ ಕರಂದ್ಲಾಜೆ, ಪಿ.ಸಿ.ಮೋಹನ್, ಡಾ.ಸಿ.ಎನ್. ಮಂಜುನಾಥ್, ತೇಜಸ್ವಿ ಸೂರ್ಯ, ಡಾ.ಕೆ.ಸುಧಾಕರ್ ಮತ್ತು ಎನ್.ಎಸ್. ನಂದೀಶ್ ರೆಡ್ಡಿ ಇದ್ದಾರೆ. ವಿವಿಧ ಪಾಲಿಕೆಗಳ ಚುನಾವಣೆ ಮುನ್ನಡೆಸಲು ಪ್ರಮುಖರಿಗೆ ಜವಾಬ್ದಾರಿ ಹಂಚಿಕೆ ಮಾಡಲಾಗಿದೆ.

ಬೆಂಗಳೂರು ಪೂರ್ವ: ಎಂ.ಟಿ.ಬಿ.ನಾಗರಾಜ್, ಕೆ.ಎಸ್.ನವೀನ್
ಬೆಂಗಳೂರು ಉತ್ತರ: ಮುನಿರತ್ನ, ಭಾರತಿಶೆಟ್ಟಿ, ಬೆಂಗಳೂರು ದಕ್ಷಿಣ–ಬೈರತಿ ಬಸವರಾಜ, ಎನ್.ರವಿಕುಮಾರ್
ಬೆಂಗಳೂರು ಕೇಂದ್ರ: ಡಾ.ಸಿ.ಎನ್. ಅಶ್ವತ್ಥನಾರಾಯಣ, ಡಿ.ಎಸ್.ಅರುಣ್
ಬೆಂಗಳೂರು ಪಶ್ಚಿಮ: ಕೆ.ಗೋಪಾಲಯ್ಯ, ಎ.ನಾರಾಯಣ ಸ್ವಾಮಿ, ಅಶ್ವತ್ಥ ನಾರಾಯಣ ಗೌಡ

ಅರ್ಜಿ ಆಹ್ವಾನಿಸಿದ 'ಕೈ'

ಪಾಲಿಕೆಗಳ ಚುನಾವಣೆಗೆ ಕಾಂಗ್ರೆಸ್ ಪಕ್ಷ ಈಗಾಗಲೇ ಸಿದ್ಧತೆ ಆರಂಭಿಸಿದ್ದು, ಸ್ಪರ್ಧಾಕಾಂಕ್ಷಿಗಳಿಂದ ಅರ್ಜಿಯನ್ನೂ ಆಹ್ವಾನಿಸಿದೆ. ಕಾಂಗ್ರೆಸ್‌ನಿಂದ ಸ್ಪರ್ಧಿಸುವ ಆಸಕ್ತಿ ತೋರಿ ಬೆಂಗಳೂರು ಪಶ್ಚಿಮ ಪಾಲಿಕೆಯಲ್ಲಿ 247, ಉತ್ತರದಲ್ಲಿ 199, ದಕ್ಷಿಣದಲ್ಲಿ 129, ಕೇಂದ್ರದಲ್ಲಿ 106, ಪೂರ್ವದಲ್ಲಿ 78 ಮಂದಿ ಈಗಾಗಲೇ ಅರ್ಜಿಗಳನ್ನು ಪಡೆದುಕೊಂಡಿದ್ದಾರೆ. ವಾರ್ಡ್‌ಗಳಲ್ಲಿ ಯಾರು ಕೆಲಸ ಮಾಡಿದ್ದಾರೆ, ಯಾರು ಮಾಡಿಲ್ಲ, ಯಾರು ಪಕ್ಷಕ್ಕೆ ನಿಷ್ಠರಾಗಿದ್ದಾರೆಂದು ಪರಿಶೀಲಿಸಿ ಟಿಕೆಟ್ ನೀಡಲು ಕಾಂಗ್ರೆಸ್‌ನಲ್ಲಿ ಚರ್ಚೆ ನಡೆದಿದೆ.

ಚುನಾವಣೆ ಸಿದ್ಧತೆಗಾಗಿ, ಸಚಿವರು, ಪಕ್ಷದ ಸಂಸದರು, ಶಾಸಕರು, ಪರಿಷತ್ ಸದಸ್ಯರು, ಕೆಪಿಸಿಸಿ ಪದಾಧಿಕಾರಿಗಳು, ಮುಂಚೂಣಿ ಘಟಕಗಳ ಅಧ್ಯಕ್ಷರು, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರು, ನಿಗಮ ಮಂಡಳಿ ಅಧ್ಯಕ್ಷರ ಸಭೆಯನ್ನು ಅರಮನೆ ಮೈದಾನದ ಗಾಯತ್ರಿ ಗ್ರ್ಯಾಂಡ್ ಹಾಲ್‌ನಲ್ಲಿ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಮಂಗಳವಾರ (ಜ.13) ಆಯೋಜಿಸಿದ್ದಾರೆ.

ಆಕಾಂಕ್ಷಿಗಳಿಂದ ಅರ್ಜಿ ಆಹ್ವಾನ

ಪಾಲಿಕೆಗಳ ಚುನಾವಣೆಗೆ ಜೆಡಿಎಸ್ ಈಗಾಗಲೇ ಅಣಿಯಾಗುತ್ತಿದ್ದು, 10ಕ್ಕೂ ಹೆಚ್ಚು ಪೂರ್ವಸಿದ್ಧತಾ ಸಭೆಗಳನ್ನು ನಡೆಸಿದೆ.

ಟಿಕೆಟ್ ಆಕಾಂಕ್ಷಿಗಳ ಸಭೆ ಕರೆದು ಚರ್ಚಿಸಿರುವ ಪಕ್ಷದ ಸ್ಥಳೀಯ ನಾಯಕರು, ಟಿಕೆಟ್ ಬಯಸುವ ಆಕಾಂಕ್ಷಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದ್ದಾರೆ. ಜೆಡಿಎಸ್ ಯುವ ಘಟಕದ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಅವರ ಅಧ್ಯಕ್ಷತೆಯಲ್ಲಿ ನಗರ ಘಟಕದ ಅಧ್ಯಕ್ಷ ಎಚ್.ಎಂ. ರಮೇಶ ಗೌಡ ಹಾಗೂ ವಿವಿಧ ಪ್ರಮುಖ ಘಟಕಗಳ ಮುಖ್ಯಸ್ಥರ ಸಭೆ ಜ.16ಕ್ಕೆ ನಿಗದಿಯಾಗಿದೆ.

ಪಾಲಿಕೆ ಚುನಾವಣೆಯಲ್ಲಿ ಬಿಜೆಪಿ–ಜೆಡಿಎಸ್ ಮೈತ್ರಿ ಕುರಿತು ಎಚ್.ಡಿ.ದೇವೇಗೌಡ, ಎಚ್.ಡಿ.ಕುಮಾರಸ್ವಾಮಿ ನಿರ್ಧಾರ ಮಾಡಲಿದ್ದಾರೆ. ನಂತರ ವಷ್ಟೇ ಸ್ಪರ್ಧೆಯ ಕುರಿತು ಸ್ಪಷ್ಟ ಚಿತ್ರಣ ಸಿಗುವ ಸಾಧ್ಯತೆ ಇದೆ.

ಇಸ್ರೊ: ವರ್ಷದ ಮೊದಲ ಉಪಗ್ರಹ ಉಡಾವಣೆ ನಿಷ್ಫಲ

ಕಕ್ಷೆ ತಲುಪಲು ಮತ್ತೆ ವಿಫಲ

ಶ್ರೀಹರಿಕೋಟ (ಪಿಟಿಐ): ವಿದೇಶದ ಭೂ ಸರ್ವೇಕ್ಷಣಾ ಉಪಗ್ರಹ ಸೇರಿದಂತೆ 16 ಉಪಗ್ರಹಗಳನ್ನು ಹೊತ್ತು ನಭಕ್ಕೆ ಚಿಮ್ಮಿದ್ದ ಪಿಎಸ್‌ಎಲ್‌ವಿ–ಸಿ62 ರಾಕೆಟ್‌ನಲ್ಲಿ ತಾಂತ್ರಿಕ ದೋಷವುಂಟಾಗಿ ಯೋಜನೆಯು ವಿಫಲವಾಗಿದೆ ಎಂದು ಇಸ್ರೊ ಸೋಮವಾರ ತಿಳಿಸಿದೆ.

'ನಿಗದಿತ ಕಕ್ಷೆಗೆ ಉಪಗ್ರಹಗಳನ್ನು ಸೇರಿಸುವ ಉದ್ದೇಶದ ಯೋಜನೆಯು ವಿಫಲವಾಗಿದೆ. ಎಲ್ಲಾ 16 ಉಪಗ್ರಹಗಳು ಸಂಪರ್ಕ ಕಳೆದುಕೊಂಡಿವೆ' ಎಂದು ಅದು ಮಾಹಿತಿ ನೀಡಿದೆ.

ಇದರೊಂದಿಗೆ ಇಸ್ರೊದ ವರ್ಷದ ಮೊದಲ ಉಪಗ್ರಹ ಉಡಾವಣೆ ಯೋಜನೆ ವಿಫಲವಾದಂತಾಗಿದೆ.

'ಪೂರ್ವನಿಗದಿಯಂತೆ ಆಂಧ್ರಪ್ರದೇಶದ ಶ್ರೀಹರಿಕೋಟಾದ ಸತೀಶ್ ಧವನ್ ಬಾಹ್ಯಾಕಾಶ ಕೇಂದ್ರದಿಂದ ಸೋಮವಾರ ಬೆಳಿಗ್ಗೆ 10.18ಕ್ಕೆ ರಾಕೆಟ್ ಉಡಾವಣೆ ಮಾಡಲಾಗಿತ್ತು. ಉಪಗ್ರಹಗಳನ್ನು ಭೂಮಿಯಿಂದ 512 ಕಿ.ಮೀ. ದೂರದ 'ಸೂರ್ಯ ಸಮನ್ವಯ ಕಕ್ಷೆ'ಗೆ ಸೇರಿಸುವ ಉದ್ದೇಶದ ಮಹತ್ವದ ಯೋಜನೆ ಇದಾಗಿತ್ತು. ಒಟ್ಟು 4 ಹಂತಗಳಲ್ಲಿ ಯೋಜನೆಯನ್ನು ರೂಪಿಸಲಾಗಿತ್ತು. 3ನೇ ಹಂತದ ಕೊನೆಯಲ್ಲಿ ಕಾರ್ಯಾಚರಣೆ ವಿಫಲವಾಯಿತು' ಎಂದು ಇಸ್ರೊ ತಿಳಿಸಿದೆ. 'ಯೋಜನಾ ನಿರ್ದೇಶಕರ ಅನುಮತಿಯ ಬಳಿಕ ಸ್ವಯಂಚಾಲಿತವಾಗಿ ಉಪಗ್ರಹವು ಉಡಾವಣೆಗೊಂಡಿತು' ಎಂದು ಇಸ್ರೊ ಅಧ್ಯಕ್ಷ ವಿ.ನಾರಾಯಣನ್ ತಿಳಿಸಿದರು.

▶10

44.4 ಮೀಟರ್
ರಾಕೆಟ್‌ನ ಎತ್ತರ

16
ರಾಕೆಟ್‌ನಲ್ಲಿದ್ದ ಉಪಗ್ರಹಗಳು

260 ಟನ್
ಪೇಲೋಡ್‌ಗಳ ಒಟ್ಟು ತೂಕ

- **3ನೇ ಹಂತ:** ರಾಕೆಟ್ ಉಡಾವಣೆಯಾದ 203 ಸೆಕೆಂಡ್ ನಂತರ 3ನೇ ಹಂತದ ಕೊನೆಯಲ್ಲಿ ತಾಂತ್ರಿಕ ದೋಷ ಪತ್ತೆ
- ಯೋಜನೆ ಪ್ರಕಾರ, ರಾಕೆಟ್ ಉಡಾವಣೆಗೊಂಡ 17 ನಿಮಿಷಗಳ ಬಳಿಕ ಅದು ಸೂರ್ಯ ಸಮನ್ವಯ ಕಕ್ಷೆ ತಲುಪಬೇಕಿತ್ತು

ಬಿಎಂಐಸಿ ಕಾರ್ಯವೈಖರಿಗೆ ಹೈಕೋರ್ಟ್ ಅಸಮಾಧಾನ

ನೈಸ್‌ಗೆ ಪರ್ಯಾಯ ಯೋಜನೆ ರೂಪಿಸಿ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು
- ಸರ್ಕಾರಕ್ಕೆ ನಿರ್ದೇಶನ ನೀಡಿದ ನ್ಯಾಯಪೀಠ
- ಯೋಜನೆ ಮರು ಪರಿಶೀಲಿಸಿ: ತಾಕೀತು

ಬೆಂಗಳೂರು: 'ಬೆಂಗಳೂರು–ಮೈಸೂರು ಇನ್‌ಫ್ರಾಸ್ಟ್ರಕ್ಚರ್ ಕಾರಿಡಾರ್ (ಬಿಎಂಐಸಿ) ಯೋಜನೆಯನ್ನು ಮರು ಪರಿಶೀಲಿಸಿ' ಎಂದು ರಾಜ್ಯ ಸರ್ಕಾರಕ್ಕೆ ಹೈಕೋರ್ಟ್ ನಿರ್ದೇಶನ ನೀಡಿದೆ.

'ಬಿಎಂಐಸಿ ಯೋಜನೆಗಾಗಿ ವಶಪಡಿಸಿಕೊಂಡ ನಮ್ಮ ಜಮೀನಿಗೆ ಪರಿಹಾರ ವಿತರಿಸಲು ಸರ್ಕಾರಕ್ಕೆ ನಿರ್ದೇಶಿಸಬೇಕು' ಎಂದು ಕೋರಿ ಮಾರಪ್ಪ ಗಾರ್ಡನ್ ನಿವಾಸಿ ಚಂದ್ರಿಕಾ ಸಲ್ಲಿಸಿದ್ದ ರಿಟ್ ಅರ್ಜಿಯನ್ನು ವಜಾಗೊಳಿಸಿರುವ ನ್ಯಾಯಮೂರ್ತಿ ಡಿ.ಕೆ.ಸಿಂಗ್ ನೇತೃತ್ವದ ವಿಭಾಗೀಯ ನ್ಯಾಯಪೀಠ ಈ ಕುರಿತು ಆದೇಶಿಸಿದೆ.

'ಪ್ರಸ್ತಾವಿತ ಎಕ್ಸ್‌ಪ್ರೆಸ್–ವೇ ನಲ್ಲಿನ ಒಟ್ಟು 111 ಕಿ.ಮೀಗಳಲ್ಲಿ ಕಳೆದ 25 ವರ್ಷಗಳಲ್ಲಿ ಕೇವಲ ಒಂದು ಕಿ.ಮೀ ರಸ್ತೆ ಮಾತ್ರ ನಿರ್ಮಿಸಲಾಗಿದೆ ಮತ್ತು 1995ರಲ್ಲಿ ನಗರದ ದಟ್ಟಣೆಯನ್ನು ಕಡಿಮೆ ಮಾಡಲು ಯೋಜಿಸಲಾದ ಐದು ಪಟ್ಟಣಗಳಲ್ಲಿ ಈತನಕ ಯಾವುದೇ ಪ್ರಗತಿ ಕಂಡಿಲ್ಲ' ಎಂದು ನ್ಯಾಯಪೀಠ ತೀರ್ಪಿನಲ್ಲಿ ಅಸಮಾಧಾನ ವ್ಯಕ್ತಪಡಿಸಿದೆ.

'ಬೆಂಗಳೂರು–ಮೈಸೂರು ಎಕ್ಸ್‌ಪ್ರೆಸ್ ಮಾರ್ಗವನ್ನು ಭವಿಷ್ಯದಲ್ಲಿಯೂ ನಿರ್ಮಿಸುವ ಯಾವುದೇ ಸೂಚನೆ ಕಾಣಿಸುತ್ತಿಲ್ಲ. ಆದ್ದರಿಂದ, ಯೋಜನೆಯನ್ನು ಮರು ಪರಿಶೀಲಿಸಬೇಕು ಮತ್ತು ಆ ನಿಟ್ಟಿನಲ್ಲಿ ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳಬೇಕು' ಎಂದು ರಾಜ್ಯ ಸರ್ಕಾರಕ್ಕೆ ತಾಕೀತು ಮಾಡಿದೆ.

▶7

ಪುಣ್ಯ ಸ್ಮರಣೆ

ಶ್ರೀ ಎನ್. ವಿನಯ ಹೆಗ್ಡೆ
(3 ಏಪ್ರಿಲ್ 1939 – 1 ಜನವರಿ 2026)

ಖ್ಯಾತ ಶಿಕ್ಷಣತಜ್ಞರು, ಉದ್ಯಮಿಗಳು ಮತ್ತು ನಿಟ್ಟೆ ವಿಶ್ವವಿದ್ಯಾಲಯ (ಡೀಮ್ಡ್) ದ ಚಾನ್ಸಲರ್ ಆಗಿದ್ದ ಶ್ರೀ ಎನ್. ವಿನಯ ಹೆಗ್ಡೆ (3 ಏಪ್ರಿಲ್ 1939 – 1 ಜನವರಿ 2026) ಅವರ ನಿಧನವು **ಕರ್ನಾಟಕ ವೃತ್ತಿಪರ ಕಾಲೇಜುಗಳ ಪ್ರತಿಷ್ಠಾನ (KPCF) ಮತ್ತು ಕರ್ನಾಟಕದ ಡೀಮ್ಡ್ ವಿಶ್ವವಿದ್ಯಾಲಯಗಳ ಒಕ್ಕೂಟದ (CODEUNIK)** ಪದಾಧಿಕಾರಿಗಳು ಮತ್ತು ಸದಸ್ಯರುಗಳಿಗೆ ಆಳವಾದ ದುಃಖವನ್ನುಂಟುಮಾಡಿದೆ.

ನ್ಯಾಯಮೂರ್ತಿ ಕೆ. ಎಸ್. ಹೆಗ್ಡೆ ಅವರ ಪುತ್ರರಾದ ಶ್ರೀ ವಿನಯ ಹೆಗ್ಡೆ ಅವರು ಉತ್ಕೃಷ್ಟತೆಯಿಂದ ಕೂಡಿದ ಸಂಸ್ಥೆಗಳನ್ನು ನಿರ್ಮಿಸುವುದಕ್ಕೆ ಮತ್ತು ಕರ್ನಾಟಕದಾದ್ಯಂತ ಗುಣಮಟ್ಟದ ಶಿಕ್ಷಣ ಹಾಗೂ ವೈದ್ಯಕೀಯ ಸೇವೆಗಳನ್ನು ವಿಸ್ತರಿಸುವುದಕ್ಕೆ ತಮ್ಮ ಜೀವನವನ್ನೇ ಸಮರ್ಪಿಸಿದ್ದರು. ಅವರ ದಾರ್ಶನಿಕತೆಯ ನಾಯಕತ್ವದಲ್ಲಿ ನಿಟ್ಟೆ ಶಿಕ್ಷಣ ಟ್ರಸ್ಟ್‌ನಡಿ ಸುಮಾರು 40ಕ್ಕೂ ಹೆಚ್ಚು ಸಂಸ್ಥೆಗಳು ಬೆಳೆಯುತ್ತಾ, ಸಾವಿರಾರು ವಿದ್ಯಾರ್ಥಿಗಳ ಭವಿಷ್ಯವನ್ನು ರೂಪಿಸಿವೆ.

ಶಿಕ್ಷಣ ಕ್ಷೇತ್ರದ ಹೊರತಾಗಿಯೂ, ಕೈಗಾರಿಕೆ, ಸಾರ್ವಜನಿಕ ನೀತಿ ಮತ್ತು ಪ್ರಾದೇಶಿಕ ಅಭಿವೃದ್ಧಿಯ ವಿವಿಧ ಪ್ರಮುಖ ಹುದ್ದೆಗಳಲ್ಲಿ ಅವರು ನಿರ್ವಹಿಸಿದ ಪಾತ್ರ ರಾಜ್ಯದ ಸಾಮಾಜಿಕ–ಆರ್ಥಿಕ ಪ್ರಗತಿಗೆ ಮಹತ್ವದ ಕೊಡುಗೆಯನ್ನು ನೀಡಿದೆ. KPCF ಮತ್ತು CODEUNIKನ ಪದಾಧಿಕಾರಿಗಳು ಮತ್ತು ಸದಸ್ಯರು ಅವರ ಸಾಮಾಜಿಕ ಕೊಡುಗೆ ಮತ್ತು ದೀರ್ಘದೃಷ್ಟಿಯ ನಾಯಕತ್ವಕ್ಕೆ ಗೌರವ ಸಲ್ಲಿಸುತ್ತೇವೆ. ದುಃಖಿತ ಕುಟುಂಬಕ್ಕೆ ನಮ್ಮ ಹೃತ್ಪೂರ್ವಕ ಸಂತಾಪಗಳನ್ನು ವ್ಯಕ್ತಪಡಿಸುತ್ತಾ, ಪರಮಾತ್ಮನು ಅವರ ಆತ್ಮಕ್ಕೆ ಸದ್ಗತಿಯನ್ನು ನೀಡಲಿ ಎಂದು ಪ್ರಾರ್ಥಿಸುತ್ತೇವೆ.

CODEUNIK ಮತ್ತು KPCF ನ ಗೌರವಾನ್ವಿತ ಟ್ರಸ್ಟಿಗಳು ಮತ್ತು ಸದಸ್ಯರು

ಪೂಜ್ಯ ಜಗದ್ಗುರು ಶ್ರೀ ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮೀಜಿ
ಕುಲಾಧಿಪತಿಗಳು, JSS ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕಾಡೆಮಿ, ಮೈಸೂರು.

ಡಾ. ಪ್ರಭಾಕರ್ ಬಿ. ಕೋರೆ
ಅಧ್ಯಕ್ಷರು, CODEUNIK ಮತ್ತು ಕುಲಾಧಿಪತಿಗಳು, ಕೆ.ಎಲ್‌.ಇ. ಅಕಾಡೆಮಿ ಆಫ್ ಹೈಯರ್ ಎಜುಕೇಶನ್, ಬೆಳಗಾವಿ ಮತ್ತು ಉಪಾಧ್ಯಕ್ಷರು, ಕೆಪಿಸಿಎಫ್.

ಡಾ. ಎಂ. ಆರ್. ಜಯರಾಮ್
ಕಾರ್ಯದರ್ಶಿಗಳು, ಕರ್ನಾಟಕ ವೃತ್ತಿಪರ ಕಾಲೇಜುಗಳ ಪ್ರತಿಷ್ಠಾನ (ಕೆಪಿಸಿಎಫ್).

ಡಾ. ರಾಮದಾಸ್ ಎಂ. ಪೈ
ಕುಲಾಧಿಪತಿಗಳು, ಮಣಿಪಾಲ ಉನ್ನತ ಶಿಕ್ಷಣ ಅಕಾಡೆಮಿ, ಮಣಿಪಾಲ.

ಡಾ. ಜಿ. ಪರಮೇಶ್ವರ
ಕುಲಾಧಿಪತಿಗಳು, ಸಿದ್ಧಾರ್ಥ ವಿಶ್ವವಿದ್ಯಾಲಯ, ತುಮಕೂರು.

ಶ್ರೀ ಜಿ. ಹೆಚ್. ನಾಗರಾಜ
ಕುಲಾಧಿಪತಿಗಳು, ಶ್ರೀ ದೇವರಾಜ್ ಅರಸ್ ಅಕಾಡೆಮಿ ಆಫ್ ಹೈಯರ್ ಎಜುಕೇಶನ್, ಕೋಲಾರ.

ಡಾ. ಯೆನೆಪೊಯ ಅಬ್ದುಲ್ಲಾ ಕುಂಞ
ಕುಲಾಧಿಪತಿಗಳು, ಯೆನೆಪೋಯ ವಿಶ್ವವಿದ್ಯಾಲಯ, ಮಂಗಳೂರು.

ಶ್ರೀ ಬಿ. ಎಂ. ಪಾಟೀಲ್
ಕುಲಾಧಿಪತಿಗಳು, ಬಿಎಲ್‌ಡಿಇ ವಿಶ್ವವಿದ್ಯಾಲಯ, ವಿಜಯಪುರ.

ಡಾ. ಎಸ್. ಕುಮಾರ್
ಕಾರ್ಯದರ್ಶಿಗಳು, CODEUNIK, ಬೆಂಗಳೂರು.

ವೆನೆಜುವೆಲಾ ಹಂಗಾಮಿ ಅಧ್ಯಕ್ಷ ನಾನೇ: ಟ್ರಂಪ್

ನ್ಯೂಯಾರ್ಕ್ (ಪಿಟಿಐ): ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಸಾಮಾಜಿಕ ಜಾಲತಾಣ 'ಟ್ರೂಥ್'ನಲ್ಲಿ ತಮ್ಮ ಭಾವಚಿತ್ರ ಹಾಕಿಕೊಂಡು ತಾವೇ ವೆನೆಜುವೆಲಾದ ಹಂಗಾಮಿ ಅಧ್ಯಕ್ಷ ಎಂದು ಘೋಷಿಸಿಕೊಂಡಿದ್ದಾರೆ.

ತಮ್ಮ ಭಾವಚಿತ್ರವನ್ನು ಪೋಸ್ಟ್ ಮಾಡಿದ್ದು, '2026ರ ಜನವರಿಯಿಂದ ನಾನೇ ವೆನೆಜುವೆಲಾ ಹಂಗಾಮಿ ಅಧ್ಯಕ್ಷ' ಎಂದು ತಿಳಿಸಿದ್ದಾರೆ. ಜತೆಗೆ ಅಮೆರಿಕದ 45 ಹಾಗೂ 47ನೇ ಅಧ್ಯಕ್ಷ ಎಂದು ಬರೆದುಕೊಂಡಿದ್ದಾರೆ.



ವೆನೆಜುವೆಲಾದ ರಾಜಧಾನಿ ಕರಾಕಸ್ ಮೇಲೆ ಜ.3ರಂದು ಭಾರಿ ಪ್ರಮಾಣದಲ್ಲಿ ವಾಯುದಾಳಿ ನಡೆಸಿದ್ದ ಅಮೆರಿಕ, ಅಲ್ಲಿನ ಅಧ್ಯಕ್ಷ ನಿಕೊಲಸ್ ಮಡೂರೊ ಮತ್ತು ಅವರ ಪತ್ನಿ ಸಿಲಿಯಾ ಫ್ಲೋರ್ಸ್ ಅವರನ್ನು ಸೆರೆ ಹಿಡಿದಿತ್ತು. ವೆನೆಜುವೆಲಾದ ಉಪಾಧ್ಯಕ್ಷರಾಗಿದ್ದ ಡೆಲ್ಸಿ ರಾಡ್ರಿಗಸ್ ಅವರು ಕಳೆದ ವಾರ ಹಂಗಾಮಿ ಅಧ್ಯಕ್ಷರಾಗಿ ಪ್ರಮಾಣ ವಚನ ಸ್ವೀಕರಿಸಿದ್ದರು.

ಭಾರತವೇ ಮುಖ್ಯ: ಗೋರ್

ನವದೆಹಲಿ (ಪಿಟಿಐ): 'ಅಮೆರಿಕದ ಪಾಲಿಗೆ ಭಾರತಕ್ಕಿಂತ ಮುಖ್ಯವಾದ ದೇಶ ಇನ್ನೊಂದಿಲ್ಲ. ಉಭಯ ರಾಷ್ಟ್ರಗಳು ತಮ್ಮ ನಡುವಿನ ವ್ಯಾಪಾರ ಒಪ್ಪಂದ ಅಂತಿಮಗೊಳಿಸಲು ಮಾತುಕತೆಯಲ್ಲಿ ಸಕ್ರಿಯವಾಗಿ ತೊಡಗುತ್ತಿವೆ. ಈ ಸಂಬಂಧ ಜ.13ರಂದು ಭಾರತಕ್ಕೆ ಮತ್ತೊಂದು ದೂರವಾಣಿ ಕರೆ ಬರಲಿದೆ' ಎಂದು ಭಾರತದ ನಿಯೋಜಿತ ಅಮೆರಿಕ ರಾಯಭಾರಿ ಸರ್ಜಿಯೊ ಗೋರ್ ತಿಳಿಸಿದ್ದಾರೆ.

▶10

ಸರ್ಜಿಯೊ ಗೋರ್

ಚಿನಕುರುಳಿ ಪ್ರಕಾಶ್ ಶೆಟ್ಟಿ

ಐಒಸಿಎಲ್ ಬಂಕ್‌ನಲ್ಲಿ ಮಾರುತಿ ಕಾರು ರಿಪೇರಿ

ನವದೆಹಲಿ (ಪಿಟಿಐ): ಇಂಡಿಯನ್ ಆಯಿಲ್ ಕಾರ್ಪೊರೇಷನ್‌ನ (ಐಒಸಿಎಲ್) ಪೆಟ್ರೋಲ್ ಬಂಕ್‌ಗಳಲ್ಲಿ ವಾಹನಗಳ ರಿಪೇರಿ ಸೇವಾ ಘಟಕ ಆರಂಭಿಸಲು ಮಾರುತಿ ಸುಜುಕಿ ಇಂಡಿಯಾ ಕಂಪನಿಯು ಮುಂದಾಗಿದೆ. ಈ ವಿಚಾರವಾಗಿ ಇಂಡಿಯನ್ ಆಯಿಲ್ ಮತ್ತು ಮಾರುತಿ ಸುಜುಕಿ ನಡುವೆ ಒಪ್ಪಂದ ಆಗಿದೆ.

ಇದರ ಭಾಗವಾಗಿ ದೇಶದಾದ್ಯಂತ ಇಂಡಿಯನ್ ಆಯಿಲ್‌ನ ಹಲವು ಬಂಕ್‌ಗಳಲ್ಲಿ ಸೇವಾ ಘಟಕಗಳು ಆರಂಭವಾಗಲಿವೆ.

▶10

ಸದ್ಗುರು ಸನ್ನಿಧಿ
ಬೆಂಗಳೂರು

ಮಕರ ಸಂಕ್ರಾಂತಿ
ಸದ್ಗುರು ಸನ್ನಿಧಿ ಬೆಂಗಳೂರು

ಸದ್ಗುರುಗಳ ಸಮ್ಮುಖದಲ್ಲಿ
14 ಜನವರಿ 2026

ಮುಖ್ಯಾಂಶಗಳು:
ಯೋಗೇಶ್ವರ ಲಿಂಗ ಆರಾಧನೆ
ಸಂಜೆ 5-6 ಗಂಟೆ

ಈಗಲೇ ನೋಂದಾಯಿಸಿ
sadhguru.co/sankranti



ಸಾಂಸ್ಕೃತಿಕ ಕಾರ್ಯಕ್ರಮಗಳು
ಸಂಜೆ 7 ಗಂಟೆಯಿಂದ

- ಅವರೆಬೇಳೆ ಮೇಳ
- ಗಾಳಿಪಟ ಉತ್ಸವ
- ಜಾತ್ರೆ

(ದಿನವಿಡೀ ನಡೆಯಲಿದೆ)

ಎಲ್ಲರಿಗೂ ಸ್ವಾಗತ

DAMMAN
VISWANATHAN PILLAI KITCHEN

ಹವಾಮಾನ ಮುನ್ಸೂಚನೆ: ನಗರದಲ್ಲಿ ಮಂಜು ಕವಿದ ವಾತಾವರಣ ಇರಲಿದ್ದು, ಅಲ್ಲಲ್ಲಿ ಮಳೆಯಾಗುವ ಸಾಧ್ಯತೆ ಇದೆ

ಎಸ್–ವ್ಯಾಸ ವಿಶ್ವವಿದ್ಯಾಲಯವು ಬೆಂಗಳೂರಿನಲ್ಲಿ ಆಯೋಜಿಸಿದ್ದ ಅಖಿಲ ಭಾರತ ಅಂತರ ವಿಶ್ವವಿದ್ಯಾಲಯಗಳ ಯೋಗಾಸನ ಸ್ಪರ್ಧೆಯಲ್ಲಿ ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ಮಹಿಳಾ ತಂಡ ನಾಲ್ಕನೇ ಸ್ಥಾನ ಪಡೆದಿದೆ. ಅಲ್ಲದೆ ಈ ತಂಡವು ಖೇಲೊ ಇಂಡಿಯಾ ಯೋಗಾಸನ ಚಾಂಪಿಯನ್‌ಶಿಪ್‌ಗೆ ಆಯ್ಕೆಯಾಗಿದೆ

ನಾಳೆಯಿಂದ ಫಲಪುಷ್ಪ ಪ್ರದರ್ಶನ

ಲಾಲ್‌ಬಾಗ್‌ನಲ್ಲಿ ಜ.26ರವರೆಗೆ ಆಯೋಜನೆ, ‘ತೇಜಸ್ವಿ–ವಿಸ್ಮಯ’ ಪರಿಕಲ್ಪನೆಯ ಅನಾವರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕೆ.ಪಿ.ಪೂರ್ಣಚಂದ್ರ ತೇಜಸ್ವಿ ಬದುಕು–ಬರಹ ವಿಷಯ ಆಧಾರಿತ ಗಣರಾಜ್ಯೋತ್ಸವ ಫಲಪುಷ್ಪ ಪ್ರದರ್ಶನವು ಲಾಲ್‌ಬಾಗ್‌ನಲ್ಲಿ ಜ.14ರಿಂದ 26ರವರೆಗೆ ನಡೆಯಲಿದೆ’ ಎಂದು ತೋಟಗಾರಿಕೆ ಇಲಾಖೆಯ ಕಾರ್ಯದರ್ಶಿ ಆರ್‌. ಗಿರೀಶ್ ತಿಳಿಸಿದರು.



ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ‘ತೇಜಸ್ವಿ–ವಿಸ್ಮಯ’ ಪರಿಕಲ್ಪನೆಯಡಿ ಆಯೋಜಿಸಿರುವ ಫಲಪುಷ್ಪ ಪ್ರದರ್ಶನದಲ್ಲಿ ತೇಜಸ್ವಿ ಅವರಿಗೆ ಪುಷ್ಪ ಗೌರವ ಸಲ್ಲಿಸಲು ತಯಾರಿ ಮಾಡಿಕೊಳ್ಳಲಾಗುತ್ತಿದೆ. ತೇಜಸ್ವಿ ಅವರ ಜೀವನ, ಸಾಧನೆ, ಪ್ರಕೃತಿ ಜೊತೆಗಿನ ಒಡನಾಟವನ್ನು ಪುಷ್ಪಗಳಲ್ಲಿ ಅನಾವರಣಗೊಳಿಸಲಾಗುತ್ತಿದೆ. ಈ ಬಾರಿಯ ಫಲಪುಷ್ಪ ಪ್ರದರ್ಶನಕ್ಕೆ 10 ಲಕ್ಷಕ್ಕೂ ಹೆಚ್ಚು ಜನರು ಭೇಟಿ ನೀಡುವ ನಿರೀಕ್ಷೆ ಇದೆ’ ಎಂದರು.

‘ತೋಟಗಾರಿಕೆ ಇಲಾಖೆ ಹಮ್ಮಿಕೊಂಡಿರುವ 219ನೇ ಫಲಪುಷ್ಪ ಪ್ರದರ್ಶನಕ್ಕೆ ವೇದಿಕೆ ಸಜ್ಜುಗೊಂಡಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಬುಧವಾರ (ಜ.14) ಸಂಜೆ 4ಕ್ಕೆ ಪ್ರದರ್ಶನವನ್ನು ಉದ್ಘಾಟಿಸಲಿದ್ದಾರೆ. ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ತೋಟಗಾರಿಕೆ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್, ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಭಾಗವಹಿಸಲಿದ್ದು, ಚಿಕ್ಕಪೇಟೆ ವಿಧಾನಸಭಾ ಕ್ಷೇತ್ರದ ಶಾಸಕ ಉದಯ್ ಬಿ. ಗರುಡಾಚಾರ್ ಅಧ್ಯಕ್ಷತೆ ವಹಿಸಲಿದ್ದಾರೆ’ ಎಂದರು.

‘ಗಾಜಿನ ಮನೆಯ ಕೇಂದ್ರ ಭಾಗದಲ್ಲಿ ದಟ್ಟ ಕಾಡಿನ ಮಡಿಲಿನಲ್ಲಿರುವ 1,800 ಚದರ ಅಡಿಯಲ್ಲಿ ಬೃಹತ್ ಬೆಟ್ಟ, ಜಲಪಾತದ ಮಾದರಿ ನಿರ್ಮಿಸಲಾಗುತ್ತಿದೆ. ಇದರ ಮುಂಭಾಗದಲ್ಲಿಯೇ ತೇಜಸ್ವಿಯವರ ನಿರುತ್ತರ ಮನೆಯ ಪುಷ್ಪ ಮಾದರಿ, ಅದರ ಮುಂದೆ ತೇಜಸ್ವಿ–ರಾಜೇಶ್ವರಿ ಅವರ ನಾಲ್ಕು ಅಡಿ ಎತ್ತರದ ಪ್ರತಿಮೆಗಳು, ಸ್ಕೂಟರ್ ಮತ್ತು ‘ಕರ್ವಾಲೊ’ ಕಾದಂಬರಿಯ ಪಾತ್ರ ‘ಕಿವಿ’ ನಾಯಿ, ಕರಿಯಪ್ಪ, ಮಂದಣ್ಣ, ತೇಜಸ್ವಿ ಅವರ ಆಸಕ್ತಿಯನ್ನು ನೆನಪಿಸುವ ಹಾರುವ ಓತಿ, ಮಿಡತೆ, ಜೇನುಹುಳು ಸೇರಿದಂತೆ ವಿವಿಧ ಪ್ರಾಣಿ ಪಕ್ಷಿಗಳು ಇರಲಿವೆ’ ಎಂದು ವಿವರಿಸಿದರು.

‘16 ಅಡಿ ಉದ್ದ, 20 ಅಡಿ ಅಗಲ ಹಾಗೂ 10 ಅಡಿ ಎತ್ತರದ ‘ನಿರುತ್ತರ’ ಮನೆ ನಿರ್ಮಿಸಲಾಗಿದ್ದು, 1.8 ಲಕ್ಷ ಗುಲಾಬಿ ಹಾಗೂ ಸೇವಂತಿಗೆ ಹೂಗಳನ್ನು ಬಳಸಿಕೊಂಡು ಈ ಪರಿಕಲ್ಪನೆ ಸಿದ್ಧಪಡಿಸಲಾಗುತ್ತಿದೆ. ತೇಜಸ್ವಿ ಪ್ರತಿಷ್ಠಾನದ ಕಟ್ಟಡದ ಪ್ರತಿರೂಪಕ್ಕೆ 1 ಲಕ್ಷ ಪುಷ್ಪಗಳನ್ನು ಬಳಸಲಾಗುತ್ತದೆ. ಜೇನುಹುಳು, ಬಣ್ಣದ ಚಿಟ್ಟೆಗಳು, ಕಪ್ಪೆ, ಜೀರುಂಡೆ ಮತ್ತು ಬಸವನ ಹುಳುಗಳ ಪರಿಕಲ್ಪನೆಗಳಿಗೆ 25 ಸಾವಿರ ವಿವಿಧ ವರ್ಣದ ಹೂಗಳನ್ನು ಬಳಸಲಾಗುತ್ತದೆ’ ಎಂದರು.

‘ಕುವೆಂಪು–ಹೇಮಾವತಿ, ಶಿವರಾಮ ಕಾರಂತ, ಲೋಹಿಯಾ ಮತ್ತು ರಾಜೇಶ್ವರಿ ತೇಜಸ್ವಿಯರ ಪ್ರತಿಮೆಗಳು ರಾರಾಜಿಸಲಿವೆ. ಗಾಜಿನ ಮನೆಯ ಬಲಬದಿಯಲ್ಲಿ ತೇಜಸ್ವಿಯವರ ವ್ಯಂಗ್ಯಚಿತ್ರ, ಪ್ರತಿಮೆಗಳು ಇರಲಿವೆ. ಎಡಬದಿಯಲ್ಲಿ ಮಂತ್ರ ಮಾಂಗಲ್ಯ ಪರಿಕಲ್ಪನೆಯ ವರ್ಟಿಕಲ್ ಗಾರ್ಡನ್ ನಿರ್ಮಿಸಲಾಗುತ್ತಿದೆ’ ಎಂದರು.

ನಾಟಕ ಪ್ರದರ್ಶನ, ಉಪನ್ಯಾಸ 15ರಿಂದ

ಲಾಲ್‌ಬಾಗ್‌ನ ಹುಲ್ಲುಹಾಸು ಪ್ರದೇಶದಲ್ಲಿ ಜ.15ರಿಂದ 26ರವರೆಗೆ ಪ್ರತಿದಿನ ಸಂಜೆ 5 ರಿಂದ 7 ಗಂಟೆವರೆಗೆ ನಾಟಕ ಪ್ರದರ್ಶನ ಹಾಗೂ ಉಪನ್ಯಾಸ ಕಾರ್ಯಕ್ರಮಗಳು ಜರುಗಲಿವೆ.

ಜ.15ರಂದು ತೇಜಸ್ವಿಯವರ ಕುಟುಂಬದ ಸದಸ್ಯರಾದ ತಾರಿಣಿ ಚಿದಾನಂದಗೌಡ, ಚಿದಾನಂದಗೌಡ, ಸುಸ್ಮಿತಾ, ಈಶಾನ್ಯೆ ಅವರೊಂದಿಗೆ ಸಂವಾದ, 16ರಂದು ನನ್ನ ತೇಜಸ್ವಿ ನಾಟಕ ಪ್ರದರ್ಶನ, 17ರಂದು ತೇಜಸ್ವಿ ಸಹಜ ಕೃಷಿ ಚಿಂತನೆಗಳ ಬಗ್ಗೆ ಉಪನ್ಯಾಸ, 18ರಂದು ಕರ್ವಾಲೊ ನಾಟಕ ಪ್ರದರ್ಶನ, 19ರಂದು ಚಲನಚಿತ್ರ ರಂಗಭೂಮಿ ಪ್ರತಿಭೆಗಳೊಂದಿಗೆ ಸಂವಾದ, 20ರಂದು ಕೃಷ್ಣೇಗೌಡನ ಆನೆ ನಾಟಕ ಪ್ರದರ್ಶನ, 21ರಂದು ತೇಜಸ್ವಿ ಕುರಿತ ಸಾಕ್ಷ್ಯಚಿತ್ರ ಪ್ರದರ್ಶನ, 22ರಂದು ಜುಗಾರಿ ಕ್ರಾಸ್ ನಾಟಕ ಪ್ರದರ್ಶನ, 23ರಂದು ತೇಜಸ್ವಿ ವಿಶ್ವರೂಪ ದರ್ಶನ, 24ರಂದು ಯಮಳ ಪ್ರಶ್ನೆ ನಾಟಕ ಪ್ರದರ್ಶನ, 25ರಂದು ತೇಜಸ್ವಿ ಆಪ್ತರೊಂದಿಗೆ ಸಂವಾದ, 26ರಂದು ನಾಟಕ ಪ್ರದರ್ಶನ ಇದೆ.

ಲಾಲ್‌ಬಾಗ್‌ನ ಗಾಜಿನ ಮನೆಯಲ್ಲಿ ನಡೆಯಲಿರುವ ಫಲಪುಷ್ಪ ಪ್ರದರ್ಶನದ ಸಿದ್ಧತೆಯಲ್ಲಿ ತೊಡಗಿರುವ ಕಾರ್ಮಿಕರು ಚಿತ್ರಗಳು: ಪುಷ್ಕರ್ ವಿ.

ತೇಜಸ್ವಿ ಅವರ ‘ಕರ್ವಾಲೊ’ ಕಾದಂಬರಿಯ ಹಾರುವ ಓತಿ ಮಾದರಿಯ ನಿರ್ಮಾಣದಲ್ಲಿ ಕಾರ್ಮಿಕರು ತೊಡಗಿದ್ದರು

ವಾಹನ ನಿಲುಗಡೆ ಎಲ್ಲಿ?

- ಹಾಪ್‌ಕಾಮ್ಸ್ ಆವರಣ ಮತ್ತು ಜೆ.ಸಿ. ರಸ್ತೆಯಲ್ಲಿರುವ ಬಿಬಿಎಂಪಿ ಬಹುಮಹಡಿ ವಾಹನ ನಿಲ್ದಾಣ
- ಶಾಂತಿನಗರ ಬಸ್ ನಿಲ್ದಾಣದ ಬಹುಮಹಡಿ ವಾಹನ ನಿಲ್ದಾಣ
- ಅಲ್ ಅಮೀನ್ ಕಾಲೇಜು ಮೈದಾನ

₹3.2 ಕೋಟಿ ಫಲಪುಷ್ಪ ಪ್ರದರ್ಶನದ ಒಟ್ಟು ವೆಚ್ಚ

136 ಉದ್ಯಾನದಲ್ಲಿ ಅಳವಡಿಸಿರುವ ಸಿಸಿಟಿವಿ ಕ್ಯಾಮೆರಾಗಳು

35 ಲಕ್ಷಕ್ಕೂ ಹೆಚ್ಚು ಅಂದಾಜು ಬಳಕೆಯಾಗುವ ಹೂ ಕುಂಡಗಳು, ಪ್ರತ್ಯೇಕಿಸಿದ ಹೂಗಳ ಸಂಖ್ಯೆ

10 ಲಕ್ಷ ಫಲಪುಷ್ಪ ಪ್ರದರ್ಶನಕ್ಕೆ ಭೇಟಿ ನೀಡುವವರ ಅಂದಾಜು ಸಂಖ್ಯೆ

ಪ್ರವೇಶ ಶುಲ್ಕ

ಲಾಲ್‌ಬಾಗ್‌ನ ಎಲ್ಲ ಪ್ರವೇಶ ದ್ವಾರಗಳಲ್ಲಿ ಎಲೆಕ್ಟ್ರಾನಿಕ್ ಟಿಕೆಟ್ ಯಂತ್ರಗಳ ವ್ಯವಸ್ಥೆ ಮಾಡಲಾಗಿದೆ. https:/hasiru.karnataka.gov.in/flowershow/login.aspx ಕೊಂಡಿ ಬಳಸಿ ಆನ್‌ಲೈನ್ ಮೂಲಕ ಟಿಕೆಟ್ ಬುಕ್ಕಿಂಗ್ ಮಾಡಿಕೊಳ್ಳಬಹುದು.

- ವಯಸ್ಕರಿಗೆ ₹ 80
- ರಜಾ ದಿನಗಳಲ್ಲಿ ₹ 100
- ಮಕ್ಕಳಿಗೆ ₹ 30
- ಸಮವಸ್ತ್ರ ಧರಿಸಿ ಬರುವ ಶಾಲಾ ವಿದ್ಯಾರ್ಥಿಗಳಿಗೆ ಪ್ರವೇಶ ಉಚಿತ
- **ಪ್ರದರ್ಶನದ ಸಮಯ:** ಬೆಳಿಗ್ಗೆ 6ರಿಂದ ಸಂಜೆ 7ರವರೆಗೆ

‘ಉದಯರವಿ ಸ್ಮಾರಕ: ನಿರ್ಧಾರ ಶೀಘ್ರ’

ಮೈಸೂರು: ‘ಕುವೆಂಪು ನಿವಾಸ ‘ಉದಯರವಿ’ ಅನ್ನು ಸ್ಮಾರಕ ಮಾಡಲಾಗುವುದು. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೊಂದಿಗೆ ಚರ್ಚಿಸಿ ಮೂರು ದಿನಗಳೊಳಗೆ ನಿರ್ಧಾರ ಪ್ರಕಟಿಸಲಾಗುವುದು’ ಎಂದು ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ್ ಎಸ್.ತಂಗಡಗಿ ಹೇಳಿದರು.

ನಗರದಲ್ಲಿ ಮಾತನಾಡಿ, ‘ಕಳೆದ ಬಜೆಟ್‌ನಲ್ಲಿ ಸ್ಮಾರಕಕ್ಕೆಂದು ₹ 5 ಕೋಟಿ ಮೀಸಲಿಟ್ಟಿದ್ದರೂ ಅನುಷ್ಠಾನಗೊಳ್ಳಲಿಲ್ಲ’ ಎಂದು ಹೇಳಿದರು.

ಇಗ್ನೊ: ಬೆಂಗಳೂರು ಕೇಂದ್ರದಲ್ಲಿ ಪ್ರವೇಶ ಆರಂಭ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇಂದಿರಾಗಾಂಧಿ ರಾಷ್ಟ್ರೀಯ ಮುಕ್ತ ವಿಶ್ವವಿದ್ಯಾಲಯದ (ಇಗ್ನೊ) ಬೆಂಗಳೂರು ಪ್ರಾದೇಶಿಕ ಕೇಂದ್ರದಲ್ಲಿ ಪದವಿ ಹಾಗೂ ಸ್ನಾತಕೋತ್ತರ ಪದವಿ ಕೋರ್ಸ್‌ಗಳಿಗೆ ಪ್ರವೇಶ ಪ್ರಕ್ರಿಯೆ ಶುರುವಾಗಿದ್ದು, ಶಿಕ್ಷಣದ ಜತೆಗೆ ತರಬೇತಿ ನೀಡಲು ಕೌಶಲ ಕೇಂದ್ರವನ್ನೂ ಆರಂಭಿಸಲಾಗುತ್ತದೆ.

ಬಿ.ಎ, ಬಿ.ಕಾಂ, ಬಿ.ಎಸ್ಸಿ, ಎಂ.ಎ, ಎಂ.ಎಸ್ಸಿ, ಎಂಬಿಎ, ಎಂಸಿಎ, ಡಿಪ್ಲೊಮಾ, ಸರ್ಟಿಫಿಕೇಟ್ ಸಹಿತ 380 ಕೋರ್ಸ್‌ಗಳಿಗೆ ಆನ್‌ಲೈನ್ ಮೂಲಕ ಪ್ರವೇಶ ಪ್ರಕ್ರಿಯೆಯನ್ನು ಇಗ್ನೊ ಆರಂಭಿಸಿದೆ. 18 ವರ್ಷ ಮೇಲ್ಪಟ್ಟ, ದ್ವಿತೀಯ ಪಿಯುಸಿ ಉತ್ತೀರ್ಣರಾದವರು ಪ್ರವೇಶ ಪಡೆಯಬಹುದು.

ಆನೇಕಲ್ ತಾಲ್ಲೂಕಿನ ಗುಳಿಮಂಗಲದ ರಿಯೋ ಬ್ಯಾಡ್ಮಿಂಟನ್ ಅಕಾಡೆಮಿ ಬಳಿ ಇರುವ ಕೇಂದ್ರ ಕಚೇರಿಯಲ್ಲೂ ಪ್ರವೇಶ ಪಡೆಯಬಹುದು (ವಾಟ್ಸ್ ಆ್ಯಪ್ 9449337272) ಎಂದು ಪ್ರಾದೇಶಿಕ ನಿರ್ದೇಶಕ ಎಂ.ಷಣ್ಮುಗಂ ಅವರು ಸುದ್ದಿಗೋಷ್ಠಿಯಲ್ಲಿ ತಿಳಿಸಿದರು. ವಾರ್ಷಿಕ ಆದಾಯ ₹2.50 ಲಕ್ಷಕ್ಕಿಂತ ಕಡಿಮೆ ಇರುವ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳ ವಿದ್ಯಾರ್ಥಿಗಳು ಪ್ರವೇಶ ಶುಲ್ಕದಲ್ಲಿ ಶೇ 50ರಷ್ಟು ವಿನಾಯಿತಿ ಪಡೆಯಬಹುದು. 2025ನೇ ಸಾಲಿನಲ್ಲಿ 3,500 ವಿದ್ಯಾರ್ಥಿಗಳು ವಿವಿಧ ಕೋರ್ಸ್‌ಗಳಲ್ಲಿ ಉತ್ತೀರ್ಣರಾಗಿದ್ದು, ಫೆಬ್ರುವರಿಯಲ್ಲಿ ನಡೆಯುವ ಘಟಿಕೋತ್ಸವದಲ್ಲಿ ಪದವಿ ಪ್ರದಾನ ಮಾಡಲಾಗುವುದು ಎಂದರು.

ಸಂಕ್ಷಿಪ್ತ ಸುದ್ದಿ

ಪದ್ಮಿನಿಗೆ ‘ಆದರ್ಶ ಜೈನ ಸಮಾಜ ಪ್ರಶಸ್ತಿ’

ಪದ್ಮಿನಿ

ಬೆಂಗಳೂರು: ಉತ್ತರ ಕರ್ನಾಟಕ ಜೈನ ಬಾಂಧವರು ನೀಡುವ 2026ನೇ ಸಾಲಿನ ‘ಆದರ್ಶ ಜೈನ ಸಮಾಜ ರತ್ನ ಪ್ರಶಸ್ತಿ’ಗೆ ಲೇಖಕಿ ಪದ್ಮಿನಿ ನಾಗರಾಜು ಆಯ್ಕೆಯಾಗಿದ್ದಾರೆ.

ಪ್ರಶಸ್ತಿಯು ₹25 ಸಾವಿರ ನಗದು ಒಳಗೊಂಡಿದೆ. ಜನವರಿ 18ರಂದು ಕರ್ನಾಟಕ ಜೈನ ಭವನದಲ್ಲಿ ನಡೆಯುವ ಸಂಕ್ರಾಂತಿ ಸಂಭ್ರಮ ಕಾರ್ಯಕ್ರಮದಲ್ಲಿ ಸಚಿವ ಡಿ. ಸುಧಾಕರ್ ಪ್ರಶಸ್ತಿ ಪ್ರದಾನ ಮಾಡಲಿದ್ದು, ಭಾರತೀಯ ಜೈನ್ ಮಿಲನ್ ಕಾರ್ಯಾಧ್ಯಕ್ಷ ಡಿ. ಸುರೇಂದ್ರ ಕುಮಾರ್, ಕರ್ನಾಟಕ ಜೈನ್ ಅಸೋಸಿಯೇಷನ್ ಅಧ್ಯಕ್ಷ ಎಸ್. ಜಿತೇಂದ್ರಕುಮಾರ್, ಉತ್ತರ ಕರ್ನಾಟಕ ಜೈನ ಬಾಂಧವರು ಸಂಘಟನೆಯ ಅಧ್ಯಕ್ಷ ಸುಭಾಷ ಪಿ. ಜಿನಗೌಡ ಅವರು ಅತಿಥಿಗಳಾಗಿ ಭಾಗವಹಿಸಲಿದ್ದಾರೆ ಎಂದು ಸಂಘಟನೆಯ ಕಾರ್ಯದರ್ಶಿ ಬಾಹುಬಲಿ ಗೌರಜ್ ತಿಳಿಸಿದ್ದಾರೆ.

ಜ.20ರಿಂದ ಆಹಾರ ತಂತ್ರಜ್ಞಾನ ಪ್ರದರ್ಶನ

ಬೆಂಗಳೂರು: ಸಿನರ್ಜಿ ಎಕ್ಸ್‌ಪೋಶರ್ಸ್ ಹಾಗೂ ಈವೆಂಟ್ಸ್ ಇಂಡಿಯಾ ಪ್ರೈವೇಟ್ ಲಿಮಿಟೆಡ್ ಸಂಸ್ಥೆಯು ಆಹಾರ, ಪಾನೀಯ, ಹೋಟೆಲ್, ರೆಸ್ಟೋರೆಂಟ್ ಹಾಗೂ ಕೇಟರಿಂಗ್ ಕ್ಷೇತ್ರ, ಬೇಕರಿ, ಸಂಸ್ಕರಣೆ, ಪ್ಯಾಕೇಜಿಂಗ್ ಹಾಗೂ ಆತಿಥ್ಯ ವಲಯಗಳನ್ನು ಒಳಗೊಂಡ ಬಿ2ಬಿ ತಂತ್ರಜ್ಞಾನ, ಆಹಾರ ಉತ್ಪನ್ನಗಳ ಪ್ರದರ್ಶನವನ್ನು ಜ.20ರಂದ ಮೂರು ದಿನ ನಗರದ ಅರಮನೆ ಮೈದಾನದ ತ್ರಿಪುರವಾಸಿನಿಯಲ್ಲಿ ಹಮ್ಮಿಕೊಂಡಿದೆ.

ದೇಶ, ವಿದೇಶಗಳಿಂದ ಈ ವಲಯದ ಉದ್ಯಮಿಗಳು, ಪ್ರದರ್ಶಕರು ಭಾಗವಹಿಸುವರು. ಆಹಾರ ಮತ್ತು ಪಾನೀಯ ಸಂಸ್ಕರಣೆ, ಇಂಡಿಯಾ ಫುಡ್ ಪ್ಯಾಕ್, ಬೇಕರ್ಸ್ ತಂತ್ರಜ್ಞಾನ, ಇಂಡಿಯಾ ಡೇರಿ ಸಂಸ್ಕರಣೆ, ಆಹಾರ ಪಾನೀಯಗಳ ಪ್ರದರ್ಶನದ ವೇದಿಕೆಯಾಗಲಿದೆ ಎಂದು ಸಂಚಾಲಕ ಬ್ರಿಜೇಶ್ ಎಡ್ವರ್ಡ್ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರ, ಬೆಂಗಳೂರು
ಬೆಂ.ಮ.ಪ್ರ.ಪ್ರಾ.
ಮಹಾನಗರ ಆಯುಕ್ತರ ಕಚೇರಿ, ಬಿ.ಎಂ.ಆರ್.ಡಿ.ಎ. ನಂ.1, ಅಲಿ ಆಸ್ಕರ್ ರಸ್ತೆ, ಬೆಂಗಳೂರು–560 052, ದೂ: 080–22263479
ಸಂಖ್ಯೆ:ಬಿಎಂಆರ್‌ಡಿಎ/ಲೆಕ್ಕಶಾಖೆ/40/2025–26 ದಿನಾಂಕ:12.01.2026

ಟೆಂಡರ್ ಪ್ರಕಟಣೆ
ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರದ ಹೆಚ್ಚುವರಿ ನಿಧಿಗಳ ಹೂಡಿಕೆಗಾಗಿ ಇ–ಹರಾಜು GoK ಯ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಪ್ರಕಟಿಸಲಾಗಿದೆ. ಹೆಚ್ಚಿನ ವಿವರಗಳಿಗಾಗಿ ವೆಬ್‌ಸೈಟ್: www.kppp.karnataka.gov.in ನಿಂದ ಪಡೆಯಬಹುದಾಗಿದೆ.
ಸಹಿ/–
ಜಂಟಿ ಮಹಾನಗರ ಆಯುಕ್ತರು,
ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರ,
ಬೆಂಗಳೂರು

KARNATAKA REDDYJANA SANGHA
No.1, Mahayogi Vemana Road, 3rd Block, Koramangala, Bangalore-34.
TENDER NOTICE
Quotations are invited from reputed companies:
i) For supply and installation of HT & LT other Electrical works to KRJS Hospital building at Kasavanahalli.
ii) For supply of Radio-Diagnosis items to KRJS Medical College & Research Center at Kasavanahalli.
Sealed quotations are to be submit within 5 days of this publication.
For more details, Visit our website www.reddyjanasangha.org or Contact: 080-2553 4194 or 90352 44612
Sd/- President Sd/- General Secretary

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ
KPTCL
(ಸಿ.ಐ.ಎನ್: ಯು40109ಕೆಎ1999ಎಸ್‌ಜಿಸಿ025521)
ಟೆಂಡರ್ ಪ್ರಕಟಣೆ
(ಕೆಪಿಪಿ ಪೋರ್ಟಲ್ ಮೂಲಕ ಮಾತ್ರ)
ಸಂಖ್ಯೆ: ಅಇಎವಿ/ಪ್ರ(ಕಾ)/ದ–ವೃತ್ತ/ಕಾನಿಇಂ(ಕ)/ಸಕಾನಿಇಂ–2/25–26/ಇಪಿಆರ್–14/4608–10 ದಿನಾಂಕ: 09.01.2026
ಕವಿಪ್ರನಿನಿಯ ವಿಚಾರಣೆ ಸಂಖ್ಯೆ: ಕವಿಪ್ರನಿನಿ/ಅಇಎವಿ/ಪ್ರ(ನಿ)/ದ–ವೃತ್ತ/ಕಾನಿಇಂ(ಕ)/ಸಕಾನಿಇಂ–2/25–26/ಇಪಿಆರ್–14/ಕರೆ–3, ದಿನಾಂಕ: 09.09.2025ರ ಅನ್ವಯ ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ, ಬೆಂಗಳೂರಿನ ಅಡಿಯಲ್ಲಿ ಬರುವ “220 ಕೆವಿ ಸ್ಟೇಷನ್, ತಾತಗುಣಿ, ಕನಕಪುರ ರಸ್ತೆ, ಬೆಂಗಳೂರಿನಲ್ಲಿ ಹಾಲಿ ಇರುವ ಸಂರಕ್ಷಣಾ ವ್ಯವಸ್ಥೆಯನ್ನು ನವೀಕರಿಸುವ” ಕಾಮಗಾರಿಗೆ ಟರ್ನ್‌ಕೀ ಆಧಾರದ ಮೇಲೆ ಶೇಕಡಾವಾರು ಆಧಾರದ ಮೇಲೆ ಬಿಡ್‌ಗಳನ್ನು ಆಹ್ವಾನಿಸಿದೆ.
ಬಿಡ್‌ಗಳನ್ನು ಎಲೆಕ್ಟ್ರಾನಿಕ್ ಟೆಂಡರಿಂಗ್ ಪದ್ಧತಿಯ ಮೂಲಕ ಮಾತ್ರವೇ ಸ್ವೀಕರಿಸಲಾಗುವುದು. ಮೇಲ್ಕಂಡ ಟೆಂಡರ್‌ನ ವಿವರವಾದ ಪ್ರಕಟಣೆಯನ್ನು ವೆಬ್‌ಸೈಟ್:https://kptcl.karnataka.gov.inಗೆ ಹೈಪರ್‌ಲಿಂಕ್ “E Procurement KPTCL”ನಲ್ಲಿ ಅಥವಾ https://kppp.karnataka.gov.inನಲ್ಲಿ ದಿನಾಂಕ: 13.01.2026 ಅಥವಾ ತದನಂತರ ಲಾಗಿನ್ ಆಗುವ ಮೂಲಕ ಪಡೆಯಬಹುದು.
ಸಹಿ/– ಅಧೀಕ್ಷಕ ಇಂಜಿನಿಯರ್(ವಿ),
ಪ್ರಸರಣ(ಕಾರ್ಯಾಚರಣೆ) ವೃತ್ತ–ದಕ್ಷಿಣ, ಕ.ವಿ.ಪ್ರ.ನಿ.ನಿ.,
ನೆಲ ಮಹಡಿ, ಕಚೇರಿ ಸಂಕೀರ್ಣ, ಆನಂದರಾವ್ ವೃತ್ತ, ಬೆಂಗಳೂರು–560 009.

ಕರ್ನಾಟಕ ಸರ್ಕಾರ
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ
ಕಾರ್ಯಪಾಲಕ ಇಂಜಿನೀಯರ್‌ರವರ ಕಛೇರಿ, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಜಯನಗರ ವಾಣಿಜ್ಯ ಸಂಕೀರ್ಣ ಮಳಿಗೆ, ಜಯನಗರ, ಬೆಂಗಳೂರು–560011.
ಸಂ : ಕಾ.ಇಂ/ಸ.ನೀ ಮತ್ತು ಅ.ಅ.ವಿ/ಬೆಂ/ತಾಂ–ಸ/ ಟೆಂಡರ್ ಪ್ರಕಟಣೆ ಸಂಖ್ಯೆ: 26/2025–26 ದಿನಾಂಕ : 09.01.2026
REQUEST FOR PRPOSAL – ಅಲ್ಪಾವಧಿ ಟೆಂಡರ್ ಪ್ರಕಟಣೆ
ಕರ್ನಾಟಕ ಸರ್ಕಾರದ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಇಂಜಿನಿಯರ್, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಬೆಂಗಳೂರು ರವರಿಂದ ಈ ಕೆಳಕಂಡ ಸೇವೆಗಾಗಿ Empanelled Transaction Advisors ರವರನ್ನು ಕೆಟಿಪಿಪಿ ನಿಯಮಾವಳಿಯನ್ವಯ ಟೆಂಡರ್ ಆಹ್ವಾನಿಸಲಾಗಿರುತ್ತದೆ. ಸದರಿ ಟೆಂಡರ್ ಅನ್ನು ಕೆಟಿಪಿಪಿ ಕಾಯ್ದೆ ಮತ್ತು Standard Tender Document ಅನ್ವಯ ಕೈಗೊಳ್ಳಲಾಗುವುದು. Empanelled ಬಿಡ್ಡುದಾರರು ಕೆಪಿಪಿ ಪೋರ್ಟಲ್ http://kppp.karnataka.gov.in ಬಿಡ್ಡನ್ನು ಸಲ್ಲಿಸಲು ತಿಳಿಸಲಾಗಿದೆ.
ಕಾಮಗಾರಿಯ ಹೆಸರು :– 1) Selection of Consultant for Providing Transaction Advisory Services for Lake Rejuvenation & Sustainable Development in Urban districts (15 tanks) 2) Selection of Consultant for Providing Transaction Advisory Services for Lake Rejuvenation & Sustainable Development in Rural districts (1) (15 tanks) 3) Selection of Consultant for Providing Transaction Advisory Services for Lake Rejuvenation & Sustainable Development in Rural districts (2) (10 tanks) - in the State of Karnataka.
ಕಾಮಗಾರಿ ಪೂರ್ಣಗೊಳಿಸಬೇಕಾದ ಅವಧಿ: 12 ವಾರಗಳು ಮಳೆಗಾಲ ಸೇರಿದಂತೆ.
1) Request For Proposal(RFP) ದಾಸ್ತಾವೇಜುಗಳನ್ನು ವೆಬ್‌ಸೈಟ್‌ನಲ್ಲಿ ಪ್ರಕಟಿಸುವ : 09/01/2026 ಸಂಜೆ 4.30 ಗಂಟೆಯ ನಂತರ. 2) ಪ್ರಶ್ನೆಗಳು/ಸ್ಪಷ್ಟೀಕರಣಗಳನ್ನು ಸ್ವೀಕೃರಿಗಾಗಿ ಕೊನೆಯ ದಿನಾಂಕ ಮತ್ತು ಸಮಯ : 16/01/2026 ಮಧ್ಯಾಹ್ನ 14:00 ಗಂಟೆಯವರೆಗೆ. 3) ಪ್ರಿ ಬಿಡ್ ಸಭೆಯ ದಿನಾಂಕ ಮತ್ತು ಸ್ಥಳ : 16/01/2026 ಮಧ್ಯಾಹ್ನ 15:00 ಗಂಟೆಗೆ : ಅಧೀಕ್ಷಕ ಅಭೀಯಂತರರ ಕಛೇರಿ, ಜಯನಗರ 4ನೇ ಬ್ಲಾಕ್, ಶಾಪಿಂಗ್ ಕಾಂಪ್ಲೆಕ್ಸ್, 3ನೇ ಮಹಡಿ, ಬೆಂಗಳೂರು . ಇ–ಮೇಲ್ ಐಡಿ: semibng@gmail.com 4) Request for Proposal (RFP) ಸ್ವೀಕರಿಸಲು ಕೊನೆಯ ದಿನಾಂಕ ಮತ್ತು ಸಮಯ : 20/01/2026 ಮಧ್ಯಾಹ್ನ 15:00 ಗಂಟೆಯವರೆಗೆ. 5) Request For Proposal(RFP) ಬಿಡ್ಡನ್ನು ತೆರೆಯುವ ದಿನಾಂಕ ಮತ್ತು ಸಮಯ :21/01/2026 ಮಧ್ಯಾಹ್ನ 15:30 ಗಂಟೆಗೆ.
ಸದರಿ ಪ್ರಕಟಣೆಯ ಹೆಚ್ಚಿನ ಮಾಹಿತಿಗಾಗಿ ಕಛೇರಿ ವೇಳೆಯಲ್ಲಿ ಅಥವಾ ದೂರವಾಣಿ ಮುಖಾಂತರ ಸಂಬಂಧಪಟ್ಟ ಶಾಖಾಧಿಕಾರಿಗಳನ್ನು ಸಂಪರ್ಕಿಸ ಬಹುದಾಗಿರುತ್ತದೆ.
ಸಹಿ/– ಕಾರ್ಯಪಾಲಕ ಅಭಿಯಂತರರು,
ವಾಸಾಸಂಇ/ವಾ.ಪ್ರ/4989/ಎಸ್‌ಎಸ್‌ಸಿ/2025–26 ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ

ನೆಲಮಂಗಲ ಯೋಜನಾ ಪ್ರಾಧಿಕಾರ
2ನೇ ಮುಖ್ಯರಸ್ತೆ, ಸದಾಶಿವನಗರ, ನೆಲಮಂಗಲ–562123.
ಇ–ಮೇಲ್: nelamangala.pa@gmail.com Phone: 9663046622
ಸಂಖ್ಯೆ: ನೆಯೋಪ್ರಾ:CC:155:2025–26 ದಿನಾಂಕ: 09–01–2026
ಸಾರ್ವಜನಿಕ ಪ್ರಕಟಣೆ
ಶ್ರೀಮತಿ ಷರೀಫ ಯೂಸುಫ್ ಮೋಟೋರ್ ವಾಲ ಕೋಂ ಯೂಸುಫ್ ಅಬ್ದುಲ್ ಗನಿ ಮೋಟೋರ್ ವಾಲ, ಶ್ರೀ ಅಫ್ಜಲ್ ಯೂಸುಫ್ ಮೋಟೋರ್ ವಾಲ ಬಿನ್ ಯೂಸುಫ್ ಅಬ್ದುಲ್ ಗನಿ ಮೊಟೋರ್ ವಾಲ ಮತ್ತು ಶ್ರೀ ಫೈಸೆಲ್ ಯೂಸಫ್ ಮೋಟೋರ್ ವಾಲ ಬಿನ್ ಯೂಸುಫ್ ಅಬ್ದುಲ್ ಗನಿ ಮೋಟೋರ್ ವಾಲ, ಬೂದಿಹಾಳ್ ಗ್ರಾಮ, ಕಸಬಾ ಹೋಬಳಿ, ನೆಲಮಂಗಲ ತಾಲ್ಲೂಕು. ರವರು ಈ ಪ್ರಾಧಿಕಾರಕ್ಕೆ ಮನವಿ ಸಲ್ಲಿಸಿ, ನೆಲಮಂಗಲ ತಾಲ್ಲೂಕು, ಕಸಬಾ ಹೋಬಳಿ, ಬೂದಿಹಾಳ್ ಗ್ರಾಮದ ಸ.ನಂ.76/3 ರಲ್ಲಿ 00ಎಕರೆ–05½ಗುಂಟೆ ವಿಸ್ತೀರ್ಣದ ಪ್ರದೇಶಕ್ಕೆ ಈ ಕಛೇರಿಯ ಆದೇಶ ಸಂಖ್ಯೆ: NPA/LAO/109/2024-25, ದಿನಾಂಕ: 15–10–2025 ರಂದು ವ್ಯವಸಾಯ (Places of worship) ಉದ್ದೇಶಕ್ಕೆ ಅನುಮೋದನೆಯಾಗಿರುವ ಏಕ ನಿವೇಶನ ವಿನ್ಯಾಸ ನಕ್ಷೆಯಲ್ಲಿನ ಪ್ರದೇಶಕ್ಕೆ ಬೂದಿಹಾಳ್ ಗ್ರಾಮ ಪಂಚಾಯಿತಿಯಲ್ಲಿ ಖಾತಾ ಸಂಖ್ಯೆ: 1041/76/3, ಇ–ಸ್ವತ್ತಿನ ಸಂಖ್ಯೆ: 150300700800820827 ರಂತೆ ಖಾತೆ ದಾಖಲಾಗಿದ್ದು, ಸದರಿ ಜಾಗದಲ್ಲಿ (Places of worship) ಉದ್ದೇಶದ ಕಟ್ಟಡವನ್ನು ಕಟ್ಟಲು ಪ್ರಾರಂಭಿಕ ಪ್ರಮಾಣ ಪತ್ರವನ್ನು ನೀಡಲು ಕೋರಿರುತ್ತಾರೆ. ಪ್ರಸ್ತಾವಿತ ಪ್ರದೇಶದಲ್ಲಿ (Places of worship) ಉದ್ದೇಶದ ಕಟ್ಟಡ ನಿರ್ಮಾಣ ಮಾಡುವ ಸಂಬಂಧ ಆಕ್ಷೇಪಣೆ ಏನಾದರೂ ಇದ್ದಲ್ಲಿ ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ಸದಸ್ಯ ಕಾರ್ಯದರ್ಶಿಗಳು, ನೆಲಮಂಗಲ ಯೋಜನಾ ಪ್ರಾಧಿಕಾರ, ನೆಲಮಂಗಲ ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗಧಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.
ಸಹಿ/–
ಜಂಟಿ ನಿರ್ದೇಶಕರು,
ನಗರ ಮತ್ತು ಗ್ರಾಮಾಂತರ ಯೋಜನೆ ಹಾಗೂ ಸದಸ್ಯ–ಕಾರ್ಯದರ್ಶಿ,
ವಾಸಾಸಂಇ/.ವಾಪ್ರ/4992/ಸ್ಕ್ಯಾನ್/2025–26 ನೆಲಮಂಗಲ ಯೋಜನಾ ಪ್ರಾಧಿಕಾರ, ನೆಲಮಂಗಲ.

ಪ್ರಜಾವಾಣಿ **ಕ್ಲಾಸಿಫೈಡ್ಸ್** ಪ್ರತಿಯೊಬ್ಬರಿಗೂ ಉಪಯುಕ್ತ

PUBLIC NOTICE

NOTICE
Disposal of Medical Records
Seventh-Day Adventist Medical Centre, Bangalore proposes to permanently dispose the inactive patient Medical Records from January 1, 2019 to December 31, 2020.
Any patient needing copy of the medical record can submit written request with valid government ID Proof, to Medical Director, SDA Medical Centre, Frazer Town, Bangalore 560005 on or before February 15, 2026.

BUSINESS
Business to Business
Finance
FINANCE Property Collaterals Available in HYDERABAD 9154136496
Business Offers
Finance
MSME LOAN Available For Any Start-UpsCompanies And Existing Running Companies,Hotels,Shops Establishments Etc Contact-7204995189

PERSONAL
Change of Name

CHANGE OF NAME
I, ABDUL MUQTHADIR S/o Naseerulla Baig, R/at Ward No. 20, Behind Mansoor Masjid MG Road, Gowribidanur, Chikkaballapur Dist., have changed my name to ABDUL MUQTADIR vide affidavit dated 09-01-2026 before notary Pathan Rahamathulla, Chikkaballapur. Henceforth I shall be called as ABDUL MUQTADIR only

CHANGE OF NAME
I, Nagamma and Nagaveni W/o B. Chikka Anjinappa, residing at No. 171, 9th Cross, S R Nagar Mico Road, Dairy Circle, VTC Adugodi, Adugodi Post, Bangalore-560030, declare that the above names pertain to me only & henceforth I shall be known as NAGAMMA vide affidavit dated 07-01-2026 before notary A.R. Muneer Ahmed, Bangalore.

CHANGE OF NAME
I, V Abubaked, residing at # 329, Hosabeedi, Konanur, Hassan, Karnataka-573130 have changed my name to V ABUBAKKAR vide affidavit dated 12-01-2026 before notary L Gopalakrishna, Bengaluru. Henceforth I shall be called V ABUBAKKAR only

I SAYEEDA W/o Syed Ifthiquaruddin R/a #133, 9th Main Behind Muzammil Masjid mahboob nagar bangalore 560045 have changed my name to SAYEEDA KHANUM vide affidavit dated 12-01-2026 before notary MEER HASSAN

Lost
DOCUMENT LOST
My client, Jutta Balaram Swamy, residing at Bhubaneshwari Nagar, Kampapura, Hebbal, Bengaluru, lost Sale Deed bearing, BNG(U) KRP/17389/2002-03, dated 06/02/2003 of the property situated at Seegehalli, Bengaluru, South Taluk. Finder, please contact Advocate V. Lakshmaiah at 9481477744 or inform nearest Police Station.

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager The Printers (Mysore) Pvt. Ltd. Bengaluru

DH DECCAN HERALD **THANKSGIVING**
Book your Thanksgiving Advertisement in Deccan Herald for ANNUAL FEAST OF INFANT JESUS ON 14th January 2026 @ 2100 with GST (Size 4cmx5cm)
For more Details Contact: Ph :080 - 45557163 | 164 | 9731810277

ನೈಋತ್ಯ ರೈಲ್ವೆ
ಟೆಂಡರ್ ಪ್ರಕಟಣೆ ಸಂ. ಹೆಚ್‌ಇ–ಟಿಆರ್‌ಡಿ–2025–26–ಒಟಿ–36
ದಿನಾಂಕ : 28–01–2026
ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಸಹಿದಾರರು ಕೆಳಕಂಡ ಕೆಲಸಗಳಿಗಾಗಿ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕಾಮಗಾರಿಯ ಹೆಸರು	ಅಂದಾಜು ಮೌಲ್ಯ
ಹುಬ್ಬಳ್ಳಿ ವಿಭಾಗದಲ್ಲಿ Synergy ತಯಾರಿಕೆಯ 25ಕೆವಿ ಮತ್ತು 2x25ಕೆವಿ ಸಿಂಗಲ್ ಫೇಸ್ 50 ಹೆಚ್‌ಜೆಡ್ ಟ್ರ್ಯಾಕ್ಷನ್ ವಿದ್ಯುತ್ ಸರಬರಾಜಿಗಾಗಿ ಎಸ್‌ಸಿಎಡಿಎ ವ್ಯವಸ್ಥೆಯಲ್ಲಿ ಸೈಬರ್ ಸುರಕ್ಷತಾ ಕ್ರಮಗಳನ್ನು ಅಳವಡಿಸುವುದು	ರೂ. 3,65,80,006/–

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 28–01–2026 ರಂದು 11:00 ಗಂಟೆಯವರೆಗೆ
ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ ಮುಕ್ತಾಯದ ದಿನಾಂಕದವರೆಗೆ ಯಾವುದೇ ತಿದ್ದುಪಡಿಗಾಗಿ ವೆಬ್‌ಸೈಟ್‌ಗೆ ಭೇಟಿ ನೀಡುತ್ತಿರಿ.
ಹಿರಿಯ ವಿಭಾಗೀಯ ವಿದ್ಯುತ್ ಇಂಜಿನಿಯರ್ / ಟ್ರ್ಯಾಕ್ಷನ್ ಡಿಸ್ಟ್ರಿಬ್ಯೂಷನ್ / ಹುಬ್ಬಳ್ಳಿ
ಪಿಯುಬಿ/807/ಎಎಸ್/ಪಿಆರ್‌ಬಿ/ಎಸ್‌ಡಬ್ಲ್ಯುಆರ್/2025–26
ಕಾಯ್ದಿರಿಸಿಲ್ಲದ ಟಿಕೆಟ್‌ಗಳನ್ನು ಸುಲಭವಾಗಿ ಬುಕ್ ಮಾಡಲು ಗೂಗಲ್ ಪ್ಲೇ ಸ್ಟೋರ್‌ನಿಂದ ಯುಟಿಎಸ್ ಮೊಬೈಲ್ ಆಪ್‌ನ್ನು ಡೌನ್‌ಲೋಡ್ ಮಾಡಿ
South Western Railway-SWR SWRRLY @SWRAILWAYHQ @sw_railways

ರೈಲು ಗಾಲಿ ಕಾರ್ಖಾನೆ
ಯಲಹಂಕ, ಬೆಂಗಳೂರು – 560 064
ವೆಬ್‌ಸೈಟ್: rwf.indianrailways.gov.in.
ಟೆಂಡರ್ ಪ್ರಕಟಣೆ ಸಂಖ್ಯೆ: ಆರ್‌ಡಬ್ಲ್ಯೂಎಫ್/ಎಂ/ಒಟಿ/ಆರ್‌ಟಿ ಶಾಪ್/2025–26/72 ದಿನಾಂಕ: 10/01/2026
ಇ–ಟೆಂಡರ್: ಭಾರತದ ರಾಷ್ಟ್ರಪತಿಯವರ ಪರವಾಗಿ ಪ್ರಧಾನ ಮುಖ್ಯ ಮೆಕ್ಯಾನಿಕಲ್ ಇಂಜಿನಿಯರ್‌ರವರು ಕೆಳಕಂಡ ಕೆಲಸಕ್ಕೆ ವೆಬ್‌ಸೈಟ್ https://www. ireps.gov.in (WORKS) ಆನ್‌ಲೈನ್ ಮೂಲಕ ಎಲೆಕ್ಟ್ರಾನಿಕ್ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ. **ಟೆಂಡರ್ ಸಂಖ್ಯೆ:** ಆರ್‌ಡಬ್ಲ್ಯೂಎಫ್/ಎಂ/ಒಟಿ/ ಆರ್‌ಟಿ ಶಾಪ್/2025–26/72 ದಿನಾಂಕ: 10/01/2026. **ಕೆಲಸದ ಹೆಸರು:** ಸರ್ವೀಸ್ ಶಾಪ್‌ಗಳಿಗೆ (ಇಎಂಎಂಎಸ್, ಆರ್‌ಟಿ ಶಾಪ್ ಹಾಗೂ ಯುಟಿಲಿಟಿ) ಕೌಶಲ್ಯ ವೆಲ್ಡರ್‌ಗಳ ಗುತ್ತಿಗೆ ಆಧಾರದ ಮೇಲೆ ನೇಮಕಾತಿ. **ಅಂದಾಜು ಮೌಲ್ಯ:** ರೂ.5,87,848.60. **ಮುಂಗಡ ಠೇವಣಿ ಹಣ:** ರೂ.11,800/–. **ಟೆಂಡರ್‌ಗಳ ಕೊನೆಯ ದಿನಾಂಕ & ಸಮಯ:** 31/01/2026 ರಂದು 10.30 ಗಂಟೆಗೆ. **ಪೂರ್ಣಗೊಳಿಸಲು ಕಾಲಾವಧಿ:** 24 ತಿಂಗಳು. ಈ ಟೆಂಡರ್ ಪ್ರಕಟಣೆಯನ್ನು ನಮ್ಮ ವೆಬ್‌ಸೈಟ್ "www.rwf.indianrailways.gov.in" ನಲ್ಲಿ ನೋಡಬಹುದು.
ಉಪ ಮುಖ್ಯ ಮೆಕ್ಯಾನಿಕಲ್ ಇಂಜಿನಿಯರ್/ಎಎಂ

ತುಮಕೂರು ನಗರಾಭಿವೃದ್ಧಿ ಪ್ರಾಧಿಕಾರ
ಬೆಳಗುಂಬ ರಸ್ತೆ, ತುಮಕೂರು–572103, ದೂರವಾಣಿ: 0816–2272280
E-mail: tudatmk@yahoo.co.in Website: tumakuru.uda.gov.in
ಸಂಖ್ಯೆ:ಟಿಯುಡಿಎ/ಭೂ.ಪ./ಜಿಎಲ್–2180/2025–26 ದಿನಾಂಕ:07–01–2026
ಸಾರ್ವಜನಿಕ ಪ್ರಕಟಣೆ
ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ತುಮಕೂರು ತಾಲ್ಲೂಕು, ಕಸಬಾ ಉತ್ತರ ಹೋಬಳಿ, ಮರಳೇನಹಳ್ಳಿ ಗ್ರಾಮದಲ್ಲಿನ ಈ ಕೆಳಕಂಡಂತೆ ವಿವರಿಸಿರುವ ಜಮೀನು ವಸತಿ ಉದ್ದೇಶಕ್ಕೆ ಭೂ ಪರಿವರ್ತನೆಯಾಗಿದ್ದು, ಸದರಿ ಉದ್ದೇಶದಿಂದ ಶೈಕ್ಷಣಿಕ (Upto Primary School) ಉದ್ದೇಶಕ್ಕೆ ಉದ್ದೇಶ ಬದಲಾವಣೆ ಮಾಡಿಕೊಡುವಂತೆ ಅರ್ಜಿದಾರರು ಮಾನ್ಯ ಜಿಲ್ಲಾಧಿಕಾರಿಗಳಿಗೆ ಸಲ್ಲಿಸಿದ್ದ ಪ್ರಸ್ತಾವನೆಯ ಕುರಿತು ಈ ಕಛೇರಿಯ ತಾಂತ್ರಿಕ ಅಭಿಪ್ರಾಯ ನೀಡುವಂತೆ ಮಾನ್ಯ ಜಿಲ್ಲಾಧಿಕಾರಿಗಳಿಂದ ತಿಳಿಸಲಾಗಿರುತ್ತದೆ.

ಕ್ರ. ಸಂ.	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮ	ಸರ್ವೆ ನಂ.	ವಿಸ್ತೀರ್ಣ ಎ/ಗುಂ	ಮಹಾ ಯೋಜನೆಯಂತೆ ಭೂ ಉಪಯೋಗ	ಕೋರಿರುವ ಭೂ ಉಪಯೋಗ
1	ಸಿ.ಪುಟ್ಟರಾಜು ಬಿನ್ ಚಿಕ್ಕಲಿಂಗಯ್ಯ	ತುಮಕೂರು	ಕಸಬಾ ಉತ್ತರ ಹೋಬಳಿ	ಮರಳೇನಹಳ್ಳಿ	34/8A1	0 ಎಕರೆ 17 ಗುಂಟೆ	ವಸತಿ	ಶೈಕ್ಷಣಿಕ (Upto Primary School)

ಈ ಮೇಲ್ಕಂಡ ಜಮೀನು ಸರ್ಕಾರದಿಂದ ಅನುಮೋದನೆಗೊಂಡ ಮಹಾಯೋಜನೆಯಲ್ಲಿ ವಸತಿ ವಲಯಕ್ಕೆ ಕಾಯ್ದಿರಿಸಲಾಗಿದ್ದು, ಅನುಮೋದಿತ ವಲಯ ನಿಯಮಾವಳಿಗಳಲ್ಲಿ ವಸತಿ ವಲಯದಲ್ಲಿ ವಿಶೇಷ ಸಂದರ್ಭಗಳಲ್ಲಿ ಶೈಕ್ಷಣಿಕ ಉದ್ದೇಶಕ್ಕೆ ಅನುಮತಿಸಲು ಅವಕಾಶವನ್ನು ಕಲ್ಪಿಸಲಾಗಿರುತ್ತದೆ. ಆದ್ದರಿಂದ ಪ್ರಸ್ತಾವನೆಯ ಕುರಿತು ವಸತಿ ವಲಯದಲ್ಲಿ ಶೈಕ್ಷಣಿಕ (Upto Primary School) ಉದ್ದೇಶಕ್ಕೆ ಅನುಮತಿಸಲು ಅಭಿಪ್ರಾಯ ನೀಡುವ ಸಂಬಂಧ ಸಾರ್ವಜನಿಕರಿಂದ ಸಲಹೆ / ಸೂಚನೆ / ಆಕ್ಷೇಪಣೆಗಳನ್ನು ಏನಾದರೂ ಇದ್ದಲ್ಲಿ ಈ ಪ್ರಕಟಣೆಯು ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಲಿಖಿತವಾಗಿ ಸೂಕ್ತ ದಾಖಲಾತಿಗಳೊಂದಿಗೆ ಆಯುಕ್ತರು, ನಗರಾಭಿವೃದ್ಧಿ ಪ್ರಾಧಿಕಾರ, ತುಮಕೂರು ಇವರ ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗಧಿತ ಅವಧಿಯ ನಂತರ ಬರುವಂತಹ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.
ಸಹಿ/– ಆಯುಕ್ತರು,
ನಗರಾಭಿವೃದ್ಧಿ ಪ್ರಾಧಿಕಾರ, ತುಮಕೂರು.

PUBLIC NOTICE
This is to inform the general public that my client intends to purchase the immovable properties mentioned and described in the schedule below from **M/s. Stracey Memorial Education Society,** a society registered under the Karnataka Societies Registration Act, 1960 (“Owner”). The Owner represents that it is the absolute owner of the Schedule Property and the Schedule Property is free from any encumbrance, mortgage, charge, lien or litigation and apart from the Agreement of Sale dated 26-11-2025 with Smt. Lavanya Srinivas, they have not entered into any sort of agreement/MoU/deeds etc., for transfer of the Schedule Property. Any person/s having any objection, claim, right, title and/or interest with respect to the Schedule Property or any part or portion thereof by way of sale, conveyance, acquisition, partition, transfer, memorandum of understanding, exchange, mortgage, pledge, charge, encumbrance, inheritance, succession, lease, easement or demand or objections or claims of any nature whatsoever for the proposed transaction shall lodge their claim(s)/objection(s)/demand(s) with the undersigned supported by documentary evidence within **Fifteen (15) days** from the date of publication of this Notice failing which, my client shall proceed with the above-mentioned transaction as though there are no claim(s)/objection(s)/demand(s) to the proposed transaction.
SCHEDULE
All that piece and parcel of the below mentioned immovable properties in Sakalavara and Bujangadasanaamanikere villages of Jigani Hobli, Anekal Taluk, Bengaluru Rural District:

Sl. No.	Survey Nos.	Village	Extent in Sq.Mtrs.	Boundaries: East by	West by	North by	South by
1.	**E-Khatha No.** 150200102001920002 (Property No. 1/13/14/15) earlier bearing Survey Nos. 13,14 and 15.	Bujangadasana amanikere	17,401-48	Nala	Survey No. 38/1 of Sakalavara Village & Kaluve	Survey No. 16	Survey No. 12
2.	**E-Khatha No.** 150200102001220120 (Property No. 184/38/1) earlier bearing Survey No. 38/1	Sakalavara	11,533	Survey Nos.13, 14 &15 of Bujangadasana kere Village & Road	Survey No. 40 and Road	Bujanga dasanakere Village border and Road	Survey No. 38/2

Place : Bengaluru
Date: 12-01-2026
Vinay K. S., Advocate,
Vinay Kademane & Associates
307, 3rd Floor, Prestige Centre Point, No.7/49, Edward Road, Bengaluru-560001
Ph.: 080 22863885 / 49763233 email: vinay@vinaykademane.in

ನಮಸ್ಕಾರ ಇಂಡಿಯಾ!

ನಾನು ಐಫೆಲ್ ಟವರ್...

ನನ್ನನ್ನು ನೀವು ಸಾವಿರಾರು ಕನಸುಗಳಲ್ಲಿ ಕಂಡಿರುವಿರಿ. ಕೆಲವರು ನನ್ನನ್ನು ಮೊದಲ ಬಾರಿಗೆ ಕಾಣುತ್ತಾರೆ; ಅವರ ಕಣ್ಣುಗಳಿಂದ ಆನಂದಾಶ್ರು ಸುರಿಯುತ್ತದೆ. ಕೆಲವರು ಮಗದೊಮ್ಮೆ ಭೇಟಿಕೊಟ್ಟು, ತಮ್ಮ ಯೌವನದ ದಿನಗಳನ್ನು ನೆನಪಿಸಿಕೊಂಡು ಮಂದಹಾಸ ಬೀರುತ್ತಾರೆ. ಪ್ರತಿಯೊಬ್ಬ ಪ್ರವಾಸಿಗನ ಬಳಿ ಒಂದು ಕಥನವಿದೆ... ನಾನು ಎಲ್ಲವನ್ನೂ ನನ್ನ ಅಂತರಂಗದಲ್ಲಿ ಇಟ್ಟುಕೊಳ್ಳುತ್ತೇನೆ. ಏಕೆಂದರೆ, ಯುರೋಪ್ ಎನ್ನುವುದು ಕೇವಲ ಒಂದು ಪ್ರವಾಸವಲ್ಲ -ಅದು ಅಸಂಖ್ಯ ಭಾವನೆಗಳ ಮತ್ತು ನೆನಪುಗಳ ಒಂದು ಸಂಗ್ರಹವಾಗಿದೆ. ಮತ್ತೆ ಈಗ, ನನ್ನ ಪ್ರಿಯ ಭಾರತೀಯರೇ, ನಿಮ್ಮ ಯುರೋಪ್ ಕಥನ ಆರಂಭಗೊಳ್ಳಲಿದೆ.

ಚಲೋ, ಬ್ಯಾಗ್ ಭರೋ, ನಿಕಲ್ ಪಡೋ ವೀಣಾ ವರ್ಲ್ಡ್‌ನೊಂದಿಗೆ ಯುರೋಪ್‌ಗೆ!

ವೀಣಾ ವರ್ಲ್ಡ್

ಯುರೋಪ್

ಪ್ರತಿಯೊಂದು ಕುಟುಂಬಕ್ಕಾಗಿ ಮತ್ತು ಕುಟುಂಬದ ಪ್ರತಿಯೊಬ್ಬ ಸದಸ್ಯನಿಗಾಗಿ!

ನಿಮ್ಮ ಮೊದಲ ಯುರೋಪ್ ಪ್ರವಾಸವೇ ಇರಲಿ ಅಥವಾ ಐದನೇ ಪ್ರವಾಸವೇ ಇರಲಿ, ನಿಮಗೆ ಅತ್ಯಂತ ಸೂಕ್ತವೆನಿಸುವ ಒಂದಲ್ಲ ಒಂದು ವೀಣಾ ವರ್ಲ್ಡ್ ಟೂರ್ ಇಟಿನರರಿ ಇದ್ದೇ ಇದೆ - ಪ್ರತಿಯೊಂದು ಕಾರಣಕ್ಕಾಗಿ, ಪ್ರತಿಯೊಂದು ಋತುವಿಗಾಗಿ. 5 ದಿನಗಳಿಂದ 30 ದಿನಗಳವರೆಗೆ. ₹ 1.5 ಲಕ್ಷದಿಂದ ₹ 7ಲಕ್ಷಗಳವರೆಗೆ. ಫ್ಯಾಮಿಲಿ ಟೂರ್ಸ್‌ನಿಂದ ಸೋಲೊ ಎಕ್ಸ್‌ಪ್ಲೋರರ್ಸ್‌ವರೆಗೆ. ವಿಮೆನ್ಸ್ ಸ್ಪೆಷಲ್ ಟೂರ್ಸ್‌ನಿಂದ ಸೀನಿಯರ್ಸ್ ಸ್ಪೆಷಲ್ ಟೂರ್ಸ್‌ವರೆಗೆ. ಕಸ್ಟಮೈಜ್ಡ್ ಹಾಲಿಡೇಸ್‌ನಿಂದ MICE ಕಾರ್ಪೊರೇಟ್ ಟೂರ್ಸ್‌ವರೆಗೆ.

ನಿಮ್ಮ ಆಯ್ಕೆಗಳು, ಬಜೆಟ್ ಮತ್ತು ಸಮಯಕ್ಕೆ ಸೂಕ್ತವೆನಿಸುವ ಟೂರನ್ನು ಆರಿಸಿದರಾಯಿತು.

ವೆಸ್ಟರ್ನ್ ಅಥವಾ ಈಸ್ಟರ್ನ್ ಯುರೋಪ್, ಸೆಂಟ್ರಲ್, ಬಾಲ್ಟಿಕ್ ಅಥವಾ ಬಾಲ್ಕನ್, ನಾರ್ದರ್ನ್ ಅಥವಾ ಸದರ್ನ್ ಮೆಡಿಟರೇನಿಯನ್... ಇಷ್ಟೊಂದು ಆಯ್ಕೆಗಳಿರುವಾಗ, ನೀವು ಗೊಂದಲಕ್ಕೊಳಗಾಗುವುದು ಸಹಜ. ಆದರೆ, ರಿಲ್ಯಾಕ್ಸ್ ಆಗಿರಿ! ವೀಣಾ ವರ್ಲ್ಡ್ ನಿಮ್ಮ ಪರ್ಫೆಕ್ಟ್ ಯುರೋಪನ್ನು ಹುಡುಕಲು ನಿಮಗೆ ಸಹಾಯ ಮಾಡುತ್ತದೆ.
ನಿಮ್ಮ ಯುರೋಪ್ ಭೇಟಿಯ ಕನಸನ್ನು ನಮ್ಮೊಂದಿಗೆ ಹಂಚಿಕೊಳ್ಳಿರಿ; ಅದನ್ನು ನನಸಾಗಿಸಲು ನಾವು ನಿಮಗೆ ಸಹಾಯ ಮಾಡುತ್ತೇವೆ; ಕೇವಲ ಈ ವರ್ಷ ಮಾತ್ರವಲ್ಲ, ಯುರೋಪ್‌ನ ಆದ್ಯಂತ ಮುಂದಿನ 10 ವರ್ಷಗಳವರೆಗಿನ ಅವಿಸ್ಮರಣೀಯ ಪ್ರವಾಸಗಳ ಯೋಜನೆಯನ್ನು ನಾವು ಸಿದ್ಧಪಡಿಸಿಕೊಡುತ್ತೇವೆ; ಪ್ರತೀ ಬಾರಿಯೂ ಒಂದೊಂದು ಸುಂದರ ಕಥನ.

ಆನಂದಮಯ ನೆನಪುಗಳ ಸರ್‌ಪ್ರೈಜ್, ವೀಣಾ ವರ್ಲ್ಡ್ ಗಿಫ್ಟ್ ಕಾರ್ಡ್ಸ್! veenaworld.com/gift-card

ನಿಮ್ಮ ಕುಟುಂಬ ಮತ್ತು ಸ್ನೇಹಿತರ ಗ್ರೂಪ್‌ಗಾಗಿ ವಿಶೇಷವಾಗಿ ರೂಪಿಸಲಾಗಿರುವ ಎಕ್ಸ್‌ಕ್ಲೂಸಿವ್ ಟೂರ್ಸ್‌ಗಾಗಿ ನಮ್ಮನ್ನು ಕೇಳಿರಿ

veenaworld.com

ಆಲ್-ಇಂಡಿಯಾ ಒನ್ ಪ್ರೈಸ್ ಬೆನಿಫಿಟ್ ಮುಂಬೈ, ಕೋಲ್ಕತ್ತಾ, ಬೆಂಗಳೂರು, ಕೊಚ್ಚಿ, ಹೈದರಾಬಾದ್, ಚೆನ್ನೈ, ಇಂದೋರ್, ದೆಹಲಿ, ಅಹಮದಾಬಾದ್‌ನಿಂದ ಹೊರಡುವ ಟೂರ್‌ಗಳಿಗೆ, ಜನವರಿ 31ಕ್ಕಿಂತ ಮೊದಲು ಬುಕ್ ಮಾಡಿದಲ್ಲಿ

ಕಳೆದ 12 ವರ್ಷಗಳಲ್ಲಿ **1,03,200+** ಅತಿಥಿಗಳು ವೀಣಾ ವರ್ಲ್ಡ್‌ನೊಂದಿಗೆ ಯುರೋಪನ್ನು ಅನ್ವೇಷಿಸಿದ್ದಾರೆ.ಈ ಪೈಕಿ **14,500+** ಅತಿಥಿಗಳು ಕಳೆದ ವರ್ಷ ಏಪ್ರಿಲ್‌ನಿಂದ ಡಿಸೆಂಬರ್‌ವರೆಗಿನ ಅವಧಿಯಲ್ಲೇ

ವೀಣಾ ವರ್ಲ್ಡ್ ಎಂದರೆ **100%** ಆಲ್-ಇನ್‌ಕ್ಲೂಸಿವ್ ಟೂರ್ಸ್ ಯಾವುದೇ ಡಿಸ್ಕೌಂಟ್ ಇಲ್ಲ! ಯಾವುದೇ 'ಉಚಿತ' ಗಿಮಿಕ್ಸ್ ಇಲ್ಲ! ಯಾವುದೇ ಸುಪ್ತ ವೆಚ್ಚಗಳಿಲ್ಲ! ಯಾವುದೇ ಆಪ್ಷನಲ್ಸ್ ಇಲ್ಲ! ಟೂರ್‌ಗಳಲ್ಲಿ ಯಾವುದೇ ಹೆಚ್ಚುವರಿ ಶುಲ್ಕಗಳಿಲ್ಲ. ಬ್ರೇಕ್‌ಫಾಸ್ಟ್-ಲಂಚ್-ಡಿನ್ನರ್, ಡ್ರೈವರ್ ಟಿಪ್ಸ್, ಗೈಡ್ ಟಿಪ್ಸ್... ಒಳಗೊಂಡಿವೆ

ಅಫೋರ್ಡಬಲ್ ವೆಸ್ಟರ್ನ್ ಯುರೋಪ್ ಅಥವಾ ಈಸ್ಟರ್ನ್ ಯುರೋಪ್ ರೂ. **1,50,000**ದಿಂದ ಆರಂಭ
ಸದರ್ನ್ ಯುರೋಪ್ **₹ 2,00,000**
ನಾರ್ದರ್ನ್ ಯುರೋಪ್ **₹ 2,50,000**

ತ್ವರೆಮಾಡಿ, ಇಂದೇ ಬುಕ್ ಮಾಡಿ ಮತ್ತು ಕಾನ್ಸುಲೇಟ್‌ಗಳಲ್ಲಿ ಜನಸಂದಣಿ ಹೆಚ್ಚಾಗುವ ಮೊದಲೇ ನಿಮ್ಮ ವೀಸಾ ಪ್ರಕ್ರಿಯೆಯನ್ನು ಆರಂಭಿಸಿರಿ. ನಮ್ಮ 118+ ಇನ್-ಹೌಸ್‌ವೀಸಾ ಎಕ್ಸ್‌ಪರ್ಟ್ಸ್ ನಿಮಗೆ ಹಂತ-ಹಂತವಾ ಮಾರ್ಗದರ್ಶನ ನೀಡುತ್ತಾರೆ.

ಫುಲ್ ಪೇಮೆಂಟ್ ಪ್ರಯೋಜನ
ಮುಂಗಡ ಫುಲ್ ಪೇಮೆಂಟ್, ಹೆಚ್ಚುವರಿ ಉಳಿತಾಯವನ್ನು ಗಳಿಸುತ್ತದೆ (ಕನಿಷ್ಠ 3ರಿಂದ 12 ತಿಂಗಳುಗಳು) ಪ್ರತೀ ವ್ಯಕ್ತಿಗೆ ರೂ. 3,000ದಿಂದ ರೂ. 15,000 ಉಳಿಸಿರಿ

ಯುರೋ ಮೇಲೇರುತ್ತಿದೆ, ಟೂರ್ ಬೆಲೆಗಳು ಶೀಘ್ರದಲ್ಲೇ ಬದಲಾಗಲಿವೆ. ಇದೇ ಸಕಾಲ! ಇಂದೇ ಬುಕ್ ಮಾಡಿ, ಭಾರತೀಯ ರೂಪಾಯಿಗಳಲ್ಲಿ ಹಣಪಾವತಿಸಿ ಮತ್ತು ನಿಮ್ಮ ಟೂರ್ ಪ್ರೈಸ್‌ಅನ್ನು ಲಾಕ್ ಮಾಡಿ

ಯುರೋಪ್‌ಗೆ ಮೊದಲ ಬಾರಿ ಹೋಗುತ್ತಿದ್ದೀರಾ? ಭೇಟಿ ನೀಡಿ
11 ದಿನಗಳಲ್ಲಿ 11 ದೇಶಗಳು
10 ದಿನಗಳಲ್ಲಿ 10 ದೇಶಗಳು ಅಥವಾ
8 ದಿನಗಳಲ್ಲಿ 8 ದೇಶಗಳು!

ವರ್ಚುವಲ್ ಟ್ರಾವೆಲ್ ಕಾನ್ಫರೆನ್ಸ್ ಎಕ್ಸ್‌ಪರ್ಟ್-ಲೆಡ್ ಶಾರ್ಟ್ ಸೆಶನ್ಸ್ ಉತ್ತಮವಾಗಿ ನಿರ್ಧರಿಸಲು ನಿಮ್ಮ ಸಹಾಯಕ್ಕಾಗಿ. ಕರೆ ಮಾಡಿ: 887 997 2223

Book Online 365 days 24x7 visit veenaworld.com

120+ ಆಲ್-ಇನ್‌ಕ್ಲೂಸಿವ್ ಯುರೋಪ್ ಗ್ರೂಪ್ ಟೂರ್ ಆಯ್ಕೆಗಳ ಬಗ್ಗೆ ವಿವರವಾದ ಮಾಹಿತಿಯನ್ನು veenaworld.comನಲ್ಲಿ ಪಡೆದುಕೊಳ್ಳಿ

Ex-Bengaluru/Mumbai... ನಿರ್ಗಮನಗಳಿಂದ ಇಲ್ಲವೇ ಭಾರತ ಅಥವಾ ವಿದೇಶದ ಯಾವುದೇ ನಗರದಿಂದ ಜಾಯ್ನಿಂಗ್ ಆ್ಯಂಡ್ ಲೀವಿಂಗ್ (J&L) ಟೂರ್ಸ್‌ನಿಂದ ಆಯ್ಕೆಮಾಡಿ. ಈ ಕೆಳಗಿನ ಬೆಲೆ ಪಟ್ಟಿಯಲ್ಲಿವೆ: • Ex-Bengaluru/Mumbai... ಬೆಲೆ (ಏರ್‌ಫೇರ್, ವೀಸಾ ಮತ್ತು ವಿಮೆ ಒಳಗೊಂಡಿದೆ). • J&L ಬೆಲೆ (ಏರ್‌ಫೇರ್, ವೀಸಾ ಮತ್ತು ವಿಮೆ ಒಳಗೊಂಡಿಲ್ಲ). ನಿಮ್ಮ J&L ಟ್ರಾವೆಲ್‌ಗೆ ಸಹಾಯ ಬೇಕೇ? ಫ್ಲೈಟ್ಸ್,ವೀಸಾಗಳು ಮತ್ತು ಇನ್ನಿತರ ವಿಷಯಗಳಿಗಾಗಿ ನಿಮಗೆ ಸಹಾಯ ಮಾಡಲು ನಮ್ಮ ಟೀಮ್ ಸಿದ್ಧವಿದೆ.

ವೆಸ್ಟರ್ನ್ ಯುರೋಪ್ - ಇಂಗ್ಲೆಂಡ್‌ನಿಂದ ಇಟಲಿ

Tour Name	Ex-Mumbai	J&L
ಸ್ವಿಸ್ ಪ್ಯಾರಿಸ್ ಆಸ್ಟ್ರಿಯಾ ಜರ್ಮನಿ (6D)	150K-200K	85K-115K
ಯುರೋಪಿಯನ್ ಪನೋರಮಾ (8D)	250K-260K	180K-190K
ಯುರೋಪಿಯನ್ ಸ್ಪ್ಲೆಂಡರ್ಸ್ (10D)	275K-285K	205K-215K
ಲಂಡನ್ ಪ್ಯಾರಿಸ್ ಸ್ವಿಸ್ ಇಟಲಿ (9D)	285K-295K	205K-215K
ಯುರೋಪಿಯನ್ ಹೈಲೈಟ್ಸ್(11D)	300K-310K	220K-230K
ಯುರೋಪಿಯನ್ ಡಿಲೈಟ್ (13D)	365K-375K	285K-295K
ಯುರೋಪಿಯನ್ ಜ್ಯುವೆಲ್ಸ್ (15D)	395K-410K	315K-330K
ಯುರೋಪಿಯನ್ ಎಸೆನ್ಸ್(15D)	400K-425K	330K-355K
ಮಲ್ಟಿ-ಕಂಟ್ರಿ ಯುರೋಪ್ (17D-27D)	450K-695K	370K-615K
ಆ್ಯಮ್‌ಸ್ಟರ್‌ಡ್ಯಾಮ್ ಬ್ರಸೆಲ್ಸ್/ಸ್ವಿಸ್ ಪ್ಯಾರಿಸ್ (7/11D)	230K-345K	160K-275K
ಇಂಗ್ಲೆಂಡ್ ಸ್ಕಾಟ್‌ಲ್ಯಾಂಡ್ /ಐರ್‌ಲ್ಯಾಂಡ್(10/15D)	315K-440K	245K-370K
ಸ್ವಿಸ್ ಪ್ಯಾರಿಸ್/ಫ್ರೆಂಚ್ ರಿವಿಯೇರಾ (8/10D)	275K-310K	210K-240K
ಸ್ವಿಸ್ ಪ್ಯಾರಿಸ್ ಲಂಡನ್ (11D)	375K-400K	290K-315K
ಸ್ವಿಸ್ ಪ್ಯಾರಿಸ್ ಇಟಲಿ (11D)	310K-335K	230K-255K
ಸ್ವಿಸ್ ಆಸ್ಟ್ರಿಯಾ/ಇಟಲಿ (8D/11D)	275K-335K	205K-265K
ಸ್ವಿಸ್ ಪ್ಯಾರಿಸ್ ಆಸ್ಟ್ರಿಯಾ (11D)	330K-340K	260K-270K
ಇಟಲಿ (10D/15D)	295K-490K	230K-420K
ಸ್ವಿಟ್ಜರ್‌ಲ್ಯಾಂಡ್ (7D/10D)	275K-360K	205K-290K
ಬೆಸ್ಟ್ ಆಫ್ ಆಸ್ಟ್ರಿಯಾ (8D)	285K-295K	205K-215K
ಬೆಸ್ಟ್ ಆಫ್ ಫ್ರಾನ್ಸ್ (11D)	300K-310K	230K-240K

ನಾರ್ದರ್ನ್ ಸ್ಕ್ಯಾಂಡಿನೇವಿಯನ್ ಯುರೋಪ್

Tour Name	Ex-Mumbai	J&L
ಹೈಲೈಟ್ಸ್ ಆಫ್ ಸ್ಕ್ಯಾಂಡಿನೇವಿಯಾ (7D)	250K-275K	175K-200K
ಬೆಸ್ಟ್ ಆಫ್ ಸ್ಕ್ಯಾಂಡಿನೇವಿಯಾ (10D)	335K-360K	250K-275K
ಆಲ್ ಆಫ್ ಸ್ಕ್ಯಾಂಡಿನೇವಿಯಾ (15D)	475K-500K	385K-400K
ಸ್ಕ್ಯಾಂಡಿನೇವಿಯಾ ಐಸ್‌ಲ್ಯಾಂಡ್ (15D)	565K-590K	475K-500K
ಸ್ಕ್ಯಾಂಡಿನೇವಿಯಾ ಈಸ್ಟರ್ನ್ ಯುರೋಪ್ (17D)	525K-550K	440K-465K
ಸ್ಕ್ಯಾಂಡಿನೇವಿಯಾ ರಷ್ಯಾ (17D)	435K-460K	350K-375K
ಸ್ಕ್ಯಾಂಡಿನೇವಿಯಾ ಮಿಡ್‌ನೈಟ್ ಸನ್ (16D)	515K-540K	435K-450K
ಸ್ಕ್ಯಾಂಡಿನೇವಿಯಾ ಮಿಡ್‌ನೈಟ್ ಸನ್ (9D)	375K-400K	295K-420K
ಸ್ಕ್ಯಾಂಡಿನೇವಿಯಾ ಐಸ್‌ಲ್ಯಾಂಡ್ ಮಿಡ್‌ನೈಟ್ ಸನ್ (14D)	625K-650K	545K-570K
ಸ್ಕ್ಯಾಂಡಿನೇವಿಯಾ ನಾರ್ದರ್ನ್ ಲೈಟ್ಸ್ (9D) Mar 16	400K-425K	305K-330K
ಐಸ್‌ಲ್ಯಾಂಡ್ ನಾರ್ದರ್ನ್ ಲೈಟ್ಸ್ (10D)	515K-545K	440K-465K
ಸ್ಕ್ಯಾಂಡಿನೇವಿಯಾ ಐಸ್‌ಲ್ಯಾಂಡ್ ನಾರ್ದರ್ನ್ ಲೈಟ್ಸ್ (14D) Mar 4	520K-545K	430K-455K
ಸ್ಕ್ಯಾಂಡಿನೇವಿಯಾ ಐಸ್‌ಲ್ಯಾಂಡ್ ನಾರ್ದರ್ನ್ ಲೈಟ್ಸ್ + ಐಸ್‌ಬ್ರೇಕರ್ ಕ್ರೂಜ್ (15D)	575K-600K	480K-505K
ಬೆಸ್ಟ್ ಆಫ್ ಗ್ರೀನ್‌ಲ್ಯಾಂಡ್ (9D)	675K-700K	585K-610K
ಬೆಸ್ಟ್ ಆಫ್ ರಷ್ಯಾ (7D)	175K-200K	115K-140K

ಸದರ್ನ್ ಯುರೋಪ್, ಮೆಡಿಟರೇನಿಯನ್ ಯುರೋಪ್, ಸೆಂಟ್ರಲ್,ಈಸ್ಟರ್ನ್ ಯುರೋಪ್

Tour Name	Ex-Mumbai	J&L
ಹೈಲೈಟ್ಸ್ ಆಫ್ ಸ್ಪೇನ್ (7D)	200K-225K	130K-155K
ಬೆಸ್ಟ್ ಆಫ್ ಸ್ಪೇನ್ (10D/11D)	275K-300K	205K-230K
ಆಲ್ ಆಫ್ ಸ್ಪೇನ್ (15D)	375K-400K	305K-330K
ಸ್ಪೇನ್ ಪೋರ್ಚುಗಲ್ (13D)	335K-360K	260K-285K
ಸ್ಪೇನ್ ಪೋರ್ಚುಗಲ್ ಮೊರಕ್ಕೊ (16D)	375K-400K	295K-320K
ಗ್ರೀಸ್ ಅಥೆನ್ಸ್ ಸ್ಯಾಂಟೊರಿನಿ (5D)	200K-225K	135K-160K
ಗ್ರೀಸ್ ಅಥೆನ್ಸ್ ಸ್ಯಾಂಟೊರಿನಿ ಮೈಕೋನೋಸ್ (7D)	250K-275K	185K-205K
ಗ್ರೀಸ್ ಅಥೆನ್ಸ್ ಸ್ಯಾಂಟೊರಿನಿ ರೋಡ್ಸ್ (9D)	315K-340K	250K-275K
ಗ್ರೀಸ್ ಅಥೆನ್ಸ್ ಸ್ಯಾಂಟೊರಿನಿ ರೋಡ್ಸ್ ಮೈಕೋನೋಸ್ (10D)	325K-350K	260K-285K
ಆಲ್ ಆಫ್ ಗ್ರೀಸ್ (14D)	425K-450K	360K-385K
ಈಜಿಪ್ಟ್ ಗ್ರೀಸ್ ಟರ್ಕಿ (15D)	425K-450K	--
ಗ್ರೀಸ್ ಟರ್ಕಿ (12D)	350K-375K	270K-295K
ಟರ್ಕಿ (10D/15D)	225K-350K	155K-180K
ಬೆಸ್ಟ್ ಆಫ್ ಈಜಿಪ್ಟ್ (9D)	175K-200K	115K-140K
ಈಜಿಪ್ಟ್ ಗ್ರೀಸ್ ಸೈಪ್ರಸ್ (12D)	390K-415K	310K-330K
ಗ್ರೀಸ್ ಸೈಪ್ರಸ್ (9D)	325K-350K	245K-270K
ಈಜಿಪ್ಟ್ ಮೊರಕ್ಕೊ (8D)	240K-265K	170K-195K
ಈಜಿಪ್ಟ್ ಜೋರ್ಡಾನ್ (10D)	295K-320K	230K-255K
ಬೆಸ್ಟ್ ಆಫ್ ಜೋರ್ಡಾನ್ (7D)	200K-225K	135K-160K

Tour Name	Ex-Mumbai	J&L
ವಿಯೆನ್ನಾ ಪ್ರಾಗ್ ಬುಡಾಪೆಸ್ಟ್ (6D)	165K-175K	90K-110K
ವಿಯೆನ್ನಾ ಪ್ರಾಗ್ ಬುಡಾಪೆಸ್ಟ್ ಬ್ರಾಟಿಸ್ಲಾವಾ (8)	250K-275K	175K-200K
ಬರ್ಲಿನ್ ವಾರ್ಸಾ ಕ್ರಾಕೋವ್ (8D)	240K-265K	170K-195K
ಕ್ರೊಯೇಷಿಯಾ ಸ್ಲೊವೇನಿಯಾ ಸ್ಲೋವಾಕಿಯಾ ಹಂಗೇರಿ (12D)	325K-350K	250K-275K
ಸೆಂಟ್ರಲ್ ಆ್ಯಂಡ್ ಈಸ್ಟರ್ನ್ ಯುರೋಪ್ (17D)	400K-425K	325K-350K
ಉಜ್ಬೆಕಿಸ್ತಾನ್ ಕಝಾಕಿಸ್ತಾನ್ ಕಿರ್ಗಿಜ್‌ಸ್ತಾನ್ (9D)	225K-250K	170K-195K
ತಾಷ್ಕೆಂಟ್ ಸಮರ್‌ಕಂಡ್ (5D)	79K-89K	59K-69K
ಜಾರ್ಜಿಯಾ ಅರ್ಮೇನಿಯಾ (8D)	175K-200K	125K-150K
ಜಾರ್ಜಿಯಾ (5D/8D)	99K-175K	49K-125K
ಬಾಕು (5D/8D)	109K-155K	--
ಬಾಲ್ಟಿಕ್ ಎಸ್ಟೋನಿಯಾ ಲಾಟ್ವಿಯಾ ಲಿಥುವೇನಿಯಾ (8D)	250K-275K	180K-205K
ಬಾಲ್ಟಿಕ್ ಯುರೋಪ್ + ಸ್ಕ್ಯಾಂಡಿನೇವಿಯಾ (15D)	500K-525K	420K-445K
ಬಾಲ್ಟಿಕ್ ಬರ್ಲಿನ್ ವಾರ್ಸಾ ಕ್ರಾಕೋವ್ (15D)	390K-415K	330K-355K
ಬಾಲ್ಕನ್ ರೊಮೇನಿಯಾ ಬಲ್ಗೇರಿಯಾ ಸರ್ಬಿಯಾ ನಾರ್ಥ್ ಮ್ಯಾಸಿಡೋನಿಯಾ (15D)	405K-430K	335K-360K
ಬೆಸ್ಟ್ ಆಫ್ ಮೊರಕ್ಕೊ (8D)	225K-250K	155K-180K
ಟ್ಯೂನಿಸಿಯಾ ಮಾಲ್ಟಾ ಸಿಸಿಲಿ (10D)	375K-400K	295K-320K

ಮುಂಬರುವ ಟೂರ್ಸ್
ಇಂಗ್ಲೆಂಡ್ ಸ್ಕಾಟ್‌ಲ್ಯಾಂಡ್ ಐರ್‌ಲ್ಯಾಂಡ್ ಐಸ್‌ಲ್ಯಾಂಡ್ | ಗ್ರೀನ್‌ಲ್ಯಾಂಡ್ ಐಸ್‌ಲ್ಯಾಂಡ್ ಗ್ರೀನ್‌ಲ್ಯಾಂಡ್ ಐಸ್‌ಲ್ಯಾಂಡ್ ಸ್ಕ್ಯಾಂಡಿನೇವಿಯಾ | ಕೆನಡಾ ಅಲಾಸ್ಕಾ ಐಸ್‌ಲ್ಯಾಂಡ್

ದಿ ಅಮೆರಿಕಾಸ್

ಟೂರ್ ಪ್ರೈಸ್ **2,00,000**ದಿಂದ **13,25,000**

- ಸೌಥ್ ಅಮೆರಿಕಾ ವಿಥ್ ರಿಯೊ ಕಾರ್ನಿವಲ್ (21D) 20 Feb-12,90,000 (J&L) 9,85,000
- ಅಂಟಾರ್ಕ್ಟಿಕಾ ದ 7ನೇ ಕಾಂಟಿನೆಂಟ್ (13D) 3 Feb-13,25,000 (J&L) 11,25,000
- USA ಈಸ್ಟ್ ಕೋಸ್ಟ್ (6D/7D/9D) I ವೆಸ್ಟ್ ಕೋಸ್ಟ್ (7D)
- USA ಈಸ್ಟ್ ಆ್ಯಂಡ್ ವೆಸ್ಟ್ ಕೋಸ್ಟ್ + ಚಿಕಾಗೊ (13D)
- USA ಈಸ್ಟ್ ಆ್ಯಂಡ್ ವೆಸ್ಟ್ ಕೋಸ್ಟ್ +ಒರ್ಲ್ಯಾಂಡೊ ಡಿಸ್ನಿಲ್ಯಾಂಡ್ ಆ್ಯಂಡ್ ನಾಸಾ (15D)
- USA ಈಸ್ಟ್ ಆ್ಯಂಡ್ ವೆಸ್ಟ್ ಕೋಸ್ಟ್ ವಿಥ್‌ಚಿಕಾಗೊ ಆ್ಯಂಡ್ ಡೆತ್ ವ್ಯಾಲಿ ಯೋಸೆಮಿಡಿ (18D)
- USA ಈಸ್ಟ್ ಆ್ಯಂಡ್ ವೆಸ್ಟ್ ಕೋಸ್ಟ್ +ಒರ್ಲ್ಯಾಂಡೊ ಮತ್ತು ಬಹಾಮಾಸ್ ಕ್ರೂಜ್ (19 Days)
- USA ಈಸ್ಟ್ ಆ್ಯಂಡ್ ವೆಸ್ಟ್ ಕೋಸ್ಟ್ ವಿಥ್ ಚಿಕಾಗೊ ಆ್ಯಂಡ್ ನ್ಯಾಶನಲ್ ಪಾರ್ಕ್ಸ್ (22 Days)
- USA ಕ್ಯಾಲಿಫೋರ್ನಿಯಾ ಕಾರ್ನಿವಲ್‌ವಿಥ್ ಡೆತ್ ವ್ಯಾಲಿ ಆ್ಯಂಡ್ ಯೋಸೆಮಿಡಿ (10 Days)
- USA ಈಸ್ಟ್ ಕೋಸ್ಟ್ ವಿಥ್ ಬೋಸ್ಟನ್ ಆ್ಯಂಡ್ ವರ್ಮಾಂಟ್ (ಆಟಮ್ ಕಲರ್ಸ್) (11D)
- ಅಲಾಸ್ಕಾ ಕೆನಡಾ (18D) | ಬೆಸ್ಟ್ ಆಫ್ ಅಲಾಸ್ಕಾ (9D)
- ಬೆಸ್ಟ್ ಆಫ್ ಕೆನಡಾ (11D) | ಹವಾಯಿ ಮೆಕ್ಸಿಕೊ (11D)
- ಬೆಸ್ಟ್ ಆಫ್ ಮೆಕ್ಸಿಕೊ (7 Days)

ಮೈ ಹೂಂ ನ!
ಯುರೋಪಿನ ವ್ಯಾಪಕ ಸೌಂದರ್ಯವನ್ನು ತಾವಾಗಿಯೆ ನೋಡುವುದೆಂದರೆ ಅಧೀರತೆ ಉಂಟಾಗಬಹುದು; ಆದರೆ ನಿಮ್ಮೊಂದಿಗೆ ಡೆಡಿಕೇಟೆಡ್ ವೀಣಾ ವರ್ಲ್ಡ್ ಟೂರ್ ಮ್ಯಾನೇಜರ್ ಇರುವಾಗ, ನಿಮ್ಮ ಯುರೋಪ್ ಅಡ್ವೆಂಚರ್ ಹೆಜ್ಜೆಹೆಜ್ಜೆಗೂ ಸುಲಭವಾಗುತ್ತದೆ, ನಿರಾಳ ಹಾಗೂ ಆನಂದದಾಯಕವಾಗುತ್ತದೆ.

ಆಸ್ಟ್ರೇಲಿಯಾ ನ್ಯೂಜಿಲ್ಯಾಂಡ್ 12 ಆಯ್ಕೆಗಳು • ಆಫ್ರಿಕಾ ಮಿಡ್ಲ್ ಈಸ್ಟ್ ಶ್ರೀಲಂಕಾ ಮಾಲ್ಡೀವ್ಸ್ 26 ಆಯ್ಕೆಗಳು • ಎಕ್ಸಾಟಿಕ್ ಸೌತ್ ಈಸ್ಟ್ ಏಷ್ಯಾ 35 ಆಯ್ಕೆಗಳು • ಟೈಮ್‌ಲೆಸ್ ಫಾರ್ ಈಸ್ಟ್ ಏಷ್ಯಾ 24 ಆಯ್ಕೆಗಳು • ಇನ್‌ಕ್ರೆಡಿಬಲ್ ಇಂಡಿಯಾ 130 ಆಯ್ಕೆಗಳು • ಗರಿಷ್ಠ 'ಮಸ್ಟ್-ಸೀ' ಸ್ಥಳಗಳ ದರ್ಶನ ಎಂಟ್ರೆನ್ಸ್ ಫೀಸ್‌ನೊಂದಿಗೆ • ಡೈರೆಕ್ಟ್ ಜಾಯ್ನಿಂಗ್ ಲೀವಿಂಗ್ ಎಕ್ಸ್-ಡೆಸ್ಟಿನೇಶನ್ ಟೂರ್ ಪ್ರೈಸ್ ಲಭ್ಯವಿದೆ • ವೀಣಾ ವರ್ಲ್ಡ್‌ನ ಪ್ರಿ ಆ್ಯಂಡ್ ಪೋಸ್ಟ್-ಟೂರ್ ಹಾಲಿಡೇಸ್ ಬಳಸಿಕೊಂಡು ನಿಮ್ಮ ಪ್ರಯಾಣವನ್ನು ವಿಸ್ತರಿಸಿಕೊಳ್ಳಿ • ನಿಮ್ಮ ಫಾರಿನ್ ಎಕ್ಸ್‌ಚೇಂಜ್ ಖರೀದಿಸಿರಿ, ವೀಣಾ ವರ್ಲ್ಡ್ FOREXನಲ್ಲಿ • ನಿಮ್ಮ ಪ್ರೈವೇಟ್‌ಯುರೋಪ್ ಹಾಲಿಡೇಯನ್ನು ನಮ್ಮ ಬಳಿ ಕಸ್ಟಮೈಜ್ ಮಾಡಿಕೊಳ್ಳಿ • MICE ಕಾರ್ಪೊರೇಟ್ ಟೂರ್ಸ್ ಕಾನ್‌ಫರೆನ್ಸಸ್, ಇನ್ಸೆಂಟಿವ್ ಟೂರ್ಸ್, ಆಫ್‌ಸೈಟ್ಸ್‌ಗಾಗಿ... ನಮ್ಮನ್ನು ಸಂಪರ್ಕಿಸಿ

ಏಪ್ರಿಲ್‌ವರೆಗೆ, ವೀಣಾ ವರ್ಲ್ಡ್‌ನ ಎಲ್ಲಾ ಸೇಲ್ಸ್ ಆಫೀಸ್‌ಗಳು ಭಾನುವಾರಗಳಂದು ಕೂಡ ತೆರೆದಿರುತ್ತವೆ

Travel Now Pay Later!
EMI options available (3 months to 24 months) subject to EMI partner approval. T&C apply

Group tour price includes return airfare (Ex-Bengaluru/Mumbai), transport, accommodation, all meals: breakfast, lunch, dinner, sightseeing with entrance fees, driver-guide tips, services of a Tour Manager, VISA fee (except for Free Visa Countries & USA) and travel insurance*. J&L tours exclude airfare, visa & insurance. USA tours are for valid USA visa holders. The full payment benefit is valid only for a limited period* and does not apply to promotional tours EUGP, EUGV, EUHJ, EUGD, AMGP, ASPJ, ASZL... or their speciality tours.

Jayanagar: Sharada Plaza, 9th Main Rd, 3rd block, Jayanagar, Opp. SBI, Bengaluru 560011, Call: 887 997 2217
Indiranagar: 2005, 100 feet Road, HAL 2nd Stage, Indiranagar, Bengaluru 560038, Call: 887 997 9500
Veena World Sales Partners: Karnataka: Belgaum-College Road 9980428880 • Malleshwaram 9663920469 Belgaum-Goaves Circle 7338685500 • Bengaluru-Vijayanagar 9036610005 • Bijapur 9980857595 Dharwad 9036715969 • Hubli 7204411007 • Chikodi 9448627771 • **Tamil Nadu:** Coimbatore 9994666522

Mysore, Udupi, Mangaluru • Call: 865 575 5281
Book Online 24x7 from anywhere on veenaworld.com Call: 1800 313 5555

Mumbai Online 887 997 2221 • New Delhi 887 997 2700 • Noida 887 997 4100 • Gurugram 8879 974 300 • Hyderabad 887 997 9700 Kolkata 887 997 2288 • Bengaluru Jayanagar 887 997 2217 • Bengaluru Indiranagar 887 997 9500 • Ahmedabad 887 997 7200 • Indore 887 997 9800

Monday-Sunday 10 to 7

Applications invited for Sales Partners/ Agents across Southern India WhatsApp on 887 997 9733

VEENA WORLD
Travel. Explore. Celebrate Life.

Tour price is per person and on twin sharing basis. These tour prices are nett and no discount is applicable. At the time of booking, tour price to be paid in full INR by UPI/NEFT/RTGS/Cheque, in the name of 'Veena Patil Hospitality Pvt. Ltd.' No cash transactions at Veena World. Government taxes apply. Any increase in YQ taxes, airport taxes, VISA fees, surcharges (if any) will have to be borne by the travellers. T&C apply.

ನಿರೀಕ್ಷೆ, ಅನುಮಾನದ ನಡುವೆ ತಯಾರಿ

ಐದು ನಗರ ಪಾಲಿಕೆಗಳ ಆಕಾಂಕ್ಷಿಗಳ ನೋಟ; ಪಕ್ಷಗಳ ಕಾರ್ಯಕರ್ತರಿಗೆ ಕಾರ್ಪೊರೇಟರ್‌ಗಳಾಗುವ ಆಶಯ

• ಆರ್.ಮಂಜುನಾಥ್

ಬೆಂಗಳೂರು: 'ಸುಪ್ರೀಂ ಕೋರ್ಟ್ ಗಡುವು ನೀಡಿರುವುದರಿಂದ ಈ ಬಾರಿ ಚುನಾವಣೆ ನಡೆದೇ ನಡೆಯುತ್ತದೆ. ಐದು ವರ್ಷದ ಅಜ್ಞಾತವಾಸಕ್ಕೆ ತೆರೆ ಬೀಳಲಿದೆ' ಎಂಬ ನಿರೀಕ್ಷೆ ಒಂದೆಡೆಯಾದರೆ, 'ವಾರ್ಡ್ ಗಡಿ– ಮೀಸಲಾತಿ ಸರಿ ಇದೆಯೇ? ಮತ್ತೇನಾದರೂ ತಡೆಯಾಗುತ್ತದೆಯೇ? ಎಂಬ ಅನುಮಾನ ಇನ್ನೊಂದೆಡೆ. ಇದೆಲ್ಲರ ನಡುವೆ ರಾಜಕೀಯ ಪಕ್ಷಗಳ ಕಾರ್ಯಕರ್ತರಲ್ಲಿ ಕಾರ್ಪೊರೇಟರ್‌ಗಳಾಗುವ ಕನಸು ಚಿಗುರೊಡೆಯುತ್ತಿದೆ.

ಐದು ವರ್ಷದಿಂದ ಚುನಾವಣೆಗಾಗಿ ಹಾತೊರೆಯುತ್ತಿರುವ ಬೆಂಗಳೂರಿನ ಸ್ಥಳೀಯ ಮಟ್ಟದ ಮುಖಂಡರಿಗೆ ಸುಪ್ರೀಂ ಕೋರ್ಟ್ ಆದೇಶ ಹೊಸ ಹುರುಪು ನೀಡಿದೆ. ಆದರೆ, ಇದೇ ಸಮಯದಲ್ಲಿ ಹಲವು ಅನುಮಾನ, ಗೊಂದಲಗಳೂ ಸೃಷ್ಟಿಯಾಗಿವೆ.

2020ರ ಸೆಪ್ಟೆಂಬರ್ 10ರಂದು ಜನಪ್ರತಿನಿಧಿಗಳನ್ನು ಒಳಗೊಂಡ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ಕೌನ್ಸಿಲ್ ಅವಧಿ ಮುಕ್ತಾಯಗೊಂಡಿತು. ಅಂದಿನಿಂದಲೂ, 198 ವಾರ್ಡ್‌ಗಳಿಗೆ ಚುನಾವಣೆ ನಡೆಯುತ್ತದೆ, 243 ವಾರ್ಡ್‌ಗಳಿಗೆ ಚುನಾವಣೆ ನಡೆಯುತ್ತದೆ, 225 ವಾರ್ಡ್‌ಗಳಿಗೆ ಚುನಾವಣೆ ನಡೆಯುತ್ತದೆ ಎಂಬ ನಿರೀಕ್ಷೆಯಲ್ಲೇ ಸ್ಥಳೀಯ ಮುಖಂಡರು ತಯಾರಿ ನಡೆಸುತ್ತಲೇ ಬಂದಿದ್ದರು. ಅಂತಹ ಸಮಯದಲ್ಲೇ, ಬಿಬಿಎಂಪಿಯೇ ಅಸ್ತಿತ್ವ ಕಳೆದುಕೊಂಡಿತು.

ಗ್ರೇಟರ್ ಬೆಂಗಳೂರು ಪ್ರಾಧಿಕಾರ (ಜಿಬಿಎ) ರಚನೆಯಾಗಿ ಅದರಡಿ, ಐದು ನಗರ ಪಾಲಿಕೆಗಳು ನಾಲ್ಕು ತಿಂಗಳ ಹಿಂದೆ ರಚನೆಯಾದವು.

ಐದು ನಗರ ಪಾಲಿಕೆಗಳಾದ್ದರಿಂದ, ಹಿಂದಿಗಿಂತ ಹೆಚ್ಚು ಜನರಿಗೆ ಕಾರ್ಪೊರೇಟರ್‌ಗಳಾಗುವ ಅವಕಾಶ ತೆರೆದುಕೊಂಡಿದೆ. 198ರ ಬದಲು 369 ಕಾರ್ಪೊರೇಟರ್‌ಗಳು ಆಯ್ಕೆಯಾಗಬಹುದಾದರೂ, ನಗರ ಪಾಲಿಕೆಗಳು ಬೇರೆಬೇರೆಯದ್ದಾಗಿರುತ್ತವೆ. ಆದರೂ ಸ್ಥಳೀಯ ಜನರ ಆಶೋತ್ತರಗಳಿಗೆ ಸ್ಪಂದಿಸಲು ಕಾರ್ಪೊರೇಟರ್ ಆಗಬೇಕೆಂಬ ಬಯಕೆಯಿಂದ ಎಲ್ಲ ಪಕ್ಷಗಳ ಮುಖಂಡರು ಸಜ್ಜಾಗಿದ್ದಾರೆ.

198 ವಾರ್ಡ್ ಇದ್ದಾಗ ಅದಕ್ಕೆ ಅನುಗುಣವಾಗಿ ತಮ್ಮ ಕಾರ್ಯಕ್ಷೇತ್ರವನ್ನು ನಿಗದಿಪಡಿಸಿಕೊಂಡಿದ್ದ ಮುಖಂಡರು, ಆಗಾಗ್ಗೆ ಬದಲಾದ ವಾರ್ಡ್‌ಗಳ ಗಡಿಗೆ ಅನುಗುಣವಾಗಿ ತಮ್ಮ ಕೆಲಸದ ವ್ಯಾಪ್ತಿಯನ್ನೂ ಬದಲಿಸಿಕೊಂಡಿದ್ದಾರೆ. ಅಂತಿಮವಾಗಿ, ಐದು ನಗರ ಪಾಲಿಕೆಗಳ 369 ವಾರ್ಡ್‌ಗಳಲ್ಲಿ ಚುನಾವಣೆಗೆ ತಯಾರಿ ನಡೆಯುತ್ತಿದೆ. ವಾರ್ಡ್‌ಗಳ ಕರಡು ಮೀಸಲಾತಿ ಪ್ರಕಟವಾಗಿದ್ದು, ಜೂನ್ ಒಳಗೆ ಚುನಾವಣೆ ನಡೆಸಬೇಕು ಎಂದು ಸುಪ್ರೀಂ ಕೋರ್ಟ್ ಸೂಚಿಸಿದ ನಂತರವಂತೂ ನಿರೀಕ್ಷೆ, ಹುಮ್ಮಸ್ಸು ಹೆಚ್ಚಾಗಿದೆ.

'ವಾರ್ಡ್ ಮೀಸಲಾತಿಯಲ್ಲಿ ಹೆಚ್ಚು ಸಮಸ್ಯೆ ಎದುರಾಗಲಿದೆ' ಎಂಬ ಅನುಮಾನ ಕಾಡುತ್ತಿದೆ ಎಂದು ಹಲವು ಮುಖಂಡರು ಹೇಳುತ್ತಿದ್ದಾರೆ. 'ಗ್ರೇಟರ್ ಬೆಂಗಳೂರು ಆಡಳಿತ ಕಾಯ್ದೆಗೆ (ಜಿಬಿಜಿಎ) ವಿರುದ್ಧವಾಗಿಯೇ ಮೀಸಲಾತಿ ಕರಡು ಹೊರಬಂದಿದೆ. ಇದು ಚುನಾವಣೆಗೆ ಅಡ್ಡಿಯಾಗಬಹುದು' ಎಂದೂ ಆತಂಕ ವ್ಯಕ್ತಪಡಿಸುತ್ತಿದ್ದಾರೆ.

ಕಾಂಗ್ರೆಸ್ ನಾಯಕಿ ಸೋನಿಯಾ ಗಾಂಧಿ ಆಶಯದಂತೆ ಮಹಿಳೆಯರಿಗೆ ಶೇ 50ರಷ್ಟು ಅಧಿಕಾರ ನೀಡುತ್ತೇವೆ ಎನ್ನುವ ಕಾಂಗ್ರೆಸ್ ಸರ್ಕಾರ, ಐದು ನಗರ ಪಾಲಿಕೆಗಳಲ್ಲಿ ಮಾತು ತಪ್ಪಿದೆ. ಶೇ 50ರಷ್ಟು ವಾರ್ಡ್‌ಗಳನ್ನು ಮಹಿಳೆಯರಿಗೆ ಮೀಸಲಿಡದೆ ವಂಚನೆ ಮಾಡಿದೆ

ಪದ್ಮನಾಭರೆಡ್ಡಿ, ಬಿಬಿಎಂಪಿಯ ಮಾಜಿ ಆಡಳಿತ ಪಕ್ಷದ ಬಿಜೆಪಿ ನಾಯಕ

ಚುನಾಯಿತ ಜನಪ್ರತಿನಿಧಿಗಳ ಕೌನ್ಸಿಲ್ ಇದ್ದರೆ ಮಾತ್ರ ಪರಿಣಾಮಕಾರಿಯಾಗಿ ಕೆಲಸ ನಿರ್ವಹಿಸಬಹುದು. ಏನೆಲ್ಲ ಸಮಸ್ಯೆ, ಗೊಂದಲಗಳಿವೆಯೋ ಅವೆಲ್ಲವನ್ನೂ ಈಗಲಾದರೂ ಸರ್ಕಾರ ಬಗೆಹರಿಸಿ, ಚುನಾವಣೆ ನಡೆಸಬೇಕು

ಎನ್. ನಾಗರಾಜು, ಬಿಬಿಎಂಪಿಯ ಮಾಜಿ ಆಡಳಿತ ಪಕ್ಷದ ಕಾಂಗ್ರೆಸ್ ನಾಯಕ

ಶೇ 50ಕ್ಕಿಂತ ಕಡಿಮೆ ವಾರ್ಡ್‌ಗಳಲ್ಲಿ ಮಹಿಳೆ ಮೀಸಲಾತಿ

ಐದು ನಗರ ಪಾಲಿಕೆಗಳ ಒಟ್ಟು ವಾರ್ಡ್‌ಗಳ ಸಂಖ್ಯೆ 369. ಇದರಲ್ಲಿ ಶೇ 50ರಷ್ಟು ಎಂದರೆ 184.5. ಅರ್ಧ ವಾರ್ಡ್ ಅನ್ನು ನೀಡಲು ಸಾಧ್ಯವಿಲ್ಲ. ಆದರೆ, 184 ವಾರ್ಡ್‌ಗಳನ್ನು ಮಹಿಳೆಯರಿಗೆ ಮೀಸಲಿಡಬಹುದಾಗಿತ್ತು. 176 ವಾರ್ಡ್‌ಗಳನ್ನು ಮಾತ್ರ ಮಹಿಳೆಯರಿಗೆ ಮೀಸಲಿಟ್ಟು, ವಂಚನೆ ಮಾಡಲಾಗಿದೆ ಎಂದು ಆರೋಪಿಸಲಾಗಿದೆ.

ಐದು ನಗರ ಪಾಲಿಕೆಗಳಿಗೆ ಒಟ್ಟಾರೆ ಶೇ 50ರಷ್ಟು ಲೆಕ್ಕಾಚಾರ ಮಾಡಲು ಸಾಧ್ಯವಿಲ್ಲ. ಐದೂ ನಗರ ಪಾಲಿಕೆಗಳೂ ಬೇರೆ ಬೇರೆಯೇ ಎಂದು ಹೇಳಿದರೂ, ಆಯಾ ನಗರ ಪಾಲಿಕೆಗಳಲ್ಲೂ ಮಹಿಳೆಯರಿಗೆ ಶೇ 50ರಷ್ಟು ಮೀಸಲಾತಿ ಸಿಕ್ಕಿಲ್ಲ ಎಂದು ಅಂಕಿ–ಅಂಶಗಳೇ ಹೇಳುತ್ತವೆ.

ಇದಲ್ಲದೆ, ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಕ್ಕೆ ಮೀಸಲಾಗಬೇಕಾದ ವಾರ್ಡ್‌ಗಳ ಸಂಖ್ಯೆ ಕಡಿಮೆಯಾಗಿದೆ. ಹಿಂದುಳಿದ ವರ್ಗದಲ್ಲೂ ಅವರಿಗೆ ನಿಗದಿಯಾಗಿರುವ ಪ್ರಮಾಣ ಕಡಿಮೆಯಾಗಿದೆ ಎನ್ನಲಾಗಿದೆ.

'ಕಾಂಗ್ರೆಸ್ ನೆಲಕಚ್ಚುವುದು ಗ್ಯಾರಂಟಿ'

ಗ್ಲೋಬಲ್ ಸಿಟಿಯಾಗಿದ್ದ ನಮ್ಮ ಬೆಂಗಳೂರು ನಗರವನ್ನು ಗಾರ್ಬೇಜ್ ಸಿಟಿ, ಗುಂಡಿಗಳ ಸಿಟಿ, ಗೂಂಡಾಗಳ ಸಿಟಿ ಮಾಡಿ ಬ್ರ್ಯಾಂಡ್ ಬೆಂಗಳೂರಿಗೆ ಕಳಂಕ ತಂದಿರುವ ಕಾಂಗ್ರೆಸ್ ಪಕ್ಷಕ್ಕೆ ತಕ್ಕ ಪಾಠ ಕಲಿಸಲು ಬೆಂಗಳೂರಿನ ಜನತೆ ಕಾಯುತ್ತಿದ್ದಾರೆ. ಜಿಬಿಎ ಚುನಾವಣೆಗೆ ಬಿಜೆಪಿ ಸಂಪೂರ್ಣ ಸಿದ್ಧವಾಗಿದ್ದು, ಬೆಂಗಳೂರಿನ ಪ್ರಜ್ಞಾವಂತ, ಪ್ರಬುದ್ಧ ಮತದಾರರು ಬಿಜೆಪಿಗೆ ದೊಡ್ಡ ಮಟ್ಟದಲ್ಲಿ ಆಶೀರ್ವಾದ ಮಾಡಲಿದ್ದಾರೆ.

ಆರ್.ಅಶೋಕ, ವಿರೋಧ ಪಕ್ಷದ ನಾಯಕ, ವಿಧಾನಸಭೆ

'ಕಾಂಗ್ರೆಸ್‌ಗೆ ಪಾಠ ಕಲಿಸುವ ಕಾಲ ಬಂದಿದೆ'

ಕಾಂಗ್ರೆಸ್‌ನವರು ಬೆಂಗಳೂರನ್ನು ಯಾವ ಪರಿ ಹಾಳು ಮಾಡಿದ್ದಾರೆಂದರೆ, ಮಳೆ ಬಂದರೆ ದೋಣಿಯಲ್ಲಿ ಓಡಾಡುವ ಪರಿಸ್ಥಿತಿ ಇದೆ. ರಸ್ತೆ ಗುಂಡಿಗಳನ್ನು ಮುಚ್ಚಲಾಗದ ಸ್ಥಿತಿ ಇದೆ. ಈಗ ಜನರೇ ಗುಂಡಿಗಳಲ್ಲಿ ಕಾಂಗ್ರೆಸ್ ಮುಚ್ಚಿ ಹಾಕಿ ಪಾಠ ಕಲಿಸುವ ಕಾಲ ಬಂದಿದೆ. ಚುನಾವಣೆ ಎದುರಿಸಲು ಬಿಜೆಪಿ ಸಿದ್ಧವಾಗಿದೆ.

ಛಲವಾದಿ ನಾರಾಯಣಸ್ವಾಮಿ, ವಿರೋಧ ಪಕ್ಷದ ನಾಯಕ, ವಿಧಾನಪರಿಷತ್



ಬೆಂಗಳೂರು ಕೇಂದ್ರ ನಗರ ಪಾಲಿಕೆ– ವಾರ್ಡ್‌ವಾರು ಕರಡು ಮೀಸಲಾತಿ

162 - ಶಿವಾಜಿನಗರ ವಿಧಾನಸಭಾ ಕ್ಷೇತ್ರ			
ವಾರ್ಡ್ 1	ರಾಮಸ್ವಾಮಿ ಪಾಳ್ಯ	ಸಾಮಾನ್ಯ	ಮಹಿಳೆ
ವಾರ್ಡ್ 2	ಜಯಮಹಲ್	ಪರಿಶಿಷ್ಟ ಜಾತಿ	
ವಾರ್ಡ್ 3	ವಸಂತ ನಗರ	ಹಿಂದುಳಿದ ವರ್ಗ ಎ	ಮಹಿಳೆ
ವಾರ್ಡ್ 4	ಸಂಪಂಗಿರಾಮ ನಗರ	ಹಿಂದುಳಿದ ವರ್ಗ ಎ	ಮಹಿಳೆ
ವಾರ್ಡ್ 5	ಶಿವಾಜಿನಗರ	ಸಾಮಾನ್ಯ	
ವಾರ್ಡ್ 6	ಭಾರತಿ ನಗರ	ಸಾಮಾನ್ಯ	ಮಹಿಳೆ
ವಾರ್ಡ್ 7	ಕೆ. ಕಾಮರಾಜ್ ವಾರ್ಡ್	ಸಾಮಾನ್ಯ	ಮಹಿಳೆ
ವಾರ್ಡ್ 8	ಹಲಸೂರು	ಪರಿಶಿಷ್ಟ ಜಾತಿ	ಮಹಿಳೆ
161 - ಸಿ.ವಿ. ರಾಮನ್ ನಗರ ವಿಧಾನಸಭಾ ಕ್ಷೇತ್ರ			
ವಾರ್ಡ್ 9	ಹೊಯ್ಸಳ ನಗರ ಕೇಂದ್ರ	ಪರಿಶಿಷ್ಟ ಜಾತಿ	
ವಾರ್ಡ್ 10	ಕಾಕ್ಸ್ ಟೌನ್	ಸಾಮಾನ್ಯ	
ವಾರ್ಡ್ 11	ಹಳೆ ಬೈಯಪ್ಪನಹಳ್ಳಿ	ಪರಿಶಿಷ್ಟ ಜಾತಿ	ಮಹಿಳೆ
ವಾರ್ಡ್ 12	ಕಸ್ತೂರಿ ನಗರ	ಹಿಂದುಳಿದ ವರ್ಗ ಬಿ	
ವಾರ್ಡ್ 13	ಕೃಷ್ಣಯ್ಯನಪಾಳ್ಯ	ಸಾಮಾನ್ಯ	ಮಹಿಳೆ
ವಾರ್ಡ್ 14	ನಾಗವಾರಪಾಳ್ಯ	ಹಿಂದುಳಿದ ವರ್ಗ ಎ	
ವಾರ್ಡ್ 15	ಇಂದಿರಾನಗರ	ಸಾಮಾನ್ಯ	
ವಾರ್ಡ್ 16	ಹೊಸ ತಿಪ್ಪಸಂದ್ರ	ಸಾಮಾನ್ಯ	ಮಹಿಳೆ
ವಾರ್ಡ್ 17	ಕಗ್ಗದಾಸಪುರ	ಹಿಂದುಳಿದ ವರ್ಗ ಎ	
ವಾರ್ಡ್ 18	ಜಿ.ಎಂ. ಪಾಳ್ಯ	ಸಾಮಾನ್ಯ	ಮಹಿಳೆ
ವಾರ್ಡ್ 19	ಜೀವನ್ ಬಿಮಾ ನಗರ	ಹಿಂದುಳಿದ ವರ್ಗ ಎ	
ವಾರ್ಡ್ 20	ಕೋಡಿಹಳ್ಳಿ	ಸಾಮಾನ್ಯ	
ವಾರ್ಡ್ 21	ಕೋನೇನ ಅಗ್ರಹಾರ	ಸಾಮಾನ್ಯ	ಮಹಿಳೆ
163 - ಶಾಂತಿನಗರ ವಿಧಾನಸಭಾ ಕ್ಷೇತ್ರ			
ವಾರ್ಡ್ 22	ದೊಮ್ಮಲೂರು	ಹಿಂದುಳಿದ ವರ್ಗ ಬಿ	ಮಹಿಳೆ
ವಾರ್ಡ್ 23	ಜೋಗುಪಾಳ್ಯ	ಸಾಮಾನ್ಯ	ಮಹಿಳೆ
ವಾರ್ಡ್ 24	ಅಗರ	ಪರಿಶಿಷ್ಟ ಜಾತಿ	
ವಾರ್ಡ್ 25	ಅಶೋಕನಗರ	ಹಿಂದುಳಿದ ವರ್ಗ ಬಿ	ಮಹಿಳೆ
ವಾರ್ಡ್ 26	ವನ್ನಾರಪೇಟೆ	ಪರಿಶಿಷ್ಟ ಪಂಗಡ	
ವಾರ್ಡ್ 27	ಅಂಬೇಡ್ಕರ್ ನಗರ	ಪರಿಶಿಷ್ಟ ಜಾತಿ	
ವಾರ್ಡ್ 28	ನೀಲಸಂದ್ರ	ಹಿಂದುಳಿದ ವರ್ಗ ಎ	ಮಹಿಳೆ
ವಾರ್ಡ್ 29	ಆಸ್ಟಿನ್ ಟೌನ್	ಹಿಂದುಳಿದ ವರ್ಗ ಎ	ಮಹಿಳೆ
ವಾರ್ಡ್ 30	ವಿನಾಯಕನಗರ	ಸಾಮಾನ್ಯ	ಮಹಿಳೆ
ವಾರ್ಡ್ 31	ಶಾಂತಿನಗರ	ಹಿಂದುಳಿದ ವರ್ಗ ಬಿ	
169 - ಚಿಕ್ಕಪೇಟೆ ವಿಧಾನಸಭಾ ಕ್ಷೇತ್ರ			
ವಾರ್ಡ್ 32	ಸಿಲ್ವರ್ ಜುಬಿಲಿ ಪಾರ್ಕ್ ವಾರ್ಡ್	ಪರಿಶಿಷ್ಟ ಜಾತಿ	ಮಹಿಳೆ
ವಾರ್ಡ್ 33	ಧರ್ಮರಾಯ ಸ್ವಾಮಿ ದೇವಸ್ಥಾನ ವಾರ್ಡ್	ಸಾಮಾನ್ಯ	ಮಹಿಳೆ
ವಾರ್ಡ್ 34	ಡಿ.ವಿ ಗುಂಡಪ್ಪ ವಾರ್ಡ್	ಸಾಮಾನ್ಯ	
ವಾರ್ಡ್ 35	ಹೊಂಬೇಗೌಡ ನಗರ	ಸಾಮಾನ್ಯ	
ವಾರ್ಡ್ 36	ಸೋಮೇಶ್ವರ ನಗರ	ಸಾಮಾನ್ಯ	
ವಾರ್ಡ್ 37	ಬಿಎಚ್‌ಇಎಲ್ ವಾರ್ಡ್	ಹಿಂದುಳಿದ ವರ್ಗ ಎ	
ವಾರ್ಡ್ 38	ಕನಕನಪಾಳ್ಯ	ಸಾಮಾನ್ಯ	ಮಹಿಳೆ
ವಾರ್ಡ್ 39	ವೆಂಕಟ್ ರೆಡ್ಡಿ ನಗರ	ಸಾಮಾನ್ಯ	
ವಾರ್ಡ್ 40	ಅಶೋಕ ಪಿಲ್ಲರ್	ಸಾಮಾನ್ಯ	
ವಾರ್ಡ್ 41	ವಿ.ವಿ ಪುರ	ಸಾಮಾನ್ಯ	ಮಹಿಳೆ
ವಾರ್ಡ್ 42	ಸುಂಕೇನಹಳ್ಳಿ	ಸಾಮಾನ್ಯ	ಮಹಿಳೆ
ವಾರ್ಡ್ 43	ದೇವರಾಜ ಅರಸ್ ವಾರ್ಡ್	ಸಾಮಾನ್ಯ	
168 - ಚಾಮರಾಜಪೇಟೆ ವಿಧಾನಸಭಾ ಕ್ಷೇತ್ರ			
ವಾರ್ಡ್ 44	ಚಾಮರಾಜಪೇಟೆ	ಸಾಮಾನ್ಯ	
ವಾರ್ಡ್ 45	ಕೆ.ಆರ್ ಮಾರುಕಟ್ಟೆ	ಹಿಂದುಳಿದ ವರ್ಗ ಎ	
ವಾರ್ಡ್ 46	ಚೆಲುವಾದಿ ಪಾಳ್ಯ	ಪರಿಶಿಷ್ಟ ಜಾತಿ	ಮಹಿಳೆ
ವಾರ್ಡ್ 47	ಐಪಿಡಿ ಸಾಲಪ್ಪ ವಾರ್ಡ್	ಪರಿಶಿಷ್ಟ ಜಾತಿ	ಮಹಿಳೆ
ವಾರ್ಡ್ 48	ಆಜಾದ್ ನಗರ	ಸಾಮಾನ್ಯ	
ವಾರ್ಡ್ 49	ಕಸ್ತೂರಬಾ ನಗರ	ಹಿಂದುಳಿದ ವರ್ಗ ಎ	ಮಹಿಳೆ
ವಾರ್ಡ್ 50	ಜೆಜೆಆರ್ ನಗರ	ಹಿಂದುಳಿದ ವರ್ಗ ಎ	ಮಹಿಳೆ
ವಾರ್ಡ್ 51	ಹಳೆ ಗುಡ್ಡದಹಳ್ಳಿ	ಸಾಮಾನ್ಯ	ಮಹಿಳೆ
ವಾರ್ಡ್ 52	ಪಾದರಾಯನಪುರ	ಸಾಮಾನ್ಯ	
ವಾರ್ಡ್ 53	ರಾಯಪುರ	ಪರಿಶಿಷ್ಟ ಜಾತಿ	
164 - ಗಾಂಧಿನಗರ ವಿಧಾನಸಭಾ ಕ್ಷೇತ್ರ			
ವಾರ್ಡ್ 54	ಬಿನ್ನಿಪೇಟೆ	ಸಾಮಾನ್ಯ	
ವಾರ್ಡ್ 55	ಭುವನೇಶ್ವರಿ ನಗರ	ಹಿಂದುಳಿದ ವರ್ಗ ಎ	
ವಾರ್ಡ್ 56	ಗೋಪಾಲಪುರ	ಹಿಂದುಳಿದ ವರ್ಗ ಎ	
ವಾರ್ಡ್ 57	ಕಾಟನ್‌ಪೇಟೆ	ಸಾಮಾನ್ಯ	
ವಾರ್ಡ್ 58	ಚಿಕ್ಕಪೇಟೆ	ಸಾಮಾನ್ಯ	ಮಹಿಳೆ
ವಾರ್ಡ್ 59	ನೆಹರೂ ನಗರ	ಹಿಂದುಳಿದ ವರ್ಗ ಎ	ಮಹಿಳೆ
ವಾರ್ಡ್ 60	ಶೇಷಾದ್ರಿಪುರಂ	ಸಾಮಾನ್ಯ	ಮಹಿಳೆ
ವಾರ್ಡ್ 61	ದತ್ತಾತ್ರೇಯ ವಾರ್ಡ್	ಸಾಮಾನ್ಯ	
ವಾರ್ಡ್ 62	ಸ್ವತಂತ್ರ ಪಾಳ್ಯ ವಾರ್ಡ್	ಪರಿಶಿಷ್ಟ ಜಾತಿ	
ವಾರ್ಡ್ 63	ಓಕಳಿಪುರ	ಹಿಂದುಳಿದ ವರ್ಗ ಎ	ಮಹಿಳೆ

'ಸ್ನೇಹದೀಪ ಅಂಗವಿಕಲರ ಸಂಸ್ಥೆ'ಯ ವತಿಯಿಂದ ಈಚೆಗೆ ನಡೆದ ರಾಜ್ಯಮಟ್ಟದ ಪ್ರತಿಭಾನ್ವೇಷಣೆಯಲ್ಲಿ ಸಚಿವ ಸಂತೋಷ್ ಲಾಡ್, ಸಂಸ್ಥೆಯ ಧರ್ಮದರ್ಶಿ ಪಾಲ್ ಮುದ್ದಾ ಮೊದಲಾದವರು ಪಾಲ್ಗೊಂಡಿದ್ದರು

ಕಟ್ಟಡ ನಿರ್ಮಿಸಲು ನೆರವು

ಬೆಂಗಳೂರು: 'ಸ್ನೇಹದೀಪ ಅಂಗವಿಕಲರ ಸಂಸ್ಥೆ' ವತಿಯಿಂದ ರಾಜ್ಯ ಮಟ್ಟದ ಪ್ರತಿಭಾನ್ವೇಷಣೆ–2026 ಕಾರ್ಯಕ್ರಮ ಮಲ್ಲೇಶ್ವರದ 19ನೇ ಅಡ್ಡ ರಸ್ತೆಯ ರಜತಭವನದಲ್ಲಿ ಈಚೆಗೆ ನಡೆಯಿತು.

ಪ್ರತಿಭಾನ್ವೇಷಣೆಯಲ್ಲಿ 550ಕ್ಕೂ ಹೆಚ್ಚು ಅಂಧ ವಿದ್ಯಾರ್ಥಿಗಳು ಭಾಗವಹಿಸಿ, ತಮ್ಮ ವಿಶೇಷ ಪ್ರತಿಭೆಯನ್ನು ಪ್ರದರ್ಶಿಸಿದರು. ಸ್ಪರ್ಧೆ ಗಾಯನ, ನೃತ್ಯ, ವಾದ್ಯ, ಮಿಮಿಕ್ರಿ, ಏಕಪಾತ್ರಾಭಿನಯ... ಹೀಗೆ ಹಲವು ಸ್ಪರ್ಧೆಗಳು ಜರುಗಿದವು.

ವಿಜೇತ ವಿದ್ಯಾರ್ಥಿಗಳಿಗೆ ನಗದು ಬಹುಮಾನ , ಟ್ರೋಫಿ ಮತ್ತು ಪ್ರಶಸ್ತಿ ಪತ್ರ ನೀಡಲಾಯಿತು. ಭಾಗವಹಿಸಿದ ಎಲ್ಲಾ ಸ್ಪರ್ಧಿಗಳಿಗೂ ಉಚಿತವಾಗಿ ಕಾಲೇಜು ಬ್ಯಾಗ್ ಮತ್ತು ನಡೆಯಲು ಅಂಧರು ಬಳಸುವ ಕೇನ್ (ವಾಕಿಂಗ್ ಸ್ಟಿಕ್) ವಿತರಿಸಲಾಯಿತು.

ಪ್ರತಿಭಾನ್ವೇಷಣೆಯಲ್ಲಿ ರಾಣೆಬೆನ್ನೂರಿನ ಸ್ನೇಹದೀಪ ಸಂಸ್ಥೆ ಪ್ರಥಮ ಹಾಗೂ ಬೆಂಗಳೂರಿನ 'ಬೆಳಕು' ಅಕಾಡೆಮಿ ದ್ವಿತೀಯ ಸ್ಥಾನ ಪಡೆಯಿತು.

ಕಾರ್ಮಿಕ ಸಚಿವ ಸಂತೋಷ್ ಲಾಡ್ ಮಾತನಾಡಿ, ಖಾಸಗಿ ಕ್ಷೇತ್ರದ ಉದ್ಯೋಗದಲ್ಲಿ ಅಂಗವಿಕಲರಿಗೆ ಶೇ5ರಷ್ಟು ಮೀಸಲಾತಿ ನೀಡಲಾಗುವುದು ಎಂದು ತಿಳಿಸಿದರು.

ಸ್ನೇಹದೀಪ ಸಂಸ್ಥೆಗೆ ಸಂತೋಷ್ ಲಾಡ್ ಪ್ರತಿಷ್ಠಾನದಿಂದ ಕಟ್ಟಡ ನಿರ್ಮಾಣಕ್ಕೆ ನೆರವು ನೀಡಲಾಗುವುದು ಎಂದು ಭರವಸೆ ನೀಡಿದರು.

ಸ್ನೇಹದೀಪ ಅಂಗವಿಕಲರ ಸಂಸ್ಥೆಯ ಧರ್ಮದರ್ಶಿ ಪಾಲ್ ಮುದ್ದಾ, ಕೆ.ಜಿ.ಮೋಹನ್, ಹಿನ್ನೆಲೆ ಗಾಯಕಿ ಪ್ರಿಯದರ್ಶಿನಿ, ನೀಲಾ ಕಿಶೋರ್, ನಟಿ ರಾಗಿಣಿ ದ್ವಿವೇದಿ, ಮೈಸೂರು ರಮಾನಂದ್ ಪಾಲ್ಗೊಂಡಿದ್ದರು.

ಹೈಕೋರ್ಟ್ ಸ್ಥಳಾಂತರ: ನೋಟಿಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಹೈಕೋರ್ಟ್ ಕಟ್ಟಡದ ನೂತನ ಸಂಕೀರ್ಣ ನಿರ್ಮಾಣಕ್ಕಾಗಿ ಬೆಂಗಳೂರಿನ ಹೃದಯ ಭಾಗದಲ್ಲಿ 30 ಎಕರೆ ಅಥವಾ ಅದಕ್ಕಿಂತ ಹೆಚ್ಚಿನ ಜಮೀನನ್ನು ನೀಡಲು ನಿರ್ದೇಶನ ನೀಡಬೇಕು' ಎಂದು ಕೋರಲಾಗಿರುವ ಅರ್ಜಿಯೊಂದಕ್ಕೆ ಸಂಬಂಧಿಸಿದಂತೆ ರಾಜ್ಯ ಸರ್ಕಾರ ಮತ್ತು ಹೈಕೋರ್ಟ್ ರಿಜಿಸ್ಟ್ರಾರ್ ಜನರಲ್‌ಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಲಾಗಿದೆ.

ಈ ಸಂಬಂಧ ಅಫಜಲಪೂರ ಕ್ಷೇತ್ರದ ಮಾಜಿ ಶಾಸಕ ಹಣಮಂತರಾವ್ ದೇಸಾಯಿ ಅವರ ಪುತ್ರ ಶರಣ್ ದೇಸಾಯಿ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ವಿಭು ಬಖ್ರು ನೇತೃತ್ವದ ವಿಭಾಗೀಯ ನ್ಯಾಯಪೀಠ ಸೋಮವಾರ ವಿಚಾರಣೆ ನಡೆಸಿತು.

ವಾಸ್ತುಶಿಲ್ಪಿಯಾಗಿ ಅಮೆರಿಕೆಯಲ್ಲಿ ಕಾರ್ಯ ನಿರ್ವಹಿಸಿರುವ ಶರಣ್ ದೇಸಾಯಿ ವಿಚಾರಣೆ ವೇಳೆ ಸ್ವತಃ ವಾದ ಮಂಡಿಸಿದರು. ಕೆಲ ಕಾಲ ವಾದ ಆಲಿಸಿದ ನ್ಯಾಯಪೀಠ ಪ್ರತಿವಾದಿಗಳಾದ ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ಮತ್ತು ಹೈಕೋರ್ಟ್ ರಿಜಿಸ್ಟ್ರಾರ್ ಜನರಲ್ ಅವರಿಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿತು. ಆಕ್ಷೇಪಣೆ ಸಲ್ಲಿಸುವಂತೆ ನಿರ್ದೇಶಿಸಿ ವಿಚಾರಣೆಯನ್ನು ಮಾರ್ಚ್ 23ಕ್ಕೆ ಮುಂದೂಡಿತು.

ಅರ್ಜಿದಾರರ ಉಲ್ಲೇಖ: 'ಕಬ್ಬನ್ ಪಾರ್ಕ್‌ನಲ್ಲಿ 2025ರ ಅಕ್ಟೋಬರ್ 26ರಂದು ನಡೆದ 'ವಾಕ್ ವಿಥ್ ಬೆಂಗಳೂರು' ನಾಗರಿಕ ಸಂಪರ್ಕ ಕಾರ್ಯಕ್ರಮದಲ್ಲಿ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಮಾತನಾಡಿ, 'ಕರ್ನಾಟಕ ಹೈಕೋರ್ಟ್‌ನ ಈಗಿರುವ ಕಟ್ಟಡ ಸ್ಥಳಾವಕಾಶದ ಕೊರತೆ ಎದುರಿಸುತ್ತಿದೆ. ಹಾಗಾಗಿ, ಈ ಕಟ್ಟಡವನ್ನು ನಗರದ ಪ್ರಮುಖ ಭಾಗದಲ್ಲಿನ ಹೊಸ ಮತ್ತು ವಿಶಾಲವಾದ ಜಾಗಕ್ಕೆ ಸ್ಥಳಾಂತರಿಸುವ ಸಾಧ್ಯತೆಯನ್ನು ಸರ್ಕಾರ ಪರಿಶೀಲಿಸುತ್ತಿದೆ' ಎಂಬ ವರದಿಯನ್ನು ಅರ್ಜಿದಾರರು ಉಲ್ಲೇಖಿಸಿದ್ದಾರೆ.

ಅಬಕಾರಿ ಹರಾಜಿನಲ್ಲಿ ಮೀಸಲು: ಆಕ್ಷೇಪ

ರಾಜ್ಯದಲ್ಲಿನ 569 ಅಬಕಾರಿ ಸನ್ನದುಗಳನ್ನು ಇ-ಹರಾಜು ಮಾಡಲು ಉದ್ದೇಶಿಸಿರುವ ಸರ್ಕಾರದ ನಿರ್ಧಾರ ಪ್ರಶ್ನಿಸಲಾದ ಅರ್ಜಿ ವಿಚಾರಣೆ ವೇಳೆ ಅರ್ಜಿದಾರರ ಪರ ಹಿರಿಯ ವಕೀಲರು, 'ಇ-ಹರಾಜು ಪ್ರಕ್ರಿಯೆಯಲ್ಲಿ ಹಲವು ಪ್ರವರ್ಗಗಳಿಗೆ ಮೀಸಲು ಸೌಲಭ್ಯ ಕಲ್ಪಿಸಲಾಗಿದೆ. ಆದರೆ, ಅದಕ್ಕೆ ಯಾವುದೇ ಮಾನದಂಡ ಅನುಸರಿಸಿಲ್ಲ' ಎಂದು ತೀವ್ರ ಆಕ್ಷೇಪ ವ್ಯಕ್ತಪಡಿಸಿದರು.

ಅಧಿಸೂಚನೆ ಪ್ರಶ್ನಿಸಿ ಹುಬ್ಬಳ್ಳಿಯ ಶಾಂತಾಬಾಯಿ ಕೋಂ ಮಾಧುಸಾ ಮೆಹರ್ವಾಡೆ ಸೇರಿದಂತೆ ಒಟ್ಟು ಮೂವರು ಸಲ್ಲಿಸಿದ್ದ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಕೆ.ಎಸ್.ಹೇಮಲೇಖಾ ಅವರಿದ್ದ ಏಕಸದಸ್ಯ ನ್ಯಾಯಪೀಠ (ಧಾರವಾಡ) ಸೋಮವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಸರ್ಕಾರದ ಪರ ಹಾಜರಾಗಿದ್ದ ಅಡ್ವೊಕೇಟ್ ಜನರಲ್ ಕೆ.ಶಶಿಕಿರಣ ಶೆಟ್ಟಿ, 'ಮಂಗಳವಾರದಿಂದಲೇ (ಜ.13) ಪರವಾನಗಿ ಇ-ಹರಾಜು ನಿಗದಿಯಾಗಿದೆ. ಆದ್ದರಿಂದ, ಸರ್ಕಾರ ತಡೆಯಾಜ್ಞೆ ತೆರವು ಕೋರಿ ಸಲ್ಲಿಸಿರುವ ಮಧ್ಯಂತರ ಅರ್ಜಿಯನ್ನು ಮಾನ್ಯ ಮಾಡಬೇಕು' ಎಂದು ಕೋರಿದರು.

ಇದಕ್ಕೆ ತೀವ್ರ ಆಕ್ಷೇಪ ವ್ಯಕ್ತಪಡಿಸಿದ ಅರ್ಜಿದಾರರ ಪರ ಪದಾಂಕಿತ ಹಿರಿಯ ವಕೀಲ ಅಶೋಕ್ ಹಾರನಹಳ್ಳಿ ಅವರು, 'ಸರ್ಕಾರ ನಡೆಸಲು ಉದ್ದೇಶಿಸಿರುವ ಇ–ಹರಾಜಿನಲ್ಲಿ ಮೀಸಲು ಸೌಲಭ್ಯ ಕಲ್ಪಿಸಲಾಗಿದೆ. ಆದರೆ, ಈ ಬಗ್ಗೆ ಅಧಿಸೂಚನೆಯಲ್ಲಿ ಉಲ್ಲೇಖವೂ ಇಲ್ಲ ಮತ್ತು ಈ ರೀತಿ ಮೀಸಲು ಒದಗಿಸಲು ಶಾಸನಾತ್ಮಕ ಬೆಂಬಲವೂ ಇಲ್ಲ' ಎಂದು ಪ್ರತಿಪಾದಿಸಿದರು.

'ಸರ್ಕಾರ ಇಂತಹ ನಿಲುವಿನಿಂದ ಅರ್ಜಿದಾರರ ಸಾಂವಿಧಾನಿಕ ಹಕ್ಕನ್ನು ಕಸಿದುಕೊಳ್ಳುತ್ತಿದೆ. ಆದ್ದರಿಂದ, ಯಾವುದೇ ಕಾರಣಕ್ಕೂ ಮಧ್ಯಂತರ ತಡೆಯಾಜ್ಞೆಯ ಆದೇಶವನ್ನು ತೆರವುಗೊಳಿಸಬಾರದು. ಇ-ಹರಾಜು ಪ್ರಕ್ರಿಯೆಗೆ ಅವಕಾಶ ಮಾಡಿಕೊಡಬಾರದು' ಎಂದು ಕೋರಿದರು.

ಇದನ್ನು ಮಾನ್ಯ ಮಾಡಿದ ನ್ಯಾಯಪೀಠ ರಾಜ್ಯದಲ್ಲಿ 569 ಅಬಕಾರಿ ಸನ್ನದುಗಳನ್ನು ಇ-ಹರಾಜು ಮಾಡಲು ಅಬಕಾರಿ ಇಲಾಖೆ 2025ರ ಡಿಸೆಂಬರ್ 19ರಂದು ಹೊರಡಿಸಿದ್ದ ಅಧಿಸೂಚನೆಗೆ ನೀಡಿದ್ದ ಮಧ್ಯಂತರ ತಡೆಯಾಜ್ಞೆ ತೆರವುಗೊಳಿಸಲು ನಿರಾಕರಿಸಿತು. ಅಂತೆಯೇ, ವಿಚಾರಣೆಯನ್ನು ಫೆಬ್ರುವರಿ 11ಕ್ಕೆ ಮುಂದೂಡಿತು.

ಆದಾಯ ಕ್ರೋಡೀಕರಣದ ಉದ್ದೇಶದಿಂದ ರಾಜ್ಯದಲ್ಲಿ ನವೀಕರಣವಾಗದ, ಸ್ಥಗಿತಗೊಂಡಿದ್ದ 477 ಸಿಎಲ್-2ಎ ಚಿಲ್ಲರೆ ಮದ್ಯ ಮಾರಾಟ ಮಳಿಗೆ ಮತ್ತು 92 ಸಿಎಲ್-9ಎ ರಿಫ್ರೆಶ್ ರೂಮ್ ಸನ್ನದುಗಳನ್ನು ಜನವರಿ 13ರಿಂದ 20ರವರೆಗೆ ಹರಾಜು ಹಾಕಲು ದಿನಾಂಕ ನಿಗದಿಪಡಿಸಿ ಸರ್ಕಾರ ಆದೇಶ ಹೊರಡಿಸಿತ್ತು.

ಅಕ್ರಮ ವಾಸ ಇಬ್ಬರ ಬಂಧನ

ಆನೇಕಲ್: ವೀಸಾ ಅವಧಿ ಮುಗಿದ ಬಳಿಕವೂ ಇಲ್ಲಿನ ಹಾರಗದ್ದೆಯಲ್ಲಿ ಅಕ್ರಮವಾಗಿ ವಾಸವಿದ್ದ ಇಬ್ಬರು ನೈಜೀರಿಯಾ ಪ್ರಜೆಗಳನ್ನು ಗಡಿಪಾರು ಮಾಡಲು ಜಿಗಣಿ ಪೊಲೀಸರು ವಿದೇಶಿಯರ ನೋಂದಣಿ ಕಚೇರಿಗೆ ಹಸ್ತಾಂತರಿಸಿದ್ದಾರೆ.

ದಕ್ಷಿಣ ನಗರ ಪಾಲಿಕೆ: 10 ಪಿ.ಜಿ.ಗಳಿಗೆ ಬೀಗಮುದ್ರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶುಚಿತ್ವ, ಸುರಕ್ಷೆ, ಶೌಚಾಲಯ ಸೇರಿದಂತೆ ನಿಯಮಗಳನ್ನು ಉಲ್ಲಂಘಿಸಿರುವ 10 ಪೇಯಿಂಗ್ ಗೆಸ್ಟ್‌ಗಳಿಗೆ (ಪಿ.ಜಿ) ದಕ್ಷಿಣ ನಗರ ಪಾಲಿಕೆಯ ಆರೋಗ್ಯ ವಿಭಾಗದ ಸಿಬ್ಬಂದಿ ಸೋಮವಾರ ಬೀಗಮುದ್ರೆ ಹಾಕಿದ್ದಾರೆ.

ಜಯನಗರ, ಬೆಂಗಳೂರು ದಕ್ಷಿಣ, ಬಿಟಿಎಂ ಲೇಔಟ್, ಬೊಮ್ಮನಹಳ್ಳಿ ವಿಧಾನಸಭಾ ಕ್ಷೇತ್ರಗಳ ವ್ಯಾಪ್ತಿಯಲ್ಲಿರುವ 66 ಪಿ.ಜಿ.ಗಳ ವಸತಿ ಗೃಹಗಳಲ್ಲಿ ಶುದ್ಧ ಕುಡಿಯುವ ನೀರು, ಶುಚಿತ್ವ, ಅಡುಗೆ ಕೋಣೆ ನೈರ್ಮಲ್ಯ, ಸುರಕ್ಷತೆ, ಉತ್ತಮ ಶೌಚಾಲಯ ವ್ಯವಸ್ಥೆ, ಅಗ್ನಿಶಾಮಕ ಸಾಧನಗಳು ಹಾಗೂ ಸಿ.ಸಿ.ಟಿ.ವಿ ಕ್ಯಾಮೆರಾ ಅಳವಡಿಕೆ ಮತ್ತು ಆಹಾರ ಸುರಕ್ಷತಾ ಪ್ರಮಾಣ ಪತ್ರಗಳ ಬಗ್ಗೆ ತಪಾಸಣೆ ಮಾಡಲಾಯಿತು. ಇದರಲ್ಲಿ 10 ಪಿ.ಜಿ.ಗಳಿಗೆ ಬೀಗ ಹಾಕಲಾಗಿದೆ.

ಪಿ.ಜಿ ನಡೆಸುತ್ತಿರುವವರಿಗೆ ತಿಳಿವಳಿಕೆ ಪತ್ರ ಜಾರಿ ಮಾಡಿದ್ದು, ಉದ್ದಿಮೆದಾರರು ಏಳು ದಿನಗಳ ಒಳಗಾಗಿ ನ್ಯೂನತೆಗಳನ್ನು ಸರಿಪಡಿಸಿಕೊಂಡು, ಕಾರ್ಯನಿರ್ವಹಣೆ ಮಾಡುವುದಕ್ಕೆ ಸೂಚಿಸಲಾಗಿದೆ. ಒಟ್ಟು ₹22,500 ದಂಡ ವಿಧಿಸಲಾಗಿದೆ ಎಂದು ಆರೋಗ್ಯಾಧಿಕಾರಿ ಡಾ. ಬಾಲಸುಂದರ್ ತಿಳಿಸಿದರು.

10 ರಸ್ತೆ ಹಸಿರೀಕರಣ: ಕೇಂದ್ರ ನಗರ ಪಾಲಿಕೆ ವ್ಯಾಪ್ತಿಯಲ್ಲಿ ಪ್ರತಿ ತಿಂಗಳು ಕನಿಷ್ಠ 10 ರಸ್ತೆಗಳ ಅಕ್ಕ ಪಕ್ಕದಲ್ಲಿ, ವಿಭಜಕಗಳಲ್ಲಿ ಸಸಿಗಳನ್ನು ನೆಟ್ಟು ಹಸಿರೀಕರಣಗೊಳಿಸಬೇಕು ಎಂದು ಆಯುಕ್ತ ರಾಜೇಂದ್ರ ಚೋಳನ್ ಅವರು ಅಧಿಕಾರಿಗಳಿಗೆ ಸೂಚಿಸಿದರು.

ಪಿಎಫ್‌ಎಆರ್‌ಗೆ ಅನುಮತಿ: ಎಂಟು ವಾರಗಳಲ್ಲಿ ಅರ್ಜಿ ವಿಲೇವಾರಿಗೆ ನಿರ್ದೇಶನ

ಪ್ರಜಾವಾಣಿ ವಾರ್ತೆ

ನವದೆಹಲಿ: ಬೆಂಗಳೂರಿನಲ್ಲಿ ಹೆಚ್ಚುವರಿ ಶುಲ್ಕ ಪಾವತಿಸುವ ಮೂಲಕ 10ರ ಬದಲು 16 ಅಂತಸ್ತು ನಿರ್ಮಿಸಿಕೊಳ್ಳಲು ಪ್ರೀಮಿಯಂ ಎಫ್‌ಎಆರ್‌ಗೆ (ಫ್ಲೋರ್ ಏರಿಯಾ ರೇಷಿಯೊ) ಅನುಮತಿಸುವ ಕರ್ನಾಟಕ ಸರ್ಕಾರದ ತೀರ್ಮಾನ ಪ್ರಶ್ನಿಸಿ ಸಲ್ಲಿಕೆಯಾಗಿರುವ ಅರ್ಜಿಯನ್ನು ಎಂಟು ವಾರಗಳಲ್ಲಿ ವಿಲೇವಾರಿ ಮಾಡಬೇಕು ಎಂದು ಹೈಕೋರ್ಟ್‌ಗೆ ಸುಪ್ರೀಂ ಕೋರ್ಟ್ ಸೋಮವಾರ ನಿರ್ದೇಶನ ನೀಡಿತು.

ಕೃಷ್ಣಮೂರ್ತಿ ಎನ್., ಎಂಬವರು ಸಲ್ಲಿಸಿದ ವಿಶೇಷ ಮೇಲ್ಮನವಿ ಅರ್ಜಿಯ ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್ ಹಾಗೂ ಜಾಯ್‌ಮಾಲ್ಯ ಬಾಗ್ಚಿ ಪೀಠವು, ಪ್ರಕರಣವನ್ನು ಹೈಕೋರ್ಟ್‌ಗೆ ವರ್ಗಾಯಿಸಿತು.

ರಿಟ್ ಅರ್ಜಿ ಇತ್ಯರ್ಥಗೊಳ್ಳುವವರೆಗೆ ಡೆವಲಪರ್ ಥರ್ಡ್ ಪಾರ್ಟಿ ಹಕ್ಕುಗಳನ್ನು ರಚಿಸುವಂತಿಲ್ಲ ಎಂಬ ಷರತ್ತಿಗೆ ಒಳಪಟ್ಟಂತೆ ಪಿಎಫ್‌ಎಆರ್ ಯೋಜನೆಗಳಿಗೆ ಮಂಜೂರಾತಿ ನೀಡಬಹುದು ಎಂದು ಪೀಠ ಸೂಚಿಸಿತು.

'ಪ್ರತಿಭಾ ಕಾವ್ಯದಲ್ಲಿ ವಾಸ್ತವದ ದರ್ಶನ'

ಲೇಖಕಿಯ ಕಾವ್ಯ ಕುರಿತ ಸಮಾರಂಭ: ಸಾಹಿತ್ಯ ಕ್ಷೇತ್ರದ ಪ್ರಮುಖರ ಅಭಿಮತ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಲೇಖಕಿ ಪ್ರತಿಭಾ ನಂದಕುಮಾರ್ ಅವರು ತಮ್ಮ ಕಾವ್ಯದಲ್ಲಿ ವ್ಯವಸ್ಥೆಯ ಕುರಿತ ವಾಸ್ತವವನ್ನು ದರ್ಶನ ಮಾಡಿಸಿದ್ದಾರೆ. ಇದರಿಂದ ಹಲವರ ಕೆಂಗಣ್ಣಿಗೂ ಗುರಿಯಾಗಿರುವ ಅವರಿಗೆ, ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಸೂಕ್ತ ಸ್ಥಾನಮಾನ ದೊರೆತಿಲ್ಲ' ಎಂದು ಸಾಹಿತ್ಯ ಕ್ಷೇತ್ರದ ಪ್ರಮುಖರು ಅಭಿಪ್ರಾಯಪಟ್ಟರು.

ಅಂಕಿತ ಪುಸ್ತಕ, ಬಹುರೂಪಿ, ವಸಂತ ಪ್ರಕಾಶನ, ಚಾರುಮತಿ ಪ್ರಕಾಶನ, ಎಂ.ಎಂ. ಪಬ್ಲಿಕೇಷನ್ ಹಾಗೂ ಮಿಂಚುಳ್ಳಿ ಪ್ರಕಾಶನ ಜಂಟಿಯಾಗಿ ನಗರದಲ್ಲಿ ಭಾನುವಾರ ಹಮ್ಮಿಕೊಂಡಿದ್ದ 'ಪ್ರತಿಭಾ ನಂದಕುಮಾರ್' ಕಾವ್ಯ ಕುರಿತ ಸಮಾರಂಭದಲ್ಲಿ, ಅವರ 'ಬೆಕ್ಕೇ ಬೆಕ್ಕೇ ಮುದ್ದಿನ ಸೊಕ್ಕೇ', 'ಶಾಪಗ್ರಸ್ತ ಕವಿ', 'ಪ್ರತಿಭಾ ಉವಾಚ', 'ಕಾವ್ಯದಾಹ ಜೀವನ ಮೋಹ', 'ಇಳಿದು ಬರುವುದಿಲ್ಲ ತಾಯಿ' ಹಾಗೂ 'ಒಂದು ಹೆಣ್ಣು ಒಂಟೆಯ ಹತ್ಯೆ' ಪುಸ್ತಕಗಳು ಜನಾರ್ಪಣೆಯಾದವು.

ತತ್ವಜ್ಞಾನಿ ಸುಂದರ್ ಸಾರುಕ್ಕೈ, 'ಪ್ರತಿಭಾ ಅವರ ಕಾವ್ಯವನ್ನು ತತ್ವಜ್ಞಾನದ ದೃಷ್ಟಿಯಿಂದ ನೋಡಬೇಕು. ವಿಶಿಷ್ಟ ಶೈಲಿಯ ಬರವಣಿಗೆ ರೂಢಿಸಿಕೊಂಡಿರುವ ಅವರ ಕಾವ್ಯದಲ್ಲಿ ತತ್ವ, ಅನುಭವ ಅಡಗಿದೆ. ತತ್ವಜ್ಞಾನದಲ್ಲಿ ದೇಹ ಮತ್ತು ಭಾಷೆ ಮುಖ್ಯ' ಎಂದು ಹೇಳಿದರು.

ವಿಮರ್ಶಕಿ ಎಂ.ಎಸ್. ಆಶಾದೇವಿ, 'ಪ್ರತಿಭಾ ಅವರು ಅತ್ಯುತ್ತಮ ಕಾವ್ಯ ರಚಿಸಿದರೂ ಅವರಿಗೆ ಸಾಹಿತ್ಯ ಕ್ಷೇತ್ರದಲ್ಲಿ ಎಲ್ಲವೂ ಸಿಗಲಿಲ್ಲ. ಯುಗ ಪ್ರವರ್ತಕ ಕವಿಗಳ ಸಾಲಿನಲ್ಲಿ ಅವರನ್ನು ಏಕೆ ನಿಲ್ಲಿಸಲಾಗುತ್ತಿಲ್ಲ ಎನ್ನುವುದು ಪ್ರಶ್ನೆಯಾಗಿದೆ. ಅವರ ಕಾವ್ಯದ ಬಗ್ಗೆ ಚರ್ಚೆಯೂ ಅಷ್ಟಾಗಿ ನಡೆದಿಲ್ಲ. ಅವರ ಕಾವ್ಯ ಸರಿಯಾದ ಪ್ರಶ್ನೆ ಕೇಳಿ, ಸರಿಯಾದ ಉತ್ತರ ಧ್ವನಿಸುತ್ತಾ ಹೋಗುತ್ತದೆ' ಎಂದರು.

ಪತ್ರಕರ್ತ ಗಿರೀಶ್ ರಾವ್ ಹತ್ವಾರ್ (ಜೋಗಿ), 'ಕವಿಗಳು ಹಳಬರಾದಂತೆ ಅವರ ಕಾವ್ಯ ಮಾಸುತ್ತಾ ಹೋಗುತ್ತದೆ. ಆದರೆ, ಪ್ರತಿಭಾ ಅವರ ಮೊದಲ ಪದ್ಯ ಈಗಲೂ ಸಕಾಲಿಕ. ಅವರ ರೀತಿ ಅವರ ಕಾವ್ಯವೂ ಪ್ರತಿಕ್ರಿಯಿಸುತ್ತದೆ. ಅವರ ಪದ್ಯ ನಿರಾಸೆ ಮೂಡಿಸುವುದಿಲ್ಲ' ಎಂದು ಅಭಿಪ್ರಾಯಪಟ್ಟರು.

ಪ್ರಕಾಶಕರಾದ ಪ್ರಕಾಶ್ ಕಂಬತ್ತಳ್ಳಿ, ಜಿ.ಎನ್. ಮೋಹನ್, ಮುರಳಿ ಶ್ರೀನಿವಾಸನ್, ವಿದ್ಯಾರಣ್ಯ ಬಿ.ಎಸ್., ಎಂ.ಸಿ.ನರೇಂದ್ರ, ಸೂರ್ಯಕೀರ್ತಿ ಇದ್ದರು.

ಸಮಾರಂಭದಲ್ಲಿ ಜೋಗಿ, ಎಂ.ಎಸ್. ಆಶಾದೇವಿ ಮತ್ತು ಸುಂದರ್ ಸಾರುಕ್ಕೈ ಭಾಗವಹಿಸಿದ್ದರು ಪ್ರಜಾವಾಣಿ ಚಿತ್ರ

ಕೆನರಾ ರೊಬೆಕೊ: ವಲಯ ಮಾರಾಟ ಮುಖ್ಯಸ್ಥ ಸದಾನಂದ ಪ್ಯಾಟಿ

ದೇಶದ ಬೆಳವಣಿಗೆಯಲ್ಲಿ ಹೂಡಿಕೆದಾರರು ಭಾಗಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 2030ರ ವೇಳೆಗೆ 7 ಟ್ರಿಲಿಯನ್ ಡಾಲರ್ (ಸರಿಸುಮಾರು ₹630 ಲಕ್ಷ ಕೋಟಿ) ಮೌಲ್ಯದ ಅರ್ಥ ವ್ಯವಸ್ಥೆಯಾಗಿ ಬೆಳೆಯುವ ಹಾದಿಯಲ್ಲಿ ಭಾರತ ಸಾಗುತ್ತಿದೆ. ದೇಶದ ಅರ್ಥ ವ್ಯವಸ್ಥೆಯ ಬೆಳವಣಿಗೆಯಲ್ಲಿ ಜನಸಾಮಾನ್ಯರು ಹೂಡಿಕೆಗಳ ಮೂಲಕ ಭಾಗಿಯಾಗಬಹುದು ಎಂದು ಕೆನರಾ ರೊಬೆಕೊ ಆಸ್ತಿ ನಿರ್ವಹಣಾ ಕಂಪನಿಯ ವಲಯ ಮಾರಾಟ ಮುಖ್ಯಸ್ಥ ಸದಾನಂದ ಪ್ಯಾಟಿ ಹೇಳಿದರು.

ಕೆನರಾ ರೊಬೆಕೊ ಕಂಪನಿಯು 'ಪ್ರಜಾವಾಣಿ' ಸಹಯೋಗದಲ್ಲಿ, ಪತ್ರಿಕೆಯ ಕಚೇರಿಯಲ್ಲಿ ಸೋಮವಾರ ಆಯೋಜಿಸಿದ್ದ 'ಹೂಡಿಕೆದಾರರ ಶಿಕ್ಷಣ ಮತ್ತು ಜಾಗೃತಿ ಕಾರ್ಯಕ್ರಮ'ದಲ್ಲಿ ಅವರು ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸಿದ್ದರು.

'ನೀವು ಗಳಿಸಿದ ಹಣವು ನಿಮಗಾಗಿ ಇನ್ನಷ್ಟು ಗಳಿಸಿಕೊಡುವಂತೆ ಮಾಡುತ್ತಿದ್ದೀರಾ' ಎಂದು ಸಭಿಕರನ್ನು ಪ್ರಶ್ನಿಸಿದ ಪ್ಯಾಟಿ ಅವರು, 'ಹೂಡಿಕೆದಾರರ ಶಿಕ್ಷಣ ಅಂದರೆ, ಅವರ ಹಣವು ಅವರಿಗಾಗಿ ಇನ್ನಷ್ಟು ಗಳಿಸುವ ಬಗೆಯನ್ನು ತಿಳಿಸುವುದು' ಎಂದರು.

ಹೂಡಿಕೆಯ ಪ್ರಕ್ರಿಯೆಯಲ್ಲಿ ಶಿಸ್ತು ಇರಬೇಕು. ಹೂಡಿಕೆ ಮಾಡಿದ ಹಣಕ್ಕೆ ಪ್ರತಿಯಾಗಿ ಬಡ್ಡಿ, ಚಕ್ರಬಡ್ಡಿ ಸಿಗಬೇಕು ಎಂದಾದರೆ ದೀರ್ಘ ಅವಧಿಗೆ ಹಣ ತೊಡಗಿಸಬೇಕು ಎಂದು ಅವರು ಕಿವಿಮಾತು ಹೇಳಿದರು.

'ಆದರೆ, ಆರಂಭದಲ್ಲಿ ಹೂಡಿಕೆಯು ಬೋರಿಂಗ್ ಅನ್ನಿಸುತ್ತದೆ' ಎಂದೂ ಹೇಳಿದರು. ವ್ಯವಸ್ಥಿತ ಹೂಡಿಕೆ ಯೋಜನೆ (ಎಸ್‌ಐಪಿ), ವ್ಯವಸ್ಥಿತವಾಗಿ ಹಣ ಹಿಂಪಡೆಯುವಿಕೆ (ಎಸ್‌ಡಬ್ಲ್ಯುಪಿ) ಮತ್ತು ವ್ಯವಸ್ಥಿತ ವರ್ಗಾವಣೆ ಯೋಜನೆಯ (ಎಸ್‌ಟಿಪಿ) ಬಗ್ಗೆ ಅವರು ಮಾಹಿತಿ ನೀಡಿದರು.

ಈಕ್ವಿಟಿ, ಸಾಲಪತ್ರ, ಹೈಬ್ರಿಡ್ ಫಂಡ್‌ಗಳ ಬಗ್ಗೆ, ಇಟಿಎಫ್‌ಗಳ ಬಗ್ಗೆ ಅವರು ವಿವರ ಒದಗಿಸಿದರು. ಚಿನ್ನವನ್ನು ಖರೀದಿ ಮಾಡಲು ಇಟಿಎಫ್‌ಗಳ ಮೊರೆ ಹೋಗುವುದು ಬಹಳ ಸೂಕ್ತವಾದ ನಡೆ ಎಂದರು. ಹೂಡಿಕೆದಾರರು ತಾವು ಎಷ್ಟರಮಟ್ಟಿಗೆ ಸವಾಲು ತೆಗೆದುಕೊಳ್ಳಲು ಸಿದ್ಧ ಎಂಬುದನ್ನು ತೀರ್ಮಾನಿಸಿ ಯಾವ ಹೂಡಿಕೆ ತಮಗೆ ಸರಿಯಾಗುತ್ತದೆ ಎಂಬುದನ್ನು ನಿರ್ಧರಿಸಬೇಕು ಎಂದರು.

ಉಪನ್ಯಾಸದ ನಂತರದಲ್ಲಿ ಪ್ರಶ್ನೋತ್ತರಕ್ಕೆ ಸಮಯ ನಿಗದಿ ಮಾಡಲಾಗಿತ್ತು. ಸರಿಯಾದ ಮ್ಯೂಚುವಲ್ ಫಂಡ್ ಆಯ್ಕೆ ಮಾಡಿಕೊಳ್ಳುವುದು ಹೇಗೆ ಎಂಬ ಪ್ರಶ್ನೆಯು ಸಭಿಕರಿಂದ ಎದುರಾಯಿತು. 'ಅದಕ್ಕೆ ತಜ್ಞರಿಂದ ಸಲಹೆ ಪಡೆದು ಮುಂದಡಿ ಇರಿಸುವುದು ಸೂಕ್ತವಾಗುತ್ತದೆ' ಎಂದು ಪ್ಯಾಟಿ ಉತ್ತರಿಸಿದರು.

ಹಾಗೆಯೇ, ಈಕ್ವಿಟಿಗಳಲ್ಲಿ ಹೂಡಿಕೆ ಮಾಡುವವರು ಐದರಿಂದ ಏಳು ವರ್ಷಗಳ ಅವಧಿಗೆ ಹೂಡಿಕೆ ಮಾಡುವುದು ಸೂಕ್ತವಾಗುತ್ತದೆ ಎಂದು ಅವರು ಹೇಳಿದರು.

ಹೂಡಿಕೆದಾರರ ಶಿಕ್ಷಣ ಮತ್ತು ಜಾಗೃತಿ ಕಾರ್ಯಕ್ರಮದಲ್ಲಿ ಕೆನರಾ ರೊಬೆಕೊ ಆಸ್ತಿ ನಿರ್ವಹಣಾ ಕಂಪನಿಯ ವಲಯ ಮಾರಾಟ ಮುಖ್ಯಸ್ಥ ಸದಾನಂದ ಪ್ಯಾಟಿ ಮಾತನಾಡಿದರು ಪ್ರಜಾವಾಣಿ ಚಿತ್ರ

ಠಾಣೆಗಳಲ್ಲಿ ‘ಮಕ್ಕಳ ಸ್ನೇಹಿ ಕೊಠಡಿ’

ಮಕ್ಕಳ ಮೇಲಿನ ಅಪರಾಧಗಳ ಬಗ್ಗೆ ಜಾಗೃತಿ ಮೂಡಿಸಲು ಪೊಲೀಸರ ಕ್ರಮ

ಬ್ರ್ಯಾಂಡ್ ಬೆಂಗಳೂರು

• ಕೆ.ಎಸ್.ಸುನಿಲ್

ಬೆಂಗಳೂರು: ಪೊಲೀಸ್ ಠಾಣೆ ನೋಡಿದಾಗ ಮಕ್ಕಳಲ್ಲಿ ಭಯ, ಆತಂಕ ಸಾಮಾನ್ಯ. ಪೊಲೀಸರೊಂದಿಗೆ ಮಾತನಾಡಲು ಮಕ್ಕಳು ಹಿಂಜರಿಯುವುದೂ ಉಂಟು. ಇದನ್ನು ಹೋಗಲಾಡಿಸುವುದರ ಜತೆಗೆ ಮಕ್ಕಳ ಮೇಲಿನ ಅಪರಾಧಗಳ ಬಗ್ಗೆ ಸಾರ್ವಜನಿಕರಲ್ಲಿ ಜಾಗೃತಿ ಹಾಗೂ ಮಕ್ಕಳಲ್ಲಿ ಅರಿವು ಮೂಡಿಸುವ ಉದ್ದೇಶದಿಂದ ಪೊಲೀಸ್ ಠಾಣೆಗಳಲ್ಲಿ ‘ಮಕ್ಕಳ ಸ್ನೇಹಿ ಕೊಠಡಿ’ ನಿರ್ಮಿಸಲಾಗಿದೆ.

ಪಶ್ಚಿಮ ಉಪ ವಿಭಾಗದ ಗೋವಿಂದರಾಜನಗರ, ಮಾಗಡಿ ರಸ್ತೆ, ವಿಜಯನಗರ ಹಾಗೂ ಕಾಮಾಕ್ಷಿಪಾಳ್ಯ, ಬಸವೇಶ್ವರ ನಗರ ಪೊಲೀಸ್ ಠಾಣೆಗಳಲ್ಲಿ ‘ಮಕ್ಕಳ ಸ್ನೇಹಿ ಕೊಠಡಿ’ ತೆರೆಯಲಾಗಿದೆ.

ಸಾರ್ವಜನಿಕರು ಮಕ್ಕಳೊಂದಿಗೆ ಠಾಣೆಗೆ ಭೇಟಿ ನೀಡುವ ಸಂದರ್ಭದಲ್ಲಿ ಮಕ್ಕಳ ಗಮನವನ್ನು ಸೆಳೆಯುವ ವಾತಾವರಣ ಸೃಷ್ಟಿಸುವ ಉದ್ದೇಶವನ್ನು ಪೊಲೀಸರು ಹೊಂದಿದ್ದಾರೆ. ಇದರೊಂದಿಗೆ ಮಕ್ಕಳ ಮೇಲೆ ನಡೆಯುವ ಅಪರಾಧಗಳು, ಶೋಷಣೆಗಳ ಬಗ್ಗೆ ಜಾಗೃತಿ ಮೂಡಿಸುವ ಜತೆಗೆ ಮಕ್ಕಳ ಸ್ನೇಹಿ ವಾತಾವರಣವನ್ನು ನಿರ್ಮಾಣ ಮಾಡಲು ಸಹಾಯ ಮಾಡುತ್ತದೆ.

ಐದು ಪೊಲೀಸ್ ಠಾಣೆಗಳ ಪೊಲೀಸ್ ಸಬ್ ಇನ್‌ಸ್ಪೆಕ್ಟರ್‌ಗಳ ನೇತೃತ್ವದಲ್ಲಿ ಜಾಗೃತಿ ಕಾರ್ಯಕ್ರಮ ನಡೆಸಲಾಗುತ್ತಿದೆ.

ಠಾಣೆಗಳಲ್ಲಿ ತಲಾ ಒಂದು ಕೊಠಡಿಯನ್ನು ಗುರುತಿಸಿ, ಪ್ರಾಯೋಜಕರು ಮತ್ತು ಚಿತ್ರಕಲಾ ಪರಿಷತ್ ವಿದ್ಯಾರ್ಥಿಗಳ ಸಹಾಯದಿಂದ ಚಿತ್ರಗಳನ್ನು ಬಿಡಿಸಲಾಗಿದೆ. ಠಾಣೆಗಳಿಗೆ ತಮ್ಮ ಪೋಷಕರೊಂದಿಗೆ ಭೇಟಿ ನೀಡುವ ಮಕ್ಕಳಿಗೆ ಹೆಚ್ಚು ಸುರಕ್ಷಿತ ಮತ್ತು ಆರಾಮದಾಯಕ ಎನಿಸುವ ವ್ಯವಸ್ಥೆ ಕಲ್ಪಿಸಲು ಈ ಕೊಠಡಿಗಳನ್ನು ವಿನ್ಯಾಸಗೊಳಿಸಲಾಗಿದೆ. ಆಸನಗಳು, ಆಟಿಕೆಗಳು, ಶೈಕ್ಷಣಿಕ ವಿಚಾರ ಕುರಿತ ವ್ಯಂಗ್ಯಚಿತ್ರಗಳು, ಪುಸ್ತಕಗಳು ಮತ್ತು ಪತ್ರಿಕೆಗಳು ಇವೆ.

ಮಕ್ಕಳ ಹಕ್ಕುಗಳು, ಶಿಕ್ಷಣದ ಮಹತ್ವ, ಬಾಲ್ಯವಿವಾಹ, ಲೈಂಗಿಕ ಅಪರಾಧ ಸೇರಿದಂತೆ ಮಕ್ಕಳ ವಿರುದ್ಧದ ಅಪರಾಧಗಳ ಕುರಿತು ಜಾಗೃತಿ ಮೂಡಿಸುವುದು ಹಾಗೂ ಮಕ್ಕಳ ರಕ್ಷಣೆಯ ಬಗ್ಗೆ ಶಿಕ್ಷಣ ಒದಗಿಸುವುದು ಇದರ ಪ್ರಮುಖ ಉದ್ದೇಶವಾಗಿದೆ.

ಗೃಹ ಸಚಿವ ಜಿ.ಪರಮೇಶ್ವರ ಅವರ ಸೂಚನೆ ಮೇರೆಗೆ ಮೊದಲ ಹಂತದಲ್ಲಿ ಐದು ಠಾಣೆಗಳಲ್ಲಿ ‘ಮಕ್ಕಳ ಸ್ನೇಹಿ ಕೊಠಡಿ’ ನಿರ್ಮಿಸಲಾಗಿದ್ದು, ಹಂತ ಹಂತವಾಗಿ ಇನ್ನೂ ಕೆಲವು ಪೊಲೀಸ್ ಠಾಣೆಗಳಲ್ಲಿ ಈ ರೀತಿಯ ಕೊಠಡಿ ನಿರ್ಮಿಸಲಾಗುವುದು

ಸೀಮಾಂತ್ ಕುಮಾರ್ ಸಿಂಗ್
ನಗರ ಪೊಲೀಸ್ ಕಮಿಷನರ್

ಪೋಷಕರೊಂದಿಗೆ ಠಾಣೆಗಳಿಗೆ ಬರುವ ಮಕ್ಕಳು ಹಾಗೂ ಅವರ ಪೋಷಕರಿಗೂ ಮಹಿಳಾ ಪೊಲೀಸ್ ಸಿಬ್ಬಂದಿ ಮೂಲಕ ಅರಿವು ಮೂಡಿಸಲಾಗುತ್ತದೆ. ಅಲ್ಲದೇ ಪೋಕ್ಸೊ ಮತ್ತಿತರ ಸೂಕ್ಷ್ಮ ಪ್ರಕರಣಗಳಲ್ಲಿ ಮಕ್ಕಳಿಗೆ ಆಪ್ತ ಸಮಾಲೋಚನೆ ನಡೆಸುವುದಕ್ಕೂ ಇದನ್ನು ಬಳಸಿಕೊಳ್ಳಲಾಗುತ್ತದೆ.

‘ನಾನಾ ಸಂದರ್ಭದಲ್ಲಿ ಪೋಷಕರ ಜತೆ ಮಕ್ಕಳು ಠಾಣೆಗೆ ಬಂದು ಕುಳಿತುಕೊಳ್ಳುವುದನ್ನು ನೋಡುತ್ತಿದ್ದೇವೆ. ಕಳ್ಳರು, ಪೋಕ್ಸೊ ಹಾಗೂ ಕೊಲೆ ಆರೋಪಿಗಳು, ಲಾಕಪ್ ನೋಡಿ ಗಾಬರಿಗೊಳ್ಳುತ್ತಿದ್ದರು. ಹಿರಿಯ ಅಧಿಕಾರಿಗಳ ಜತೆ ಚರ್ಚಿಸಿ ಉತ್ತಮ ವಾತಾವರಣ ನಿರ್ಮಿಸಲು ಈ ಕ್ರಮ ಕೈಗೊಳ್ಳಲಾಗಿದೆ. ಮಕ್ಕಳಲ್ಲಿನ ಭಯ ಹೋಗಲಾಡಿಸುವ ದೃಷ್ಟಿಯಿಂದ ಠಾಣೆಯ ಒಂದು ಕೊಠಡಿಯಲ್ಲಿ ಆಟಿಕೆಗಳು, ಪಂಚತಂತ್ರ ಕತೆಗಳು, ಪೋಕ್ಸೊ ಕಾಯ್ದೆ ಕುರಿತು ಮಾಹಿತಿ ನೀಡುವ ಚಿತ್ರಗಳು, ಜೀತ ಪದ್ಧತಿ, ಕಾನೂನುಗಳ ಕುರಿತ ಫಲಕಗಳನ್ನು ಅಳವಡಿಸಿ, ಅರಿವು ಮೂಡಿಸಲಾಗುತ್ತಿದೆ’ ಎಂದು ಎಸಿಪಿ ಎನ್. ಚಂದನ್ ಕುಮಾರ್ ತಿಳಿಸಿದರು.

‘ಈ ಕೊಠಡಿಗಳು ಮಕ್ಕಳಿಗೆ ಸುರಕ್ಷಿತ ಮತ್ತು ಆರಾಮದಾಯಕ ಸ್ಥಳವನ್ನು ಒದಗಿಸುವುದು ಮಾತ್ರವಲ್ಲದೆ, ಮಕ್ಕಳ ಮೇಲಿನ ಅಪರಾಧಗಳ ಬಗ್ಗೆ ಜಾಗೃತಿ ಮೂಡಿಸಲಾಗುತ್ತದೆ. ಮಕ್ಕಳು ಹಾಗೂ ಅವರ ಪೋಷಕರಿಗೆ ಸುರಕ್ಷತೆ ಮತ್ತು ಅಪರಾಧ ತಡೆಗಟ್ಟುವಿಕೆಯ ಬಗ್ಗೆ ಶಿಕ್ಷಣ ನೀಡಲು ವಿನ್ಯಾಸಗೊಳಿಸಲಾಗಿದೆ. ಲೈಂಗಿಕ ಕಿರುಕುಳ ನೀಡಿದವರ ವಿರುದ್ಧ ದೂರು ನೀಡಿದರೆ ಗುರುತು ಬಹಿರಂಗ ಪಡಿಸುವುದಿಲ್ಲ ಎಂಬುದನ್ನು ಮನವರಿಕೆ ಮಾಡಲಾಗುತ್ತಿದೆ. ಸಾಮಾನ್ಯ ಕಾನೂನುಗಳು, ಗುಡ್ ಟಚ್-ಬ್ಯಾಡ್ ಟಚ್‌ನಂತಹ ವಿಷಯಗಳ ಕುರಿತು ಮಕ್ಕಳಿಗೆ ತಿಳಿಸಲು ಈ ಪ್ರಯತ್ನ ಮಾಡಲಾಗಿದೆ’ ಎಂದು ಹೇಳಿದರು.

ಈ ಕೊಠಡಿಗಳನ್ನು ಆರಂಭಿಸಿರುವುದಕ್ಕೆ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದ್ದು, ಮತ್ತಷ್ಟು ಠಾಣೆಗಳಲ್ಲಿ ಮಕ್ಕಳ ಸ್ನೇಹಿ ಕೊಠಡಿ ನಿರ್ಮಿಸಲು ಇಲಾಖೆ ಉದ್ದೇಶಿಸಲಾಗಿದೆ ಎಂದು ಮೂಲಗಳು ತಿಳಿಸಿವೆ.

ವಿಜಯನಗರ ಪೊಲೀಸ್ ಠಾಣೆಯಲ್ಲಿ ‘ಮಕ್ಕಳ ಸ್ನೇಹಿ ಕೊಠಡಿ’ಯಲ್ಲಿ ಪೊಲೀಸ್ ಸಿಬ್ಬಂದಿ ಮಕ್ಕಳೊಂದಿಗೆ ಕುಶಲೋಪರಿಯಲ್ಲಿ ತೊಡಗಿದ್ದರು –ಪ್ರಜಾವಾಣಿ ಚಿತ್ರ: ರಂಜು ಪಿ

‘ಮಕ್ಕಳಿಗೆ ಪೂರಕ ವಾತಾವರಣ ಕಲ್ಪಿಸಿ’

ಆದ್ಯತೆ ಮೇರೆಗೆ ಪ್ರತಿಯೊಂದು ಠಾಣೆಯಲ್ಲಿ ‘ಮಕ್ಕಳ ಸ್ನೇಹಿ ಕೊಠಡಿ’ ನಿರ್ಮಿಸುವ ಮೂಲಕ ಮಕ್ಕಳ ಪರ ವಾತಾವರಣ ಕಲ್ಪಿಸುವ ನಿಟ್ಟಿನಲ್ಲಿ ಗೃಹ ಇಲಾಖೆ ಗಮನ ಹರಿಸಬೇಕು ಎಂದು ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಅಧ್ಯಕ್ಷ ಶಶಿಧರ ಕೋಸಂಬೆ ಹೇಳಿದರು.

ಪ್ರತಿ ಠಾಣೆಯಲ್ಲೂ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಅಧ್ಯಕ್ಷ, ಜಿಲ್ಲಾ ನ್ಯಾಯಾಧೀಶ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ, ಮಕ್ಕಳ ವಿಶೇಷ ಪೊಲೀಸ್ ಘಟಕದ ಜಿಲ್ಲಾ ನೋಡಲ್ ಅಧಿಕಾರಿ, ಮಕ್ಕಳ ಕಲ್ಯಾಣ ಸಮಿತಿಯ ಅಧ್ಯಕ್ಷ, ಸದಸ್ಯ, ಬಾಲ ನ್ಯಾಯ ಮಂಡಳಿಯ ಅಧ್ಯಕ್ಷ, ಸದಸ್ಯರು, ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ಸೇರಿ ವಿವಿಧ ಇಲಾಖೆಗಳ ಜಿಲ್ಲಾ ಮಟ್ಟದ ಅಧಿಕಾರಿಗಳ ಮಾಹಿತಿ ಒಳಗೊಂಡ ಫಲಕ ಹಾಕಿರಬೇಕು ಎಂದು ತಿಳಿಸಿದರು.

ಮಕ್ಕಳ ಪ್ರಕರಣಕ್ಕೆ ಸಂಬಂಧಿಸಿದಂತೆ ಪ್ರತ್ಯೇಕ ನೋಂದಣಿ ಪುಸ್ತಕ, ಠಾಣಾ ವ್ಯಾಪ್ತಿಯ ಶಾಲಾ, ಕಾಲೇಜುಗಳಲ್ಲಿ ಪ್ರತಿ ಗುರುವಾರ ಜರುಗುವ ತೆರೆದ ಮನೆ ಕಾರ್ಯಕ್ರಮದ ನೋಂದಣಿ ಪುಸ್ತಕ ಹಾಗೂ 1 ಮತ್ತು 17 ಫಾರಂಗಳು ಲಭ್ಯವಿರಬೇಕು. ಮಕ್ಕಳ ಸಹಾಯವಾಣಿ 1098 ಹಾಗೂ ಪೊಲೀಸ್ ತುರ್ತು ಸಹಾಯವಾಣಿ ಮಾಹಿತಿಯನ್ನು ಫಲಕದಲ್ಲಿ ಕಡ್ಡಾಯವಾಗಿ ನಮೂದಿಸಬೇಕು ಎಂದು ಸಲಹೆ ನೀಡಿದ್ದಾರೆ.

ಟೆಕಿ ಸಾವು: ವಿದ್ಯಾರ್ಥಿ ವಿಚಾರಣೆ ತೀವ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಾಫ್ಟ್‌ವೇರ್ ಎಂಜಿನಿಯರ್ ಶರ್ಮಿಳಾ ಅವರ ಅನುಮಾನಸ್ಪದ ಸಾವಿನ ಪ್ರಕರಣ ಸಂಬಂಧ ವಿದ್ಯಾರ್ಥಿಯನ್ನು ಬಂಧಿಸಿರುವ ರಾಮಮೂರ್ತಿನಗರ ಠಾಣೆ ಪೊಲೀಸರು, ತನಿಖೆ ಚುರುಕುಗೊಳಿಸಿದ್ದಾರೆ.

ಪ್ರಕರಣ ಸಂಬಂಧ ನೆರೆ ಮನೆಯ ನಿವಾಸಿ ಕರ್ನಲ್ ಕುರೈನನ್ನು ಬಂಧಿಸಲಾಗಿದ್ದು, ಕೊಲೆ ಪ್ರಕರಣದ ಜೊತೆಗೆ ಲೈಂಗಿಕ ದೌರ್ಜನ್ಯ ಪ್ರಕರಣವನ್ನೂ ದಾಖಲಿಸಿದ್ದಾರೆ. ಆರೋಪಿಯನ್ನು ಪೊಲೀಸರು ತೀವ್ರ ವಿಚಾರಣೆಗೆ ಒಳಪಡಿಸಿದ್ದಾರೆ. ಆರೋಪಿ ಮತ್ತು ಮೃತಳ ಮೊಬೈಲ್‌ಗಳನ್ನು ವಶಪಡಿಸಿಕೊಂಡು, ಪರಿಶೀಲನೆ ನಡೆಸುತ್ತಿದ್ದಾರೆ.

‘ಶರ್ಮಿಳಾ ಎಷ್ಟು ವರ್ಷದಿಂದ ಪರಿಚಯ? ಮೊಬೈಲ್ ಸಂದೇಶಗಳ ವಿನಿಮಯ, ಕೃತ್ಯ ನಡೆದ ವೇಳೆ ಆರೋಪಿ ಮದ್ಯ ಸೇವಿಸಿರುವ ವಿಚಾರ ಸೇರಿ ಇತರೆ ಮಾಹಿತಿ ಕಲೆ ಹಾಕಲಾಗುತ್ತಿದೆ. ಅತ್ಯಾಚಾರ ನಡೆದಿದೆಯೇ ಎಂಬುದನ್ನು ಖಚಿತ ಪಡಿಸಿಕೊಳ್ಳಲು ವಿಧಿ ವಿಜ್ಞಾನ ಪ್ರಯೋಗಾಲಯದ ವರದಿಗೆ ಕಾಯುತ್ತಿದ್ದೇವೆ’ ಎಂದು ಪೊಲೀಸರು ತಿಳಿಸಿದರು.

‘ಕೃತ್ಯದ ಬಳಿಕ ಆರೋಪಿ ಕೆಲವು ಮೆಸೇಜ್‌ಗಳನ್ನು ಅಳಿಸಿ ಹಾಕಿರುವ ಸಾಧ್ಯತೆ ಇದೆ. ಹಾಗಾಗಿ ದತ್ತಾಂಶ ಮರು ಸಂಗ್ರಹಿಸಲು ಮೊಬೈಲ್‌ಗಳನ್ನು ವಿಧಿ ವಿಜ್ಞಾನ ಪ್ರಯೋಗಾಲಯಕ್ಕೆ (ಎಫ್‌ಎಸ್‌ಎಲ್) ಕಳುಹಿಸಲಾಗುವುದು’ ಎಂದು ತಿಳಿಸಿದರು.

ಮಂಗಳೂರಿನ ಕಾವೂರಿನ ಶರ್ಮಿಳಾ ಅವರು ಒಂದೂವರೆ ವರ್ಷದಿಂದ ಸುಬ್ರಹ್ಮಣ್ಯ ಲೇಔಟ್‌ನ ವಸತಿ ಸಮುಚ್ಚಯದ ಫ್ಲ್ಯಾಟ್‌ನಲ್ಲಿ ಸ್ನೇಹಿತೆ ಜತೆ ವಾಸವಾಗಿದ್ದರು. ರಜೆ ಇದ್ದ ಕಾರಣ ಸ್ನೇಹಿತೆ ಊರಿಗೆ ತೆರಳಿದ್ದರಿಂದ ಶರ್ಮಿಳಾ ಒಬ್ಬರೇ ಇದ್ದರು.

ಶರ್ಮಿಳಾ

ಆರೋಪಿ ಕರ್ನಲ್ ಕುರೈ ಜನವರಿ 3ರ ರಾತ್ರಿ 10.30ರ ಸುಮಾರಿಗೆ ಶರ್ಮಿಳಾ ಅವರ ಫ್ಲ್ಯಾಟ್ ಪ್ರವೇಶಿಸಿ, ಲೈಂಗಿಕವಾಗಿ ಸಹಕರಿಸುವಂತೆ ಪೀಡಿಸಿದ್ದ. ಅದಕ್ಕೆ ಪ್ರತಿರೋಧ ವ್ಯಕ್ತಪಡಿಸಿದಾಗ, ಆಕೆಯ ಬಾಯಿ ಮತ್ತು ಮೂಗನ್ನು ಗಟ್ಟಿಯಾಗಿ ಮುಚ್ಚಿದ್ದ. ಇದರಿಂದ ಶರ್ಮಿಳಾ ಮೂಗಿನಿಂದ ರಕ್ತ ಬಂದು, ಆಕೆಯ ಬಟ್ಟೆ ಮೇಲೆ ಚೆಲ್ಲಿತ್ತು. ಸಾಕ್ಷ್ಯ ನಾಶ ಮಾಡಲು ಬಟ್ಟೆಗೆ ಬೆಂಕಿ ಹಚ್ಚಿ ಆರೋಪಿ ಪರಾರಿಯಾಗಿದ್ದ ಎಂದು ಪೊಲೀಸರು ಹೇಳಿದ್ದಾರೆ.

‘ಮರಣೋತ್ತರ ಪರೀಕ್ಷೆ ವೇಳೆ ದೇಹದ ಮೇಲಿನ ಗಾಯ, ಹಲ್ಲೆ ಮಾಡಿರುವ ಗುರುತುಗಳು ಪತ್ತೆಯಾಗಿದ್ದವು. ಬೆಂಕಿಯಿಂದ ಯಾವುದೇ ತೊಂದರೆಯಾಗಿಲ್ಲ. ಹಲ್ಲೆ ನಡೆಸಿದಾಗ ಪ್ರಜ್ಞೆ ತಪ್ಪಿದ್ದ ಟೆಕಿ ಜೀವಂತವಾಗಿದ್ದರು ಎಂದು ವೈದ್ಯರು ಹೇಳಿದ್ದಾರೆ’ ಎಂದು ತಿಳಿಸಿದ್ದಾರೆ.

‘ಶರ್ಮಿಳಾ ಅವರ ಮೊಬೈಲ್ ಅನ್ನು ತನ್ನ ಬಳಿಯೇ ಇಟ್ಟುಕೊಂಡಿದ್ದ ಆರೋಪಿ, ಕೃತ್ಯ ನಡೆದ ಮೂರು ದಿನದ ಬಳಿಕ ಆ ಮೊಬೈಲ್‌ಗೆ ತನ್ನ ಸಿಮ್ ಹಾಕಿ ಆನ್ ಮಾಡಿದ್ದ. ಮೃತಳ ಫೋನ್ ಟ್ರ್ಯಾಕ್ ಮಾಡುತ್ತಿದ್ದ ಪೊಲೀಸರು, ಲೋಕೇಷನ್ ಆಧರಿಸಿ ಆತನನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದಾಗ ಕೃತ್ಯವೆಸಗಿರುವುದು ಗೊತ್ತಾಯಿತು’ ಎಂದು ಹೇಳಿದ್ದಾರೆ.

ಕೊಡಲಿಯಿಂದ ಕೊಚ್ಚಿ ಮಹಿಳೆ ಕೊಲೆ

ಪೀಣ್ಯ ದಾಸರಹಳ್ಳಿ: ಉತ್ತರ ತಾಲ್ಲೂಕಿನ ಕುದುರೆಗೆರೆ ಕಾಲೊನಿಯಲ್ಲಿ ಹಣಕಾಸಿನ ವಿಚಾರಕ್ಕೆ ನಡೆದ ಗಲಾಟೆಯಲ್ಲಿ ಮಹಿಳೆಯನ್ನು ಕೊಡಲಿ ಯಿಂದ ಕೊಚ್ಚಿ ಕೊಲೆ ಮಾಡಲಾಗಿದೆ.

ದಾಕ್ಷಾಯಿಣಿ (55) ಕೊಲೆಯಾದ ಮಹಿಳೆ. ಶಾಲೆಯಿಂದ ಮೊಮ್ಮಗನನ್ನು ಮನೆಗೆ ಕರೆದುಕೊಂಡು ಬರುವಾಗ ಹೊಂಚು ಹಾಕಿದ್ದ ಆರೋಪಿ, ಕೊಡಲಿ ಯಿಂದ ತಲೆಗೆ ಹೊಡೆದು ಪರಾರಿ ಆಗಿದ್ದಾನೆ ಎಂದು ಪೊಲೀಸರು ತಿಳಿಸಿದ್ದಾರೆ. ಸ್ಥಳೀಯರು ಸ್ಥಳಕ್ಕೆ ಭೇಟಿ ನೀಡುವ ಮುನ್ನ ಆರೋಪಿ ಬೈಕ್‌ನಲ್ಲಿ ಪರಾರಿ ಯಾಗಿದ್ದಾನೆ. ಸ್ಥಳಕ್ಕೆ ಭೇಟಿ ನೀಡಿದ ಮಾದನಾಯಕನಹಳ್ಳಿ ಠಾಣೆ ಪೊಲೀಸ್ ಇನ್‌ಸ್ಪೆಕ್ಟರ್ ಮುರಳೀಧರ್ ನೇತೃತ್ವದ ತಂಡ ಪರಿಶೀಲನೆ ನಡೆಸಿದೆ.

ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ವಿಜಯೇಂದ್ರಗೆ ವರದಿ ಸಲ್ಲಿಸಿದ ಸತ್ಯಶೋಧನಾ ತಂಡ

ಕೋಗಿಲು: ಎನ್‌ಐಎಗೆ ವಹಿಸಲು ಒತ್ತಾಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕೋಗಿಲು ಬಡಾವಣೆಯಲ್ಲಿ ತೆರವುಗೊಂಡಿರುವ ಅಕ್ರಮವಾಸಿಗಳ ಪೈಕಿ ಒಬ್ಬರೂ ಕೇರಳದವರಿಲ್ಲ. ಬಹುಪಾಲು ಜನ ಮುಸ್ಲಿಮರೇ ಆಗಿದ್ದು, ಕೇರಳದ ಚುನಾವಣೆಯಲ್ಲಿ ಮುಸ್ಲಿಂ ಮತ ಬ್ಯಾಂಕ್‌ನ ಓಲೈಕೆಗಾಗಿ ಅಲ್ಲಿನ ರಾಜಕಾರಣಿಗಳು ತೆರವು ಪ್ರಕರಣ ದುರುಪಯೋಗ ಮಾಡಿಕೊಂಡಿದ್ದಾರೆ’ ಎಂದು ಯಲಹಂಕ ಶಾಸಕ ಎಸ್.ಆರ್.ವಿಶ್ವನಾಥ್ ದೂರಿದರು.

ಅಕ್ರಮ ಮನೆಗಳ ತೆರವು ಪ್ರಕರಣದ ಕುರಿತು ಬಿಜೆಪಿ ವತಿಯಿಂದ ನಡೆಸಿದ್ದ ‘ಸತ್ಯಶೋಧನೆ’ಯ ವರದಿಯನ್ನು ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಅವರಿಗೆ ಸಲ್ಲಿಸಿದ ಬಳಿಕ ಸುದ್ದಿಗೋಷ್ಠಿಯಲ್ಲಿ ಅವರು ಮಾತನಾಡಿದರು.

ಶಾಸಕ ಎಸ್‌.ಆರ್‌.ವಿಶ್ವನಾಥ್ ನೇತೃತ್ವದ ಸತ್ಯಶೋಧನಾ ತಂಡ ಕೋಗಿಲು ಬಡಾವಣೆಯ ಅಕ್ರಮ ಮನೆಗಳ ತೆರವು ಕುರಿತ ವರದಿಯನ್ನು ಬಿಡುಗಡೆಗೊಳಿಸಿತು. ತಂಡದ ಸದಸ್ಯರಾದ ಎಸ್‌.ಹರೀಶ್, ಮಾಳವಿಕಾ ಅವಿನಾಶ್, ಎಸ್‌.ಮುನಿರಾಜು, ಎಚ್‌.ಸಿ.ತಮ್ಮೇಗೌಡ, ಭಾಸ್ಕರ್ ರಾವ್ ಇದ್ದರು.

‘ತೆರವುಗೊಂಡವರಲ್ಲಿ ರೋಹಿಂಗ್ಯಾ ಮತ್ತು ಬಾಂಗ್ಲಾದೇಶಿಯರೂ ಇರುವುದರಿಂದ ಇಡೀ ಪ್ರಕರಣವನ್ನು ಎನ್‌ಐಎ ತನಿಖೆಗೆ ವಹಿಸಬೇಕು’ ಎಂದೂ ಅವರು ಒತ್ತಾಯಿಸಿದರು.

‘ಕೇರಳದ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಮತ್ತು ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್ ಅವರು ಈ ವಿಷಯವಾಗಿ ಭಾರಿ ಕೂಗಾಡಿದ್ದರು. ಕೇರಳದ ಚುನಾವಣೆಗಾಗಿ ಅವರು ಇಷ್ಟೆಲ್ಲ ರಾದ್ಧಾಂತ ಮಾಡಿದ್ದಾರೆ. ಅಲ್ಲಿ ಕೇರಳದವರು ಇರಲಿ ಬಿಡಲಿ, ಅಲ್ಲಿನ ರಾಜಕಾರಣಕ್ಕಾಗಿ ನಮ್ಮ ರಾಜ್ಯವನ್ನು ಬಲಿ ಪಡೆಯುವ ಕೆಲಸ ಮಾಡಿದ್ದಾರೆ. ನಮಗೆ ಸಿಕ್ಕ ಪಟ್ಟಿಯಲ್ಲಿ ಅಲ್ಲಿಒಬ್ಬ ಕ್ರೈಸ್ತ ಧರ್ಮೀಯ ಹೊರತುಪಡಿಸಿ ಬಹುತೇಕ ಎಲ್ಲರೂ ಮುಸ್ಲಿಮರೇ ಇದ್ದಾರೆ. ಆದರೆ ಅವರಲ್ಲಿ ಬಹುಪಾಲು ಜನ ಕರ್ನಾಟಕದವರಲ್ಲ’ ಎಂದರು.

‘ಅವರ ಭಾಷೆ ಹಿಂದಿಯೂ ಅಲ್ಲ, ಉರ್ದುವೂ ಅಲ್ಲ. ಅದು ನಮಗೆ ಅರ್ಥವೂ ಆಗುವುದಿಲ್ಲ. ಬಾಂಗ್ಲಾ ಮತ್ತು ರೋಹಿಂಗ್ಯಾ ಭಾಷಿಕರನ್ನು ಗುರುತಿಸಲಾಗಿದೆ. ಮೊನ್ನೆ ಟಿ.ವಿ ಚಾನೆಲ್ ಒಂದರಲ್ಲಿ ಮಹಿಳೆಯೊಬ್ಬರು ಜೈ ಬಾಂಗ್ಲಾ ಎಂದು ಹೇಳಿದ್ದನ್ನು ಕೇಳಿದ್ದೇವೆ. ಅವರು ರಾಜಾರೋಷವಾಗಿ ಇದ್ದಾರೆ. ಸರ್ಕಾರ ಕಣ್ಣು ಮುಚ್ಚಿ ಕುಳಿತಿದೆ’ ಎಂದು ಹೇಳಿದರು.

‘ನಗರದಲ್ಲಿ 2 ಲಕ್ಷಕ್ಕೂ ಹೆಚ್ಚು ರೋಹಿಂಗ್ಯಾ ಮತ್ತು ಬಾಂಗ್ಲಾ ವಲಸಿಗರಿದ್ದಾರೆ ಎಂಬ ವರದಿಗಳಿವೆ. ಅವೆಲ್ಲವನ್ನೂ ಪರಿಶೀಲಿಸಿ, ಅಂಥವರನ್ನು ಬಂಧಿಸಬೇಕು. ಇಲ್ಲವೇ ಅವರ ದೇಶಕ್ಕೆ ವಾಪಸ್ ಕಳುಹಿಸಬೇಕು. ರಾಜಾ ಕಾಲುವೆ ಮೇಲೆ ಮನೆ ಕಟ್ಟಿದ್ದಾರೆ ಎಂದು ಒಡೆದು ಹಾಕಲಾಗಿದೆ. ಕಾಚರಕನ ಹಳ್ಳಿಯ ಕೆರೆಯಲ್ಲಿ ಮನೆ ಕಟ್ಟಿದರೆಂದು ಗುಡಿಸಿಲಿಗೆ ಬೆಂಕಿ ಹಾಕಿದ್ದರು. ಅವರಿಗೆ ಪರ್ಯಾಯ ವಸತಿ ಕೊಡುವ ವಿಚಾರ ಇರಲಿ, ಇನ್ನೂ ಪರಿಹಾರ ಕೊಟ್ಟಿಲ್ಲ’ ಎಂದು ಟೀಕಿಸಿದರು.

ಶಿಫಾರಸುಗಳು

- ನಗರದಲ್ಲಿ ಸಾವಿರಾರು ಜನ ಮನೆಗಳಿಗಾಗಿ ಅರ್ಜಿ ಹಾಕಿ ಕಾಯುತ್ತಿದ್ದಾರೆ. ಅಕ್ರಮ ವಲಸಿಗರಿಗೆ ಅಕ್ರಮವಾಗಿ ಮನೆ ಕೊಡುವುದಾಗಲೀ, ನಿಯಮಬಾಹಿರವಾಗಿ ಸಹಾಯಧನ ನೀಡುವುದಾಗಲೀ ಮಾಡಬಾರದು.
- ಕಲಬುರಗಿ ಮತ್ತಿತರ ಕಡೆಗಳಿಂದ ಬಂದು ಅಕ್ರಮವಾಗಿ ಗುಡಿಸಲು ಹಾಕಿಕೊಂಡ ಕಾರಣಕ್ಕೆ ತೆರವುಗೊಳಿಸಿ, ನಿರಾಶ್ರಿತರಾದ ಕನ್ನಡಿಗರಿಗೆ ಪರಿಹಾರವಾಗಿ ಮನೆ ಕೊಟ್ಟಿಲ್ಲ. ಆದರೆ, ಬೇರೆ ರಾಜ್ಯ ಮತ್ತು ಅನ್ಯ ದೇಶದವರಿಗೆ ಎಲ್ಲ ರೀತಿಯ ಸೌಲಭ್ಯ ಕೊಡುವುದನ್ನು ಒಪ್ಪುವುದಿಲ್ಲ. ಅವರನ್ನೆಲ್ಲ ಸಮಗ್ರ ಪರಿಶೀಲನೆಗೆ ಒಳಪಡಿಸಬೇಕು.
- ಮುಸ್ಲಿಮರಿಗೆ ಗುಡಿಸಲು ಕಟ್ಟಿಕೊಳ್ಳಲು ಅವಕಾಶ ಕೊಟ್ಟ ಸಚಿವ ಕೃಷ್ಣ ಬೈರೇಗೌಡ ಅವರ ಆಪ್ತ ವಸೀಂ ಅವರನ್ನು ಬಂಧಿಸಬೇಕು.
- ಬೆಂಗಳೂರಿನಲ್ಲಿ ಸರ್ಕಾರಿ ಜಾಗದಲ್ಲಿ ಹೊಸದಾಗಿ ಗುಡಿಸಲು ಹಾಕಿಕೊಂಡವರನ್ನು ಕೂಡಲೇ ತೆರವುಗೊಳಿಸಬೇಕು.

‘ಕರ್ನಾಟಕವನ್ನು ಕೇರಳ ಆಳುತ್ತಿದೆಯೇ’

‘ರಾಜ್ಯದಲ್ಲಿ 36 ಲಕ್ಷ ಜನ ಲಕ್ಷಾಂತರ ರೂಪಾಯಿ ಪಾವತಿ ಮಾಡಿ ಮನೆ ಪಡೆಯಲು ಕಾದು ಕುಳಿತಿದ್ದಾರೆ. ಕೇರಳದಲ್ಲಿ ಕೋಗಿಲೆ ಕೂಗಿದೆ ಎಂದಾಕ್ಷಣ, ರಾಜ್ಯದ ಕಾಗೆಗಳು ಬಾಯಿ ಮುಚ್ಚಿಕೊಂಡಿವೆ’ ಎಂದು ವಿರೋಧ ಪಕ್ಷದ ನಾಯಕ ಆರ್.ಅಶೋಕ ಅವರು ಕಾಂಗ್ರೆಸ್ ನಾಯಕರನ್ನು ಲೇವಡಿ ಮಾಡಿದರು.

‘ಕೇರಳ ಸರ್ಕಾರ ಕರ್ನಾಟಕವನ್ನು ಆಳುತ್ತಿದೆಯೇ? ವೇಣುಗೋಪಾಲ್ ಹಾಗೂ ಅಲ್ಲಿನ ಮುಖ್ಯಮಂತ್ರಿಯ ಮಾತನ್ನು ಇಲ್ಲಿ ಸಿದ್ದರಾಮಯ್ಯ ಕೇಳುತ್ತಿದ್ದಾರಾ? ಇಲ್ಲಿನ ಸರ್ಕಾರ ಕೇರಳದ ಕೈಗೊಂಬೆಯಾಗಬಾರದು. ಕಾಸರಗೋಡಿನ ಕನ್ನಡಿಗರ ಮೇಲೆ ಕೇರಳ ಸರ್ಕಾರ ದೌರ್ಜನ್ಯ ಮಾಡುತ್ತಿದ್ದರೂ ಒಂದು ಪತ್ರ ಬರೆದು ತಣ್ಣಗೆ ಕುಳಿತಿದ್ದಾರೆ’ ಎಂದು ಟೀಕಿಸಿದರು.

‘ಮೈಬಣ್ಣ’ದ ಅವಹೇಳನವೇ ಆತ್ಮಹತ್ಯೆಗೆ ಕಾರಣ’

ಪ್ರಜಾವಾಣಿ ವಾರ್ತೆ

ಬೊಮ್ಮನಹಳ್ಳಿ: ‘ಮೈಬಣ್ಣ ಕುರಿತು ಶಿಕ್ಷಕರೊಬ್ಬರು ಅವಹೇಳನ ಮಾಡಿದ್ದರಿಂದಲೇ ಮನನೊಂದು ದಂತ ವೈದ್ಯಕೀಯ ವಿದ್ಯಾರ್ಥಿನಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ’ ಎಂದು ಆರೋಪಿಸಿ ಪೋಷಕರು ಮತ್ತು ಕಾಲೇಜಿನ ವಿದ್ಯಾರ್ಥಿಗಳು ಸೋಮವಾರ ಕಾಲೇಜಿನ ಎದುರು ಪ್ರತಿಭಟನೆ ನಡೆಸಿದರು.

ಬೊಮ್ಮನಹಳ್ಳಿಯ ಆಕ್ಸ್‌ಫರ್ಡ್ ದಂತ ವೈದ್ಯಕೀಯ ಕಾಲೇಜಿನಲ್ಲಿ ಮೂರನೇ ವರ್ಷದ ದಂತ ವೈದ್ಯಕೀಯ ವ್ಯಾಸಂಗ ಮಾಡುತ್ತಿದ್ದ ಚಂದಾಪುರದ ಯಶಸ್ವಿನಿ ಅವರು ಜ.8ರಂದು ಆತ್ಮಹತ್ಯೆ ಮಾಡಿಕೊಂಡಿದ್ದರು.

‘ಮಗಳ ಆತ್ಮಹತ್ಯೆಗೆ ಕಾರಣ ತಿಳಿದಿರಲಿಲ್ಲ, ವಿದ್ಯಾರ್ಥಿಗಳು ಈ ಬಗ್ಗೆ ನಮ್ಮ ಗಮನಕ್ಕೆ ತಂದಾಗಲೇ ಕಾರಣ ತಿಳಿಯಿತು. ಹಲವು ಬಾರಿ ಕಾಲೇಜಿನಲ್ಲಿ ಕಿರುಕುಳ ಕೊಡುತ್ತಿದ್ದಾರೆಂದು ಹೇಳುತ್ತಿದ್ದಳು. ಇದೆಲ್ಲ ಸಹಜ ಎಂದು ಭಾವಿಸಿ, ಗಂಭೀರವಾಗಿ ಪರಿಗಣಿಸಿರಲಿಲ್ಲ. ಅದರ ಪರಿಣಾಮ ಮಗಳನ್ನೇ ಕಳೆದುಕೊಂಡಿದ್ದೇವೆ. ಇಂತಹ ಸ್ಥಿತಿ ಯಾವ ಮಕ್ಕಳಿಗೂ ಬರಬಾರದು’ ಎಂದು ಕಾಲೇಜಿನ ಶಿಕ್ಷಕರ ವಿರುದ್ಧ ಮೃತ ವಿದ್ಯಾರ್ಥಿನಿಯ ತಾಯಿ ಪರಿಮಳಾ ಆಕ್ರೋಶ ವ್ಯಕ್ತಪಡಿಸಿದರು.

ಕಾಲೇಜು ಆವರಣದಲ್ಲಿ ಪ್ರತಿಭಟನೆ ನಡೆಸಿದ ವಿದ್ಯಾರ್ಥಿಗಳು ಮತ್ತು ಮೃತ ವಿದ್ಯಾರ್ಥಿನಿಯ ಪೋಷಕರು

‘ಶಿಕ್ಷಕರೊಬ್ಬರು ಯಶಸ್ವಿನಿಯ ಮೈಬಣ್ಣ ಕುರಿತು ತೇಜೋವಧೆ ಮಾಡಿದ್ದರಿಂದಲೇ ಮನನೊಂದು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ರೇಡಿಯಾಲಜಿ ವಿಭಾಗದ ಶಿಕ್ಷಕರು ಮತ್ತು ಪ್ರಾಂಶುಪಾಲರು ವಿದ್ಯಾರ್ಥಿಗಳಿಗೆ ನಿತ್ಯವೂ ಕಿರುಕುಳ ನೀಡುತ್ತಿದ್ದಾರೆ, ಇದನ್ನು ಪ್ರಶ್ನಿಸಲಾಗದೇ ಸಹಿಸಿಕೊಂಡಿದ್ದೇವೆ’ ಎಂದು ಮೃತ ವಿದ್ಯಾರ್ಥಿನಿಯ ಸಹಪಾಠಿ ಈಶ್ವರ್ ಹೇಳಿದರು.

ಅಧ್ಯಕ್ಷರಿಂದ ಬೆದರಿಕೆ ಆರೋಪ: ಮೃತಳಿಗೆ ನ್ಯಾಯ ಸಿಗಬೇಕೆಂದು ಒತ್ತಾಯಿಸಿ ವಿದ್ಯಾರ್ಥಿಗಳು ಪ್ರತಿಭಟನೆಗೆ ಮುಂದಾದಾಗ ಆಕ್ಸ್‌ಫರ್ಡ್ ಶಿಕ್ಷಣ ಸಂಸ್ಥೆಯ ಅಧ್ಯಕ್ಷರು, ಪ್ರತಿಭಟನಾ ನಿರತ ವಿದ್ಯಾರ್ಥಿಗಳಿಗೆ ಬೆದರಿಕೆ ಒಡ್ಡಿದ್ದಾರೆ ಎಂದು ಆರೋಪಿಸಿದ ವಿದ್ಯಾರ್ಥಿಗಳು, ಕ್ಷಮೆಯಾಚಿಸಬೇಕೆಂದು ಒತ್ತಾಯಿಸಿದ್ದಾರೆ.

ಆರು ಅಧ್ಯಾಪಕರ ಅಮಾನತು

ಪೋಷಕರು ಮತ್ತು ವಿದ್ಯಾರ್ಥಿಗಳ ಪ್ರತಿಭಟನೆಗೆ ಮಣಿದ ಆಕ್ಸ್‌ಫರ್ಡ್ ಶಿಕ್ಷಣ ಸಂಸ್ಥೆ ಆಡಳಿತ ಮಂಡಳಿಯು ಘಟನೆಗೆ ಕಾರಣರು ಎನ್ನಲಾದ ಉಪನ್ಯಾಸಕರಾದ ಡಾ.ಅನ್‌ಮೋಲ್ ರಾಜ್ದನ್, ಡಾ.ಸಬಾನಾ ಬಾನು, ಡಾ.ಫೈಕಾ ಕೋಲ್ಕರ್, ಡಾ.ಸಿಂಧು, ಡಾ.ಅಲ್ಪಾ ದಿನೇಶ್ ಮತ್ತು ಡಾ.ಸುಸ್ಮಿನಿ ಹೆಗ್ಡೆ ಅವರನ್ನು ಅಮಾನತುಗೊಳಿಸಿದೆ ಎಂದು ಉಪ ಪ್ರಾಂಶುಪಾಲ ಡಾ.ರಮೇಶ್ ಹೇಳಿದರು. ಪ್ರಾಂಶುಪಾಲರನ್ನೂ ಅಮಾನತು ಮಾಡಬೇಕು ಎಂದು ವಿದ್ಯಾರ್ಥಿಗಳು ಒತ್ತಾಯಿಸಿದರು.

‘ಮೃತ ವಿದ್ಯಾರ್ಥಿನಿಯ ಕಾಲೇಜು ಶುಲ್ಕ ಮರು ಪಾವತಿಸಬೇಕು. ₹1 ಕೋಟಿ ಪರಿಹಾರ ನೀಡಬೇಕು’ ಎಂದು ಎಸ್‌ಎಫ್‌ಐ ರಾಜ್ಯ ಉಪಾಧ್ಯಕ್ಷ ದೊಡ್ಡ ಬಸವರಾಜು ಒತ್ತಾಯಿಸಿದರು.

ಇಬ್ಬರು ಬಾಂಗ್ಲಾದೇಶಿ ಪ್ರಜೆಗಳ ಬಂಧನ

ಬೆಂಗಳೂರು: ನಗರದಲ್ಲಿ ಅಕ್ರಮವಾಗಿ ವಾಸವಾಗಿದ್ದ ಇಬ್ಬರು ಬಾಂಗ್ಲಾದೇಶದ ಪ್ರಜೆಗಳನ್ನು ಹೆಬ್ಬಗೋಡಿ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಜಹಿದುಲ್ ಇಸ್ಲಾಂ(35) ಮತ್ತು ಫೈರೋಜ್ (32) ಬಂಧಿತರು. ಆರೋಪಿಗಳು ಎರಡು ವರ್ಷಗಳಿಂದ ಹೆಬ್ಬಗೋಡಿ ಭಾಗದಲ್ಲಿ ವಾಸವಾಗಿ ದ್ದರು. ಪಶ್ಚಿಮ ಬಂಗಾಳ ಮೂಲಕ ಭಾರತ ಪ್ರವೇಶಿಸಿದ ಆರೋಪಿಗಳು, ನಗರದಲ್ಲಿ ವಾಸವಾಗಿದ್ದಾರೆ. ನಿರ್ಮಾಣ ಹಂತದ ಕಟ್ಟಡದಲ್ಲಿ ಕೂಲಿ ಕೆಲಸ ಮಾಡಿಕೊಂಡಿದ್ದರು. ಕೆಲಸವಿಲ್ಲದ ವೇಳೆ ನಗರದಲ್ಲಿ ಪ್ಲಾಸ್ಟಿಕ್ ವಸ್ತುಗಳ ಮಾರಾಟ ಮಾಡಿಕೊಂಡು ಜೀವನ ನಡೆಸುತ್ತಿದ್ದರು ಎಂದು ಪೊಲೀಸರು ತಿಳಿಸಿದ್ದಾರೆ.

6 ಎಫ್‌ಐಆರ್: ಹೆಬ್ಬಗೋಡಿ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಅಕ್ರಮವಾಗಿ ಬಾಂಗ್ಲಾದೇಶ ಪ್ರಜೆಗಳು ವಾಸಿಸುತ್ತಿದ್ದು, ಮಾದಕ ವಸ್ತು ಮಾರಾಟ ದಂಧೆಯಲ್ಲಿ ತೊಡಗಿರುವ ಆರೋಪದಡಿ ವಾರದಲ್ಲಿ ಆರು ಎಫ್‌ಐಆರ್ ದಾಖಲಾಗಿವೆ. ಸುಮಾರು 15ಕ್ಕೂ ಹೆಚ್ಚು ಅಕ್ರಮ ವಾಸಿಗಳು ಇರುವುದನ್ನು ಶಂಕೆ ವ್ಯಕ್ತಪಡಿಸಿರುವ ತನಿಖಾಧಿಕಾರಿಗಳು ತನಿಖೆ ಕೈಗೊಂಡಿದ್ದಾರೆ.

ಅಪರಾಧ ಸುದ್ದಿ

ಪ್ರಶ್ನೆಪತ್ರಿಕೆ ಸೋರಿಕೆ ಕ್ರಮಕ್ಕೆ ಆಗ್ರಹ

ಶಶಿಧರ್ ಎಸ್. ಕೋಸಂಬೆ

ಬೆಂಗಳೂರು: ‘ಎಸ್‌ಎಸ್‌ಎಲ್‌ಸಿ ಪೂರ್ವಭಾವಿ ಪರೀಕ್ಷೆಗೂ ಮುನ್ನ ಸಾಮಾಜಿಕ ಜಾಲತಾಣಗಳಲ್ಲಿ ಪ್ರಶ್ನೆ ಪತ್ರಿಕೆಗಳನ್ನು ಹರಿಬಿಟ್ಟು, ₹30ಕ್ಕೆ ಮಾರಾಟ ಮಾಡುತ್ತಿರುವ ಆರೋಪಿಗಳ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಬೇಕು’ ಎಂದು ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಅಧ್ಯಕ್ಷ ಶಶಿಧರ್ ಎಸ್. ಕೋಸಂಬೆ ಸೂಚಿಸಿದ್ದಾರೆ.

ಈ ಬಗ್ಗೆ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಳಿ ಅಧ್ಯಕ್ಷರಿಗೆ ಪತ್ರ ಬರೆದಿರುವ ಅವರು, ‘ಎಸ್‌ಎಸ್‌ಎಲ್‌ಸಿ ಪರೀಕ್ಷೆಯು ವಿದ್ಯಾರ್ಥಿಗಳ ಜೀವನದ ಪ್ರಮುಖ ಘಟ್ಟವಾಗಿದೆ. ಇಂಥ ಸಂದರ್ಭದಲ್ಲಿ ಸಾಮಾಜಿಕ ಜಾಲತಾಣಗಳಲ್ಲಿ ಪ್ರಶ್ನೆ ಪತ್ರಿಕೆಗಳನ್ನು ಹರಿಬಿಟ್ಟಿರುವುದು ವಿದ್ಯಾರ್ಥಿಗಳ ಮಾನಸಿಕ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರಲಿದೆ. ಇದರಿಂದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಶೈಕ್ಷಣಿಕವಾಗಿ ಹಿನ್ನಡೆ ಆಗುವ ಸಾಧ್ಯತೆ ಇದೆ’ ಎಂದು ಉಲ್ಲೇಖಿಸಿದ್ದಾರೆ.

‘ಈ ಬಗ್ಗೆ ಆಯೋಗವು ಸ್ವಯಂ ಪ್ರೇರಿತ ದೂರು ದಾಖಲಿಸಿಕೊಂಡಿದೆ. ಮುಂದೆ ಇಂತಹ ಅವಘಡಗಳು ಸಂಭವಿಸದಂತೆ ಮಂಡಳಿಯು ಮುಂಜಾಗ್ರತೆ ವಹಿಸಬೇಕು. ಇದರ ಜೊತೆಗೆ ಈ ಘಟನೆಗೆ ಸಂಬಂಧಿಸಿದ ವರದಿಯನ್ನು ಆಯೋಗಕ್ಕೆ ನೀಡಬೇಕು’ ಎಂದು ಪತ್ರದಲ್ಲಿ ತಿಳಿಸಿದ್ದಾರೆ.

ವಾಹನ ಡಿಕ್ಕಿ: ಬೈಕ್ ಸವಾರ ಸಾವು

ಬೆಂಗಳೂರು: ವೇಗವಾಗಿ ಬಂದ ವಾಹನವೊಂದು ದ್ವಿಚಕ್ರ ವಾಹನಕ್ಕೆ ಡಿಕ್ಕಿ ಹೊಡೆದು, ಸವಾರ ಮೃತಪಟ್ಟಿರುವ ಘಟನೆ ಮೈಕೊ ಲೇಔಟ್ ಸಂಚಾರಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆದಿದೆ.

ಚನ್ನಪಟ್ಟಣದ ಪ್ರಮೋದ್ (29) ಮೃತ ಬೈಕ್ ಸವಾರ. ಇವರು ವೃತ್ತಿಯಲ್ಲಿ ನಂದಿನಿ ಹಾಲು ಸರಬರಾಜು ಮಾಡುವ ಕ್ಯಾಂಟರ್ ವಾಹನದ ಚಾಲಕ. ಸಹೋದರನೊಂದಿಗೆ ಕೆಂಗೇರಿಯಲ್ಲಿ ನೆಲಸಿದ್ದ ಪ್ರಮೋದ್, ಬೆಳಿಗ್ಗೆ 6.45ರ ಸುಮಾರಿಗೆ ಹಾಲು ಸರಬರಾಜಿನ ಕ್ಯಾಂಟರ್ ವಾಹನ ತರಲು ದ್ವಿಚಕ್ರ ವಾಹನದಲ್ಲಿ ಡೇರಿ ಬಳಿ ಹೋಗುತ್ತಿದ್ದರು. ಕ್ರೈಸ್ಟ್ ಕಾಲೇಜು–ಡೇರಿ ಸರ್ಕಲ್ ಸಮೀಪದ ಸರ್ವೀಸ್ ರಸ್ತೆಯಲ್ಲಿ ಅಪರಿಚಿತ ವಾಹನ ಡಿಕ್ಕಿ ಹೊಡೆದಿದೆ. ತೀವ್ರವಾಗಿ ಗಾಯಗೊಂಡು ಸ್ಥಳದಲ್ಲಿಯೇ ಅಸುನೀಗಿದರು.

ಅಪಘಾತದ ಬಳಿಕ ವಾಹನ ನಿಲ್ಲಿಸದೆ ಚಾಲಕ ಪರಾರಿಯಾಗಿದ್ದಾನೆ. ಸ್ಥಳಕ್ಕೆ ಮೈಕೊ ಲೇಔಟ್ ಸಂಚಾರ ಠಾಣೆ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿ, ಪ್ರಕರಣ ದಾಖಲಿಸಿಕೊಂಡರು. ಪರಾರಿಯಾಗಿರುವ ಚಾಲಕನ ಪತ್ತೆಗೆ ಶೋಧ ಮುಂದುವರಿಸಿದ್ದಾರೆ.

ಎಸ್‌ಸಿಎಸ್‌ಪಿ, ಟಿಎಸ್‌ಪಿ: ಅಂಬೇಡ್ಕರ್ ಸ್ವಾಭಿಮಾನಿ ಸೇನೆ ಪ್ರತಿಭಟನೆ

‘ಯೋಜನೆಗಳ ಅನುದಾನ ದುರ್ಬಳಕೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಎಸ್‌ಸಿಎಸ್‌ಪಿ ಹಾಗೂ ಟಿಎಸ್‌ಪಿ ಅನುದಾನವನ್ನು ನಿಗದಿತ ಯೋಜನೆಗಳಿಗೆ ಬಳಸಬೇಕು. ಅನುದಾನ ದುರುಪಯೋಗಪಡಿಸಿಕೊಳ್ಳುವ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಬೇಕು’ ಎಂದು ಆಗ್ರಹಿಸಿ ಅಂಬೇಡ್ಕರ್ ಸ್ವಾಭಿಮಾನಿ ಸೇನೆಯಿಂದ ಸ್ವಾತಂತ್ರ್ಯ ಉದ್ಯಾನದಲ್ಲಿ ಸೋಮವಾರ ಪ್ರತಿಭಟನೆ ನಡೆಸಲಾಯಿತು.

‘ಪರಿಶಿಷ್ಟ ಜಾತಿ ಹಾಗೂ ಪಂಗಡದವರ ಅಭಿವೃದ್ಧಿಗೆಂದೇ ರೂಪಿಸಿರುವ ಯೋಜನೆ ಅನುದಾನವನ್ನು ಅದೇ ಸಮುದಾಯದವರ ಅಭಿವೃದ್ಧಿಗೆ ಬಳಸಬೇಕು. ಸರ್ಕಾರದ ಗ್ಯಾರಂಟಿ ಯೋಜನೆಗಳಿಗೆ ಈ ಅನುದಾನ ಬಳಕೆ ಮಾಡಬಾರದು. ದುರ್ಬಳಕೆಗೆ ಕಾರಣವಾಗುತ್ತಿರುವ ಸೆಕ್ಷನ್ ಅನ್ನು ರದ್ದುಪಡಿಸಬೇಕು’ ಎಂದು ಪ್ರತಿಭಟನೆಯ ನೇತೃತ್ವ ವಹಿಸಿದ್ದ ಅಂಬೇಡ್ಕರ್ ಸೇನೆಯ ಅಧ್ಯಕ್ಷ ಆರ್.ಕೋದಂಡರಾಮ್ ಒತ್ತಾಯಿಸಿದರು.

‘ಸಮಾಜ ಕಲ್ಯಾಣ ಇಲಾಖೆಯ ಕ್ರೈಸ್ ಅಡಿಯ ವಸತಿ ಶಾಲೆಗಳನ್ನು ಕಾಲೇಜುಗಳಾಗಿ ಮೇಲ್ದರ್ಜೆಗೇರಿಸಬೇಕು. ಈ ಶಾಲೆಗಳಲ್ಲಿನ ಅಕ್ರಮಗಳ ಕುರಿತು ತನಿಖೆಯಾಗಬೇಕು. ಕರ್ನಾಟಕದಲ್ಲಿ ದಲಿತರು ಮುಖ್ಯಮಂತ್ರಿಯಾಗಲು ಅವಕಾಶ ಮಾಡಿಕೊಡಬೇಕು’ ಎಂದು ಆಗ್ರಹಿಸಿದರು.

‘ಅಂಬೇಡ್ಕರ್ ಅವರು ರಾಜ್ಯದಲ್ಲಿ ಭೇಟಿ ನೀಡಿದ ಸ್ಥಳಗಳಲ್ಲಿ ಸ್ಮಾರಕ ನಿರ್ಮಾಣಕ್ಕೆ ₹10 ಕೋಟಿ ಹೆಚ್ಚುವರಿ ಅನುದಾನ ನೀಡಬೇಕು. ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣದ ಬಳಿ ಅತಿ ಎತ್ತರದ ಅಂಬೇಡ್ಕರ್ ಪ್ರತಿಮೆ ನಿರ್ಮಿಸಬೇಕು’ ಎಂದು ಒತ್ತಾಯಿಸಿದರು.

ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರಿಗೆ ಮನವಿ ಪತ್ರ ಸಲ್ಲಿಸಲಾಯಿತು. ಸೇನೆಯ ಎಂ.ಆನಂದಕುಮಾರ್, ಜೆ.ಈ.ಮಂಜುನಾಥ್, ಎಂ.ಕೆ.ಕಾಂತರಾಜ್, ಕಾರ್ಯದರ್ಶಿ ಶರಣು ಎಸ್. ಜಮಖಂಡಿ, ಕಾಶೀನಾಥ್ ನಾಟೇಕರ್, ರಾಜೇಂದ್ರ ಬಾಬು, ಬೆಂಗಳೂರು ನಗರ ಅಧ್ಯಕ್ಷ ಆರ್. ಅನಿಲ್‌ಕುಮಾರ್ ಮತ್ತಿತರರು ಉಪಸ್ಥಿತರಿದ್ದರು.

ಎಸ್‌ಸಿಎಸ್‌ಪಿ ಹಾಗೂ ಟಿಎಸ್‌ಪಿ ಅನುದಾನ ದುರುಪಯೋಗ ತಡೆಯುವಂತೆ ಆಗ್ರಹಿಸಿ ಅಂಬೇಡ್ಕರ್ ಸ್ವಾಭಿಮಾನಿ ಸೇನೆಯಿಂದ ಪ್ರತಿಭಟನೆ ನಡೆಸಲಾಯಿತು ಪ್ರಜಾವಾಣಿ ಚಿತ್ರ.

ಜೈಲಿಗೆ ಮೊಬೈಲ್ ಕೊಂಡೊಯ್ದು ಸಿಕ್ಕಿಬಿದ್ದ ತಾಯಿ

ಬೆಂಗಳೂರು: ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಲ್ಲಿರುವ ಮಗನ ಭೇಟಿಗೆ ಬಂದಿದ್ದ ತಾಯಿಯ ಬಳಿ ಮೊಬೈಲ್ ಪತ್ತೆಯಾಗಿದ್ದು, ಈ ಸಂಬಂಧ ಮಹಿಳೆ ವಿರುದ್ಧ ಪರಪ್ಪನ ಅಗ್ರಹಾರ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

ವಿಚಾರಣಾಧೀನ ಕೈದಿ ಭರತ್‌ನನ್ನು ನೋಡಲು ತಾಯಿ ಲಕ್ಷ್ಮೀ ನರಸಮ್ಮ ಪರಪ್ಪನ ಅಗ್ರಹಾರ ಜೈಲಿಗೆ ಬಂದಿದ್ದರು. ತಪಾಸಣೆ ವೇಳೆ ಒಳ ಉಡುಪಿನಲ್ಲಿ ಮೊಬೈಲ್ ಪತ್ತೆಯಾಗಿದೆ.

‘ಜ. 2ರಂದು ಮಗನ ಭೇಟಿಗೆ ಬಂದ ವೇಳೆ ತಪಾಸಣೆ ನಡೆಸಿದಾಗ, ಮೊಬೈಲ್ ಪತ್ತೆ ಆಗಿದೆ. ಲಕ್ಷ್ಮೀ ನರಸಮ್ಮ, ಭರತ್ ವಿರುದ್ಧ ಕ್ರಮ ಜರುಗಿಸಬೇಕು’ ಎಂದು ಕೇಂದ್ರ ಕಾರಾಗೃಹದ ಪ್ರಭಾರ ಅಧೀಕ್ಷಕ ಎಚ್.ಎ. ಪರಮೇಶ್ ನೀಡಿರುವ ದೂರನ್ನು ಆಧರಿಸಿ ಎಫ್‌ಐಆರ್‌ನಲ್ಲಿ ಉಲ್ಲೇಖಿಸಲಾಗಿದೆ.

ನಗರದಲ್ಲಿ ಇಂದು

‘ಸಮಾಜಶಾಸ್ತ್ರೀಯ ವಿಧಾನಗಳು ಮತ್ತು ಕೌಶಲ ಅಭಿವೃದ್ಧಿ’ ಕುರಿತು ಕಾರ್ಯಾಗಾರ: ಅಧ್ಯಕ್ಷತೆ: ಬಿ. ರಮೇಶ್, ಆಯೋಜನೆ ಮತ್ತು ಸ್ಥಳ: ಡಾ. ಮನಮೋಹನ್‌ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾಲಯ, ಬೆಳಿಗ್ಗೆ 10.30

ಪ್ರಶಸ್ತಿ ಮತ್ತು ಫೆಲೋಶಿಪ್ ಪ್ರದಾನ: ಉದ್ಘಾಟನೆ: ಎನ್.ಎಸ್. ಬೋಸರಾಜು, ಅತಿಥಿಗಳು: ಎನ್. ಮಂಜುಳಾ, ಬಿ. ಸದಾಶಿವ ಪ್ರಭು, ಅಧ್ಯಕ್ಷತೆ: ಎ.ಎಚ್. ರಾಜಾಸಾಬ್, ಆಯೋಜನೆ: ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿ, ಸ್ಥಳ: ಪ್ರೊ.ಯು.ಆರ್. ರಾವ್ ವಿಜ್ಞಾನ ಭವನ, ಮೇಜರ್ ಸಂದೀಪ್ ಉನ್ನಿಕೃಷ್ಣನ್ ರಸ್ತೆ, ವಿದ್ಯಾರಣ್ಯಪುರ ಪೋಸ್ಟ್, ಬೆಳಿಗ್ಗೆ 11

‘ಪ್ರಸ್ತುತ ಕಾಲಘಟ್ಟದಲ್ಲಿ ಭಾರತೀಯ ಸಂವಿಧಾನದ ಸಂರಕ್ಷಣೆ ಮತ್ತು ಅದರ ಮುಂದಿನ ಸವಾಲುಗಳು’ ಚಿಂತನ ಮಂಥನ ಕಾರ್ಯಕ್ರಮ: ಉದ್ಘಾಟನೆ: ಸಂತೋಷ್ ಲಾಡ್, ಅತಿಥಿಗಳು: ಕವಿತಾ ರೆಡ್ಡಿ, ವಿಶ್ವನಾಥ್, ಗೊಲ್ಲಹಳ್ಳಿ ಶಿವಪ್ರಸಾದ್, ಬಿ. ರಮೇಶ್, ಅಧ್ಯಕ್ಷತೆ: ಎಸ್.ಎಂ. ಜಯಕರ, ಆಯೋಜನೆ: ಬೆಂಗಳೂರು ವಿಶ್ವವಿದ್ಯಾಲಯದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಶಿಕ್ಷಕೇತರ ನೌಕರರ ಸಂಘ, ಸ್ಥಳ: ಸೆನೆಟ್ ಸಭಾಂಗಣ, ಆಡಳಿತ ಕಚೇರಿ, ಬೆಂಗಳೂರು ವಿಶ್ವವಿದ್ಯಾಲಯ, ಜ್ಞಾನಭಾರತಿ ಆವರಣ, ಬೆಳಿಗ್ಗೆ 11

ಡಾ.ಕೆ.ಜಿ. ಲಕ್ಷ್ಮೀನಾರಾಯಣಪ್ಪ ಅಭಿನಂದನೆ, ‘ನಿಸ್ವಾರ್ಥ ಸಿರಿ’ ಅಭಿನಂದನಾ ಗ್ರಂಥ ಲೋಕಾರ್ಪಣೆ: ಉದ್ಘಾಟನೆ: ಕೆ.ಸಿ. ಕೊಂಡಯ್ಯ, ಅಧ್ಯಕ್ಷತೆ: ಶಿವರಾಜ ವಿ. ಪಾಟೀಲ, ಗ್ರಂಥ ಲೋಕಾರ್ಪಣೆ: ಹಂ.ಪ. ನಾಗರಾಜಯ್ಯ, ಅತಿಥಿಗಳು: ವೂಡೇ ಪಿ. ಕೃಷ್ಣ, ರಾಮಲಿಂಗಾರೆಡ್ಡಿ, ಎಚ್.ಎಂ. ರೇವಣ್ಣ, ಕೆ.ಎನ್. ನಾಗರಾಜ್, ಮಲ್ಲೇಪುರಂ ಜಿ. ವೆಂಕಟೇಶ್, ಆಯೋಜನೆ: ಡಾ.ಕೆ.ಜಿ. ಲಕ್ಷ್ಮೀನಾರಾಯಣಪ್ಪ 75ರ ಅಭಿನಂದನಾ ಸಮಿತಿ, ಅನ್ನಪೂರ್ಣ ಪಬ್ಲಿಷಿಂಗ್ ಹೌಸ್, ಸ್ಥಳ: ಮಹದೇವ ದೇಸಾಯಿ ಸಭಾಂಗಣ, ಗಾಂಧಿ ಭವನ, ಕುಮಾರಕೃಪಾ ರಸ್ತೆ, ಸಂಜೆ 5

ಮಾರ್ಗಶೀರ್ಷೋತ್ಸವ: ಕರ್ನಾಟಕ ಶಾಸ್ತ್ರೀಯ ಸಂಗೀತ ಕಛೇರಿ: ಗಾಯತ್ರಿ ವೆಂಕಟರಾಘವನ್ ಮತ್ತು ತಂಡ, ಆಯೋಜನೆ ಮತ್ತು ಸ್ಥಳ: ಸುರಭಾರತೀ, ಎಚ್‌ಆರ್‌ಬಿಆರ್ ಲೇಔಟ್, ಸಂಜೆ 6.30

ಸಾಹಿತ್ಯಿಕ, ಸಾಂಸ್ಕೃತಿಕ ಸೇರಿದಂತೆ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ವಿವರಗಳನ್ನು ‘ನಗರದಲ್ಲಿ ಇಂದು’ ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ.. nagaradalli_indu@prajavani.co.in

ಆಶಾವಾದದ ಫಲಗಳು

• ಎಸ್. ಸುರ್ಮ

ದೈನಂದಿನ ಜೀವನದಲ್ಲಿ ಸಂಕಷ್ಟದ ಸನ್ನಿವೇಶ ಎದುರಾದಾಗ ಕೆಲವರು ಖಿನ್ನತೆಗೆ ಒಳಗಾಗುತ್ತಾರೆ. ಕಾಯಿಲೆಗಳು ಬಂದಾಗ ಬದುಕೇ ಮುಗಿಯಿತು ಎಂದು ವ್ಯಥೆಪಡುತ್ತಾರೆ. ಸೋಲುಗಳು, ಸಮಸ್ಯೆಗಳು ಮತ್ತು ನಿರಾಸೆಗಳು ಕಾಡುತ್ತಿದ್ದರೆ ಹತಾಶೆಗೆ ಒಳಗಾಗುತ್ತಾರೆ. ಒಂದು ಪ್ರಯತ್ನದಲ್ಲಿ ವಿಫಲವಾದರೆ ಮರು ಪ್ರಯತ್ನಿಸಲು ಹಿಂಜರಿಯುತ್ತಾರೆ. ಜೀವನದಲ್ಲಿ ಎದುರಾಗುವ ಜಟಿಲತೆಗಳಿಂದ ಹೊರಬರಲು ನನಗೆ ಎಂದಿಗೂ ಸಾಧ್ಯವಿಲ್ಲ, ನನ್ನಲ್ಲಿ ಆ ಸಾಮರ್ಥ್ಯವಿಲ್ಲ ಎಂದು ಬದುಕಿನ ಬಗ್ಗೆ ಬೇಸರಪಟ್ಟು ಭರವಸೆಯನ್ನು ಕಳೆದುಕೊಳ್ಳುತ್ತಾರೆ. ಈ ರೀತಿಯ ಭರವಸೆರಹಿತ ಬದುಕಿಗೆ ಮೂಲ ಕಾರಣ ಆಶಾವಾದದ ಕೊರತೆ.

ಯಾವುದೇ ಸನ್ನಿವೇಶದಲ್ಲೂ ಉತ್ತಮ ಫಲಿತಾಂಶವನ್ನು ನಿರೀಕ್ಷಿಸುವ ಮಾನಸಿಕ ಮನೋಭಾವವನ್ನು 'ಆಶಾವಾದ' ಎಂದು ಕರೆಯುತ್ತೇವೆ. ಕಷ್ಟಗಳ ನಡುವೆಯೂ ಭರವಸೆ-ವಿಶ್ವಾಸಗಳನ್ನು ಇದು ಕಾಪಾಡುತ್ತದೆ. ಬದುಕಿನಲ್ಲಿ ಎಲ್ಲವೂ ಚೆನ್ನಾಗಿ ನಡೆಯುತ್ತದೆ ಎಂದು ಸಕಾರಾತ್ಮಕವಾಗಿ ನಂಬುವ, ನಿರೀಕ್ಷಿಸುವ ಮತ್ತು ಆಶಿಸುವ ಮನೋಪ್ರವೃತ್ತಿಯಿದು. ಆಶಾವಾದಿಗಳು ಯಾವುದೇ ಸನ್ನಿವೇಶಗಳನ್ನು 'ಉತ್ತಮ ಅವಕಾಶಗಳು' ಎಂಬ ದೃಷ್ಟಿಕೋನದಲ್ಲಿ ಸ್ವೀಕರಿಸುತ್ತಾರೆ. ಜಗತ್ತು ನನ್ನ ಪರವಾಗಿದೆ – ಎಂದು ಇಂತಹವರು ಎಂದು ಭಾವಿಸುತ್ತಾರೆ. ತಮ್ಮ ಸುತ್ತಲೂ ಉತ್ತಮ ವಾತಾವರಣವನ್ನು ಸೃಷ್ಟಿಸಲು ಪ್ರಯತ್ನಿಸುತ್ತಾರೆ. ಇವರು ಯಾವುದೇ ಸನ್ನಿವೇಶಕ್ಕೂ ಬಲಿಪಶುವಾಗುವುದಿಲ್ಲ; ತನಗಾದ ನಷ್ಟಕ್ಕೆ ಇತರರನ್ನು ದೂಷಿಸುವುದಿಲ್ಲ.

ಮಾರ್ಗಗಳು: ಆಶಾವಾದ ಪ್ರಮುಖವಾಗಿ ನಾಲ್ಕು ವಿಶೇಷ ವರ್ತನೆಗಳನ್ನು ಒಳಗೊಂಡಿರುತ್ತದೆ. ಈ ವರ್ತನೆಗಳನ್ನು ವ್ಯಕ್ತಿಯು ನಿತ್ಯಅರಿವಿನ ಸ್ಥಿತಿಯಲ್ಲಿ ನಿರಂತರವಾಗಿ ಪುನರಾವರ್ತಿಸಿ, ಅಭ್ಯಾಸಿಸಿ, ಜೀವನದಲ್ಲಿ ಅಳವಡಿಸಿಕೊಂಡಾಗ ವ್ಯಕ್ತಿಯು ಆಶಾವಾದಿಯಾಗುತ್ತಾನೆ. ಇದನ್ನು 'ಕಲಿತ ಆಶಾವಾದ' ಎಂದು ಸಕಾರಾತ್ಮಕ ಮನೋವಿಜ್ಞಾನದ ಪಿತಾಮಹ ಮಾರ್ಟಿನ್ ಸೆಲಿಗ್‌ಮನ್ ಪ್ರತಿಪಾದಿಸುತ್ತಾರೆ.

ಮೊದಲನೆಯದಾಗಿ, ವ್ಯಕ್ತಿಯು ಆಶಾವಾದಿಯಾಗಬೇಕಾದರೆ ಪ್ರತಿ ಸನ್ನಿವೇಶದಲ್ಲಿ ಯಾವುದಾದರೂ ಒಂದು ಉತ್ತಮವಾದ ವಿಚಾರವಿದೆ ಎಂಬುದನ್ನು ಹುಡುಕಲು ಪ್ರಯತ್ನಿಸಬೇಕು. ಸನ್ನಿವೇಶಗಳಲ್ಲಿ ದೋಷಗಳು ಕಂಡುಬಂದರೂ ಅಥವಾ ಸರಿಯಿಲ್ಲ ಎಂಬ ಭಾವನೆ ಉಂಟಾದರೂ ಅದರಲ್ಲಿ ಒಳಿತನ್ನು ಹುಡುಕುವ ಸಕಾರಾತ್ಮಕ ದೃಷ್ಟಿಕೋನವನ್ನು ಬೆಳಸಿಕೊಳ್ಳಬೇಕು.

ಎರಡನೆಯದಾಗಿ, ಆಶಾವಾದಿಯಾಗಲು ಬಯಸುವ ವ್ಯಕ್ತಿಯು ತನಗೆ ಎದುರಾಗುವಂತಹ ಕಷ್ಟಗಳು, ತೊಂದರೆಗಳು, ಸೋಲುಗಳು ಅಥವಾ ಬೇಸರವನ್ನುಂಟುಮಾಡುವಂತಹ ಘಟನೆಗಳನ್ನು ನೋಡಿ ಮಾನಸಿಕವಾಗಿ ಕುಗ್ಗಬಾರದು; ನಕಾರಾತ್ಮಕ ಭಾವನೆಗಳಲ್ಲಿ ಕೊಚ್ಚಿಹೋಗಬಾರದು. ಪ್ರತಿಯೊಂದು ಕಠಿಣ ಸಂದರ್ಭ ಮತ್ತು ಸವಾಲುಗಳು ಬದುಕಿನಲ್ಲಿ ಉತ್ತಮ ಪಾಠವನ್ನು ಕಲಿಸುತ್ತವೆ ಎಂದು ಸಕಾರಾತ್ಮಕ ದೃಷ್ಟಿಕೋನವನ್ನು ಹೊಂದಬೇಕು. ಜೀವನದಲ್ಲಿ ಎದುರಾಗುವಂತಹ ಸಮಸ್ಯೆಗಳು, ಸವಾಲುಗಳು ಇನ್ನೂ ಉತ್ತಮವಾಗಿ ಬೆಳೆಯಲು ಹಾಗೂ ನಿರ್ಧಾರಗಳು ಗಟ್ಟಿಗೊಳ್ಳಲು ಪ್ರೇರಕವಾಗುತ್ತದೆ ಎಂದು ಸ್ವೀಕರಿಸಬೇಕು.

ಮೂರನೆಯದಾಗಿ, ಆಶಾವಾದಿಯಾಗಲು ವ್ಯಕ್ತಿಯು ಜೀವನದಲ್ಲಿ ಯಾವುದೇ ಸಮಸ್ಯೆಗಳು ಎದುರಾದಾಗ ಆ ಸಮಸ್ಯೆಗಳ ಬಗೆಗೆ ಅತಿಯಾಗಿ ಚಿಂತಿಸುತ್ತಾ ತಟಸ್ಥವಾಗಬಾರದು; ಬದಲಾಗಿ ಸಮಸ್ಯೆಗಳನ್ನು ಬಗೆಹರಿಸಲು ಜಗತ್ತಿನಲ್ಲಿ ಎಲ್ಲ ಸಾಧ್ಯತೆಗಳು ಇವೆ – ಎಂಬ ನಂಬಿಕೆಯೊಂದಿಗೆ ಪರಿಹಾರ ಮಾರ್ಗಗಳನ್ನು ಹುಡುಕುವ ಕಡೆಗೆ ಆಲೋಚನೆ ಮಾಡಬೇಕು. ಸಮಸ್ಯೆಗಳ ಬಗೆಗೆ ಭಾವನಾತ್ಮಕವಾಗಿ ಪ್ರತಿಕ್ರಿಯಿಸದೆ ವಿಶ್ಲೇಷಣಾತ್ಮಕವಾಗಿ, ಬೌದ್ಧಿಕವಾಗಿ ಮತ್ತು ಕ್ರಿಯಾತ್ಮಕವಾಗಿ ಆಲೋಚಿಸಿ ಪ್ರತಿಕ್ರಿಯಿಸಬೇಕು.

ನಾಲ್ಕನೆಯದಾಗಿ, ಆಶಾವಾದಿಯಾಗುವ ವ್ಯಕ್ತಿ ನಿರಂತರವಾಗಿ ತನ್ನ ಗುರಿಗಳು ಮತ್ತು ಜೀವನದಲ್ಲಿ ಸಾಧಿಸಬೇಕಾದಂತಹ ವಿಚಾರಗಳ ಬಗ್ಗೆ ಆಲೋಚಿಸಬೇಕು; ಅದಕ್ಕೆ ತಕ್ಕ ಯೋಜನೆಗಳನ್ನು ರೂಪಿಸಿಕೊಳ್ಳಬೇಕು. ಜೀವನದಲ್ಲಿ ನಡೆದು ಹೋದ ಘಟನೆಗಳನ್ನು ಚಿಂತಿಸಿ ಕೊರಗಬಾರದು. ತನಗೆ ದೊರೆತಿರುವ ಸಮಯ ಮತ್ತು ತನ್ನಲ್ಲಿರುವ ಸಾಮರ್ಥ್ಯಗಳನ್ನು ಸಮರ್ಥವಾಗಿ ಸದುಪಯೋಗಪಡಿಸಿಕೊಂಡು ಉತ್ತಮ ಭವಿಷ್ಯವನ್ನು ರೂಪಿಸಿಕೊಳ್ಳುವ ಕಡೆಗೆ ಮನಸ್ಸನ್ನು ಕೇಂದ್ರೀಕರಿಸಬೇಕು.

ಆರೋಗ್ಯ: ಆಶಾವಾದ ಮತ್ತು ಆರೋಗ್ಯ ಪರಸ್ಪರ ಪೂರಕವಾದ ಸಂಬಂಧವನ್ನು ಹೊಂದಿದೆ. ಆಶಾವಾದ ಮನಃಸ್ಥಿತಿಯು ರೋಗನಿರೋಧಕ ಶಕ್ತಿಯನ್ನು ಹೆಚ್ಚಿಸುತ್ತದೆ. ಆಶಾವಾದವು ಖಿನ್ನತೆಯನ್ನು ಕಡಿಮೆಮಾಡುತ್ತದೆ ಮತ್ತು ಹಾರ್ಮೋನಗಳ ಸಮತೋಲನವನ್ನು ಸ್ಥಿರಗೊಳಿಸುತ್ತದೆ. ಆಶಾವಾದವನ್ನು ಹೊಂದಿರುವ ವ್ಯಕ್ತಿ ಒತ್ತಡದ ಸನ್ನಿವೇಶಗಳನ್ನು ಸಮರ್ಥವಾಗಿ ನಿಭಾಯಿಸುತ್ತಾನೆ. ಆದಕಾರಣ ಹೃದಯದ ಆರೋಗ್ಯ ಚೆನ್ನಾಗಿರುತ್ತದೆ; ರಕ್ತದಲ್ಲಿನ ಸಕ್ಕರೆ ಪ್ರಮಾಣ ನಿಯಂತ್ರಣದಲ್ಲಿರುತ್ತದೆ. ಆಶಾವಾದಿಗಳು ಸಕಾರಾತ್ಮಕ ಆಲೋಚನೆ ಹೊಂದಿರುವುದರಿಂದ ದೈಹಿಕ ಕಾಯಿಲೆಗಳು ಬಂದಾಗ ನಿರಾಶಾವಾದಿಗಳಿಗಿಂತ ಆಶಾವಾದಿಗಳು ಬೇಗನೆ ಗುಣಮುಖರಾಗುತ್ತಾರೆ. ಆಶಾವಾದಿತನ ಅನಾರೋಗ್ಯದ ವಿರುದ್ಧ ಹೋರಾಡುವಲ್ಲಿ ಹೆಚ್ಚು ಪರಿಣಾಮಕಾರಿಯಾಗಿರುತ್ತದೆ.

ಯಶಸ್ಸು: ವ್ಯಕ್ತಿಯು ಜೀವನದಲ್ಲಿ ಯಶಸ್ಸನ್ನು ಪಡೆಯಲು ಆಶಾವಾದವು ಮುಖ್ಯ ಪಾತ್ರವನ್ನು ವಹಿಸುತ್ತದೆ. ಆಶಾವಾದಿಗಳು ಅಡೆತಡೆಗಳು, ಸವಾಲುಗಳು ಮತ್ತು ಟೀಕೆಗಳ ನಡುವೆಯೂ ಗುರಿಗಳತ್ತ ಕೆಲಸಮಾಡುವ ಮನೋಭಾವವನ್ನು ಹೊಂದಿರುವುದರಿಂದ ಇವರಲ್ಲಿ ಯಶಸ್ಸನ್ನು ಸಾಧಿಸುವ ಸಾಧ್ಯತೆ ಹೆಚ್ಚಾಗಿ ಕಂಡುಬರುತ್ತದೆ. ಆಶಾವಾದದ ಪರಿಣಾಮವಾಗಿ ಜಗತ್ತಿನಲ್ಲಿ ಹಲವಾರು ಸಾಧಕರು ಕ್ರೀಡೆ, ಸಿನಿಮಾ, ವಾಣಿಜ್ಯ ಮತ್ತು ವ್ಯಾಪಾರ, ಕೈಗಾರಿಕೋದ್ಯಮ, ಶಿಕ್ಷಣ, ಸಾಹಿತ್ಯ, ಸಂಗೀತ, ಕಲೆ, ವಿಜ್ಞಾನ, ಸಂಶೋಧನೆ – ಹೀಗೆ ಹಲವಾರು ಕ್ಷೇತ್ರಗಳಲ್ಲಿ ಸಾಧನೆಯನ್ನು ಮಾಡಿ ಯಶಸ್ಸನ್ನು ಪಡೆದಿರುವುದನ್ನು ಕಾಣಬಹುದು.

ಆತ್ಮಗೌರವ: ಆಶಾವಾದಿಗಳು ತಮ್ಮನ್ನು ತಾವು ಇರುವಂತೆಯೇ ಪ್ರೀತಿಸುತ್ತಾರೆ ಮತ್ತು ಸ್ವೀಕರಿಸುತ್ತಾರೆ. ಇವರು ಆಡಂಬರದ ಜೀವನವನ್ನು ಬಯಸುವುದಕ್ಕಿಂತ ಆತ್ಮಗೌರವದ ಜೀವನವನ್ನು ಹೆಚ್ಚಾಗಿ ಬಯಸುತ್ತಾರೆ. ತಮ್ಮಲ್ಲಿರುವ ಸಾಮರ್ಥ್ಯಗಳನ್ನು ಮೆಚ್ಚುತ್ತಾರೆ. ತಮ್ಮನ್ನು ತಾವು ಗೌರವಿಸಿಕೊಳ್ಳುವುದರೊಂದಿಗೆ ಇತರರನ್ನು ಗೌರವಿಸುತ್ತಾರೆ.

ಸಂತೃಪ್ತ ಜೀವನ: ಆಶಾವಾದಿಗಳು ಹರ್ಷಚಿತ್ತವಾಗಿರುವ ಮತ್ತು ಸಕಾರಾತ್ಮಕ ಚಿಂತನೆಯಿರುವ ಜನರೊಂದಿಗೆ ಹೆಚ್ಚಾಗಿ ಇರುವುದರಿಂದ ಇವರ ಜೀವನ ಚೈತನ್ಯದಿಂದ ಕೂಡಿರುತ್ತದೆ. ಆಶಾವಾದಿಗಳು ಬದುಕಿನ ಪ್ರತಿಯೊಂದು ಕ್ಷಣವನ್ನು ಸಂತೋಷದಿಂದ ಸಾರ್ಥಕಗೊಳಿಸಿಕೊಳ್ಳುತ್ತಾರೆ ಜೊತೆಗೆ ಜೀವನಪ್ರೀತಿಯನ್ನು ಬೆಳಸಿಕೊಳ್ಳುತ್ತಾರೆ. ಜೀವನದಲ್ಲಿ ಬದಲಾಯಿಸಲಾಗದದ್ದನ್ನು ಯಥಾವತ್ತಾಗಿ ಸ್ವೀಕರಿಸುತ್ತಾರೆ; ಪರಿಣಾಮವಾಗಿ ಜೀವನದಲ್ಲಿ ಸಂತೃಪ್ತಿಯನ್ನು ಹೊಂದಿರುತ್ತಾರೆ.

ಪರೋಪಕಾರ: ಒಳ್ಳೆಯ ಕಾರ್ಯಗಳು ಜಗತ್ತಿನಲ್ಲಿ ಉತ್ತಮ ಪರಿಣಾಮಗಳನ್ನು ಉಂಟುಮಾಡುತ್ತವೆ ಎನ್ನುವ ದೃಢನಂಬಿಕೆಯನ್ನು ಹೊಂದಿರುವುದರಿಂದ ಆಶಾವಾದಿಗಳಲ್ಲಿ ಪರಹಿತ ಚಿಂತನೆ ಮತ್ತು ದಾನಶೀಲ ಗುಣಗಳು ಹೆಚ್ಚಾಗಿ ಕಂಡುಬರುತ್ತವೆ. ಆಶಾವಾದಿಗಳು ಅಗತ್ಯವಿರುವ ಜನರಿಗೆ ಸಹಾಯ ಮತ್ತು ಸೇವೆ ಮಾಡಲು ಯಾವಾಗಲೂ ಸಿದ್ಧರಿರುತ್ತಾರೆ.

ಕೃತಜ್ಞತಾಭಾವ: ಆಶಾವಾದಿಗಳು ತಮ್ಮ ಜೀವನದ ಪ್ರತಿಯೊಂದು ವಿಷಯಗಳಿಗೂ ಕೃತಜ್ಞರಾಗಿರುತ್ತಾರೆ. ತಂದೆ ತಾಯಿ, ಪರಿಸರ, ಕುಟುಂಬ, ವೃತ್ತಿ, ಸಾಕುಪ್ರಾಣಿಗಳು, ಸ್ನೇಹಿತರು, ಸಂಬಂಧಿಕರು – ಹೀಗೆ ಎಲ್ಲರಿಗೂ ಕೃತಜ್ಞತೆಯನ್ನು ಅರ್ಪಿಸಬಲ್ಲವರಾಗಿರುತ್ತಾರೆ. ಜೀವನದಲ್ಲಿ ತಮಗೆ ದೊರೆತಿರುವ ಸಹಾಯಗಳಿಗೆ ಸದಾ ಕೃತಜ್ಞತಾಭಾವವನ್ನು ಹೊಂದಿರುತ್ತಾರೆ.

ಕೃತಕ ಸೌಂದರ್ಯದ ಆಸೆಗೆ ಮೂತ್ರಪಿಂಡದ 'ದಂಡ'

• ಡಾ. ಅನುಪಮಾ ವೈ. ಜೆ.

ಸುಂದರವಾಗಿ ಕಾಣಬೇಕೆಂಬ ಆಸೆ ಯಾರಿಗಿಲ್ಲ? ಆಬಾಲವೃದ್ಧರಾದಿಯಾಗಿ ನಾವೆಲ್ಲಾ ಸೌಂದರ್ಯಪ್ರಸಾಧನಗಳನ್ನು ದಿನನಿತ್ಯ ಬಳಸುತ್ತಲೇ ಇರುತ್ತೇವೆ. ಸುಂದರವಾಗಿ ಕಾಣಬೇಕೆಂದು, ವಯಸ್ಸು ಮರೆಮಾಚಲೆಂದು, ಗೌರವರ್ಣದ ತ್ವಚೆಗಾಗಿ - ಹೀಗೆ ಒಂದಿಲ್ಲೊಂದು ಕಾರಣದಿಂದ ಇವುಗಳ ಬಳಕೆ ದಿನೇ ದಿನೇ ಹೆಚ್ಚುತ್ತಿದೆ. ಇವುಗಳ ವಿಪರೀತ ಬಳಕೆಯಿಂದ ಕೆಲವೊಮ್ಮೆ ಆರೋಗ್ಯದ ಏರುಪೇರು, ಅದರಲ್ಲೂ ಕಿಡ್ನಿರೋಗಗಳು ಬರಬಹುದೆಂದು ನಿಮಗೆ ತಿಳಿದಿದೆಯೇ? ನಂಬಲು ಕಷ್ಟವೆಂದು ಅನಿಸಿದರೂ, ಇದು ನಿಜ. ಸೌಂದರ್ಯವರ್ಧಕಗಳಿಂದ ಯಾವ ರೀತಿ ಮೂತ್ರಪಿಂಡಗಳ ಸಮಸ್ಯೆ ಉಂಟಾಗಬಹುದು ಎಂಬ ಮಾಹಿತಿ ಇಲ್ಲಿದೆ.

ಮೂತ್ರಪಿಂಡಗಳ ಕಾರ್ಯವೈಖರಿ

ಆರೋಗ್ಯವಂತ ವ್ಯಕ್ತಿಯಲ್ಲಿ ಎರಡು ಮೂತ್ರಪಿಂಡಗಳಿರುತ್ತವೆಂದು ಬಹುತೇಕ ಎಲ್ಲರಿಗೂ ತಿಳಿದಿರುವ ವಿಷಯವೇ. ಅವುಗಳ ಮುಖ್ಯ ಕೆಲಸವೆಂದರೆ, ದಿನಂಪ್ರತಿ ದೇಹದಲ್ಲಿ ಉತ್ಪಾದನೆಯಾಗುವ ತ್ಯಾಜ್ಯಗಳನ್ನು ಮೂತ್ರದ ರೂಪದಲ್ಲಿ ಹೊರಹಾಕಿ, ದೇಹವನ್ನು ಸಮತೋಲನದಲ್ಲಿ ಇರಿಸುವುದು. ಇದಕ್ಕಾಗಿ ಮೂತ್ರಪಿಂಡಗಳಲ್ಲಿ ರಕ್ತ ನಿರಂತರವಾಗಿ ಶೋಧಿಸಲ್ಪಡುತ್ತದೆ. ದೇಹದಲ್ಲಿ ಉಂಟಾಗುವ ಅಥವಾ ಹೊರಗಿನಿಂದ ಸೇವಿಸಲ್ಪಡುವ ವಿಷಕಾರಿ ವಸ್ತುಗಳನ್ನು ದೇಹದಿಂದ ಹೊರಹಾಕಿ ಅದನ್ನು ಸುಸ್ಥಿತಿಯಲ್ಲಿ ಇಡುವುದರಲ್ಲಿಯೂ ಕಿಡ್ನಿಗಳ ಪಾತ್ರ ದೊಡ್ಡದು. ಆದರೆ ಈ ಕ್ರಿಯೆಯಲ್ಲಿ ವಿಷಕಾರಿ ವಸ್ತುಗಳು ಕಿಡ್ನಿಗಳಿಗೇ ಹಾನಿಯನ್ನು ಉಂಟುಮಾಡುವ ಸಂಭವ ಹೆಚ್ಚು.

ಸೌಂದರ್ಯಪ್ರಸಾಧನಗಳಲ್ಲಿ ಅನೇಕ ತರಹದ ರಾಸಾಯನಿಕ ವಸ್ತುಗಳನ್ನು ಬಳಸುವುದರಿಂದ ಆ ವಸ್ತುಗಳಲ್ಲಿ ಬಳಕೆಯಾಗಿರಬಹುದಾದ ಭಾರಲೋಹಗಳು, ಕೆಲವು ಆಮ್ಲಗಳು ಕಿಡ್ನಿಯ ಮೇಲೆ ಪರಿಣಾಮವನ್ನು ಬೀರಬಲ್ಲವು.

1 ಗೌರವರ್ಣದ ಆಸೆಯಿಂದ ಬಂತು ಆಪತ್ತು: ಗೌರವರ್ಣದ ತ್ವಚೆಗಾಗಿ ಬಳಸುವ ಅನೇಕ ಕ್ರೀಮ್‌ಗಳಲ್ಲಿ ಪಾದರಸವನ್ನು ಬಳಕೆ ಮಾಡುತ್ತಾರೆ. ಅದರಲ್ಲೂ ಜಾಹೀರಾತಿನಲ್ಲಿ ತೋರಿಸಿದೆ – ಎನ್ನುವ ಆಕರ್ಷಣೆಯಿಂದ ಅನೇಕ ಯುವಜನರು ಇಂತಹ ಆಮಿಷಕ್ಕೆ ಒಳಗಾಗಿ ಅನೇಕ ಸೌಂದರ್ಯವರ್ಧಕಗಳನ್ನು ಹಿಂದುಮುಂದು ನೋಡದೆ ಬಳಸುವ ಸಾಧ್ಯತೆ ಹೆಚ್ಚು. ಒಳ್ಳೆಯ ಗುಣಮಟ್ಟದ ಕ್ರೀಮ್‌ಗಳಲ್ಲಿ ಅವುಗಳಲ್ಲಿ ಬಳಸಿರುವ ವಸ್ತುವಿನ ಬಗ್ಗೆ ಲೇಬಲ್ ಇರಬಹುದಾದರೂ, ಕೆಲವೊಮ್ಮೆ ಜನರು ಯಾವುದೇ ಲೇಬಲ್ ಇಲ್ಲದ ಕ್ರೀಮ್ ಬಳಸುವ ಸಾಧ್ಯತೆ ಇದೆ. ಅದರಲ್ಲೂ ಕೈಯಲ್ಲೇ ಮಾರುಕಟ್ಟೆ ಸುತ್ತಿಸುವ ಇಂದಿನ ಸಾಮಾಜಿಕ ಜಾಲತಾಣಗಳೂ, ಆನ್‌ಲೈನ್ ವ್ಯಾಪಾರ ತಾಣಗಳೂ ನಮ್ಮನ್ನು ಮನಬಂದಂತೆ ಕುಣಿಸುವ ಇಂದಿನ ದಿನಗಳಲ್ಲಿ, ಜಾಹೀರಾತಿನಲ್ಲಿ ಚಂದ ಕಂಡಿತು ಎಂದು ಯಾವುದೋ ಕ್ರೀಮ್ ಬಳಸಿ ಎಷ್ಟೋ ಜನರು ಕಿಡ್ನಿಸಮಸ್ಯೆಗೆ ತುತ್ತಾಗಿದ್ದಾರೆ.

ಗೌರವರ್ಣಕಾರಕ ಕ್ರೀಮ್‌ಗಳನ್ನು ಬಳಸಿದ ಸ್ವಲ್ಪ ದಿನಗಳಲ್ಲೇ ಅಂತಹ ವ್ಯಕ್ತಿಗಳಲ್ಲಿ ಮುಖ ಊದುವುದು, ಕೈಕಾಲು ಬಾತುಕೊಳ್ಳುವುದನ್ನು ನೋಡಬಹುದು. ಮೂತ್ರದಲ್ಲಿ ಪ್ರೋಟೀನ್ ಅಂಶ ಹೆಚ್ಚಾಗಿ ವಿಸರ್ಜನೆಯಾಗುತ್ತಿರುವುದನ್ನು ಮೂತ್ರಪರೀಕ್ಷೆಯ ಮುಖಾಂತರ ಪತ್ತೆ ಹಚ್ಚಬಹುದು. ಕೆಲವೊಮ್ಮೆ ಬಿ.ಪಿ. ಕೂಡ ಹೆಚ್ಚಾಗಬಹುದು. ಇಂತಹ ಸ್ಥಿತಿಗೆ 'ನೆಫ್ರಾಟಿಕ್ ಸಿಂಡ್ರೋಮ್' ಎಂದು ಕರೆಯುತ್ತೇವೆ. 'ಕಿಡ್ನಿ ಬಯಾಪ್ಸಿ', ಎಂದರೆ ಕಿಡ್ನಿಯ ಒಂದು ಸಣ್ಣ ತುಣುಕನ್ನು ಸೂಜಿಯ ಮೂಲಕ ತೆಗೆದು ಪರೀಕ್ಷೆ ಮಾಡಿದಾಗ, 'ಮೆಂಬ್ರೇನಸ್ ನೆಫ್ರೋಪತಿ' ಎಂಬ ನಿರ್ದಿಷ್ಟ ತರಹದ ರೋಗವು ಪತ್ತೆಯಾಗುತ್ತದೆ. ನಮ್ಮ ಭಾರತದಲ್ಲೇ ಕಿಡ್ನಿ ತಜ್ಞವೈದ್ಯರು ಇದರ ಬಗ್ಗೆ ಮೊದಲು ಪತ್ತೆ ಹಚ್ಚಿದ್ದು, ವಿಶ್ವದಲ್ಲಿ ಎಲ್ಲರ ಗಮನ ಸೆಳೆದಿದೆ. ಅನೇಕ ತರಹದ ಕ್ರೀಮ್‌ಗಳ ರಾಸಾಯನಿಕ ಪರೀಕ್ಷೆ ಮಾಡಿದಾಗ ಅವುಗಳಲ್ಲಿ ಗರಿಷ್ಠ ಮಟ್ಟದಲ್ಲಿ ಪಾದರಸದ ಪ್ರಮಾಣ ಹೆಚ್ಚಿರುವುದು ಪತ್ತೆಯಾಗಿದೆ. ಈ ಕ್ರೀಮ್‌ಗಳ ಬಳಕೆಯನ್ನು ನಿಲ್ಲಿಸಿ ಚಿಕಿತ್ಸೆ ಕೈಗೊಂಡ ನಂತರ ಮೂತ್ರದಲ್ಲಿ ಪ್ರೋಟೀನ್ ಪ್ರಮಾಣ ಕಡಿಮೆಯಾಗಿ, ರೋಗ ತಹಬಂದಿಗೆ ಬರುತ್ತದೆ.

2 ಕೂದಲು ನೇರಪಡಿಸುವಿಕೆ ತರಬಹುದು ಅಪಾಯ: ಇತ್ತೀಚೆಗೆ ಗುಂಗುರು ಕೂದಲನ್ನು ನೇರಪಡಿಸಿಕೊಳ್ಳುವುದು ಯುವತಿಯರಲ್ಲಿ ಹೆಚ್ಚಿರುವ ಗೀಳು. ಅಂತಹ ಪ್ರಕ್ರಿಯೆಯಲ್ಲಿ ಬಳಸಲಾಗುವ ರಾಸಾಯನಿಕಗಳಲ್ಲಿ 'ಗ್ಲೈಆಕ್ಸಾಲಿಕ್ ಆಮ್ಲ' ಎನ್ನುವ ವಸ್ತುವನ್ನು ಬಳಸುತ್ತಾರೆ. ಅವುಗಳ ಉಪಯೋಗದ ನಂತರ ಕೆಲವರಿಗೆ ಕಿಡ್ನಿ ವೈಫಲ್ಯವಾದ ಬಗ್ಗೆ ವಿಜ್ಞಾನಿಗಳು ವರದಿ ಮಾಡಿದ್ದಾರೆ. ಆಕ್ಸಲೇಟ್ ಹರಳುಗಳು ಕಿಡ್ನಿಯಲ್ಲಿ ಸಾಂದ್ರಗೊಂಡು, ಅವುಗಳ ಜೀವಕೋಶಗಳಿಗೆ ಹಾನಿ ಮಾಡುವುದನ್ನು ಅವರು ಕಂಡು ಹಿಡಿದಿದ್ದಾರೆ. ಇದು ಹೆಚ್ಚಾಗಿ ತಾತ್ಕಾಲಿಕ ವೈಫಲ್ಯವಾಗಿದ್ದರೂ, ಕೆಲವೊಮ್ಮೆ ಕಿಡ್ನಿ ಸಹಜಸ್ಥಿತಿ ಮರಳದೆ ಖಾಯಂ ತೊಂದರೆಯೂ ಆಗಬಹುದು.

3 ಕೃತಕ ಬಣ್ಣಗಳು: ಕೂದಲಿಗೆ ಹಚ್ಚುವ ಕೃತಕ ಬಣ್ಣ, ಉಗುರಿಗೆ ಬಣ್ಣ ಹಚ್ಚುವ, ಬಣ್ಣ ತೆಗ್ಗೆಯುವ ದ್ರವಗಳಲ್ಲಿ ಇರುವ 'ಥಾಲೇಟ್' (Phthalate), ಫಿನಾಲ್ ಮುಂತಾದ ರಾಸಾಯನಿಕ ವಸ್ತುಗಳು ಕಿಡ್ನಿಗೆ ಮಾರಕವಾಗಬಲ್ಲುದು. ಅದರಲ್ಲೂ ಮೊದಲೇ ಅಲ್ಪ ಪ್ರಮಾಣದ ಕಿಡ್ನಿ ತೊಂದರೆ ಇದ್ದಲ್ಲಿ ಅಂತಹವರಿಗೆ ಈ ತರಹದ ವೈಪರೀತ್ಯಗಳು ಬೇಗನೇ ಆಗಬಹುದು.

ಸೌಂದರ್ಯವರ್ಧಕಗಳನ್ನು ಬಳಸುವುದನ್ನು ಪ್ರಾಯಶಃ ಯಾರೂ ಬಿಡಲಾರರು. ಆದರೂ ನಾವು ಅವುಗಳನ್ನು ಮಿತವಾಗಿ ಬಳಸುವುದು ನಮ್ಮ ಕೈಯಲ್ಲಿದೆ. ಅದರಲ್ಲಿರುವ ಸಾಮಗ್ರಿಗಳನ್ನು ಪಟ್ಟಿ ಮಾಡಿದ್ದಾರೆಯೇ ಎಂದು ಯಾವುದೇ ಸೌಂದರ್ಯ ಪ್ರಸಾಧನಗಳನ್ನು ಕೊಳ್ಳುವ ಮೊದಲು ಲೇಬಲ್ ಪರೀಕ್ಷಿಸುವುದನ್ನು ನಾವು ಅಭ್ಯಾಸ ಮಾಡಿಕೊಳ್ಳಬೇಕು. ಯಾವ ಸಾಮಗ್ರಿಯಿಂದ ಏನಾಗುತ್ತದೆ ಎಂದು ಸಾಮಾನ್ಯರಿಗೆ ಹೇಗೆ ತಿಳಿಯಬಹುದು ಎಂಬ ಅನುಮಾನ ಸಾಧುವೇ. ಆದರೂ ಹಾಗೆ ಲೇಬಲ್ ಪರೀಕ್ಷಿಸುವ ಅಭ್ಯಾಸ ಇದ್ದರೆ ಒಳಿತು. ಸಾಮಾನ್ಯವಾಗಿ ಹಾನಿಕಾರಕ ಕೆಮಿಕಲ್ ಬಳಸಿರುವ ಅಗ್ಗದ ಪ್ರಸಾಧನಗಳ ಮೇಲೆ ಲೇಬಲ್‌ಗಳೇ ಇರುವುದಿಲ್ಲ. ಇಂತಹ ಸಾಮಗ್ರಿಗಳನ್ನು ಕೊಳ್ಳುವುದು ಬೇಡ. ನಮ್ಮ ಸೌಂದರ್ಯದ ಬಗ್ಗೆ ನಮಗಿರುವ ಕೀಳರಿಮೆ, ಸಮಾಜಕ್ಕೆ ಗೌರವರ್ಣದ ಬಗ್ಗೆ ಇರುವ ಮೋಹ, ನಮ್ಮ ಸಹವರ್ತಿಗಳ ಮಧ್ಯೆ ನಾವು ಎದ್ದು ಕಾಣಬೇಕೆಂಬ ಹಂಬಲ ಇವೇ ಮುಂತಾದ ವ್ಯಾಮೋಹಕ್ಕೆ ನಾವೇ ತಡೆ ಒಡ್ಡಬೇಕಾಗಿದೆ. ದೈವದತ್ತ ಸೌಂದರ್ಯವನ್ನು ಪ್ರಕಾಶಿಸುವಂತೆ ಮಾಡಲು ರಾಸಾಯನಿಕಗಳ ಮೊರೆ ಹೋಗಬೇಕಿಲ್ಲ; ತಮ್ಮ ರೂಪದ ಬಗ್ಗೆ ಕೀಳರಿಮೆ ಇರಿಸಿಕೊಳ್ಳದೆ, ಅನಗತ್ಯ ಸೌಂದರ್ಯವರ್ಧನೆಯ ಬಗ್ಗೆ ಮಾರುಹೋಗದೆ, ಆದಷ್ಟು ತಮ್ಮ ಸಾಧನೆಯ ಮೂಲಕ ಪ್ರಕಾಶಿಸುವುದು ಒಳಿತೆಂದು ಯುವಜನತೆಗೆ ಅರಿವಾಗಬೇಕಿದೆ.

ಎಸ್ಸೆಸ್ಸೆಲ್ಸಿ ಪರೀಕ್ಷೆ ದಿಕ್ಸೂಚಿ — ಗಣಿತ

ಪುನರಾವರ್ತನೆ ಮತ್ತು ಮಾದರಿ ಪ್ರಶ್ನೆಗಳು

ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ, ಅದರ ಕ್ರಮಾಕ್ಷರದೊಂದಿಗೆ ಪೂರ್ಣ ಉತ್ತರವನ್ನು ಬರೆಯಿರಿ

12) ಆಯತಾಕಾರದ ಒಂದು ಭೂಮಿಯ ಉದ್ದ ಮತ್ತು ಅಗಲ ಕ್ರಮವಾಗಿ 110ಮೀ ಮತ್ತು 30ಮೀ ಇದೆ. ಉದ್ದ ಮತ್ತು ಅಗಲಗಳೆರಡನ್ನೂ ನಿಖರವಾಗಿ ಅಳತೆ ಮಾಡುವ ಗರಿಷ್ಠ ಉದ್ದದ ಸಲಾಕೆಯ ಉದ್ದ ಎಷ್ಟು?

(A) 10 ಮೀ (B) 22 ಮೀ
(C) 17 ಮೀ (D) 18 ಮೀ

ಉತ್ತರ:–(ಎ) 10 ಮೀ

ಪರಿಹಾರ:– 110 ಮತ್ತು 30ನ್ನು ಅವಿಭಾಜ್ಯ ಅಪವರ್ತನಗಳಾಗಿ ಬರೆದಾಗ $110 = 2 \times 5 \times 11$;

$30 = 2 \times 3 \times 5$

ಮ.ಸಾ.ಅ. $(110, 30) = 2 \times 5 = 10$

∴ ಉದ್ದ ಮತ್ತು ಅಗಲ ಎರಡನ್ನು ನಿಖರವಾಗಿ ಅಳತೆ ಮಾಡುವ ಗರಿಷ್ಠ ಉದ್ದದ ಸಲಾಕೆಯು 10 ಮೀ.

13) ಆಟದಲ್ಲಿ ಗೆಲ್ಲುವ ಸಂಭವನೀಯತೆಯು $\frac{5}{6}$. ಆದರೆ ಸೋಲುವ ಸಂಭವನೀಯತೆ ....

(A) $-\frac{5}{6}$ (B) $\frac{5}{6}$
(C) $-\frac{1}{6}$ (D) $\frac{1}{6}$

ಉತ್ತರ: (D)

14) 7x 11x13 +13 ಇದು ಒಂದು .

ಎ) ಅವಿಭಾಜ್ಯ ಸಂಖ್ಯೆ ಬಿ) ಸಂಯುಕ್ತ ಸಂಖ್ಯೆ
ಸಿ) ಅಭಾಗಲಧ ಸಂಖ್ಯೆ ಡಿ) ಬೆಸ ಸಂಖ್ಯೆ

ಉತ್ತರ:– ಬಿ) ಸಂಯುಕ್ತ ಸಂಖ್ಯೆ

II ಕೆಳಗಿನ ಪ್ರಶ್ನೆಗಳನ್ನು ಗಮನಿಸಿ

15) ಎರಡು ಚರಾಕ್ಷರವುಳ್ಳ ರೇಖಾತ್ಮಕ ಸಮೀಕರಣಗಳ ಜೋಡಿಯು ಅಸ್ಥಿರ ಜೋಡಿಯಾಗಿದ್ದರೆ, ಅವು ಎಷ್ಟು ಪರಿಹಾರಗಳನ್ನು ಹೊಂದಿರುತ್ತವೆ?

ಉತ್ತರ: ಪರಿಹಾರಗಳಿಲ್ಲ

16) $x + ky = 4$ ಮತ್ತು $2x + 4y = 12$ ಈ ರೇಖಾತ್ಮಕ ಸಮೀಕರಣಗಳನ್ನು ಪ್ರತಿನಿಧಿಸುವ ರೇಖೆಗಳ ಜೋಡಿಯು ಸಮಾಂತರ ರೇಖೆಗಳಾದರೆ 'k' ಯ ಬೆಲೆಯು

(A) -2 (B) 2
(C) 4 (D) -4

ಉತ್ತರ:– (ಬಿ) 2

17) ಕೊಟ್ಟಿರುವ ಚಿತ್ರದಲ್ಲಿ, BCಯು ವ್ಯಾಸವಾದರೆ, Xನ ಬೆಲೆಯನ್ನು ಕಂಡುಹಿಡಿಯಿರಿ.



ಉತ್ತರ:– $x = 90^0$

18) $P(A) = 80\%$ ಆದರೆ, 'A' ಅಲ್ಲದ ಘಟನೆಯ ಸಂಭವನೀಯತೆ $\frac{1}{5}$ ಎಂದು ತೋರಿಸಿ.

ಪರಿಹಾರ:–

$P(A) + P(\overline{A}) = 1$

$80\% + P(\overline{A}) = 100\%$

$P(\overline{A}) = 100 - 80$

$P(\overline{A}) = 20\%$

$P(A) = \frac{1}{5}$

19) ಚಿತ್ರದಲ್ಲಿ, DE||BC, AD =2 cm ಮತ್ತು BD = 6 cm ಆದರೆ, DE:BC ಕಂಡುಹಿಡಿಯಿರಿ.



ಉತ್ತರ:–

AD:AB = 2:8 = 1:4

DE: BC = 1:4

20) ತ್ರಿಜ್ಯ rಮಾನಗಳನ್ನು ಹೊಂದಿರುವ ಗೋಳದ ಘನಫಲವನ್ನು ಕಂಡುಹಿಡಿಯುವ ಸೂತ್ರ ಬರೆಯಿರಿ

ಉತ್ತರ:–

$\frac{4}{3}\pi r^3$

21) cosec (90° – θ) × cos θ ದ ಬೆಲೆಯನ್ನು ಕಂಡುಹಿಡಿಯಿರಿ.

ಉತ್ತರ:–

$\text{cosec}\,(90 - \theta) \times \cos\theta$

$\sec\theta \times \cos\theta$

$\frac{1}{\cos\theta} \times \cos\theta$

$= 1$

22) $\sin\theta = 1$ ಆದರೆ, $\cos\theta$ ದ ಬೆಲೆಯನ್ನು ಕಂಡುಹಿಡಿಯಿರಿ.

ಉತ್ತರ:–

$$\cos\theta = \sqrt{1 - \sin^2\theta} = \sqrt{1 - (1)^2} = \sqrt{1 - 1} = \sqrt{0}$$

$\cos\theta = 0$

23) 6762 ನ್ನು ಅವಿಭಾಜ್ಯ ಅಪವರ್ತನಗಳ ಗುಣಲಬ್ಧವಾಗಿ ನಿರೂಪಿಸಿ.

ಉತ್ತರ : $6762 = 2 \times 3 \times 7^2 \times 23$

2	6762
3	3381
7	1127
7	161
	23

(ಮುಂದುವರಿಯುವುದು........)

ಪಿಯುಸಿ ಪರೀಕ್ಷೆ ದಿಕ್ಸೂಚಿ — MATHS

ಎಸ್ಸೆಸ್ಸೆಲ್ಸಿ ವಿಜ್ಞಾನ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

REVISION : MODEL QUESTIONS

5) the system of linear equations $x + y + z = 6$, $x + 2y + 3z = 10$ and $x + 2y + az = b$ has no solutions when

(A) $a = 3, b \neq 10$ (B) $b = 3, a \neq 10$
(C) $a = 2, b \neq 3$ (D) $b = 2, a = 3$

Ans: (A) $a = 3, b \neq 10$

Expln:-
$$x + y + z = 6$$
$$x + 2y + 3z = 10$$
$$x + 2y + az = b$$

Let $A = \begin{pmatrix} 1 & 1 & 1 \\ 1 & 2 & 3 \\ 1 & 2 & a \end{pmatrix}$, $X = \begin{pmatrix} x \\ y \\ z \end{pmatrix}$, $B = \begin{pmatrix} 6 \\ 10 \\ b \end{pmatrix}$

The matrix equation is AX = B.

If $|A| = 0$, $(\text{adj } A)B \neq 0$, then there exists no solution.

$|A| = 0 \Rightarrow \begin{vmatrix} 1 & 1 & 1 \\ 1 & 2 & 3 \\ 1 & 2 & a \end{vmatrix} = 0$. On expanding, we get $a = 3$.

$(\text{adj } A)\,B = \begin{pmatrix} 2a-6 & 2-a & 1 \\ 3-a & a-1 & -2 \\ 0 & -1 & 1 \end{pmatrix} \begin{pmatrix} 6 \\ 10 \\ b \end{pmatrix}$

$\Rightarrow 12a - 36 + 20 - 10a + b \neq 0$

If $a = 3$, $-10 + b \neq 0 \Rightarrow b \neq 10$.

6) The value of $\tan(1^o) + \tan(89^o)$ is

(A) $\frac{2}{\sin(2^0)}$ (B) $\frac{1}{\sin(2^0)}$ (C) $\frac{1}{\sin(1^0)}$ (D) $\frac{2}{\sin(1^0)}$

Ans : (A) $\frac{2}{\sin(2^0)}$

Expln :– $\tan 1^0 + \tan 89^0 = \tan 1^0 + \tan(90^2 - 1^0) = \tan 1^0 + \cot 1^0$

7) The value of $\tan(1^o) + \tan(89^o)$ is.............

(A) $\frac{2}{\sin(2^0)}$ (B) $\frac{1}{\sin(2^0)}$
(C) $\frac{1}{\sin(1^0)}$ (D) $\frac{2}{\sin(1^0)}$

Ans : (A) $\frac{2}{\sin(2^0)}$

Expln :– $\tan 1^0 + \tan 89^0 = \tan 1^0 + \tan(90^2 - 1^0) = \tan 1^0 + \cot 1^0$

$$= \frac{\sin 1^0}{\cos 1^0} + \frac{\cos 1^0}{\sin 1^0} = \frac{\sin^0 1^0 + \cos^2 1^0}{\cos 1^0 \sin 1^0}$$

$$= \frac{1}{\sin 1^0 \cos 1^0} = \frac{1}{\frac{1}{2}\sin 2 \times 1^0} = \frac{2}{\sin 2^0}$$

8) If $\frac{(x+1)^2}{(x^3+x} = \frac{A}{x} + \frac{Bx+C}{x^2+1}$, then $\text{cosec}^{-1}\left(\frac{1}{A}\right) + \cot^{-1}\left(\frac{1}{B}\right) + \sec^{-1} C =$

(A) 0 (B) $\frac{\pi}{2}$
(C) $\frac{5\pi}{6}$ (D) $\frac{\pi}{6}$

Ans : (C) $\frac{5\pi}{6}$

Expln :– $\frac{(x+1)^2}{x^3+x} = \frac{A}{x} + \frac{Bx+C}{x^2+1} = \frac{A(x^2+1) + x(Bx+C)}{x(x^2+1)}$

$\therefore A(x^2+1) + Bx^2 + Cx = x^2 + 2x +.$

Equating the coefficients of x^2, x constants on both sides, we get $A + B = 1$, $C = 2$, $A = 1$ $\therefore B = 0$

$$\text{cosec}^{-1}\left(\frac{1}{A}\right) + \cot^{-1}\left(\frac{1}{B}\right) + \sec^{-1} C = \text{cosec}^{-1} 1 + \cot^{-1} 0 + \sec^{-1} 2$$

$$= \frac{\pi}{2} + 0 + \frac{\pi}{3} = \frac{5\pi}{6}.$$

9) The remainder obtained when 1! + 2! + 3! + … + 11! Is divided by 12 is...............

(A) 8 (B) 6
(C) 9 (D) 7

Ans: (C) 9

Expln:- 1! + 2! + 3! + ….. + 11!

= 1 + 2 + 6 + 24 + 120 +720 + …. + 11!

From $\lfloor 5$ onwards each is a multiple of 12,

i.e., $\lfloor 5 = 12k_1$, $\lfloor 6 = 12k_1 \times 6 = 12\,k_2$ ....

Thus allterms from $\lfloor 5$ onwards are divisible by 12.

1! + 2! + 3! + 4! = 33

$\therefore 33 + 12k \equiv -3 \bmod 12$ i.e., $\lfloor 1 + \lfloor 2 + ... + \lfloor 11 \equiv -3 \bmod 12$

or $\lfloor 1 + \lfloor 2 + \lfloor 3 ..... + \lfloor 11 \equiv 9 \bmod 12$.

10) The point of inflection for the following graph is



A) $-\frac{\pi}{2}$ B) $\frac{\pi}{2}$

C) 0 **D)** point of inflection does not exist

Ans:-C

II) Fill in the blanks by choosing the appropriate answer from those given in the bracket (0, 1, 2, 3, 4, 5)

1) The number of points in R for which the function $f(x) = |x| + |x + 1|$ is not differentiable, is________

Ans:- 2

2) The value of $\hat{i}.(\hat{j} \times \hat{k}) - \hat{j}.(\hat{k} \times \hat{i}) - \hat{k}.(\hat{j} \times \hat{i})$ is________

Ans:- 1

3) The sum of the order and degree of the differential equation. $2x^2\left(\frac{d^2y}{dx^2}\right) - 3\left(\frac{dy}{dx}\right) + y$ *is*____

Ans:- 3

4) The total revenue in rupees received from the sale of x unit of a product is given by $R(x) = 2x^2 - 4x + 5$,The marginal revenue when x=2 is________

Ans:- 4

5)

If $P(A) = \frac{3}{k}$, $P(A \cap B) = \frac{2}{5}$ and $P(B|A) = \frac{2}{3}$, then k is ______

Ans:- 5

III) Answer all the following:-

1. A relation R on A = {1 2 3} defined by R = {(1 1) (1 2) (3 3)} is not symmetric why?

Ans:- $(1\ \ 2) \in R$ but $(2\ \ 1) \notin R$

$\therefore$ R is not symmetric

2. Write the domain of $f(x) = \cos^{-1} x$

Ans:- $-1 \leq x \leq 1$ (or)

$x \in [-1,\ 1]$ [(-1 1) is wrong]

3. Define scalar matrix.

Ans:-

(Contd….)

ರಘುನಾಥ. ಚ.ಹ., ಪ್ರಕಾಶ್‌ರಾಜ್ ಕೃತಿಗೆ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಚ.ಹ. ರಘುನಾಥ

ಪ್ರಕಾಶರಾಜ್ ಮೇಹು

ಬೆಂಗಳೂರು: ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ನೀಡುವ 2020ನೇ ಸಾಲಿನ ಚಲನಚಿತ್ರ ಸಾಹಿತ್ಯ ಪ್ರಶಸ್ತಿಗೆ ಪ್ರಜಾವಾಣಿಯ 'ಅಭಿಮತ'ದ ಸಂಪಾದಕ ರಘುನಾಥ ಚ.ಹ. ಅವರು 20 ಸಿನಿಮಾಗಳ ಕುರಿತ ಬರೆದ ಲೇಖನಗಳ ಸಂಗ್ರಹ 'ನಮೋ ವೆಂಕಟೇಶ' ಕೃತಿ ಆಯ್ಕೆಯಾಗಿದೆ.

ಬಳ್ಳಾರಿ ಜಿಲ್ಲೆ ಸಿರಿಗೇರಿಯ ಅನ್ನಪೂರ್ಣ ಪ್ರಕಾಶನ ಈ ಕೃತಿಯನ್ನು ಪ್ರಕಟಿಸಿದೆ. ವಾರ್ತಾ ಇಲಾಖೆಯ ಆಯುಕ್ತ ಹೇಮಂತ್ ಎಂ.ನಿಂಬಾಳ್ಕರ, ಪತ್ರಕರ್ತರಾದ ರಾಜಶೇಖರ ಹತಗುಂದಿ ಹಾಗೂ ಬಸವರಾಜ ಮೇಗಲಕೇರಿ ಅವರನ್ನು ಒಳಗೊಂಡ ಸಮಿತಿ ಈ ಕೃತಿಯನ್ನು ಆಯ್ಕೆ ಮಾಡಿದೆ.

2021ನೇ ಸಾಲಿನ ಚಲನಚಿತ್ರ ವಾರ್ಷಿಕ ಸಾಹಿತ್ಯ ಪ್ರಶಸ್ತಿಗೆ ಬೆಂಗಳೂರಿನ ಸಿರಿಗಂಧ ಪ್ರಕಾಶನ ಪ್ರಕಟಿಸಿರುವ ಚಲನಚಿತ್ರ ನಿರ್ದೇಶಕ ಪ್ರಕಾಶರಾಜ್ ಮೇಹು ಅವರ ಡಾ.ರಾಜ್‌ಕುಮಾರ್ ಬದುಕಿನ ಕುರಿತ 'ಅಂತರಂಗದ ಅಣ್ಣ' ಕೃತಿ ಆಯ್ಕೆಯಾಗಿದೆ. ಸಾಹಿತಿ ಚಿದಾನಂದ ಸಾಲಿ ಹಾಗೂ ಪತ್ರಕರ್ತ ಶರಣು ಹುಲ್ಲೂರು ಅವರು ಆಯ್ಕೆ ಸಮಿತಿ ಸದಸ್ಯರಾಗಿದ್ದರು.

ಲೇಖಕರು, ಪ್ರಕಾಶಕರಿಗೆ ತಲಾ ₹20 ಸಾವಿರ ನಗದು ಹಾಗೂ 50 ಗ್ರಾಂ ಬೆಳ್ಳಿ ಪದಕದೊಂದಿಗೆ ಸದ್ಯದಲ್ಲೇ ಪ್ರಶಸ್ತಿ ಪ್ರದಾನ ಮಾಡಲಾಗುತ್ತದೆ ಎಂದು ಎಂದು ವಾರ್ತಾ ಇಲಾಖೆ ಜಂಟಿ ನಿರ್ದೇಶಕ ಮಂಜುನಾಥ ಡೊಳ್ಳಿನ ತಿಳಿಸಿದ್ದಾರೆ.

ರಘುನಾಥ, ಇಂದೂಧರ, ಸಂಘಮಿತ್ರೆಗೆ ಪ್ರಶಸ್ತಿ

ಇಂದೂಧರ

ಸಂಘಮಿತ್ರೆ

ಕನ್ನಡ ಸಂಘರ್ಷ ಸಮಿತಿ ನೀಡುವ 2026ನೇ ಸಾಲಿನ 'ಕುವೆಂಪು ಚಿರಂತನ ಪ್ರಶಸ್ತಿ'ಗೆ ಪ್ರಜಾವಾಣಿಯ 'ಅಭಿಮತ'ದ ಸಂಪಾದಕ ರಘುನಾಥ ಚ.ಹ., ಕುವೆಂಪು ಅನಿಕೇತನ ಪ್ರಶಸ್ತಿಗೆ ಪತ್ರಕರ್ತ ಇಂದೂಧರ ಹೊನ್ನಾಪುರ ಹಾಗೂ ಕುವೆಂಪು ಯುವಕವಿ ಪ್ರಶಸ್ತಿಗೆ ಯುವ ಕವಯತ್ರಿ ಸಂಘಮಿತ್ರೆ ನಾಗರಘಟ್ಟ ಭಾಜನರಾಗಿದ್ದಾರೆ.

ಕುವೆಂಪು ಚಿರಂತನ ಪ್ರಶಸ್ತಿಯು ₹10 ಸಾವಿರ ನಗದು, ಕುವೆಂಪು ಅನಿಕೇತನ ಪ್ರಶಸ್ತಿಯು ₹5 ಸಾವಿರ ನಗದು ಪುರಸ್ಕಾರ, ಯುವಕವಿ ಪ್ರಶಸ್ತಿಯು ₹2 ಸಾವಿರ ನಗದು ಪುರಸ್ಕಾರ, ಫಲಕ ಹಾಗೂ ಅಭಿನಂದನಾ ಪತ್ರ ಒಳಗೊಂಡಿದೆ. ಜ.18ರಂದು ಬೆಳಿಗ್ಗೆ 10ಕ್ಕೆ ಚಾಮರಾಜಪೇಟೆಯ ಕನ್ನಡ ಸಾಹಿತ್ಯ ಪರಿಷತ್ತಿನ ಸಭಾಂಗಣದಲ್ಲಿ ಆಯೋಜಿಸಿರುವ ಕುವೆಂಪು ಹಾಗೂ ಬೇಂದ್ರೆ ಹುಟ್ಟುಹಬ್ಬ ಕಾರ್ಯಕ್ರಮದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದು ಸಮಿತಿಯ ಅಧ್ಯಕ್ಷ ಎ.ಎಸ್. ನಾಗರಾಜ ಸ್ವಾಮಿ ತಿಳಿಸಿದ್ದಾರೆ.

ನೇಮಕಾತಿ ಪರೀಕ್ಷೆ: ಕೀ ಉತ್ತರ ಪ್ರಕಟ

ಬೆಂಗಳೂರು: ತಾಂತ್ರಿಕ ಶಿಕ್ಷಣ, ಬಿಡಿಎ, ಬೆಂಗಳೂರು ಜಲಮಂಡಳಿ, ಕೃಷಿ ಮಾರಾಟ ಇಲಾಖೆ ಸೇರಿದಂತೆ ವಿವಿಧ ಇಲಾಖೆಗಳಲ್ಲಿನ ಖಾಲಿ ಹುದ್ದೆಗಳ ನೇಮಕಾತಿಗೆ ಇದೇ ಜ.10 ಮತ್ತು 11ರಂದು ನಡೆಸಿದ್ದ ಪರೀಕ್ಷೆಗಳ ಕೀ ಉತ್ತರಗಳನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಸೋಮವಾರ ಪ್ರಕಟಿಸಿದೆ.

ಕೀ ಉತ್ತರಗಳಿಗೆ ಆಕ್ಷೇಪಣೆಗಳು ಇದ್ದಲ್ಲಿ ಜ.14ರಂದು ಬೆಳಿಗ್ಗೆ 11 ಗಂಟೆ ಒಳಗೆ ನಿಗದಿತ ಲಿಂಕ್ ಮೂಲಕ ಸಲ್ಲಿಸಬೇಕು. ಬಳಿಕ ಪರಿಶೀಲಿಸಿ ಅಂತಿಮ ಫಲಿತಾಂಶ ಪ್ರಕಟಿಸಲಾಗುತ್ತದೆ ಎಂದು ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕ ಎಚ್.ಪ್ರಸನ್ನ ಹೇಳಿದ್ದಾರೆ.

'ನಿಮ್ಮ ಕ್ಷೇತ್ರದ ಶೇ 75ರಷ್ಟಾದರೂ ಕೊಡಿ'

ಕಲ್ಯಾಣ ಕರ್ನಾಟಕಕ್ಕೆ ಹೆಚ್ಚಿನ ಅನುದಾನ ಒದಗಿಸುವಂತೆ ಡಿಕೆಶಿಗೆ ಖರ್ಗೆ ಒತ್ತಾಯ

ರಾಜ್ಯಸಭೆ ವಿರೋಧ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ ಹಾಗೂ ಮುಖ್ಯಮಂತ್ರಿ ಸಿದ್ದರಾಮಯ್ಯ ಸಮಾರಂಭದಲ್ಲಿ ಚರ್ಚಿಸಿದರು –ಪ್ರಜಾವಾಣಿ ಚಿತ್ರ

ಪ್ರಜಾವಾಣಿ ವಾರ್ತೆ

ಯಡ್ರಾಮಿ (ಕಲಬುರಗಿ ಜಿಲ್ಲೆ): ಕಲ್ಯಾಣ ಕರ್ನಾಟಕಕ್ಕೆ ಹರಿದು ಬರುತ್ತಿರುವ ಅನುದಾನ ಕುರಿತು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಆಡಿದ ಮಾತಿಗೆ, ಎಐಸಿಸಿ ಅಧ್ಯಕ್ಷರಾದ ಮಲ್ಲಿಕಾರ್ಜುನ ಖರ್ಗೆ ಅವರು ವೇದಿಕೆಯಲ್ಲೇ ಟಾಂಗ್ ನೀಡಿದ ಪ್ರಸಂಗ ಸೋಮವಾರ ಇಲ್ಲಿ ನಡೆಯಿತು.

'ಸಂವಿಧಾನದ 371 (ಜೆ) ಕಲಂ ತಿದ್ದುಪಡಿ ನಂತರ ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಗೆ ಸಾವಿರಾರು ಕೋಟಿ ಅನುದಾನ ಹರಿದು ಬರುತ್ತಿದೆ. ಇದನ್ನು ನೋಡಿದರೆ ನಾನು ಇಲ್ಲಿಯೇ ಹುಟ್ಟಬೇಕಿತ್ತು. ನನ್ನ ಕ್ಷೇತ್ರ ಇಲ್ಲಿಯೇ ಇರಬೇಕಿತ್ತೆಂದು ಅನಿಸುತ್ತಿದೆ' ಎಂದು ಡಿ.ಕೆ.ಶಿವಕುಮಾರ್ ಅವರು ಹೇಳಿದರು.

ಇದನ್ನು ಭಾಷಣದಲ್ಲಿ ಉಲ್ಲೇಖಿಸಿದ ಖರ್ಗೆ ಅವರು, 'ಶಿವಕುಮಾರ್ ಅವರೇ, ನೀವು ನಮ್ಮಲ್ಲಿ ಹುಟ್ಟುವುದೂ ಬೇಡ. ನಾವು ನಿಮ್ಮ ಭಾಗದಲ್ಲಿ ಹುಟ್ಟುವುದೂ ಬೇಡ. ಮೈಸೂರು, ಕನಕಪುರ ಕ್ಷೇತ್ರಗಳು ಎಷ್ಟು ಅಭಿವೃದ್ಧಿ ಆಗಿವೆಯೋ ಅದರ ಶೇ 75ರಷ್ಟಾದರೂ, ಈ ಭಾಗದ ಅಭಿವೃದ್ಧಿಗೆ ನೀಡಿ' ಎಂದು ಗಟ್ಟಿ ಧ್ವನಿಯಲ್ಲಿ ಹೇಳಿದರು.

'ಬಫೆ ಊಟದ ಪದ್ಧತಿಯಲ್ಲಿ ಬೇಗನೇ ಹೋದವರಿಗೆ ಎಲ್ಲ ಬಗೆಯ ಖಾದ್ಯಗಳು ಸಿಗುತ್ತವೆ. ನೀವು (ದಕ್ಷಿಣ ಕರ್ನಾಟಕದವರು) ಬಫೆ ಸಿಸ್ಟಂನಲ್ಲಿ ಮುಂಚೆಯೇ ಹೋಗಿ ಬೇಕಾದ್ದನ್ನು ಹಾಕಿಸಿಕೊಂಡಿದ್ದೀರಿ. ನಾವು (ಕಲ್ಯಾಣ ಕರ್ನಾಟಕದವರು) ಇನ್ನೂ ಊಟ ಬರಬಹುದು ಎಂದು ಪಂಕ್ತಿಯಲ್ಲೇ ಕುಳಿತು ಕಾಯುತ್ತಿದ್ದೇವೆ' ಎಂದು ಅನುದಾನ ಹಂಚಿಕೆ ಯಲ್ಲಿನ ತಾರತಮ್ಯದ ಬಗ್ಗೆ ಪರೋಕ್ಷವಾಗಿ ಅಸಮಾಧಾನ ವ್ಯಕ್ತಪಡಿಸಿದರು.

'ಮೈಸೂರು, ಬೆಂಗಳೂರು ಭಾಗದ ಮಕ್ಕಳಿಗೆ ಉತ್ತಮ ಶಿಕ್ಷಣ, ಉದ್ಯೋಗಾವಕಾಶಗಳು ಸಿಗುತ್ತಿವೆ. ಕಲ್ಯಾಣ ಕರ್ನಾಟಕ ಭಾಗದಲ್ಲಿ ಶಾಲೆಗಳಿದ್ದರೂ ಶಿಕ್ಷಕರಿಲ್ಲ. ಸಿದ್ದರಾಮಯ್ಯನವರು ಹಾಗೂ ಶಿಕ್ಷಣ ಸಚಿವ ಮಧು ಬಂಗಾರಪ್ಪ ಅವರು 10 ಸಾವಿರ ಶಿಕ್ಷಕರನ್ನು ನೇಮಕ ಮಾಡಿಕೊಂಡು ಕಲ್ಯಾಣ ಕರ್ನಾಟಕದ ಶಾಲೆಗಳಿಗೆ ನಿಯೋಜನೆ ಮಾಡಬೇಕು. ನಮ್ಮಲ್ಲಿ ಭರ್ತಿಯಾಗಿ ಮಿಕ್ಕಿದರೆ ದಕ್ಷಿಣ ಕರ್ನಾಟಕಕ್ಕೆ ಕೊಂಡೊಯ್ಯಿರಿ' ಎಂದು ಹೇಳಿದರು.

ಖರ್ಗೆ ಅವರು ಈ ಮಾತು ಆಡುವಾಗ ಮುಖ್ಯಮಂತ್ರಿ ಅವರು ಸಚಿವ ಪ್ರಿಯಾಂಕ್ ಖರ್ಗೆ ಹಾಗೂ ಕೆಕೆಆರ್‌ಡಿಬಿ ಅಧ್ಯಕ್ಷ ಡಾ.ಅಜಯ್ ಸಿಂಗ್ ಅವರೊಂದಿಗೆ ಮಾತಿನಲ್ಲಿ ನಿರತರಾಗಿದ್ದರು. ಹೀಗಾಗಿ ಶಿಕ್ಷಕರ ಹುದ್ದೆಗಳ ಭರ್ತಿ ನಂತರ ತಮ್ಮ ಭಾಷಣದಲ್ಲಿ ಪ್ರಸ್ತಾಪ ಮಾಡಲಿಲ್ಲ.

'ಬುಡಬುಡಿಕೆಗೆ ದೇವರು ಒಲಿಯಲ್ಲ'

'ನರೇಂದ್ರ ಮೋದಿ ಅವರು ಎಲ್ಲಾ ಹಳೆ ಗುಡಿಗುಂಡಾರಳಿಗೆ ಅಲೆದಾಡಿ, ಗಂಟೆ ಬಾರಿಸುತ್ತಿದ್ದಾರೆ. ದೇವರು ನಿಮ್ಮ ಕೆಲಸದಿಂದ ಪ್ರಸನ್ನನಾಗುತ್ತಾನೆಯೇ ಹೊರತು ನೀವು ಬಾರಿಸುವ ಬುಡಬುಡಿಕೆಯಿಂದಲ್ಲ' ಎಂದು ಮಲ್ಲಿಕಾರ್ಜುನ ಖರ್ಗೆ ಟೀಕಿಸಿದರು.

'ಇವರು ಬರೀ ದೇವರು, ಧರ್ಮದ ಹೆಸರಿನಲ್ಲಿ ಲೂಟಿ ಮಾಡುತ್ತಿದ್ದಾರೆ. ಧರ್ಮ, ದೇವರು ಇರುವುದು ಜನರ ಕಲ್ಯಾಣಕ್ಕಾಗಿ. ಇವರು ವೋಟ್ ಸಲುವಾಗಿ ರಾಮಮಂದಿರ ಕಟ್ಟಿದ್ದೇನೆ ಎನ್ನುತ್ತಾರೆ. ಸೋಮನಾಥ ಮಂದಿರಕ್ಕೆ ಸಾವಿರ ವರ್ಷವಾಯಿತು ಎಂದು ಹೋಗುತ್ತಿದ್ದಾರೆ. 900 ವರ್ಷಗಳಾದಾಗ ಏಕೆ ನೆನಪಿಗೆ ಬಂದಿಲ್ಲ? ಮುಂಬರುವ ಅಸ್ಸಾಂ, ಪಶ್ಚಿಮ ಬಂಗಾಳ, ತಮಿಳುನಾಡು ಚುನಾವಣೆ ಕಾರಣಕ್ಕೆ ಈಗ ಸೋಮನಾಥ ಮಂದಿರ ನೆನಪಿಗೆ ಬರುತ್ತಿದೆ. ಜನರ ಮನಸ್ಸನ್ನು ಒಲಿಸಿಕೊಳ್ಳುವ ಪ್ರಯತ್ನ ಮಾಡುತ್ತಿದ್ದಾರೆ' ಎಂದು ಹೇಳಿದರು.

ಮಂಡಳಿಗೆ ₹13 ಸಾವಿರ ಕೋಟಿ: ಸಿದ್ದರಾಮಯ್ಯ

'ನಾನು ಮುಖ್ಯಮಂತ್ರಿಯಾಗಿ ಅಧಿಕಾರ ವಹಿಸಿಕೊಂಡ ಬಳಿಕ 2023–24ರಲ್ಲಿ ಕಲ್ಯಾಣ ಕರ್ನಾಟಕ ಅಭಿವೃದ್ಧಿ ಮಂಡಳಿಗೆ ₹3 ಸಾವಿರ ಕೋಟಿ, 2024–25ರಲ್ಲಿ ₹5 ಸಾವಿರ ಕೋಟಿ, ₹2025–26ರಲ್ಲಿ ₹5 ಸಾವಿರ ಕೋಟಿ ಸೇರಿದಂತೆ ಇದುವರೆಗೆ ₹13 ಸಾವಿರ ಕೋಟಿ ನೀಡಿದ್ದೇನೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

'ಈ ವರ್ಷ ಮಂಡಳಿ ಅಧ್ಯಕ್ಷ ಡಾ.ಅಜಯ್ ಸಿಂಗ್ ₹4 ಸಾವಿರ ಕೋಟಿ ಖರ್ಚು ಮಾಡುವುದಾಗಿ ಹೇಳಿದ್ದಾರೆ. ಎಲ್ಲ ₹5 ಸಾವಿರ ಕೋಟಿಯನ್ನೂ ಖರ್ಚು ಮಾಡಿ ಅಭಿವೃದ್ಧಿ ಕೈಗೆತ್ತಿಕೊಳ್ಳುವಂತೆ ಸೂಚಿಸಿದ್ದೇನೆ. ಅಷ್ಟೂ ಹಣ ಖರ್ಚಾದರೆ ಮತ್ತೆ ಕೊಡುತ್ತೇನೆ' ಎಂದರು.

ಇದಕ್ಕೂ ಮುನ್ನ ಮಾತನಾಡಿದ್ದ ಅಜಯ್ ಸಿಂಗ್, 'ಈ ಬಜೆಟ್‌ನಲ್ಲಿ ಮಂಡಳಿಗೆ ₹6 ಸಾವಿರ ಕೋಟಿ ಅನುದಾನ ಮೀಸಲಿಡಬೇಕು' ಎಂದು ಮನವಿ ಮಾಡಿದ್ದರು.

ಚಿಟಿಕೆ ಸುದ್ದಿ

ರಣಹದ್ದು ಸ್ವಭಾವ ಕಿಚ್ಚ ಸುದೀಪ್ ಹೇಳಿಕೆಗೆ ಆಕ್ಷೇಪ

ಕಿಚ್ಚ ಸುದೀಪ್

ರಾಮನಗರ: ಕಲರ್ಸ್ ಕನ್ನಡ ವಾಹಿನಿಯಲ್ಲಿ ಪ್ರಸಾರವಾಗುತ್ತಿರುವ 'ಬಿಗ್ ಬಾಸ್' ರಿಯಾಲಿಟಿ ಶೋದ 12ನೇ ಆವೃತ್ತಿಯಲ್ಲಿ ಅಳಿವಿನಂಚಿನಲ್ಲಿರುವ ರಣಹದ್ದುಗಳ ಬಗ್ಗೆ ನಿರೂಪಕ ಕಿಚ್ಚ ಸುದೀಪ್ ತಪ್ಪಾದ ಮಾಹಿತಿ ನೀಡಿದ್ದಾರೆ ಎಂದು ಕರ್ನಾಟಕ ರಣಹದ್ದು ಸಂರಕ್ಷಣಾ ಟ್ರಸ್ಟ್ ಆಕ್ಷೇಪ ಎತ್ತಿದೆ.

'ವಾರದ ಕಥೆ ಕಿಚ್ಚನ ಜೊತೆ' ಸಂಚಿಕೆಯ ಟಾಸ್ಕ್‌ನಲ್ಲಿ 'ಹೊಂಚು ಹಾಕಿ ಸಂಚು ಮಾಡಿ ಸರಿಯಾದ ಸಮಯಕ್ಕೆ ಲಬಕ್ಕನೆ ಹಿಡಿಯುವುದು' ಎಂದು ನಿರೂಪಕ ಕಿಚ್ಚ ಸುದೀಪ್ ಹೇಳಿರುವುದು ತಪ್ಪು ಮಾಹಿತಿ. ರಣಹದ್ದುಗಳು ಸತ್ತ ಜೀವಿಗಳ ಶವ ತಿಂದು ಪರಿಸರ ಸ್ವಚ್ಛಗೊಳಿಸಿ, ಸಾಂಕ್ರಾಮಿಕ ರೋಗ ಹರಡದಂತೆ ಪ್ರಮುಖ ಪಾತ್ರ ವಹಿಸುತ್ತವೆ. ತಪ್ಪು ಮಾಹಿತಿಯಿಂದ ರಣಹದ್ದುಗಳ ಸಂರಕ್ಷಣೆಗೆ ಹಿನ್ನಡೆಯಾಗಲಿದೆ. ಹಾಗಾಗಿ, ಸುದೀಪ್ ಈ ಬಗ್ಗೆ ಸ್ಪಷ್ಟೀಕರಣ ನೀಡಿ ಜನರಲ್ಲಿ ಉಂಟಾಗಿರುವ ತಪ್ಪಾದ ಗ್ರಹಿಕೆ ದೂರ ಮಾಡಬೇಕು ಎಂದು ಟ್ರಸ್ಟ್ ಒತ್ತಾಯಿಸಿದೆ.

ಸಚಿವ ಸಂಪುಟದ ತುರ್ತುಸಭೆ ನಾಳೆ

ಬೆಂಗಳೂರು: ನರೇಗಾ ಬದಲಿಗೆ ಕೇಂದ್ರ ಸರ್ಕಾರ ಜಾರಿಗೆ ತಂದಿರುವ ವಿಬಿ–ಜಿ ರಾಮ್ ಜಿ ಕಾಯ್ದೆಯ ಬಗ್ಗೆ ಚರ್ಚಿಸಲು ವಿಧಾನಮಂಡಲದ ವಿಶೇಷ ಅಧಿವೇಶನಕ್ಕೆ ದಿನಾಂಕ ನಿಗದಿ ಮಾಡಲು ಬುಧವಾರ ಸಚಿವ ಸಂಪುಟದ ತುರ್ತುಸಭೆ ಕರೆಯಲಾಗಿದೆ.

ಕಾಯ್ದೆ ರದ್ದುಗೊಳಿಸುವಂತೆ ಒತ್ತಾಯಿಸಿ ಅಧಿವೇಶನದಲ್ಲಿ ಖಂಡನಾ ನಿರ್ಣಯ ತೆಗೆದುಕೊಳ್ಳಲು ಸರ್ಕಾರ ನಿರ್ಧರಿಸಿದೆ ಎಂದು ಮೂಲಗಳು ತಿಳಿಸಿವೆ.

ಕಳೆದ ವಾರ ನಡೆದ ಸಚಿವ ಸಂಪುಟ ಸಭೆಯಲ್ಲಿ ವಿಬಿ ಜಿ ರಾಮ್ ಜಿ ಕುರಿತು ಎಲ್ಲ ಸಚಿವರು ಆಕ್ರೋಶ ವ್ಯಕ್ತಪಡಿಸಿದ್ದರು. ಸುಪ್ರೀಂ ಕೋರ್ಟ್ ಮೊರೆ ಹೋಗಲು ಸಂಪುಟ ತೀರ್ಮಾನಿಸಿತ್ತು. ರಾಜ್ಯ ವ್ಯಾಪಿ ಕೇಂದ್ರ ಸರ್ಕಾರದ ವಿರುದ್ಧ ಬೃಹತ್ ಹೋರಾಟ ನಡೆಸಲು ಕಾಂಗ್ರೆಸ್ ಪಕ್ಷ ತಯಾರಿ ನಡೆಸಿದೆ.

'ಎಸ್‌ಡಿಪಿಐ ಸಮಾವೇಶಕ್ಕೆ ಅನುಮತಿ ಬೇಡ'

ಬೆಂಗಳೂರು: ಎಸ್‌ಡಿಪಿಐ ನಗರದಲ್ಲಿ ಆಯೋಜಿಸಿರುವ ಸಮಾವೇಶಕ್ಕೆ ಅನುಮತಿ ನೀಡಬಾರದು ಎಂದು ಶಾಸಕ ಬಿ.ಆರ್. ಪಾಟೀಲ್ ಆಗ್ರಹಿಸಿದ್ದಾರೆ.

'ಎಸ್‌ಡಿಪಿಐ ಕೋಮುವಾದಿಯಾಗಿದ್ದು ಸಮಾಜದಲ್ಲಿ ಸಾಮರಸ್ಯ ಕೆಡಿಸುತ್ತಾ ಬಂದಿದೆ. ಬಿಜೆಪಿ ಹಾಗೂ ಆರ್‌ಎಸ್‌ಎಸ್ ಸಿದ್ಧಾಂತವನ್ನು ವಿರೋಧ ಮಾಡುವ ನಾವು, ಎಸ್‌ಡಿಪಿಐ ಸಿದ್ಧಾಂತವನ್ನೂ ವಿರೋಧಿಸುತ್ತೇವೆ' ಎಂದಿದ್ದಾರೆ.

'ಈ ಎರಡೂ ಕೋಮುವಾದಿ ಗುಂಪುಗಳು ಶಾಂತಿಯನ್ನು ಕದಡುತ್ತಲೇ ಇವೆ. ಹಾಗಾಗಿ ಸಮಾವೇಶಕ್ಕೆ ಅನುಮತಿ ನೀಡಬಾರದು ಎಂದು ಗೃಹ ಸಚಿವರನ್ನು ಒತ್ತಾಯಿಸಿದ್ದಾರೆ.

ವಿಧಾನ ಪರಿಷತ್‌ನ ಮಾಜಿ ಸದಸ್ಯ ಮೋಹನ್ ಕುಮಾರ್ ಕೊಂಡಜ್ಜಿ, ನಾಗೇಶ್ ಅರಳಕುಪ್ಪೆ, ದಯಾನಂದ್. ಶ್ರೀಕಂಠ ಮೂರ್ತಿ, ಜಿ.ವಿ.ಸುಂದರ್, ಪ್ರಕಾಶ್ ಕಮ್ಮರಡಿ, ಆಲಿಬಾಬಾ ಅವರು ಈ ಪತ್ರಕ್ಕೆ ಸಹಿ ಹಾಕಿದ್ದಾರೆ.

ಎಸ್‌ಎಸ್‌ಎಲ್‌ಸಿ ಪೂರ್ವ ಸಿದ್ಧತಾ ಪರೀಕ್ಷೆ ಪ್ರಶ್ನೆ ಪತ್ರಿಕೆ ಸೋರಿಕೆ

ಮುಖ್ಯ ಶಿಕ್ಷಕರು ಸೇರಿ 8 ಮಂದಿ ಸೆರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಸ್‌ಎಸ್‌ಎಲ್‌ಸಿ ಪೂರ್ವ ಸಿದ್ಧತಾ ಪರೀಕ್ಷೆಯ ಪ್ರಶ್ನೆ ಪತ್ರಿಕೆ ಸೋರಿಕೆ ಆರೋಪ ಪ್ರಕರಣದಲ್ಲಿ ಮುಖ್ಯ ಶಿಕ್ಷಕರು ಸೇರಿ ಎಂಟು ಮಂದಿಯನ್ನು ಉತ್ತರ ವಿಭಾಗದ ಸೈಬರ್ ಕ್ರೈಂ ಪೊಲೀಸರು ಬಂಧಿಸಿದ್ದಾರೆ.

ತುಮಕೂರಿನ ಶಾಲೆಯೊಂದರ ಮುಖ್ಯಶಿಕ್ಷಕ ವಿ.ಡಿ.ಗಿರೀಶ್, ಕಲಬುರಗಿಯ ಶಾಲೆಯೊಂದರ ಮುಖ್ಯ ಶಿಕ್ಷಕಿ ಶಾಹಿದಾ ಬೇಗಂ, ಶಿಕ್ಷಕರಾದ ಮೊಹಮ್ಮದ್ ಸಿರಾಜುದ್ದೀನ್, ಫರ್ಜಾನಾ ಬೇಗಂ, ಸಹ ಶಿಕ್ಷಕಿ ಫಾಹ್ಮಿದಾ, ರಾಮನಗರ ಶಾಲೆಯ ಸಹ ಶಿಕ್ಷಕ ಅಮ್ಜದ್ ಖಾನ್ ಹಾಗೂ ಇಬ್ಬರು ವಿದ್ಯಾರ್ಥಿಗಳನ್ನು ಬಂಧಿಸಿ, ವಿಚಾರಣೆಗೆ ಒಳಪಡಿಸಲಾಗಿದೆ.

ಹಿಂದಿ ವಿಷಯದ ಪ್ರಶ್ನೆ ಪತ್ರಿಕೆ ಯೂಟ್ಯೂಬ್‌ನಲ್ಲಿ ಹರಿದಾಡಿತ್ತು. ಸಮಾಜ ವಿಜ್ಞಾನ, ಇಂಗ್ಲಿಷ್ ಪ್ರಶ್ನೆ ಪತ್ರಿಕೆ ಕೂಡ ಸೋರಿಕೆ ಆಗಿತ್ತು. ರಾಜ್ಯ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಳಿಯ ಅಧಿಕಾರಿ ಪಿ.ಮಂಜುನಾಥ್ ಅವರು ನೀಡಿದ ದೂರು ಆಧರಿಸಿ, ಉತ್ತರ ವಿಭಾಗದ ಸೆನ್ ಠಾಣೆ ಪೊಲೀಸರು ಪ್ರಕರಣ ದಾಖಲಿಸಿ, ತನಿಖೆ ಕೈಗೊಂಡಿದ್ದಾರೆ.



> ಕೆಲವು ಮಾಹಿತಿಗಳನ್ನು ಆಧರಿಸಿ ಆರೋಪಿಗಳನ್ನು ಬಂಧಿಸಲಾಗಿದೆ. ಯಾರ ಪಾತ್ರ ಏನು ಎಂಬುದರ ಬಗ್ಗೆ ವಿಚಾರಣೆ ನಡೆಸಲಾಗುತ್ತಿದೆ
>
> **ಸೀಮಾಂತ್ ಕುಮಾರ್ ಸಿಂಗ್,** ಬೆಂಗಳೂರು ನಗರ ಪೊಲೀಸ್ ಕಮಿಷನರ್

'ತುಮಕೂರು, ರಾಮನಗರ ಮತ್ತು ಕಲಬುರಗಿ ಜಿಲ್ಲೆಗಳ ಕೆಲವು ಶಾಲೆಗಳ ಶಿಕ್ಷಕರು ಪ್ರಶ್ನೆ ಪತ್ರಿಕೆ ಸೋರಿಕೆಯಲ್ಲಿ ಶಾಮೀಲು ಆಗಿರುವುದು ಪ್ರಾಥಮಿಕ ತನಿಖೆಯಿಂದ ಪತ್ತೆಯಾಗಿದೆ. ವಿದ್ಯಾರ್ಥಿಗಳು ಸಹ ಇದರಲ್ಲಿ ಭಾಗಿಯಾಗಿದ್ದಾರೆ. ಪ್ರಶ್ನೆ ಪತ್ರಿಕೆ ಸೋರಿಕೆ ಯಾವ ರೀತಿಯಲ್ಲಿ ನಡೆದಿದೆ? ಇತರರು ಶಾಮೀಲಾಗಿದ್ದಾರೆಯೇ? ಎಂಬುದರ ಬಗ್ಗೆ ತನಿಖೆ ಮುಂದುವರಿದಿದೆ' ಎಂದು ಪೊಲೀಸರು ತಿಳಿಸಿದರು.

'ಪ್ರಶ್ನೆಪತ್ರಿಕೆ ಸೋರಿಕೆಯ ಮೂಲ ಇನ್ನೂ ಪತ್ತೆಯಾಗಿಲ್ಲ. ಬೆಂಗಳೂರು, ಮೈಸೂರು, ಕಲಬುರಗಿ ಮತ್ತು ಶಿವಮೊಗ್ಗದಲ್ಲಿ ಪ್ರಶ್ನೆಪತ್ರಿಕೆಗಳು ಸೋರಿಕೆ ಆಗಿರುವುದು ಗೊತ್ತಾಗಿದೆ. ಪರೀಕ್ಷೆಯಲ್ಲಿ ವಿದ್ಯಾರ್ಥಿಗಳು ಉತ್ತೀರ್ಣ ರಾಗಲಿ ಎಂಬ ಕಾರಣಕ್ಕೆ ಶಿಕ್ಷಕರು ಪ್ರಶ್ನೆಗಳನ್ನು ಕಳುಹಿಸಿರುವ ಸಾಧ್ಯತೆ ಇದೆ. ಆದರೆ, ವಿದ್ಯಾರ್ಥಿಗಳು ಅದನ್ನು ಸಹಪಾಠಿಗಳಿಗೆ ಟೆಲಿಗ್ರಾಂ ಮತ್ತು ಸಾಮಾಜಿಕ ಜಾಲತಾಣಗಳಲ್ಲಿ ₹300 ರಿಂದ ₹500ಕ್ಕೆ ಮಾರಾಟ ಮಾಡಿದ್ದಾರೆ. ಪ್ರಶ್ನೆ ಪತ್ರಿಕೆಗಳನ್ನು ಜಾಲತಾಣದಲ್ಲಿ ಹಂಚಿಕೊಂಡಿರುವವರ ವಿರುದ್ಧವೂ ಕ್ರಮ ಕೈಗೊಳ್ಳಲಾಗುವುದು' ಎಂದು ಹೇಳಿದರು.

ಯೂಟ್ಯೂಬ್ ಚಾನೆಲ್ ವಿರುದ್ಧ ಎಫ್‌ಐಆರ್

ಪದವಿ ಪೂರ್ವ ಶಿಕ್ಷಣ ಇಲಾಖೆ ನೀಡುವ ಮಾದರಿಯಲ್ಲಿ ಪ್ರಶ್ನೆಪತ್ರಿಕೆಯನ್ನು ಸಿದ್ಧಪಡಿಸಿ ಅಪ್‌ಲೋಡ್ ಮಾಡಿದ್ದ ಯೂಟ್ಯೂಬ್ ಚಾನೆಲ್ ವಿರುದ್ಧ ಜನವರಿ 9ರಂದು ಉತ್ತರ ವಿಭಾಗದ ಸೆನ್ ಕ್ರೈಂ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿತ್ತು.

ಈ ಸಂಬಂಧ ಪದವಿ ಪೂರ್ವ ಶಿಕ್ಷಣ ಇಲಾಖೆಯ ಜಂಟಿ ನಿರ್ದೇಶಕ ಎನ್. ರಾಜು ಅವರು ದೂರು ನೀಡಿದ್ದರು.

'ಇಲಾಖೆ ನೀಡಿದ ಮಾದರಿಯಲ್ಲಿ ಹಿಂದಿ ಪ್ರಶ್ನೆ ಪತ್ರಿಕೆಯನ್ನು ಸಿದ್ಧಪಡಿಸಿ, ನಿರಂಜನ್‌ಶೆಟ್ಟಿ@ನಿರಂಜನ್ ಶೆಟ್ಟಿ 9581 ಎಂಬ ಯೂಟ್ಯೂಬ್ ಚಾನೆಲ್‌ನಲ್ಲಿ ಅಪ್‌ಲೋಡ್ ಮಾಡಿ, ವಿದ್ಯಾರ್ಥಿಗಳಿಗೆ ದಾರಿ ತಪ್ಪಿಸುವ ಪ್ರಯತ್ನ ಮಾಡಿದೆ. ಹಾಗಾಗಿ ಇವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು' ಎಂದು ದೂರಿನಲ್ಲಿ ಉಲ್ಲೇಖಿಸಿದ್ದರು.

ಪಿಂಚಣಿ: ವಿ.ವಿಗಳಿಗೆ ಅನುದಾನ

ಮೈಸೂರು: ಪಿಂಚಣಿ ಪಾವತಿಗಾಗಿ ರಾಜ್ಯದ ಆರು ವಿಶ್ವವಿದ್ಯಾಲಯಗಳಿಗೆ ಅನುದಾನ ಬಿಡುಗಡೆ ಮಾಡಿ ಸರ್ಕಾರ ಆದೇಶ ಹೊರಡಿಸಿದೆ.

ಶಿಕ್ಷಣ ಇಲಾಖೆಯ ಉನ್ನತ ಶಿಕ್ಷಣ ವಲಯದಡಿ ಬರುವ ವಿ.ವಿಗಳಿಗೆ ರಾಜ್ಯ ವಲಯ ಯೋಜನೆಗಳಡಿ ಅನುದಾನ ಒದಗಿಸಲಾಗಿದೆ. ವಿ.ವಿಗಳಿಂದ ಸಲ್ಲಿಕೆಯಾಗಿದ್ದ ಮನವಿಯನ್ನು ಪುರಸ್ಕರಿಸಲಾಗಿದೆ. 2025–26ನೇ ಸಾಲಿನ ಪೂರಕ ಬಜೆಟ್‌ನಲ್ಲಿ (2ನೇ ಕಂತು) ಕೆಲವು ಷರತ್ತುಗಳಿಗೆ ಒಳಪಟ್ಟು ಬಿಡುಗಡೆ ಮಾಡಲಾಗಿದೆ.

ಮೈಸೂರು ವಿ.ವಿ. ಹಾಗೂ ಕರ್ನಾಟಕ ವಿ.ವಿಗೆ ತಲಾ ₹ 25 ಕೋಟಿ, ಬೆಂಗಳೂರು ವಿ.ವಿಗೆ ₹ 5 ಕೋಟಿ, ಗುಲ್ಬರ್ಗ, ಮಂಗಳೂರು ಹಾಗೂ ಕುವೆಂಪು ವಿಶ್ವವಿದ್ಯಾಲಯಗಳಿಗೆ ತಲಾ ₹ 15 ಕೋಟಿಯನ್ನು ಸಹಾಯಾನುಧಾನ ಮತ್ತು ವಿಶ್ರಾಂತಿ ವೇತನಗಗಳ ಉಪ ಶೀರ್ಷಿಕೆಯಲ್ಲಿ ಬಿಡುಗಡೆ ಮಾಡಲಾಗಿದೆ.

ಪ್ರಸಕ್ತ ಸಾಲಿನಲ್ಲಿ ವಿಶ್ರಾಂತಿ ವೇತನಕ್ಕೆ ಪುನಃ ಹೆಚ್ಚುವರಿ ಅನುದಾನ ಕೋರಬಾರದು. ಅನಗತ್ಯ ವೆಚ್ಚಗಳಿಗೆ ಕಡಿವಾಣ ಹಾಕಬೇಕು ಎಂಬುದು ಸೇರಿಹಲವು ಷರತ್ತುಗಳನ್ನು ವಿಶ್ವವಿದ್ಯಾಲಯಗಳಿಗೆ ವಿಧಿಸಲಾಗಿದೆ.

ಭೀಮಣ್ಣ ಖಂಡ್ರೆ ಆಸ್ಪತ್ರೆಯಿಂದ ಮನೆಗೆ

ಪ್ರಜಾವಾಣಿ ವಾರ್ತೆ

ಬೀದರ್: ಮಾಜಿ ಸಚಿವರೂ ಆದ ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭೆ ಮಾಜಿ ಅಧ್ಯಕ್ಷ ಭೀಮಣ್ಣ ಖಂಡ್ರೆ (102) ಅವರನ್ನು ಸೋಮವಾರ ಬೆಳಿಗ್ಗೆ ನಗರದ ಖಾಸಗಿ ಆಸ್ಪತ್ರೆಯಿಂದ ಆಂಬುಲೆನ್ಸ್‌ನಲ್ಲಿ ಭಾಲ್ಕಿಯಲ್ಲಿರುವ ಅವರ ಮನೆಗೆ ಕರೆದೊಯ್ಯಲಾಯಿತು.

ವಯೋಸಹಜ ಕಾಯಿಲೆಯಿಂದ ಬಳಲುತ್ತಿರುವ ಅವರಿಗೆ ಜೀವರಕ್ಷಕಗಳ ಮೂಲಕ ಚಿಕಿತ್ಸೆ ನೀಡಲಾಗುತ್ತಿದೆ. ಕಳೆದ ಒಂದು ವಾರದಿಂದ ಆಸ್ಪತ್ರೆಯಲ್ಲಿರುವ ಅವರ ಆರೋಗ್ಯದಲ್ಲಿ ಶನಿವಾರ ಚೇತರಿಕೆ ಕಂಡಿತ್ತು. ಆದರೆ, ಭಾನುವಾರ ಸತತವಾಗಿ ಆರೋಗ್ಯ ಕ್ಷೀಣಿಸುತ್ತ ಹೋಯಿತು. ಅವರ ಮಗ, ಜಿಲ್ಲಾ ಉಸ್ತುವಾರಿ ಸಚಿವ ಈಶ್ವರ ಬಿ. ಖಂಡ್ರೆ ಅವರು ಅನೇಕ ಸಲ ಆಸ್ಪತ್ರೆಗೆ ಭೇಟಿ ನೀಡಿ ವೈದ್ಯರಿಂದ ಮಾಹಿತಿ ಪಡೆದರು. ಭಾನುವಾರ ತಡರಾತ್ರಿವರೆಗೆ ಆಸ್ಪತ್ರೆಯಲ್ಲಿಯೇ ಇದ್ದು, ಮನೆಗೆ ನಿರ್ಗಮಿಸಿದ್ದರು. ಸೋಮವಾರ ಬೆಳಿಗ್ಗೆ ಖಂಡ್ರೆ ಕುಟುಂಬದವರ ಸಮ್ಮುಖದಲ್ಲಿ ಭೀಮಣ್ಣ ಖಂಡ್ರೆ ಅವರನ್ನು ಆಸ್ಪತ್ರೆಯಿಂದ ಮನೆಗೆ ಕೊಂಡೊಯ್ಯಲಾಯಿತು.

'ಭೀಮಣ್ಣ ಖಂಡ್ರೆಯವರ ಆರೋಗ್ಯ ಬಹಳ ಕ್ಷೀಣಿಸಿದೆ. ಜೀವರಕ್ಷಕಗಳನ್ನುಅಳವಡಿಸಿಆಂಬ್ಯುಲೆನ್ಸ್‌ನಲ್ಲಿಅವರನ್ನುಮನೆಗೆಕಳಿಸಿಕೊಡಲಾಗಿದೆ. ಅವರ ಕುಟುಂಬದವರ ಇಚ್ಛೆಯಂತೆ ಮನೆಗೆ ಕಳುಹಿಸಿಕೊಡಲಾಗಿದೆ' ಎಂದು ನಗರದ ಗುದಗೆ ಮಲ್ಟಿ ಸ್ಪೆಷಾಲಿಟಿ ಆ್ಯಂಡ್ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯ ಹಿರಿಯ ವೈದ್ಯ ಡಾ.ಚಂದ್ರಕಾಂತ ಗುದಗೆ 'ಪ್ರಜಾವಾಣಿ'ಗೆ ತಿಳಿಸಿದ್ದಾರೆ.

ಭೀಮಣ್ಣ ಖಂಡ್ರೆ ಅವರನ್ನು ಮನೆಗೆ ಕರೆತಂದಿರುವ ವಿಷಯ ತಿಳಿದು ವಿವಿಧ ಮಠಾಧೀಶರು, ವಿವಿಧ ರಾಜಕೀಯ ಪಕ್ಷಗಳ ಮುಖಂಡರು, ಸಾರ್ವಜನಿಕರು ತಂಡೋಪ ತಂಡವಾಗಿ ಅವರ ಮನೆಗೆ ಭೇಟಿ ನೀಡಿದರು.

ವಿವಿಧೆಡೆ ವಿದ್ಯುತ್ ವ್ಯತ್ಯಯ ಇಂದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಾಣಸವಾಡಿಯ ವಿದ್ಯುತ್ ಉಪ ಕೇಂದ್ರದಲ್ಲಿ ತುರ್ತುನಿರ್ವಹಣಾ ಕೆಲಸ ಹಮ್ಮಿಕೊಂಡಿರುವುದರಿಂದ ಜ.13ರಂದು ವಿವಿಧ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯ ಉಂಟಾಗಲಿದೆ.

ಎಚ್‌ಬಿಆರ್ ಲೇಔಟ್ 1ನೇ ಬ್ಲಾಕ್, 2ನೇ ಬ್ಲಾಕ್, 3ನೇ ಬ್ಲಾಕ್, ಸರ್ವೀಸ್ ರೋಡ್, ಕಮ್ಮನಹಳ್ಳಿ ಮುಖ್ಯರಸ್ತೆ, ಸಿಎಂಆರ್ ರಸ್ತೆ, ಬಾಬುಸಾಪಾಳ್ಯ, ಬಾಲಚಂದ್ರ ಲೇಔಟ್, ಫ್ಲವರ್ ಗಾರ್ಡನ್, ಎಂ.ಎಂ ಗಾರ್ಡನ್, ಅರ್ಕಾವತಿ ಲೇಔಟ್, ಅಂಜನಾದ್ರಿ ಲೇಔಟ್, ವಿಜಯೇಂದ್ರ ಗಾರ್ಡನ್, ಮಲ್ಲಪ್ಪ ಲೇಔಟ್, ಪ್ರಕೃತಿ ಟೌನ್‌ಶಿಪ್, ಬಾಲಾಜಿ ಲೇಔಟ್, ಜಿಎನ್‌ಆರ್ ಗಾರ್ಡನ್, ಸುಬ್ಬಯ್ಯನಪಾಳ್ಯ, ಹೊರಮಾವು, ಮುನಿರೆಡ್ಡಿ ಲೇಔಟ್, ವಿಜಯಾ ಬ್ಯಾಂಕ್ ಕಾಲೊನಿ, ನಿಸರ್ಗ ಕಾಲೊನಿ, ನಂದನಂ ಕಾಲೊನಿ, ಅಮರ್ ಏಜೆನ್ಸಿ ಲೇಔಟ್, ಪಿ ಅಂಡ್ ಟಿ ಲೇಔಟ್, ಪಪ್ಪಯ್ಯ ಲೇಔಟ್, ಆಶೀರ್ವಾದ್ ಕಾಲೊನಿ, ಶಕ್ತಿನಗರ, ಹೆಣ್ಣೂರು ವಿಲೇಜ್, ಭೈರವೇಶ್ವರ ಲೇಔಟ್, ಚಿಕ್ಕಣ್ಣ ಲೇಔಟ್, ಸಿಎಂಆರ್ ಲೇಔಟ್, ಹೆಣ್ಣೂರು ಕ್ರಾಸ್, ಕೆಂಚಪ್ಪ ಗಾರ್ಡನ್, ಬೃಂದಾವನ ಲೇಔಟ್, ಹೊಯ್ಸಳ ನಗರದಲ್ಲಿ ಮಂಗಳವಾರ ಬೆಳಿಗ್ಗೆ 10ರಿಂದ ಮಧ್ಯಾಹ್ನ 2ರವರೆಗೆ ವಿದ್ಯುತ್ ವ್ಯತ್ಯಯ ಆಗಲಿದೆ.

ಬೃಂದಾವನ ಅವೆನ್ಯೂ ಹೆರಿಟೇಜ್, ವಿನಾಯಕ ಲೇಔಟ್, ಜಯಂತಿ ಗ್ರಾಮ, ಬಿಡಿಎ ಕಾಂಪ್ಲೆಕ್ಸ್ ಎದುರು, ನರೇಂದ್ರ ಟೆಂಟ್ ಹತ್ತಿರ, ಒಎಂಬಿಆರ್ ಲೇಔಟ್, ಕಸ್ತೂರಿ ನಗರ, ಪಿಲ್ಲರೆಡ್ಡಿ ನಗರ, ರಾಮಯ್ಯ ಲೇಔಟ್, ದೊಡ್ಡ ಬಾಣಸವಾಡಿ, ರಾಮಮೂರ್ತಿ ನಗರ ಮುಖ್ಯರಸ್ತೆ, ಬಿ.ಚನ್ನಸಂದ್ರ, ನಂಜಪ್ಪ ಗಾರ್ಡನ್, ಅಗರ ಮುಖ್ಯರಸ್ತೆ, ದೊಡ್ಡಯ್ಯ ಲೇಔಟ್, ಬ್ಯಾಂಕ್ ಅವೆನ್ಯೂ, ಆರ್. ಎಸ್ ಪಾಳ್ಯ, ಎಡಿಎಂಸಿ ಮಿಲಿಟರಿ ಗೇಟ್, ಮುನಿಸ್ವಾಮಿ ರಸ್ತೆ, ಮುನಿ ವೀರಪ್ಪ ರಸ್ತೆ, ಕುಳ್ಳಪ್ಪ ವೃತ್ತ, ರಾಜಕುಮಾರ್ ಪಾರ್ಕ್, ಮೇಘನಾ ಪಾಳ್ಯ, ಬಂಜಾರಾ ಲೇಔಟ್, ವಿಜಯಲಕ್ಷ್ಮಿ ಲೇಔಟ್, ಸಂಕಲ್ಪ ಲೇಔಟ್, ಗ್ರೀನ್ ಗಾರ್ಡನ್ ಫೇಸ್–2, ಸಮೃದ್ಧಿ ಲೇಔಟ್, ಬೆಥೆಲ್ ಲೇಔಟ್ ಸೇರಿದಂತೆ ಹಲವು ಕಡೆ ವಿದ್ಯುತ್ ವ್ಯತ್ಯಯ ಆಗಲಿದೆ ಎಂದು ಬೆಸ್ಕಾಂ ಪ್ರಕಟಣೆ ತಿಳಿಸಿದೆ.

'ದಯಾಮರಣ: ಮಾರ್ಗಸೂಚಿ ರೂಪಿಸಿ'

ಕರಿಬಸಮ್ಮ

ಬೆಂಗಳೂರು: 'ಸುಪ್ರೀಂ ಕೋರ್ಟ್ ಸೂಚಿಸಿದ ನಂತರ ರಾಜ್ಯ ಸರ್ಕಾರ ದಯಾಮರಣಕ್ಕೆ ಕಾನೂನು ತಂದಿದ್ದರೂ ಮಾರ್ಗಸೂಚಿಗಳನ್ನು ರೂಪಿಸಿಲ್ಲ' ಎಂದು ದಯಾಮರಣ ಹೋರಾಟಗಾರ್ತಿ ದಾವಣಗೆರೆಯ ಎಚ್.ಬಿ. ಕರಿಬಸಮ್ಮ ಅಸಮಾಧಾನ ವ್ಯಕ್ತಪಡಿಸಿದರು.

'ದಯಾಮರಣಕ್ಕೆ ಅರ್ಜಿ ಸಲ್ಲಿಸುವುದು ಹೇಗೆ? ಯಾವ ಆಸ್ಪತ್ರೆ ಸಂಪರ್ಕಿಸಬೇಕು ಎನ್ನುವ ಗೊಂದಲ ಜನರನ್ನು ಕಾಡುತ್ತಿದೆ. ದಯಾಮರಣ ಸಿಗದೇ ಹಲವರು ನರಳುತ್ತಲೇ ಜೀವ ಬಿಡುವ ಸನ್ನಿವೇಶವಿದೆ. ಕಾನೂನು ಜಾರಿ ವಿಚಾರದಲ್ಲಿ ಸರ್ಕಾರ ಆಸಕ್ತಿ ತೋರಿದರೂ ನಿಯಮಗಳನ್ನು ರೂಪಿಸುವಲ್ಲಿ ವಿಫಲವಾಗಿದೆ. ಇದಕ್ಕಾಗಿ ಹೋರಾಟ ಮಾಡಿದ ನಾನು ಜನರಿಗೆ ಉತ್ತರ ನೀಡುವ ಸನ್ನಿವೇಶ ನಿರ್ಮಾಣವಾಗಿದೆ' ಎಂದು ಸೋಮವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

'ನನಗೀಗ 86 ವರ್ಷ. ಎರಡು ದಶಕಗಳಿಂದಲೂ ದಯಾಮರಣದ ವಿಚಾರದಲ್ಲಿ ಹೋರಾಟ ನಡೆಸುತ್ತಿದ್ದೇನೆ. ಅನೇಕ ರೋಗಗಳಿಂದ ನರಳಿ ನನಗೆ ಬದುಕು ಸಾಕಾಗಿದೆ. ರೋಗಗಳು ಉಲ್ಬಣಿಸಿ ಪರಾವಲಂಬಿಯಾಗಿ ಬದುಕುವ ಮುನ್ನವೇ ದೇಹದಲ್ಲಿ ಅಲ್ಪಸ್ವಲ್ಪ ಬಲ ಇರುವಾಗ ಕಾನೂನಾತ್ಮಕ ವಾಗಿಯೇ ಸಾವು ಬಯಸುತ್ತಿದ್ದೇನೆ' ಎಂದರು.

ಬ್ಯಾಂಕ್‌ನ ನಿವೃತ್ತ ಉದ್ಯೋಗಿ ಕಲ್ಪನಾ ಮಾತನಾಡಿ, ಹಲವು ದೇಶಗಳಲ್ಲಿ ದಯಾಮರಣಕ್ಕೆ ವ್ಯವಸ್ಥೆಗಳಿವೆ. ವೈದ್ಯರ ಸಹಕಾರದೊಂದಿಗೆ ಜಾರಿಗೊಳಿಸಲು ಕಾನೂನು ರೂಪಿಸಲಾಗಿದೆ. ಭಾರತದಲ್ಲೂ ಇದನ್ನು ಜಾರಿಗೊಳಿಸಲು ಪ್ರಧಾನಿಗೆ ಪತ್ರ ಬರೆಯುವುದಾಗಿ ತಿಳಿಸಿದರು.

ಬೆಂಗಳೂರಿಗೆ ನ್ಯೂಸೌತ್ ವೇಲ್ಸ್ ವಿ.ವಿ ಕ್ಯಾಂಪಸ್: ಒಪ್ಪಂದ

ಪ್ರಜಾವಾಣಿ ವಾರ್ತೆ


ಆಸ್ಟ್ರೇಲಿಯಾದ ನ್ಯೂಸೌತ್ ವೇಲ್ಸ್ ವಿಶ್ವವಿದ್ಯಾಲಯದ ಜತೆ ಮಾಡಿಕೊಂಡ ಒಪ್ಪಂದ ಪತ್ರವನ್ನು ಸಚಿವರಾದ ಎಂ.ಸಿ.ಸುಧಾಕರ್, ಎಂ.ಬಿ.ಪಾಟೀಲ ಪ್ರದರ್ಶಿಸಿದರು. ಕೈಗಾರಿಕಾ ಇಲಾಖೆ ಆಯುಕ್ತೆ ಗುಂಜನ್ ಕೃಷ್ಣ, ಪ್ರಧಾನ ಕಾರ್ಯದರ್ಶಿ ಸೆಲ್ವಕುಮಾರ್, ಕುಲಪತಿ ಪ್ರೊ.ಆಟಿಲಾ ಬ್ರಂಗ್ಸ್ ಉಪಸ್ಥಿತರಿದ್ದರು

ಬೆಂಗಳೂರು: ಆಸ್ಟ್ರೇಲಿಯಾದ ನ್ಯೂಸೌತ್ ವೇಲ್ಸ್ ವಿಶ್ವವಿದ್ಯಾಲಯ ಬೆಂಗಳೂರಿನ ಮಾನ್ಯತಾ ಟೆಕ್ ಪಾರ್ಕ್‌ನಲ್ಲಿ ಇದೇ ಆಗಸ್ಟ್‌ನಿಂದ ತನ್ನ ಕ್ಯಾಂಪಸ್ ಆರಂಭಿಸಲಿದೆ.

ಈ ಕುರಿತು ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ, ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ.ಸುಧಾಕರ್ ಅವರ ಸಮ್ಮುಖದಲ್ಲಿ ನ್ಯೂಸೌತ್ ವೇಲ್ಸ್ ವಿಶ್ವವಿದ್ಯಾಲಯದ ಕುಲಪತಿ ಪ್ರೊ.ಅಟಿಲಾ ಬ್ರಂಗ್ಸ್ ಮತ್ತು ಕೈಗಾರಿಕಾ ಇಲಾಖೆ ಪ್ರಧಾನ ಕಾರ್ಯದರ್ಶಿ ಸೆಲ್ವಕುಮಾರ್ ಒಪ್ಪಂದ ಮಾಡಿಕೊಂಡರು.

ನಂತರ ಸುದ್ದಿಗಾರರ ಜತೆ ಮಾತನಾಡಿದ ಸಚಿವದ್ವಯರು, 'ಒಪ್ಪಂದದಂತೆ ವಿಶ್ವವಿದ್ಯಾಲಯ ಮೊದಲ ಹಂತದಲ್ಲಿ ವಾಣಿಜ್ಯ, ಪತ್ರಿಕೋದ್ಯಮ, ಕಂಪ್ಯೂಟರ್ ಮತ್ತು ಡೇಟಾ ವಿಜ್ಞಾನ ಕೋರ್ಸ್‌ಗಳಲ್ಲಿ ಪದವಿ ಹಾಗೂ ಸೈಬರ್ ಭದ್ರತೆ ವಿಷಯದಲ್ಲಿ ಸ್ನಾತಕೋತ್ತರ ಪದವಿ ಶಿಕ್ಷಣ ನೀಡಲಿದೆ. ಆಸ್ಟ್ರೇಲಿಯಾ ವಿಶ್ವವಿದ್ಯಾಲಯದ ಶೈಕ್ಷಣಿಕ ಮಂಡಲಿಯೇ ಬೆಂಗಳೂರು ಕ್ಯಾಂಪಸ್ ವಿದ್ಯಾರ್ಥಿಗಳ ಮೇಲೆ ನಿಗಾ ಇಡಲಿದೆ. ತನ್ನ ಪಠ್ಯಕ್ರಮವನ್ನೇ ಅನುಸರಿಸಲಿದೆ. ನಂತರ ಕ್ವಿನ್‌ಸಿಟಿಯಲ್ಲೂ ಕ್ಯಾಂಪಸ್ ಅಸ್ತಿತ್ವಕ್ಕೆ ಬರಲಿದೆ' ಎಂದು ಹೇಳಿದರು.

'ಭಾರತಮತ್ತುಆಸ್ಟ್ರೇಲಿಯಾನಡುವೆ 2025-30ರ ಅವಧಿಯ ಶೈಕ್ಷಣಿಕ, ಸಂಶೋಧನಾತ್ಮಕ ಸಹಭಾಗಿತ್ವ ಕಾರ್ಯಕ್ರಮ ಚಾಲ್ತಿಯಲ್ಲಿದೆ. ಭಾರತೀಯ ವಿಜ್ಞಾನ ಮಂದಿರ, ರಾಷ್ಟ್ರೀಯ ಕಾನೂನು ವಿಶ್ವವಿದ್ಯಾಲಯ, ಕೇಂದ್ರ ಹೆದ್ದಾರಿ ಮತ್ತು ಉಕ್ಕು ಸಚಿವಾಲಯ, ಹಾಗೂ ರಾಜ್ಯದ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಗಮದೊಂದಿಗೆ ನಿಕಟ ಸಂಬಂಧ ಹೊಂದಿದೆ' ಎಂದು ಎಂ.ಬಿ.ಪಾಟೀಲ ಹೇಳಿದರು.

'ನ್ಯೂಸೌತ್ ವೇಲ್ಸ್ ವಿಶ್ವವಿದ್ಯಾಲಯದಲ್ಲಿ ಪದವಿ ಪಡೆದವರಿಗೆ ಆಸ್ಟ್ರೇಲಿಯಾದಲ್ಲಿ ಉತ್ತಮ ಉದ್ಯೋಗದ ಅವಕಾಶಗಳು ಸಿಗಲಿವೆ. ರಾಜ್ಯದ ನಾವೀನ್ಯತಾ ಕಾರ್ಯ ಪರಿಸರಕ್ಕೆ ಮತ್ತಷ್ಟು ಶಕ್ತಿ ಬರಲಿದೆ' ಎಂದು ಸುಧಾಕರ್ ಅವರು ಹೇಳಿದರು.

ಬಾಂಗ್ಲಾದೇಶದಲ್ಲಿ ಮತ್ತೊಬ್ಬ ಹಿಂದೂ ವ್ಯಕ್ತಿ ಹತ್ಯೆ

ಢಾಕಾ: ಬಾಂಗ್ಲಾದೇಶದಲ್ಲಿ ಅಲ್ಪಸಂಖ್ಯಾತರ ಮೇಲಿನ ದಾಳಿ ಮುಂದುವರಿದಿದ್ದು, ಮತ್ತೊಬ್ಬ ಹಿಂದೂ ವ್ಯಕ್ತಿಯನ್ನು ದುಷ್ಕರ್ಮಿಗಳು ಥಳಿಸಿ ಕೊಂದಿದ್ದಾರೆ ಎಂದು ಸ್ಥಳೀಯ ಮಾಧ್ಯಮಗಳು ವರದಿ ಮಾಡಿವೆ.

ಭಾನುವಾರ ರಾತ್ರಿ ಚಿತ್ತಗಾಂಗ್‌ನ ದಗನ್‌ಭುಯಾನ್‌ನಲ್ಲಿ ನಡೆದ ದಾಳಿಯಲ್ಲಿ ಆಟೊ ರಿಕ್ಷಾ ಚಾಲಕ 28 ವರ್ಷದ ಸಮೀರ್ ದಾಸ್ ಮೃತಪಟ್ಟಿದ್ದಾರೆ.

ದಾಳಿಕೋರರು ದಾಸ್ ಅವರನ್ನು ಥಳಿಸಿ, ಚೂರಿಯಿಂದ ಇರಿದು ಕೊಂದಿದ್ದಾರೆ. ಆ ಬಳಿಕ ಬ್ಯಾಟರಿ ಚಾಲಿತ ಆಟೊ ರಿಕ್ಷಾದೊಂದಿಗೆ ಸ್ಥಳದಿಂದ ಪರಾರಿಯಾಗಿದ್ದಾರೆ ಎಂದು 'ಎನ್‌ಡಿಟಿವಿ' ವರದಿ ಮಾಡಿದೆ.

'ಮೇಲ್ನೋಟಕ್ಕೆ ಇದು ಪೂರ್ವಯೋಜಿತ ಕೃತ್ಯದಂತೆ ಕಾಣುತ್ತದೆ. ಕೊಲೆಯ ನಂತರ ದುಷ್ಕರ್ಮಿಗಳು ಆಟೊ ರಿಕ್ಷಾವನ್ನೂ ಕೊಂಡೊಯ್ದಿದ್ದಾರೆ. ಆರೋಪಿಗಳ ಪತ್ತೆಗೆ ಕಾರ್ಯಾಚರಣೆ ಆರಂಭಿಸಲಾಗಿದೆ' ಎಂದು ಪೊಲೀಸರು ತಿಳಿಸಿದ್ದಾರೆ.

ಬಹಿಷ್ಕಾರ: 3 ವರ್ಷ ಜೈಲು, ₹1 ಲಕ್ಷ ದಂಡ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಾಮಾಜಿಕ ಬಹಿಷ್ಕಾರಕ್ಕೆ ಸಂಪೂರ್ಣ ನಿಷೇಧ ಹೇರಲು ನಿರ್ಧರಿಸಿರುವ ರಾಜ್ಯ ಸರ್ಕಾರ, ಇನ್ನು ಮುಂದೆ ಯಾವುದೇ ವ್ಯಕ್ತಿ, ಕುಟುಂಬ ಅಥವಾ ಕುಟುಂಬದ ಸದಸ್ಯರನ್ನು ಸಾಮಾಜಿಕವಾಗಿ ಬಹಿಷ್ಕರಿಸಿದರೆ ಮೂರು ವರ್ಷದ ವರೆಗೆ ಜೈಲು ಶಿಕ್ಷೆ ಮತ್ತು ₹1 ಲಕ್ಷ ದಂಡ ವಿಧಿಸುವ ಕಾನೂನು ಜಾರಿಗೆ ತಂದಿದೆ.

ಸಾಮಾಜಿಕ ಬಹಿಷ್ಕಾರವನ್ನು ಅಪರಾಧವೆಂದು ಪರಿಗಣಿಸಿ ಶಿಕ್ಷೆ ವಿಧಿಸಲು ಅವಕಾಶ ನೀಡುವ 'ಕರ್ನಾಟಕ ಸಾಮಾಜಿಕ ಬಹಿಷ್ಕಾರ (ಪ್ರತಿಬಂಧ, ನಿಷೇಧ ಮತ್ತು ಪರಿಹಾರ) ಮಸೂದೆಗೆ ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರು ಅಂಕಿತ ಹಾಕಿದ್ದಾರೆ. ಈ ಕುರಿತು ರಾಜ್ಯ ಸರ್ಕಾರ ಸೋಮವಾರ ಅಧಿಸೂಚನೆ ಹೊರಡಿಸಿದ್ದಿ, ಕಾಯ್ದೆ ರೂಪದಲ್ಲಿ ಜಾರಿಗೆ ಬಂದಿದೆ..

ಬಹಿಷ್ಕರಿಸುವ ತೀರ್ಮಾನ ತೆಗೆದುಕೊಂಡವರು, ಈ ಉದ್ದೇಶದಿಂದ ಸಭೆ, ಪಂಚಾಯಿತಿ, ಜಮಾವಣೆ, ಅಭಿಪ್ರಾಯ ಸಂಗ್ರಹಿಸುವುದು, ಬಹಿಷ್ಕಾರಕ್ಕೆ ಪ್ರತ್ಯಕ್ಷ, ಪರೋಕ್ಷ ಸಹಾಯ, ಒತ್ತಡ, ಪ್ರಚೋದನೆ ನೀಡುವವರನ್ನೂ ಅಪರಾಧಿಗಳೆಂದು ಪರಿಗಣಿಸಿ ಜೈಲು ಅಥವಾ ದಂಡ ಅಥವಾ ಎರಡನ್ನೂ ವಿಧಿಸಲು ಕೂಡಾ ಈ ಕಾಯ್ದೆಯಲ್ಲಿ ಅವಕಾಶ ಕಲ್ಪಿಸಲಾಗಿದೆ.

ಈ ಕಾಯ್ದೆಯ ಅನ್ವಯ, ಬಹಿಷ್ಕಾರಕ್ಕೆ ಒಳಗಾದವರು ಪೊಲೀಸ್ ಠಾಣೆ, ನ್ಯಾಯಾಧೀಶರಿಗೆ ದೂರು ನೀಡಬಹುದು. ಪ್ರಥಮ ದರ್ಜೆ ನ್ಯಾಯಾಧೀಶರಿಗೆ ವಿಚಾರಣೆಯ ಅಧಿಕಾರ ನೀಡಲಾಗಿದೆ. ಸಂತ್ರಸ್ತರಿಗೆ ಸಹಾಯ ಒದಗಿಸಲು ಮತ್ತು ದಂಡದ ಮೊತ್ತವನ್ನು ಪರಿಹಾರವಾಗಿ ನೀಡಲು ನಿರ್ದೇಶನ ನೀಡಬಹುದು. ಸಾಮಾಜಿಕ ಬಹಿಷ್ಕಾರದಂತಹ ನಿರ್ಧಾರ ತೆಗೆದುಕೊಳ್ಳಲು ನಡೆಸುವ ಸಭೆಗಳ ಕುರಿತು ಮಾಹಿತಿ ಬಂದರೆ ಆಯಾ ಜಿಲ್ಲೆಗಳ ಜಿಲ್ಲಾಧಿಕಾರಿಗಳು ನಿಷೇಧಿಸಿ ಆದೇಶಿಸಬಹುದು. ಸಾಮಾಜಿಕ ಬಹಿಷ್ಕಾರ ತಡೆ ಅಧಿಕಾರಿಗಳಾಗಿ ಗ್ರೂಪ್ 'ಎ' ಅಧಿಕಾರಿಗಳನ್ನು ಸರ್ಕಾರ ನಿಯೋಜಿಸಲಿದೆ.

ಸತ್ತಿದ್ದಾರೆ ಎಂದು ದಾಖಲೆಯಲ್ಲಿ ನಮೂದು, ಸವದತ್ತಿಯ ಅನ್ನದಾತನ ಸಂಕಷ್ಟ

ದಾಖಲೆಯಲ್ಲೂ 'ಬದುಕಲು' ರೈತನ ಹೋರಾಟ

ಪ್ರಜಾವಾಣಿ ವಾರ್ತೆ



ರೈತ ಈರಪ್ಪ ನಾಗಪ್ಪ ಅಬ್ಬಾಯಿ ಆಧಾರ್ ಕಾರ್ಡ್

ಬೆಳಗಾವಿ: ರೈತ ಬದುಕಿದ್ದಾಗಲೇ, 'ನಿಧನರಾಗಿದ್ದಾರೆ' ಎಂದು ದೃಢೀಕರಿಸಿ ಗ್ರಾಮ ಲೆಕ್ಕಾಧಿಕಾರಿ ಯಡವಟ್ಟು ಮಾಡಿದ್ದಾರೆ. 'ನಾನು ಸತ್ತಿಲ್ಲ, ಬದುಕಿದ್ದೇನೆ' ಎಂಬ ಅರ್ಜಿ ಹಿಡಿದು ರೈತ ಕಚೇರಿಗಳಿಗೆ ಅಲೆಯುವಂತಾಗಿದೆ.

ಸವದತ್ತಿ ತಾಲ್ಲೂಕಿನ ಸುತಗಟ್ಟಿ ಗ್ರಾಮದ ರೈತ ಈರಪ್ಪ ನಾಗಪ್ಪ ಅಬ್ಬಾಯಿ (53) ಅವರದು ಈಗ 'ತಬರನ ಕಥೆ'ಯಾಗಿದೆ. ಗ್ರಾಮ ಲೆಕ್ಕಾಧಿಕಾರಿ ನೀಲಾ ಮುರಗೋಡ ಮಾಡಿದ ತಪ್ಪಿನಿಂದ ರೈತ ಹೈರಾಣಾಗಿದ್ದಾರೆ. 'ಬದುಕಿದ್ದೇನೆ' ಎಂಬ ಅರ್ಜಿ ಹಿಡಿದು ಸವದತ್ತಿ, ಬೆಳಗಾವಿ ಮತ್ತು ಬೆಂಗಳೂರು ಕಚೇರಿಗಳಿಗೆ ಓಡಾಡುತ್ತಿದ್ದಾರೆ.

ನಡೆದಿದ್ದೇನು?: ಕುಟುಂಬದ ಸದಸ್ಯರೊಬ್ಬರ ಮರಣ ದಾಖಲೆಗಾಗಿ 2021ರ ಜುಲೈ 8ರಂದು ಈರಪ್ಪ ಅರ್ಜಿ ಹಾಕಿದ್ದರು. ಆದರೆ, 'ಈರಪ್ಪ ಅವರೇ ನಿಧನರಾಗಿದ್ದಾರೆ' ಎಂದು ಗ್ರಾಮ ಲೆಕ್ಕಾಧಿಕಾರಿ ದಾಖಲಿಸಿದ್ದಾರೆ.

> **ಸಮಸ್ಯೆಯನ್ನು ನಮ್ಮ ಕಚೇರಿಯಲ್ಲಿ ಬಗೆಹರಿಸಲು ಬರುವುದಿಲ್ಲ. ರೈತನಿಗೆ ನೆರವಾಗಲು ನಾವು ಬೆಂಗಳೂರು ಕಚೇರಿ ಜೊತೆ ಸಂಪರ್ಕ ಸಾಧಿಸಿದ್ದೇವೆ**
>
> **ಮಲ್ಲಿಕಾರ್ಜುನ ಹೆಗ್ಗನವರ** ತಹಶೀಲ್ದಾರ್

ಐದು ವರ್ಷ ಈ ಲೋಪವು ರೈತನ ಗಮನಕ್ಕೂ ಬಂದಿಲ್ಲ. 'ಮರಣ ಪ್ರಮಾಣಪತ್ರ'ವನ್ನು ಐದು ತಿಂಗಳ ಹಿಂದೆ ಈರಪ್ಪ ಅವರ ಕೈಗೇ ನೀಡಲಾಗಿದೆ.

2025ರ ಜುಲೈನಲ್ಲಿ ಜಮೀನಿಗೆ ಹನಿ ನೀರಾವರಿ ಅಳವಡಿಸುವ ಸಂಬಂಧ ಈರಪ್ಪ ಅರ್ಜಿ ಸಲ್ಲಿಸಿದ್ದರು. ದಾಖಲೆಗಳಲ್ಲಿ 'ನಿಧನರಾಗಿದ್ದಾರೆ' ಎಂದು ದೃಢೀಕರಿಸಿದ ವಿಷಯ ಆಗಲೇ ಗೊತ್ತಾಗಿದೆ.

ಈ ಲೋಪದಿಂದಾಗಿ ಅವರು ಹನಿ ನೀರಾವರಿ ಸಲಕರಣೆಗಳಿಂದಲೂ ವಂಚಿತರಾಗಿದ್ದಾರೆ. 'ಈ ಯೋಜನೆಯಲ್ಲಿ ತಮಗೆ ₹3 ಲಕ್ಷ ರಿಯಾಯಿತಿ ಸಿಗಬೇಕಿತ್ತು' ಎಂದು ಸಂಕಟ ತೋಡಿಕೊಂಡಿದ್ದಾರೆ.

ಈ ಬಗ್ಗೆ 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದ ತಹಶೀಲ್ದಾರ್ ಮಲ್ಲಿಕಾರ್ಜುನ ಹೆಗ್ಗನವರ, 'ತಪ್ಪು ಮಾಡಿದ ಗ್ರಾಮ ಲೆಕ್ಕಾಧಿಕಾರಿಗೆ ನೋಟಿಸ್ ನೀಡಲಾಗಿದೆ. ತನಿಖೆ ನಡೆಸಿ ಶಿಸ್ತು ಕ್ರಮ ಜರುಗಿಸಲಾಗುವುದು. ಇನ್ನೆರಡು ವಾರಗಳಲ್ಲಿ ಈ ಸಮಸ್ಯೆಯು ಬಗೆಹರಿಯಲಿದೆ' ಎಂದು ಅವರು ತಿಳಿಸಿದರು.

ಕೋಟಾ ಉಳಿಕೆ: ಮೊದಲ ಸುತ್ತಿನಲ್ಲೇ ಹಂಚಿಕೆ

2026–27ನೇ ಸಾಲಿನ ಸಿಇಟಿಯಿಂದಲೇ ಅನ್ವಯಕ್ಕೆ ಕೆಇಎ ನಿರ್ಧಾರ

• ಚಂದ್ರಹಾಸ ಹಿರೇಮಳಲಿ

ಬೆಂಗಳೂರು: ಕ್ರೀಡೆ ಸೇರಿದಂತೆ ವಿವಿಧ ಕೋಟಾಗಳಿಗೆ ಮೀಸಲಾದ ಸೀಟುಗಳಿಗೆ ಅರ್ಹ ಅಭ್ಯರ್ಥಿಗಳು ಲಭ್ಯವಿಲ್ಲದಿದ್ದರೆ ಸಿಇಟಿ (ಸಾಮಾನ್ಯ ಪ್ರವೇಶ ಪರೀಕ್ಷೆ) ಮೊದಲ ಸುತ್ತಿನಲ್ಲೇ ಸಾಮಾನ್ಯ ಕೋಟಾದಡಿ ಹಂಚಿಕೆ ಮಾಡಲು ಕರ್ನಾಟಕ ಪರೀಕ್ಷಾ ಪ್ರಾಧಿಕಾರ ನಿರ್ಧರಿಸಿದೆ.

ಎಂಜಿನಿಯರಿಂಗ್ ಸೇರಿದಂತೆ ವಿವಿಧ ವೃತ್ತಿಪರ ಕೋರ್ಸ್‌ಗಳ ಪ್ರವೇಶಕ್ಕೆ ಪರೀಕ್ಷಾ ಪ್ರಾಧಿಕಾರ ನಡೆಸುವ ಸಿಇಟಿ ಬರೆದ ವಿದ್ಯಾರ್ಥಿಗಳಿಗೆ ಅರ್ಹತೆಯ ಪ್ರಕಾರ ಆಯಾ ಶೈಕ್ಷಣಿಕ ವರ್ಷದಲ್ಲಿ ಲಭ್ಯವಿರುವ ಸೀಟುಗಳನ್ನು ಹಂಚಿಕೆ ಮಾಡಲಾಗುತ್ತದೆ. ಕ್ರೀಡೆ, ರಾಷ್ಟ್ರೀಯ ಸೇವಾ ಯೋಜನೆ (ಎನ್‌ಎಸ್‌ಎಸ್), ರಾಷ್ಟ್ರೀಯ ಕೆಡೆಟ್ ಕಾರ್ಪ್ಸ್ (ಎನ್‌ಸಿಸಿ), ಸ್ಕೌಟ್ಸ್ ಮತ್ತು ಗೈಡ್ಸ್ ಸೇರಿದಂತೆ ವಿವಿಧ ಕೋಟಾಗಳಿಗೆ ಸೀಟುಗಳನ್ನು ಮೀಸಲಿಡಲಾಗಿದೆ. ಇದುವರೆಗೂ ಮೊದಲ ಸುತ್ತಿನ ಸೀಟು ಹಂಚಿಕೆಯ ನಂತರ ವಿವಿಧ ಕೋಟಾದ ಸೀಟುಗಳು ಭರ್ತಿಯಾಗದೆ ಉಳಿದರೆ ಎರಡು, ಮೂರನೇ ಸುತ್ತಿಗೆ ಪರಿಗಣಿಸಲಾಗುತ್ತಿತ್ತು. 2026–27ನೇ ಸಾಲಿನಿಂದ ಮೊದಲ ಸುತ್ತಿನಲ್ಲೇ ಎಲ್ಲ ಸೀಟುಗಳನ್ನು ಹಂಚಿಕೆ ಮಾಡಲಾಗುತ್ತದೆ.

> ವಿವಿಧ ಕೋಟಾದ ಸೀಟುಗಳನ್ನು ಮೊದಲ ಸುತ್ತಿನಲ್ಲೇ ಹಂಚಿಕೆ ಮಾಡಿದರೆ ಪ್ರತಿಭಾವಂತರಿಗೆ ಉತ್ತಮ ಕಾಲೇಜು ಸಿಗುತ್ತವೆ. ಉಳಿದ ಸುತ್ತುಗಳ ಮೇಲಿನ ಅವಲಂಬನೆ, ಕಾಯುವ ವಿಳಂಬ ಇಲ್ಲವಾಗುತ್ತದೆ
> **ಎಚ್.ಪ್ರಸನ್ನ,** ಕಾರ್ಯನಿರ್ವಾಹಕ ನಿರ್ದೇಶಕ, ಕೆಇಎ

‘ಸಿಇಟಿ ಪರೀಕ್ಷೆಯ ಸಮಯದಲ್ಲೇ ವಿವಿಧ ಕೋಟಾದ ಸೀಟುಗಳಿಗಾಗಿ ಸಲ್ಲಿಸಿದ ದಾಖಲೆಗಳನ್ನು ಪರಿಶೀಲಿಸಲಾಗುತ್ತದೆ. ಫಲಿತಾಂಶ ಪ್ರಕಟವಾದ ನಂತರ ಎಷ್ಟು ಅಭ್ಯರ್ಥಿಗಳು ಅರ್ಹರಿದ್ದಾರೆ ಎನ್ನುವುದು ಖಚಿತಪಡಿಸಿಕೊಂಡು ಉಳಿಕೆ ಸೀಟುಗಳನ್ನು ಮೊದಲ ಸುತ್ತಿನಲ್ಲೇ ಹಂಚಬಹುದು. ಇದರಿಂದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ತಾವು ಬಯಸಿದ ಕಾಲೇಜುಗಳನ್ನು ಅರ್ಹತೆಯ ಆಧಾರದಲ್ಲಿ ಪಡೆಯಲು ಸಾಧ್ಯವಾಗುತ್ತದೆ’ ಎನ್ನುತ್ತಾರೆ ಕೆಇಎ ಕಾರ್ಯನಿರ್ವಾಹಕ ನಿರ್ದೇಶಕ ಎಚ್.ಪ್ರಸನ್ನ.

ಭರ್ತಿಯಾಗದ ಕ್ರೀಡಾ ಕೋಟಾ: ಪ್ರತಿ ವರ್ಷವೂ ಕ್ರೀಡಾ ಕೋಟಾದ ಸೀಟುಗಳು ಅತಿ ಹೆಚ್ಚು ಖಾಲಿ ಉಳಿಯುತ್ತಿವೆ. ಹೊಸ ಕ್ರೀಡಾ ನೀತಿ ಅನ್ವಯ ಕ್ರೀಡಾ ಕೋಟಾದಲ್ಲಿ ಪ್ರವೇಶ ಬಯಸುವವರು 10ರಿಂದ 12ನೇ ತರಗತಿ ಮಧ್ಯೆ ಎರಡು ರಾಷ್ಟ್ರೀಯ ಅಥವಾ ಅಂತರರಾಷ್ಟ್ರೀಯ ಕ್ರೀಡಾಕೂಟದಲ್ಲಿ ಭಾಗವಹಿಸಿರಬೇಕು. ಆದರೆ, ಬಹುತೇಕ ವಿದ್ಯಾರ್ಥಿಗಳು 10 ಮತ್ತು 12ನೆಯ ತರಗತಿಯಲ್ಲಿ ಓದಿಗೆ ಗಮನಕೊಡುವ ಕಾರಣ ಕ್ರೀಡಾಕೂಟದಲ್ಲಿ ಭಾಗಹಿಸುವುದಿಲ್ಲ. ಅಲ್ಲದೆ, 96 ವಿವಿಧ ಕ್ರೀಡೆಗಳಿಗೆ ಶೇ 5ರಿಂದ ಶೇ 100ರವರೆಗೆ ವಿಭಿನ್ನ ಕೃಪಾಂಕಗಳನ್ನು ನಿಗದಿ ಮಾಡಲಾಗಿದೆ. ಅಂತರರಾಷ್ಟ್ರೀಯ ಒಲಿಂಪಿಕ್, ಪ್ಯಾರಾ ಒಲಿಂಪಿಕ್‌ನಲ್ಲಿ ಚಿನ್ನದ ಪದಕ ವಿಜೇತರು ಶೇ 100, ಬೆಳ್ಳಿಗೆ ಶೇ 99 ಹಾಗೂ ಕಂಚಿಗೆ ಶೇ 98 ನಿಗದಿ ಮಾಡಲಾಗಿದೆ.

ಕ್ರೀಡೆಯಲ್ಲಿ ರಾಷ್ಟ್ರೀಯ ಅಂತರರಾಷ್ಟ್ರೀಯ ಕ್ರೀಡೆಗಳಲ್ಲಿ ಸಾಧನೆ ಮಾಡಿದ ರಾಜ್ಯದ ಪ್ರೌಢಶಾಲೆ, ಪಿಯು ಕಾಲೇಜು ವಿದ್ಯಾರ್ಥಿಗಳ ಸಂಖ್ಯೆ ಅತ್ಯಂತ ಕಡಿಮೆ ಇದೆ. ಹಾಗಾಗಿ, 2025–26ನೇ ಸಾಲಿನಲ್ಲಿ ಎಂಜಿನಿಯರಿಂಗ್‌ನಲ್ಲಿ ಕ್ರೀಡಾ ಕೋಟಾಕ್ಕೆ 226 ಸೀಟುಗಳು ಲಭ್ಯವಿದ್ದರೂ ಪ್ರವೇಶ ಪಡೆದವರು 27 ಅಭ್ಯರ್ಥಿಗಳು. ಇನ್ನೂ 199 ಸೀಟುಗಳು ಖಾಲಿ ಉಳಿದಿದ್ದವು. ಸ್ಕೌಟ್ ಮತ್ತು ಗೈಡ್ಸ್ ಕೋಟಾಕ್ಕೆ ಕೇಂದ್ರ ಸರ್ಕಾರ ನಡೆಸುವ ಪ್ರತ್ಯೇಕ ಪರೀಕ್ಷೆ ತೇರ್ಗಡೆಯಾಗಬೇಕು. ಪರೀಕ್ಷೆಗಳನ್ನು ಪ್ರತಿ ವರ್ಷವೂ ನಿಯಮಿತವಾಗಿ ನಡೆಸುವುದಿಲ್ಲ ಹಾಗಾಗಿ, ಕೋಟಾದಡಿ ಪ್ರವೇಶ ಪಡೆಯಲು ಸಾಧ್ಯವಿಲ್ಲ ಎನ್ನುವುದು ಅಭ್ಯರ್ಥಿಗಳ ದೂರು. ಎನ್‌ಸಿಸಿ, ಎನ್‌ಎಸ್‌ಎಸ್ ಕೋಟಾಕ್ಕೂ ಇಂತಹದ್ದೇ ಸಮಸ್ಯೆಗಳಿವೆ.

ಅಂಕಿ ಅಂಶಗಳು

304 ಲಭ್ಯವಿರುವ ಕ್ರೀಡಾ ಕೋಟಾದ ಸೀಟು	**212** 2025–26ನೇ ಸಾಲಿನಲ್ಲಿ ಉಳಿಕೆ ಸೀಟು
4,681 ಲಭ್ಯವಿರುವ ಅಂಗವಿಕಲ ಕೋಟಾದ ಸೀಟು	**4,217** 2025–26ನೇ ಸಾಲಿನಲ್ಲಿ ಉಳಿಕೆ ಸೀಟು
121 ಮಾಜಿ ಸೈನಿಕರ ಕೋಟಾದ ಸೀಟು	**86** 2025–26ನೇ ಸಾಲಿನಲ್ಲಿ ಉಳಿಕೆ ಸೀಟು

ಅಂಗವಿಕಲರ ಕೋಟಾಕ್ಕೂ ಇಲ್ಲ ಅರ್ಹರು

ವೈದ್ಯಕೀಯ ಸೇರಿದಂತೆ ಅಂಗವಿಕಲರ ಕೋಟಾದ ಸೀಟುಗಳೂ ಪ್ರತಿ ವರ್ಷ ಉಳಿಕೆಯಾಗುತ್ತಿವೆ. ಅರ್ಹ ಅಭ್ಯರ್ಥಿಗಳಿಲ್ಲದೆ ಎಂಜಿನಿಯರಿಂಗ್‌ನಲ್ಲಿ ಕಳೆದ ವರ್ಷ 3,839 ಸೀಟು, ವೈದ್ಯಕೀಯದಲ್ಲಿ 176 ಸೀಟುಗಳು ಖಾಲಿ ಉಳಿದಿದ್ದವು. ನಂತರ ಅವುಗಳನ್ನು ಎರಡನೇ ಸುತ್ತಿನಲ್ಲಿ ಸಾಮಾನ್ಯ ಕೋಟಾದಡಿ ಹಂಚಿಕೆ ಮಾಡಲಾಗಿತ್ತು.

‘ಅಖಿಲ ಭಾರತ ಕೋಟಾದಲ್ಲಿ ನೀಟ್‌ನಲ್ಲಿ ಉತ್ತಮ ರ‍್ಯಾಂಕ್ ಪಡೆದಿದ್ದೆ. ಮೊದಲ ಸುತ್ತಿನಲ್ಲಿ ಸರ್ಕಾರಿ ಕೋಟಾದ ಅಡಿ ಖಾಸಗಿ ಕಾಲೇಜಿಗೆ ಪ್ರವೇಶ ಪಡೆದೆ. ಉಳಿಕೆ ಸೀಟುಗಳನ್ನು ಮೊದಲ ಸುತ್ತಿಗೆ ಪರಿಗಣಿಸಿದ್ದರೆ ಸರ್ಕಾರಿ ವೈದ್ಯಕೀಯ ಕಾಲೇಜಿಗೆ ಪ್ರವೇಶ ಪಡೆಯಬಹುದಿತ್ತು. ಮುಂದಿನ ವರ್ಷದಿಂದ ಮೊದಲ ಸುತ್ತಿನಲ್ಲೇ ಹಂಚಿಕೆ ಮಾಡಿದರೆ ಪ್ರತಿಭಾವಂತ ಬಡ ವಿದ್ಯಾರ್ಥಿಗಳಿಗೆ ಅನುಕೂಲವಾಗುತ್ತದೆ’ ಎನ್ನುತ್ತಾರೆ ಶ್ರೀಹರಿ.

ವೈದ್ಯಕೀಯ: ಕ್ರೀಡಾಪಟುಗಳಿಗೆ 7 ಸೀಟು

ವೈದ್ಯಕೀಯದಲ್ಲಿ ರಾಜ್ಯ ಕೋಟಾದ ಸೀಟುಗಳು 10,559 ಇದ್ದರೂ ಕ್ರೀಡಾ ಕೋಟಾಕ್ಕೆ ಮೀಸಲಿರುವುದು ಕೇವಲ ಏಳು ಸೀಟು ಮಾತ್ರ. ಅಂಗವಿಕಲರ ಕೋಟಾದಲ್ಲಿ 263 ಸೀಟುಗಳು ಇವೆ.

ದಶಕದ ಹಿಂದೆ ರಾಜ್ಯ ಕೋಟಾದ ಸೀಟುಗಳ ಸಂಖ್ಯೆ ಕಡಿಮೆ ಇದ್ದಾಗ ನಿಗದಿ ಮಾಡಿದ್ದ ಸೀಟುಗಳನ್ನೇ ಇಂದಿಗೂ ಮುಂದುವರಿಸಲಾಗಿದೆ. ದಂತ ವೈದ್ಯಕೀಯಕ್ಕೆ ನಾಲ್ಕು, ಆಯುಷ್‌ಗೆ 16, ಪಶುವೈದ್ಯಕೀಯಕ್ಕೆ ಐದು ಸೀಟುಗಳನ್ನು ಕ್ರೀಡಾ ಕೋಟಾದಲ್ಲಿ ಮೀಸಲಿಡಲಾಗಿದೆ.

ಸುದ್ದಿ 2 ನಿಮಿಷ

‘ಸಿದ್ದರಾಮಯ್ಯ ಡಮ್ಮಿ ಸಿ.ಎಂ’

ಚಾಮರಾಜನಗರ: ‘ರಾಜ್ಯ ಸರ್ಕಾರದ ಖಜಾನೆ ಬರಿದಾಗಿದೆ. ಸಿದ್ದರಾಮಯ್ಯ ಡಮ್ಮಿ ಮುಖ್ಯಮಂತ್ರಿಯಾಗಿದ್ದಾರೆ’ ಎಂದು ರೈಲ್ವೆ ಖಾತೆ ರಾಜ್ಯ ಸಚಿವ ವಿ.ಸೋಮಣ್ಣ ಸೋಮವಾರ ಇಲ್ಲಿ ಟೀಕಿಸಿದರು.

ಪ್ರವಾಸಿ ಮಂದಿರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ, ‘ಸರ್ಕಾರದ ಹುಳುಕು ಮುಚ್ಚಲು ಏನು ಬೇಕಾದರೂ ಮಾಡುವ ಸಿದ್ದರಾಮಯ್ಯ, ಎರಡನೇ ಬಾರಿ ಮುಖ್ಯಮಂತ್ರಿಯಾದ ಮೇಲೆ ನಿಷ್ಕ್ರಿಯರಾಗಿದ್ದಾರೆ’ ಎಂದರು.

‘ಬಳ್ಳಾರಿಯಲ್ಲಿ ಕಾಂಗ್ರೆಸ್‌ನವರು ಮಾಡಿರುವ ಪಾಪದ ಕೆಲಸ ಎಲ್ಲರಿಗೂ ತಿಳಿದಿದ್ದು, ಕಾನೂನು ಪ್ರಕಾರ ಕ್ರಮಕೈಗೊಳ್ಳಬೇಕು. ಮುಗ್ಧ ಜನರನ್ನು ಬಲಿ ಕೊಡಬಾರದು, ಎಷ್ಟೇ ದೊಡ್ಡ ವ್ಯಕ್ತಿಯಾಗಿದ್ದರೂ ಕಾನೂನು ಕ್ರಮ ಜರುಗಿಸದಿದ್ದರೆ ಮುಖ್ಯಮಂತ್ರಿ ರಾಜ್ಯದ ಖಳನಾಯಕರಾಗುತ್ತಾರೆ’ ಎಂದು ಹೇಳಿದರು.



‘ಸಚಿವ ಮುನಿಯಪ್ಪ ಅವರು ತಮ್ಮ ಸ್ಥಾನ ಉಳಿಸಿಕೊಳ್ಳಲೆಂದೇ ಮುಖ್ಯಮಂತ್ರಿ ಬದಲಾವಣೆ ಇಲ್ಲ ಎಂದು ಹೇಳಿದ್ದಾರಷ್ಟೆ. ಅವರು ಗಡುಸಾಗಿ ಮಾತನಾಡುವುದನ್ನು ಕಲಿಯಬೇಕು’ ಎಂದರು.

‘ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷರ ಬದಲಾವಣೆಯಾಗುತ್ತದೆಯೇ’ ಎಂಬ ಪ್ರಶ್ನೆಗೆ ಸಚಿವರು ಉತ್ತರಿಸಲಿಲ್ಲ.

ಬಾಂಗ್ಲಾದೇಶಿ ಎಂದು ಆರೋಪಿಸಿ ವಲಸೆ ಕಾರ್ಮಿಕನ ಮೇಲೆ ಹಲ್ಲೆ

ಮಂಗಳೂರು: ಕೂಲಿ ಕೆಲಸಕ್ಕಾಗಿ ಜಾರ್ಖಂಡ್‌ದಿಂದ ಬಂದಿದ್ದ ದಿಲ್‌ಜಾನ್ ಅನ್ಸಾರಿ ಎಂಬುವವರ ಮೇಲೆ ಹಲ್ಲೆ ನಡೆಸಿದ ಆರೋಪದ ಮೇರೆಗೆ ನಾಲ್ವರ ವಿರುದ್ಧ ಕಾವೂರು ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಕುಳೂರಿನ ಸಾಗರ್, ಧನುಷ್, ಲಾಲು ಯಾನೆ ರತೀಶ್, ಮೋಹನ್ ಆರೋಪಿಗಳು.

‘ಭಾನುವಾರ ಸಂಜೆ ದಿಲ್‌ಜಾನ್ ಅವರನ್ನು ತಡೆದ ಆರೋಪಿಗಳು, ‘ನೀನು ಬಾಂಗ್ಲಾದೇಶದ ಪ್ರಜೆ, ನಿನ್ನ ಬಳಿ ಇರುವ ದಾಖಲೆ ತೋರಿಸು’ ಎಂದು ಕೆಲಸಕ್ಕೆ ಅಡ್ಡಿಪಡಿಸಿದ್ದಾರೆ. ನಂತರ ಅವರನ್ನು ಕೀಳು ಭಾಷೆಯಲ್ಲಿ ನಿಂದಿಸಿ, ಹಲ್ಲೆ ನಡೆಸಿದ್ದಾರೆ’ ಎಂದು ಪೊಲೀಸ್ ಕಮಿಷನರ್ ಸುಧೀರ್ ಕುಮಾರ್ ರೆಡ್ಡಿ ತಿಳಿಸಿದ್ದಾರೆ.

‘ಸ್ಥಳೀಯರೊಬ್ಬರು ರಕ್ಷಿಸಿ ಪೊಲೀಸರಿಗೆ ಮಾಹಿತಿ ನೀಡಿದ್ದಾರೆ. ದೂರು ನೀಡಲು ಹೆದರಿ ದಿಲ್‌ಜಾನ್ ಊರಿಗೆ ತೆರಳಿದ್ದರು. ಅವರು, 10 ವರ್ಷಗಳಿಂದ ಪ್ರತಿವರ್ಷ ಕೂಲಿ ಕೆಲಸಕ್ಕೆ ಮಂಗಳೂರಿಗೆ ಬರುತ್ತಿದ್ದರು. ಭಾರತೀಯ ಪ್ರಜೆ ಎಂಬುದು ದೃಢಪಟ್ಟಿದೆ. ಆರೋಪಿಗಳ ವಿರುದ್ಧ ಪ್ರಕರಣ ದಾಖಲಿಸಲಾಗಿದೆ’ ಎಂದು ತಿಳಿಸಿದರು.

ಆರೋಪಿಗಳು ಯಾವುದಾದರೂ ಸಂಘಟನೆಗೆ ಸೇರಿದವರೇ ಎಂದೂ ಪರಿಶೀಲಿಸಲಾಗುತ್ತಿದೆ ಎಂದು ಮೂಲಗಳು ತಿಳಿಸಿವೆ.

ಕೂಳೂರಿನಲ್ಲಿ ಕೋಳಿ ಖರೀದಿಸಲು ನಡೆದುಕೊಂಡು ಹೋಗುತ್ತಿರುವಾಗ ಇಬ್ಬರು ವ್ಯಕ್ತಿಗಳು ಕರೆದು ಬಾಂಗ್ಲಾದೇಶದವರಾ ಎಂದು ಕೇಳಿ, ಆಧಾರ್ ಕಾರ್ಡ್ ಮತ್ತಿತರ ವಿವರ ವಿಚಾರಿಸಿದರು. ನನ್ನ ಮೊಬೈಲ್ ಫೋನ್ ಹಾಳಾಗಿದ್ದರಿಂದ ಅದನ್ನು ತೋರಿಸಲು ಸಾಧ್ಯವಾಗಲಿಲ್ಲ. ನಂತರ ಅವರು, ನನ್ನ ಧರ್ಮದ ಬಗ್ಗೆ ಕೇಳಿದರು. ಮುಸ್ಲಿಂ ಎಂದು ಉತ್ತರಿಸಿದಾಗ, ‘ಜೈ ಶ್ರೀರಾಮ್’ ಹೇಳುವಂತೆ ಒತ್ತಾಯಿಸಿದರು. ನಂತರ ನನ್ನ ಮೇಲೆ ಹಲ್ಲೆ ನಡೆಸಿದರು’ ಎಂದು ಹಲ್ಲೆಗೊಳಗಾದ ಸಂತ್ರಸ್ತ ದಿಲ್‌ಜಾನ್ ಮಾಧ್ಯಮದವರಿಗೆ ಪ್ರತಿಕ್ರಿಯಿಸಿದ್ದಾರೆ.

‘ನದಿ ಜೋಡಣೆ ಪರವಾಗಿ ಸಮಾವೇಶ’

ಬೇಡ್ತಿ– ವರದಾ: ಶಿರಸಿ ಸಮಾವೇಶ ಜನರಿಗೆ ತಪ್ಪು ಮಾಹಿತಿ ಆರೋಪ; ಒಗ್ಗಟ್ಟಿನ ಹೋರಾಟಕ್ಕೆ ನಿರ್ಧಾರ

ಪ್ರಜಾವಾಣಿ ವಾರ್ತೆ

ಹಾವೇರಿ: ಜಿಲ್ಲೆಯಲ್ಲಿ ನೀರಿನ ಸಮಸ್ಯೆ ನೀಗಿಸುವ ‘ಬೇಡ್ತಿ–ವರದಾ ನದಿ ಜೋಡಣೆ ಯೋಜನೆ’ ಜಾರಿಗೆ ಆಗ್ರಹಪಡಿಸಿ ಮಠಾಧೀಶರು ಮತ್ತು ಜನಪ್ರತಿನಿಧಿಗಳ ಸಮ್ಮುಖದಲ್ಲಿ ಜಿಲ್ಲಾ ಮಟ್ಟದಲ್ಲಿ ಜನಜಾಗೃತಿ ಸಮಾವೇಶ ಹಮ್ಮಿಕೊಳ್ಳಲು ರಾಜ್ಯ ರೈತ ಸಂಘ ಮತ್ತು ಹಸಿರು ಸೇನೆ ಸಂಘಟನೆ ನಿರ್ಧರಿಸಿದೆ.

ನಗರದಲ್ಲಿ ಸೋಮವಾರ ನಡೆದ ತುರ್ತು ಸಭೆಯಲ್ಲಿ ಮುಖಂಡರು, ‘ಕುಡಿಯುವ ನೀರು ಹಾಗೂ ಕೃಷಿಗೆ ನೀರು ಒದಗಿಸುವ ಯೋಜನೆಯನ್ನು ಯಾವುದೇ ಕಾರಣಕ್ಕೂ ಕೈಬಿಡದಂತೆ ಸರ್ಕಾರಕ್ಕೆ ಒತ್ತಾಯಿಸೋಣ’ ಎಂದರು.

‘ಜಿಲ್ಲೆಯಲ್ಲಿ ವರದಾ, ತುಂಗಭದ್ರಾ ಸೇರಿ ಹಲವು ನದಿಗಳಿದ್ದರೂ ಬರಗಾಲ ಆವರಿಸುತ್ತಿದೆ. ಬೇಸಿಗೆಯಲ್ಲಿ ನದಿ ತೀರದ ಊರುಗಳಲ್ಲಿ ಕುಡಿಯಲು ನೀರು ಸಿಗಲ್ಲ’ ಎಂದು ಅಳಲು ತೋಡಿಕೊಂಡಿರು.

‘ಕೃಷಿಗೆ ಮಳೆಯನ್ನೇ ಆಶ್ರಯಿಸಿರುವ ರೈತರಿಗೆ ಪ್ರತಿ ವರ್ಷ ನಷ್ಟವಾಗುತ್ತದೆ. ಇದಕ್ಕೆಲ್ಲ ಬೇಡ್ತಿ–ವರದಾ ನದಿ ಜೋಡಣೆಯೇ ಪರಿಹಾರ’ ಎಂದು ಜಿಲ್ಲಾ ಘಟಕದ ಪ್ರಧಾನ ಕಾರ್ಯದರ್ಶಿ ಮಲ್ಲಿಕಾರ್ಜುನ ಬಳ್ಳಾರಿ ಹೇಳಿದರು.

‘ಹಾವೇರಿ ಅಲ್ಲದೇ ಗದಗ, ಧಾರವಾಡ, ಕೊಪ್ಪಳ, ರಾಯಚೂರು ಜನರಿಗೂ ಯೋಜನೆಯಿಂದ ಲಾಭವಾಗಲಿದೆ. ಯೋಜನೆ ಜಾರಿಗೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಇಚ್ಛಾಶಕ್ತಿ ತೋರಿವೆ. ಆದರೆ, ಕೆಲವರು ಈ ಯೋಜನೆಗೆ ಅಡ್ಡಿಪಡಿಸುತ್ತಿದ್ದಾರೆ’ ಎಂದರು.

ಹಾವೇರಿಯ ಪ್ರವಾಸಿ ಮಂದಿರದಲ್ಲಿ ಸೋಮವಾರ ರೈತರು ತುರ್ತು ಸಭೆ ನಡೆಸಿದರು

> ಬೇಡ್ತಿ–ವರದಾ ವಿಚಾರದಲ್ಲಿ ಹಾವೇರಿ ಜಿಲ್ಲೆಗೆ ಒಳ್ಳೆಯದಾಗುತ್ತಿದೆ. ಡಿಪಿಆರ್ ಮುನ್ನವೇ ವಿರೋಧಿಸಿ ಸಮಾವೇಶ ನಡೆಸಿ ಗೊಂದಲ ಸೃಷ್ಟಿಸುವುದು ಸರಿಯಲ್ಲ. ಡಿಪಿಆರ್ ಆಗುವವರೆಗೂ ಕಾಯಬೇಕು **ಶ್ರೀನಿವಾಸ್ ಮಾನೆ,** ಹಾನಗಲ್ ಕ್ಷೇತ್ರದ ಶಾಸಕ

ಅಗಡಿ ಅಕ್ಕಿಮಠದ ಗುರುಲಿಂಗ ಸ್ವಾಮೀಜಿ ಮಾತನಾಡಿ, ‘ಇದು ಕುಡಿಯುವ ನೀರಿಗೆ ಸಂಬಂಧಪಟ್ಟ ವಿಷಯ. ಅರಣ್ಯಕ್ಕೆ ಧಕ್ಕೆ ಆಗುವುದಿಲ್ಲ. ವಾಸ್ತವ ಅರಿಯದೇ ಅಡ್ಡಿಪಡಿಸುವುದು ಸರಿಯಲ್ಲ’ ಎಂದು ಪ್ರತಿಪಾದಿಸಿದರು.

‘ಜಿಲ್ಲೆಯ ನೀರಿನ ಬವಣೆ ನೀಗಿಸಲು ಯೋಜನೆ ಆಗಬೇಕು. ಹೋರಾಟಕ್ಕೆ ನಾವೂ ಬೆಂಬಲ ನೀಡುತ್ತೇವೆ. ಜನಪ್ರತಿನಿಧಿಗಳೂ ಜನರ ಹಿತ ರಕ್ಷಣೆಗಾಗಿ ಒಗ್ಗಟ್ಟಿನಿಂದ ಹೋರಾಟಕ್ಕೆ ಬರಬೇಕು’ ಎಂದರು.

‘ಜನಜಾಗೃತಿ ಸಮಾವೇಶ ಶೀಘ್ರ’

‘ನದಿ ಜೋಡಣೆ ಯೋಜನೆಯನ್ನು ಭಾವನಾತ್ಮಕವಾಗಿ ಪರಿಗಣಿಸಬಾರದು. ವಸ್ತುಸ್ಥಿತಿ ಅರಿತು ಸಹಕರಿಸಬೇಕು. ಯೋಜನೆಯ ಮಹತ್ವ ತಿಳಿಸಲು ಪಕ್ಷಾತೀತವಾಗಿ ಜನಜಾಗೃತಿ ಸಮಾವೇಶ ಏರ್ಪಡಿಸುತ್ತೇವೆ’ ಎಂದು ಸಂಸದ ಬಸವರಾಜ ಬೊಮ್ಮಾಯಿ ತಿಳಿಸಿದರು.

ಶಿರಸಿಯಲ್ಲಿ ನಡೆದ ಸಮಾವೇಶದ ಬಗ್ಗೆ ಪ್ರತಿಕ್ರಿಯಿಸಿದ ಅವರು, ‘ಅರಣ್ಯಕ್ಕೆ ಯಾವುದೇ ಧಕ್ಕೆಯಾಗದಂತೆ ನೀರು ಎತ್ತುವ ಮೂಲಕ ಯೋಜನೆ ಜಾರಿಗೆ ಡಿಪಿಆರ್ ಆಗಲಿದೆ. ಆದರೆ, ಕೆಲವರು ಜನರಿಗೆ ತಪ್ಪು ಸಂದೇಶ ನೀಡಿ ದಾರಿ ತಪ್ಪಿಸುತ್ತಿರುವುದು ಸರಿಯಲ್ಲ’ ಎಂದರು.

‘ಶಿರಸಿ–ಸಿದ್ದಾಪುರ ಹಾಗೂ ಹಾವೇರಿ ಜಿಲ್ಲೆಯ ಜನರ ನಡುವೆ ನಿಕಟ ಸಂಬಂಧವಿದೆ. ಇದಕ್ಕೆ ಧಕ್ಕೆ ತರಬಾರದು. ಕುಡಿಯುವ ನೀರಿನ ಸಮಸ್ಯೆಗೆ ಈ ಯೋಜನೆ ಪರಿಹಾರ ನೀಡಲಿದೆ. ಪ್ರತಿ ಗ್ರಾಮ, ತಾಲ್ಲೂಕು ಮಟ್ಟದಿಂದ ಪಾದಯಾತ್ರೆ ಆರಂಭಿಸುವ ಚಿಂತನೆಯಿದೆ’ ಎಂದರು.

ಸರ್ಕಾರ ಯೋಜನೆ ಕೈಬಿಡಲಿ –ಕಾಗೇರಿ

ಪ್ರಜಾವಾಣಿ ವಾರ್ತೆ

ಶಿರಸಿ: ‘ಬೇಡ್ತಿ–ವರದಾ ನದಿ ಜೋಡಣೆ ಸಂಬಂಧ ವಿಸ್ತೃತ ಯೋಜನಾ ವರದಿ (ಡಿಪಿಆರ್) ತಯಾರಿಕೆಗೆ ತೋರುತ್ತಿರುವ ಉತ್ಸುಕತೆ ನಿಲ್ಲಿಸಿ, ಯೋಜನೆ ಕೈಬಿಡಲು ಸಿ.ಎಂ., ಡಿಸಿಎಂ ಮುಂದಾಗಬೇಕು’ ಎಂದು ಬಿಜೆಪಿ ಸಂಸದ ವಿಶ್ವೇಶ್ವರ ಹೆಗಡೆ ಕಾಗೇರಿ ಸೋಮವಾರ ಇಲ್ಲಿ ಒತ್ತಾಯಿಸಿದರು. ‘ರಾಜ್ಯ ಸರ್ಕಾರ ಯೋಜನೆ ಬೇಡ ಎಂದರೆ ಈಗಲೂ ಕೇಂದ್ರ ಸರ್ಕಾರ ಯೋಜನೆ ಹೇರುವುದಿಲ್ಲ. 30 ವರ್ಷದಿಂದ ಚರ್ಚೆ ಆಗದ್ದು, ಈ ಎರಡೂವರೆ ವರ್ಷದಲ್ಲಿ ಏಕೆ ಮುನ್ನೆಲೆಗೆ ಬಂದಿದೆ’ ಎಂದು ಪ್ರಶ್ನಿಸಿದರು.

ಪತ್ರಕರ್ತರ ಜತೆ ಮಾತನಾಡಿದ ಅವರು, ‘ವೈಜ್ಞಾನಿಕ ಕಾರಣ ಹಾಗೂ ಅನುಭವದ ಆಧಾರದಲ್ಲಿ ನದಿ ಜೋಡಣೆ ಯೋಜನೆ ನಮಗೆ ಬೇಡ. ಬೃಹತ್ ಯೋಜನೆಯಿಂದ ಭೂ ಕುಸಿತ ಉಂಟಾಗುತ್ತಿದೆ. ಜಿಲ್ಲೆಯ ಜನರು ಒಟ್ಟಾಗಿ ಈ ಯೋಜನೆ ಬೇಡ ಎಂದು ವಿರೋಧಿಸುತ್ತಿದ್ದಾರೆ’ ಎಂದು ಅವರು ಉಲ್ಲೇಖಿಸಿದರು.

‘ಜಿಲ್ಲೆಗೆ ಭೇಟಿ ನೀಡಿದ್ದಾಗ ಡಿಸಿಎಂ ಡಿ.ಕೆ.ಶಿವಕುಮಾರ ಅವರು ಈ ಯೋಜನೆ ಮಾಡುತ್ತೇವೆ ಎಂದು ಹೇಳಿದಾಗ ಜಿಲ್ಲಾ ಉಸ್ತುವಾರಿ ಸಚಿವ ಮಂಕಾಳ ವೈದ್ಯ ಏಕೆ ವಿರೋಧ ವ್ಯಕ್ತಪಡಿಸಲಿಲ್ಲ? ಎಂದು ಕಿಡಿಕಾರಿದರು.

ಪಶ್ಚಿಮಘಟ್ಟದ ಜೀವನಾಡಿಗಳಾದ ಬೇಡ್ತಿ-ವರದಾ, ಅಘನಾಶಿನಿ-ವೇದಾವತಿ ನದಿ ಯೋಜನೆ ಕೈಬಿಡಬೇಕೇ?

- ಹೌದು, ಪರಿಸರ ರಕ್ಷಣೆಗೆ ಅನಿವಾರ್ಯ
- ಇಲ್ಲ, ಅಭಿವೃದ್ಧಿಗೆ ಪೂರಕ

ಪ್ರತಿಕ್ರಿಯಿಸಲು ಕೋಡ್ ಸ್ಕ್ಯಾನ್ ಮಾಡಿ

ಫೆ.8ರಂದು ಬಸವ ದಳ ರಾಷ್ಟ್ರೀಯ ಅಧಿವೇಶನ

ಪ್ರಜಾವಾಣಿ ವಾರ್ತೆ

ಕೂಡಲಸಂಗಮ (ಬಾಗಲಕೋಟೆ ಜಿಲ್ಲೆ): ‘ರಾಷ್ಟ್ರೀಯ ಬಸವ ದಳ ಸಂಘಟನೆಯ ರಾಷ್ಟ್ರೀಯ ಅಧಿವೇಶನವು ಫೆ.8ರಂದು ಬೆಂಗಳೂರಿನ ಕುಂಬಳಗೋಡು ಬಸವ ಗಂಗೋತ್ರಿ ಆಶ್ರಮದಲ್ಲಿ ನಡೆಯಲಿದೆ’ ಎಂದು ಸಂಘಟನೆಯ ರಾಜ್ಯ ಘಟಕದ ಅಧ್ಯಕ್ಷ ಕೆ.ವಿ.ವೀರೇಶ ಸೋಮವಾರ ತಿಳಿಸಿದರು.

ಬಸವ ಧರ್ಮ ಪೀಠದಲ್ಲಿ ನಡೆದ 39ನೇ ಶರಣ ಮೇಳದ ಕಾರ್ಯಕ್ರಮದಲ್ಲಿ ಅವರು, ‘ಬಸವ ದಳದ ಸಂಘಟನೆ, ವೀರಶೈವ, ಹಿಂದೂ ಪದಗಳ ಬಗ್ಗೆ ಅಧಿವೇಶನದಲ್ಲಿ ಚರ್ಚಿಸಲಾಗುವುದು’ ಎಂದು ಹೇಳಿದರು.

ಸಂಘಟನೆಯ ಪ್ರಧಾನ ಕಾರ್ಯದರ್ಶಿ ಚಂದ್ರಮೌಳಿ, ಬಸವ ಧರ್ಮ ಪೀಠದ ಮಾತೆ ಗಂಗಾದೇವಿ ಮಾತನಾಡಿದರು.

‘ಅಗತ್ಯವಿದ್ದರೆ ಸಿ.ಎಂ, ಡಿಸಿಎಂಗೆ ಕರೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ನಾಯಕತ್ವ ಬದಲಾವಣೆ ವಿಚಾರ ಬೂದಿ ಮುಚ್ಚಿದ ಕೆಂಡದಂತಿದೆ. ಈ ನಡುವೆ, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರನ್ನು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಭೇಟಿ ಮಾಡಿ ಚರ್ಚೆ ನಡೆಸಿರುವುದು ಕಾಂಗ್ರೆಸ್ ಪಾಳಯದಲ್ಲಿ ಮತ್ತೆ ಚರ್ಚೆಗೆ ಕಾರಣವಾಗಿದೆ.

ಸದಾಶಿವ ನಗರದಲ್ಲಿರುವ ಖರ್ಗೆಯವರ ನಿವಾಸಕ್ಕೆ ಸೋಮವಾರ ಬೆಳಿಗ್ಗೆ ತೆರಳಿದ ಡಿ.ಕೆ. ಶಿವಕುಮಾರ್, ಒಂದು ಗಂಟೆಗೂ ಹೆಚ್ಚು ಕಾಲ ಮಾತುಕತೆ ನಡೆಸಿದ್ದಾರೆ.

ಭೇಟಿ ಬಳಿಕ ಸುದ್ದಿಗಾರರು, ‘ಸಿದ್ದರಾಮಯ್ಯ ಮತ್ತು ಶಿವಕುಮಾರ್ ಅವರನ್ನು ದೆಹಲಿಗೆ ಯಾವಾಗ ಕರೆಸಿಕೊಳ್ಳುತ್ತೀರಿ’ ಎಂದು ಪ್ರಶ್ನಿಸಿದರು. ‘ನಮಗೆ ಯಾವಾಗ ಅಗತ್ಯ ಇರುತ್ತದೊ ಅವಾಗ ರಾಜ್ಯ ನಾಯಕರನ್ನು ದೆಹಲಿಗೆ ಕರೆಸಿಕೊಳ್ಳುತ್ತೇವೆ’ ಎಂದು ಖರ್ಗೆಯವರು ಪ್ರತಿಕ್ರಿಯಿಸಿದರು.

ಬಳಿಕ ಕಲಬುರಗಿಗೆ ಪ್ರಯಾಣ ಬೆಳೆಸಲು ಒಂದೇ ಕಾರಿನಲ್ಲಿ ಮಲ್ಲಿಕಾರ್ಜುನ ಖರ್ಗೆ ಮತ್ತು ಶಿವಕುಮಾರ್ ವಿಮಾನ ನಿಲ್ದಾಣಕ್ಕೆ ತೆರಳಿದರು.

16ರಂದು ಡಿಕೆಶಿ ದೆಹಲಿಗೆ: ಅಸ್ಸಾಂ ವಿಧಾನಸಭಾ ಚುನಾವಣೆಗೆ ಹಿರಿಯ ವೀಕ್ಷಕರಾಗಿ ಡಿ.ಕೆ. ಶಿವಕುಮಾರ್ ಅವರನ್ನು ಎಐಸಿಸಿ ನೇಮಿಸಿದ್ದು, ಚುನಾವಣೆಗೆ ಸಂಬಂಧಿಸಿದಂತೆ ಚರ್ಚಿಸಲು ಇದೇ 16ರಂದು ದೆಹಲಿಯಲ್ಲಿ ವೀಕ್ಷಕರ ಸಭೆ ನಡೆಯಲಿದೆ. ಆ ಸಭೆಯಲ್ಲಿ ಶಿವಕುಮಾರ್ ಭಾಗವಹಿಸಲಿದ್ದಾರೆ. ಅದೇ ದಿನ ರಾಹುಲ್ ಗಾಂಧಿ ಅವರನ್ನು ಭೇಟಿ ಮಾಡಲು ಶಿವಕುಮಾರ್ ಸಮಯ ಕೇಳಿದ್ದಾರೆ ಎಂದು ಹೇಳಲಾಗಿದೆ. ಸಮಯ ಕೊಟ್ಟರೆ ಪ್ರತ್ಯೇಕವಾಗಿ ಭೇಟಿ ಮಾಡುವ ಸಾಧ್ಯತೆ ಇದೆ.

ಅಲ್ಲದೆ, ‘ನರೇಗಾ ಬಚಾವ್ ಸಂಗ್ರಾಮ್’ ಕಾರ್ಯಕ್ರಮದ ರೂಪುರೇಷೆ ಕುರಿತು ಚರ್ಚಿಸಲು ಎಐಸಿಸಿಯು, ಇದೇ 22ರಂದು ಎಲ್ಲ ರಾಜ್ಯಗಳ ಪ್ರದೇಶ ಕಾಂಗ್ರೆಸ್ ಸಮಿತಿ (ಪಿಸಿಸಿ) ಅಧ್ಯಕ್ಷರ ಮತ್ತು ಕಾಂಗ್ರೆಸ್ ಪ್ರತಿನಿಧಿಸುವ ಮುಖ್ಯಮಂತ್ರಿಗಳ ಸಭೆಯನ್ನು ದೆಹಲಿಯಲ್ಲಿ ಆಯೋಜಿಸಿದೆ. ಈ ಸಭೆಯಲ್ಲಿಯೂ ಶಿವಕುಮಾರ್ ಭಾಗವಹಿಸುವ ಸಾಧ್ಯತೆಯಿದೆ.

ರಾಹುಲ್ ಜೊತೆ ಸಿ.ಎಂ ಚರ್ಚೆ ಇಂದು

ಮೈಸೂರು: ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮಂಗಳವಾರ (ಜ.13) ಮಧ್ಯಾಹ್ನ 1.25ಕ್ಕೆ ಇಲ್ಲಿನ ಮಂಡಕಳ್ಳಿ ವಿಮಾನನಿಲ್ದಾಣಕ್ಕೆ ವಿಶೇಷ ವಿಮಾನದಲ್ಲಿ ಬಂದಿಳಿಯುವರು. ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಮಂಗಳವಾರ ತಮಿಳುನಾಡು ಪ್ರವಾಸ ಕೈಗೊಂಡಿದ್ದು, ಮಾರ್ಗಮಧ್ಯೆ ಮಂಡಕಳ್ಳಿ ವಿಮಾನ ನಿಲ್ದಾಣಕ್ಕೆ ಬರಲಿದ್ದಾರೆ. ಅವರಿಗೆ ಸ್ವಾಗತಿಸಿ, ಚರ್ಚಿಸುವುದು ಹಾಗೂ ಬೀಳ್ಕೊಡಲು ಮುಖ್ಯಮಂತ್ರಿ ಮೈಸೂರಿಗೆ ಬರುತ್ತಿದ್ದಾರೆ ಎಂದು ಪಕ್ಷದ ಮೂಲಗಳು ತಿಳಿಸಿವೆ.

ಮುಖ್ಯಮಂತ್ರಿ ಜೊತೆ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಪ್ರವಾಸವೂ ನಿಗದಿಯಾಗಿದೆ. ಇಬ್ಬರು ಒಂದೇ ವಿಮಾನದಲ್ಲಿ ಬಂದು ವಾಪಸಾಗಲಿದ್ದಾರೆ. ‘ರಾಹುಲ್ ಅವರು ಇಲ್ಲಿ ವಿಮಾನ ಬದಲಾವಣೆಗಾಗಿ ಕೆಲಕಾಲ ಇರಲಿದ್ದಾರೆ. ಮಧ್ಯಾಹ್ನ 2ರ ಸುಮಾರಿಗೆ ಬರುವ ಅವರು, 2.35ರ ಸುಮಾರಿಗೆ ತೆರಳಲಿದ್ದಾರೆ. ನೀಲಗಿರಿ ಜಿಲ್ಲೆಯ ಗೂಡ್ಲೂರಿನಲ್ಲಿ ಕಾರ್ಯಕ್ರಮವೊಂದರಲ್ಲಿ ಪಾಲ್ಗೊಂಡು ಬಳಿಕ ಮಂಡಕಳ್ಳಿ ವಿಮಾನನಿಲ್ದಾಣಕ್ಕೆ ಬಂದು, ಇಲ್ಲಿಂದ ನವದೆಹಲಿಗೆ ತೆರಳುವರು. ಹೀಗಾಗಿ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೂ ಮೈಸೂರು ಪ್ರವಾಸ ಕೈಗೊಂಡಿದ್ದಾರೆ ಎಂದು ತಿಳಿದುಬಂದಿದೆ.

ಕರ್ನಾಟಕ ಸರ್ಕಾರ
ಲೋಕೋಪಯೋಗಿ, ಇಲಾಖೆ ವಿಭಾಗ, ಹೊಸಪೇಟೆ, ವಿಜಯನಗರ ಜಿಲ್ಲೆ.

ಸಂ:ಪಿಬಿ/ಟೆಂಡರ್ ಪ್ರಕಟಣೆ/ AE-2 /2025–26/3361 ದಿ:–08.01.2025

ಅಲ್ಪಾವಧಿ ಇ–ಟೆಂಡರ್ ಆಹ್ವಾನ ಪ್ರಕಟಣೆ

ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ https://kppp.karnataka.gov.in ಮುಖಾಂತರ ಈ ಕೆಳಕಂಡ ಕಾಮಗಾರಿಗಳಿಗೆ ಟೆಂಡರ್ ಆಹ್ವಾನಿಸಲಾಗಿದೆ ಹೆಚ್ಚಿನ ವಿವರಗಳನ್ನು ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ ಇಲಾಖೆ, ವಿಭಾಗ, ಹೊಸಪೇಟೆ, ವಿಜಯನಗರ ಜಿಲ್ಲೆ ಕಾರ್ಯಾಲಯದಿಂದ ಮಾಹಿತಿಯನ್ನು ಪಡೆಯಬಹುದು.

ಕ್ರ ಸಂ	ಕಾಮಗಾರಿಯ ಇಂಡೆಂಟ್ ಸಂಖ್ಯೆ	ಅಂದಾಜು ಮೊತ್ತ ರೂ. ಲಕ್ಷಗಳಲ್ಲಿ	ಕ್ರ ಸಂ	ಕಾಮಗಾರಿಯ ಇಂಡೆಂಟ್ ಸಂಖ್ಯೆ	ಅಂದಾಜು ಮೊತ್ತ ರೂ. ಲಕ್ಷಗಳಲ್ಲಿ
	RESERVED FOR SC-CATOGERY				
1	PWD/2025-26/BR/WORK_INDENT31295	8.50	6	PWD/2025-26/BD/WORK_INDENT29511	5.00
2	PWD/2025-26/RD/WORK_INDENT29668	100.00	7	PWD/2025-26/OW/WORK_INDENT30860	1.50
3	PWD/2025-26/RD/WORK_INDENT29670	15.00	8	PWD/2025-26/RD/WORK_INDENT28525/CALL-2	50.00
4	PWD/2025-26/BD/WORK_INDENT31420	3.00	9	PWD/2025-26/RD/WORK_INDENT29434/CALL-2	50.00
5	PWD/2025-26/BR/WORK_INDENT32146	30.00	10	PWD/2025-26/RD/WORK_INDENT28522/CALL-2	50.00
	RESERVED FOR ST-CATOGERY				
11	PWD/2025-26/BR/WORK_INDENT29226	3.00	13	PWD/2025-26/RD/WORK_INDENT28446/CALL-2	50.00
12	PWD/2025-26/BR/WORK_INDENT31679	5.00			
	RESERVED FOR CATOGERY-2A				
14	PWD/2025-26/BR/WORK_INDENT31297	5.15	18	PWD/2025-26/BD/WORK_INDENT29523	8.00
15	PWD/2025-26/BD/WORK_INDENT30919	4.00	19	PWD/2025-26/RD/WORK_INDENT28523	100.00
16	PWD/2025-26/RD/WORK_INDENT30786	35.74	20	PWD/2025-26/RD/WORK_INDENT29029	50.00
17	PWD/2025-26/BD/WORK_INDENT31676	10.00			
	RESERVED FOR CATOGERY-1				
21	PWD/2025-26/BR/WORK_INDENT31508	4.35	22	PWD/2025-26/BD/WORK_INDENT29336/CALL-2	6.70
	GENERAL				
23	PWD/2025-26/BR/WORK_INDENT31318	7.50	38	PWD/2025-26/BR/WORK_INDENT30233	3.00
24	PWD/2025-26/BD/WORK_INDENT30911	5.00	39	PWD/2025-26/BR/WORK_INDENT31735	6.00
25	PWD/2025-26/BD/WORK_INDENT30909	10.00	40	PWD/2025-26/RD/WORK_INDENT28300/CALL-2	50.00
26	PWD/2025-26/BD/WORK_INDENT30916	2.00	41	PWD/2025-26/RD/WORK_INDENT29100/CALL-2	50.00
27	PWD/2025-26/RD/WORK_INDENT30787	70.00	42	PWD/2025-26/RD/WORK_INDENT28362/CALL-2	50.00
28	PWD/2025-26/BG/WORK_INDENT31441	3.00	43	PWD/2025-26/RD/WORK_INDENT28361/CALL-2	50.00
29	PWD/2024-25/BD/WORK_INDENT19291	18.50	44	PWD/2025-26/RD/WORK_INDENT28363/CALL-2	50.00
30	PWD/2025-26/BD/WORK_INDENT31682	13.50	45	PWD/2025-26/RD/WORK_INDENT29742	95.00
31	PWD/2025-26/BD/WORK_INDENT31685	5.00	46	PWD/2025-26/RD/WORK_INDENT28519	150.00
32	PWD/2025-26/BD/WORK_INDENT29935	3.80	47	PWD/2025-26/BG/WORK_INDENT28727	500.00
33	PWD/2025-26/BD/WORK_INDENT31325	1.00	48	PWD/2025-26/OW/WORK_INDENT28587	300.00
34	PWD/2025-26/BD/WORK_INDENT32170	7.50	49	PWD/2025-26/RD/WORK_INDENT31574	100.00
35	PWD/2025-26/BD/WORK_INDENT32173	2.50	50	PWD/2025-26/RD/WORK_INDENT30220	100.00
36	PWD/2025-26/BR/WORK_INDENT30227	2.00	51	PWD/2025-26/RD/WORK_INDENT28518	100.00
37	PWD/2025-26/BR/WORK_INDENT30239	2.50	52	PWD/2025-26/RD/WORK_INDENT28401	100.00
			53	PWD/2025-26/BD/WORK_INDENT30459	100.00

		ಕ್ರ.ಸಂ:2,19 ಹಾಗೂ 46 ರಿಂದ 53 ರವರೆಗೆ	ಉಳಿದ ಕಾಮಗಾರಿಗಳು
1	ಗುತ್ತಿಗೆದಾರರ ಕ್ಲಾರೀಸ್ ದಿನಾಂಕ:	KPP Portal ನಲ್ಲಿ ಇರುವಂತೆ	KPP Portal ನಲ್ಲಿ ಇರುವಂತೆ
2	ಕೆ.ಪಿ.ಪಿ ಪೋರ್ಟ್‌ಲ್ ಮುಖಾಂತರ ಟೆಂಡರ್ ಸಲ್ಲಿಸುವ ಅಂತಿಮ ದಿನಾಂಕ:	28.01.2026(16.00 ಗಂಟೆಗೆ)	20.01.2026(16.00 ಗಂಟೆಗೆ)
3	ಕೆ.ಪಿ.ಪಿ ಪೋರ್ಟ್‌ಲ್ ಮುಖಾಂತರ ಬಿಡ್‌ಗಳನ್ನು ತೆರೆಯುವ ದಿನಾಂಕ:	29.01.2026(16.30 ಗಂಟೆಗೆ)	21.01.2026(16.30 ಗಂಟೆಗೆ)
4	ಕೆ.ಪಿ.ಪಿ ಪೋರ್ಟ್‌ಲ್ ಮುಖಾಂತರ ಆರ್ಥಿಕ ಬಿಡ್ ತೆರೆಯುವ ದಿನಾಂಕ:	KPP Portal ನಲ್ಲಿ ಇರುವಂತೆ	KPP Portal ನಲ್ಲಿ ಇರುವಂತೆ

ವಿಶೇಷ ಸೂಚನೆ:– ಎಲ್ಲಾ ಕಾಮಗಾರಿ ಟೆಂಡರ್‌ಗಳನ್ನು / ಒಪ್ಪಿಗೆ / ತಿರಸ್ಕರಿಸುವ ಅಥವಾ ಯಾವುದೇ ಕಾರಣ ನೀಡದೆ ಹಿಂತೆಗೆದುಕೊಳ್ಳುವ ಹಾಗೂ ಅನುಮೋದಿಸುವ ಅಧಿಕಾರ ಸಕ್ಷಮ ಪ್ರಾಧಿಕಾರಕ್ಕೆ ಇರುತ್ತದೆ.

ಸಹಿ/–ಕಾರ್ಯನಿರ್ವಾಹಕ ಅಭಿಯಂತರು,
ಲೋಕೋಪಯೋಗಿ ಇಲಾಖೆ ವಿಭಾಗ ಹೊಸಪೇಟೆ, ವಿಜಯನಗರ ಜಿಲ್ಲೆ.

ವಾ.ಸಾ.ಸಂ.ಇ/ವಿಜಯನಗರ/2025–26/ಕೆಎಸ್‌ಎಂಸಿಎ/ಆರ್.ಒ.ಸಂಖ್ಯೆ/456

ರಾಜ್ಯಪಾಲರ ಭೇಟಿಯಾದ ರಾಜ್ಯ ಬಿಜೆಪಿ ನಿಯೋಗದ ಮನವಿ

ದ್ವೇಷ ತಡೆ ಮಸೂದೆಗೆ ಅಂಕಿತ ಬೇಡ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದ್ವೇಷ ಭಾಷಣ ಮತ್ತು ದ್ವೇಷ ಅಪರಾಧಗಳ ಪ್ರತಿಬಂಧಕ ಮಸೂದೆಗೆ ಸಹಿ ಹಾಕಬಾರದು ಎಂದು ಬಿಜೆಪಿ ನಿಯೋಗವು ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರಿಗೆ ಮನವಿ ಸಲ್ಲಿಸಿತು.

ವಿರೋಧ ಪಕ್ಷದ ನಾಯಕರಾದ ಆರ್. ಅಶೋಕ, ಛಲವಾದಿ ನಾರಾಯಣಸ್ವಾಮಿ ನೇತೃತ್ವದ ನಿಯೋಗವು, ರಾಜ್ಯಪಾಲರನ್ನು ಸೋಮವಾರ ಭೇಟಿ ಮಾಡಿತು.

ಕೋಗಿಲು ಬಡಾವಣೆಯಲ್ಲಿ ಒತ್ತುವರಿದಾರರಿಗೆ ಮತ್ತು ಬಾಂಗ್ಲಾ ಪ್ರಜೆಗಳಿಗೆ ಪರ್ಯಾಯ ಮನೆಗಳನ್ನೂ ನೀಡಬಾರದು ಎಂಬುದೂ ಸೇರಿ ವಿವಿಧ ಬೇಡಿಕೆಗಳ ಮನವಿ ಪತ್ರಗಳನ್ನು ಗೆಹಲೋತ್ ಅವರಿಗೆ ಸಲ್ಲಿಸಿತು.

ಮನವಿಗಳೇನು: ದ್ವೇಷ ಭಾಷಣ ಮತ್ತು ದ್ವೇಷ ಅಪರಾಧಗಳ ಪ್ರತಿಬಂಧಕ ಮಸೂದೆ 2025 ಅನ್ನು ಕೈಬಿಡಬೇಕು. ಕೇಂದ್ರದ ಬಿಎನ್‌ಎಸ್ ಕಾಯ್ದೆ ಪ್ರಕಾರ ಸೆಕ್ಷನ್ 196 ರಲ್ಲಿ ಈ ಎಲ್ಲಾ ಅಂಶಗಳು ಒಳಗೊಂಡಿರುವುದರಿಂದ ಈ ಮಸೂದೆಯ ತರಾತುರಿ ಏಕೆ? ವಿರೋಧ ಪಕ್ಷಗಳು, ಸಾಮಾಜಿಕ ಸಂಘಟನೆಗಳು, ಕನ್ನಡ ಪರ ಸಂಘಟನೆಗಳು ಮತ್ತು ಸಾಮಾಜಿಕ ಜಾಲತಾಣಗಳ ವಾಕ್ ಸ್ವಾತಂತ್ರ್ಯ ಹಾಗೂ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಕಸಿದುಕೊಳ್ಳಲು ಸರ್ಕಾರ ಮುಂದಾಗಿದೆ. ಹೀಗಾಗಿ, ಇದಕ್ಕೆ ತಡೆಯೊಡ್ಡಬೇಕು.

> ಕಣ್ಣು ಮಿಟುಕಿಸಿದರೆ, ಕೈ ತೋರಿಸಿದರೆ ಬಂಧನ ಮಾಡುವಂತಹ ಕಾನೂನು ತರಲು ಮುಂದಾಗಿದ್ದಾರೆ. ಇಂದಿರಾಗಾಂಧಿ ತುರ್ತುಪರಿಸ್ಥಿತಿ ಹೇರಿದ ಮಾದರಿಯಲ್ಲೇ ಇದು ಇದೆ
> **ಆರ್.ಅಶೋಕ,** ವಿರೋಧಪಕ್ಷದ ನಾಯಕ, ವಿಧಾನಸಭೆ

> 5 ನಿಮಿಷದಲ್ಲಿ ಜನಾರ್ದನ ರೆಡ್ಡಿ ಮನೆ ಸುಟ್ಟುಬಿಡುತ್ತೇನೆ ಎಂದು ಭರತ್ ರೆಡ್ಡಿ ಹೇಳಿದರೂ ಕ್ರಮ ತೆಗೆದುಕೊಳ್ಳಲಿಲ್ಲ. ಇದು ದ್ವೇಷ ಭಾಷಣ ಅಲ್ಲವೇ?
> **ಛಲವಾದಿ ನಾರಾಯಣಸ್ವಾಮಿ** ವಿರೋಧಪಕ್ಷದ ನಾಯಕ, ವಿಧಾನಪರಿಷತ್

- ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಸಂಪೂರ್ಣ ಹದಗೆಟ್ಟಿದೆ. ಡಕಾಯಿತರು, ಕೊಲೆಗಾರರು, ಭೂಮಾಫಿಯಾ ಜತೆ ಸೇರಿ ಪೊಲೀಸರು ಅಪರಾಧ ಎಸಗುವ ಪ್ರಕರಣಗಳು ರಾಜ್ಯವನ್ನು ತಲೆ ತಗ್ಗಿಸುವ ಹಾಗೆ ಮಾಡಿವೆ. 236 ಪೊಲೀಸರು ಕ್ರಿಮಿನಲ್ ಚಟುವಟಿಕೆಯಲ್ಲಿ ಭಾಗವಹಿಸಿದ ಕಾರಣಕ್ಕೆ ಅಮಾನತುಗೊಂಡಿದ್ದಾರೆ. 42 ಪೊಲೀಸರು ಕ್ರಿಮಿನಲ್ ಕೇಸ್‌ಗಳಲ್ಲಿ ಭಾಗಿಯಾಗಿರುವ ವರದಿ ಬಂದಿದೆ. ಪೊಲೀಸ್ ಕಾನ್‌ಸ್ಟೇಬಲ್ ಇಬ್ಬರು ₹7.11 ಕೋಟಿ ದರೋಡೆಯಲ್ಲಿ ಭಾಗಿಯಾಗಿರುವುದು ಕಾನೂನು ಸುವ್ಯವಸ್ಥೆಗೇ ಕಪ್ಪು ಚುಕ್ಕೆಯಾಗಿದೆ. ಕರ್ನಾಟಕ ಗೂಂಡಾ ರಾಜ್ಯವಾಗಿ ಪರಿವರ್ತನೆಗೊಂಡಿದೆ. ಜನ ಸಾಮಾನ್ಯರ ಬದುಕು ದುಸ್ತರವಾಗಿದೆ. ಸರ್ಕಾರಕ್ಕೆ ಸೂಕ್ತ ನಿರ್ದೇಶನ ನೀಡಬೇಕು.
- ಕೋಗಿಲು ಬಡಾವಣೆಯಲ್ಲಿ ತೆರವುಗೊಂಡಿರುವ ಬಾಂಗ್ಲಾ ದೇಶೀಯರು ಮತ್ತು ರೋಹಿಂಗ್ಯಾ ವಲಸಿಗರಿಗೆ ಮನೆಗಳನ್ನು ನೀಡಲು ಸರ್ಕಾರ ತೀರ್ಮಾನಿಸಿದೆ. ರಾಜ್ಯದಲ್ಲಿ 37 ಲಕ್ಷ ಕುಟುಂಬಗಳು ವಸತಿಗಾಗಿ ಅರ್ಜಿ ಸಲ್ಲಿಸಿವೆ. ಅವರಿಗೆ ಮನೆ ನೀಡಲು ವಿಫಲವಾದ ಸರ್ಕಾರ ಅಕ್ರಮ ವಲಸಿಗರಿಗೆ ಮನೆ ನೀಡಲು ಮುಂದಾಗಿದೆ. ಅದಕ್ಕೆ ತಡೆ ನೀಡಬೇಕು.
- ಗಂಗಾವತಿ ಶಾಸಕ ಜನಾರ್ದನ ರೆಡ್ಡಿ ಮತ್ತು ಅವರ ಕುಟುಂಬದ ಮೇಲೆ ಬಳ್ಳಾರಿಯಲ್ಲಿ ನಡೆದ ಗುಂಡಿನ ದಾಳಿಯ ಪ್ರಕರಣವನ್ನು ಸಿಬಿಐ ತನಿಖೆಗೆ ನೀಡುವ ಹಾಗೂ ಸೂಕ್ತ ಭದ್ರತೆ ನೀಡಬೇಕು.

ಆರ್.ಅಶೋಕ ಹಾಗೂ ಛಲವಾದಿ ನಾರಾಯಣಸ್ವಾಮಿ ನೇತೃತ್ವದಲ್ಲಿ ಬಿಜೆಪಿ ನಾಯಕರ ನಿಯೋಗವು ಸೋಮವಾರ ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರಿಗೆ ಮನವಿ ಪತ್ರ ಸಲ್ಲಿಸಿತು

ಪುಸ್ತಕ ಸಗಟು ಖರೀದಿಗೆ ಹೆಚ್ಚು ಅನುದಾನ: ತಂಗಡಗಿ

‘ಮನೆಗೊಂದು ಗ್ರಂಥಾಲಯ’ ಯೋಜನೆಗೆ ಸಚಿವರಿಂದ ಚಾಲನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ನಾಡಿನ ಪ್ರಕಾಶಕರ ಹಿತ ಕಾಯಲು ಕನ್ನಡ ಪುಸ್ತಕ ಪ್ರಾಧಿಕಾರದ ಸಗಟು ಖರೀದಿ ಯೋಜನೆಗೆ ಮುಂದಿನ ದಿನಗಳಲ್ಲಿ ಹೆಚ್ಚು ಅನುದಾನ ನೀಡಲಾಗುವುದು’ ಎಂದು ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ ತಂಗಡಗಿ ಹೇಳಿದರು.

ತಮ್ಮ ಗೃಹ ಕಚೇರಿಯಲ್ಲಿ ಪುಸ್ತಕ ಪ್ರಾಧಿಕಾರದ ‘ಮನೆಗೊಂದು ಗ್ರಂಥಾಲಯ’ ಯೋಜನೆಗೆ ಸೋಮವಾರ ಚಾಲನೆ ನೀಡಿ ಅವರು ಮಾತನಾಡಿದರು.

‘ಪುಸ್ತಕ ಪ್ರೀತಿ ಎಂಬುದನ್ನು ಪ್ರತಿಯೊಬ್ಬರು ಬೆಳೆಸಿಕೊಳ್ಳಬೇಕು. ಪುಸ್ತಕ ಪ್ರೀತಿಯ ಫಲವಾಗಿಯೇ ಸಾಹಿತಿಗಳು, ಪ್ರಕಾಶಕರು ಹಾಗೂ ಪುಸ್ತಕೋದ್ಯಮ ಜೀವಂತವಾಗಿರಲು ಸಾಧ್ಯ. ಅದಕ್ಕೆ ಈ ಯೋಜನೆ ಪೂರಕವಾಗಲಿದೆ’ ಎಂದು ಆಶಿಸಿದರು.

ಕಾರ್ಯಕ್ರಮಕ್ಕೆ ಶಿವರಾಜ ತಂಗಡಗಿ ಚಾಲನೆ ನೀಡಿದರು. ಮಾನಸ, ಬಿ.ಟಿ. ಲಲಿತಾ ನಾಯಕ್, ಕೆ.ಬಿ. ಕಿರಣ್ ಸಿಂಗ್ ಪಾಲ್ಗೊಂಡಿದ್ದರು

ಗ್ರಂಥಾಲಯ ಅನುಷ್ಠಾನದ ಪ್ರಶಂಸಾ ಪತ್ರವನ್ನು ಸಾಹಿತಿಯೂ ಆಗಿರುವ ಮಾಜಿ ಸಚಿವೆ ಬಿ.ಟಿ. ಲಲಿತಾ ನಾಯಕ್ ಅವರು ಸಚಿವರಿಗೆ ನೀಡಿದರು.

‘ಮನೆಗೊಂದು ಗ್ರಂಥಾಲಯ ಯೋಜನೆಯ ಮೂಲಕ ಪ್ರಾಧಿಕಾರವು ಪುಸ್ತಕ ಪ್ರಕಾಶಕರು, ಸಾಹಿತಿಗಳಿಗೆ ನೆರವಾಗಲು ಹೊರಟಿದೆ. ಇದೊಂದು ಉತ್ತಮ ಯೋಜನೆ’ ’ ಎಂದು ಲಲಿತಾ ನಾಯಕ್ ಹೇಳಿದರು.

ಗ್ರಂಥಾಲಯ ಇಲಾಖೆ ಸಗಟು ಖರೀದಿ ಸ್ಥಗಿತಗೊಳಿಸಿರುವುದರಿಂದ ಪ್ರಕಾಶಕರು ಸಂಕಷ್ಟಕ್ಕೆ ಒಳಗಾಗಿದ್ದಾರೆ. ಅದನ್ನು ಸರಿಪಡಿಸುವಂತೆ ಪುಸ್ತಕ ಪ್ರಾಧಿಕಾರದ ಅಧ್ಯಕ್ಷ ಮಾನಸ ಮನವಿ ಸಲ್ಲಿಸಿದರು.

‘ಮನೆಗೊಂದು ಗ್ರಂಥಾಲಯ ಯೋಜನೆಯ ಮೂಲಕ ಒಂದು ಲಕ್ಷ ಮನೆಗಳನ್ನು ತಲುಪುವ ಗುರಿ ನಮ್ಮದು. ಪ್ರತಿ ಜಿಲ್ಲೆಯಲ್ಲಿ ಜಾಗೃತಿ ಸಮಿತಿ ರಚಿಸಲಾಗಿದೆ. ಈ ಸಮಿತಿಯ ಸದಸ್ಯರು ಗ್ರಂಥಾಲಯ ರೂಪಿಸಲು ನೆರವಾಗಲಿದ್ದಾರೆ’ ಎಂದರು.

‘ಬಾನು ಮುಷ್ತಾಕ್ ಅವರ ಎದೆಯ ಹಣತೆ ಕೃತಿ ಯುರೋಪ್ ದೇಶಗಳಲ್ಲಿ ದೊಡ್ಡ ಸಂಖ್ಯೆಯಲ್ಲಿ ಮಾರಾಟ ಆಗುತ್ತಿದೆ. ಕನ್ನಡದಲ್ಲಿಯೂ ಅಂತಹ ಪುಸ್ತಕ ಸಂಸ್ಕೃತಿ ಬರಬೇಕಿದೆ’ ಎಂದರು.

ಬೆಂಗಳೂರು ನಗರ ಜಿಲ್ಲೆಯ ಗ್ರಂಥಾಲಯ ಜಾಗೃತಿ ಸಮಿತಿ ಸದಸ್ಯರಿಗೆ ಸಚಿವರು ಅರ್ಹತಾ ಪತ್ರಗಳನ್ನು ವಿತರಿಸಿದರು. ಈ ಯೋಜನೆಯ ಕುರಿತು ಪ್ರಾಧಿಕಾರದ ಆಡಳಿತಾಧಿಕಾರಿ ಕೆ.ಬಿ. ಕಿರಣ್ ಸಿಂಗ್ ಮಾತನಾಡಿದರು. ಪ್ರಾಧಿಕಾರದ ಸದಸ್ಯರಾದ ಲಕ್ಷ್ಮಣ ಕೊಡಸೆ ಮತ್ತು ಬಿ.ಸಿ. ಕುಶಾಲ ಇದ್ದರು.

‘...ಶೇ 75ರಷ್ಟಾದರೂ ಅನುದಾನ ಕೊಡಿ’

ಒಂದನೇ ಪುಟದಿಂದ...

‘ಮೈಸೂರು, ಬೆಂಗಳೂರು ಭಾಗದ ಮಕ್ಕಳಿಗೆ ಉತ್ತಮ ಶಿಕ್ಷಣ, ಉದ್ಯೋಗಾವಕಾಶಗಳು ಸಿಗುತ್ತಿವೆ. ಕಲ್ಯಾಣ ಕರ್ನಾಟಕ ಭಾಗದಲ್ಲಿ ಶಾಲೆಗಳಿದ್ದರೂ ಶಿಕ್ಷಕರಿಲ್ಲ. ಸಿದ್ದರಾಮಯ್ಯನವರು ಹಾಗೂ ಶಿಕ್ಷಣ ಸಚಿವ ಮಧು ಬಂಗಾರಪ್ಪ ಅವರು 10 ಸಾವಿರ ಶಿಕ್ಷಕರನ್ನು ನೇಮಕ ಮಾಡಿಕೊಂಡು ಕಲ್ಯಾಣ ಕರ್ನಾಟಕದ ಶಾಲೆಗಳಿಗೆ ನಿಯೋಜನೆ ಮಾಡಬೇಕು. ನಮ್ಮಲ್ಲಿ ಭರ್ತಿಯಾಗಿ ಮಿಕ್ಕಿದರೆ ದಕ್ಷಿಣ ಕರ್ನಾಟಕಕ್ಕೆ ಕೊಂಡೊಯ್ಯಿರಿ’ ಎಂದರು.

ಖರ್ಗೆ ಅವರು ಈ ಮಾತು ಆಡುವಾಗ ಮುಖ್ಯಮಂತ್ರಿ ಅವರು ಸಚಿವ ಪ್ರಿಯಾಂಕ್ ಖರ್ಗೆ ಹಾಗೂ ಕೆಕೆಆರ್‌ಡಿಬಿ ಅಧ್ಯಕ್ಷ ಡಾ.ಅಜಯ್ ಸಿಂಗ್ ಅವರೊಂದಿಗೆ ಮಾತಿನಲ್ಲಿ ನಿರತರಾಗಿದ್ದರು. ಹೀಗಾಗಿ ಶಿಕ್ಷಕರ ಹುದ್ದೆಗಳ ಭರ್ತಿ ನಂತರ ತಮ್ಮ ಭಾಷಣದಲ್ಲಿ ಪ್ರಸ್ತಾಪ ಮಾಡಲಿಲ್ಲ.

ರಾಜ್ಯಸಭೆ ವಿರೋಧ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ ಹಾಗೂ ಮುಖ್ಯಮಂತ್ರಿ ಸಿದ್ದರಾಮಯ್ಯ ಸಮಾರಂಭದಲ್ಲಿ ಚರ್ಚಿಸಿದರು –ಪ್ರಜಾವಾಣಿ ಚಿತ್ರ

‘ಮಂಡಳಿಗೆ ₹13 ಸಾವಿರ ಕೋಟಿ’

‘ನಾನು ಮುಖ್ಯಮಂತ್ರಿಯಾಗಿ ಅಧಿಕಾರ ವಹಿಸಿಕೊಂಡ ಬಳಿಕ 2023–24ರಲ್ಲಿ ಕಲ್ಯಾಣ ಕರ್ನಾಟಕ ಅಭಿವೃದ್ಧಿ ಮಂಡಳಿಗೆ ₹3 ಸಾವಿರ ಕೋಟಿ, 2024–25ರಲ್ಲಿ ₹5 ಸಾವಿರ ಕೋಟಿ, ₹2025–26ರಲ್ಲಿ ₹5 ಸಾವಿರ ಕೋಟಿ ಸೇರಿದಂತೆ ಇದುವರೆಗೆ ₹13 ಸಾವಿರ ಕೋಟಿ ನೀಡಿದ್ದೇನೆ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

‘ಈ ವರ್ಷ ಮಂಡಳಿ ಅಧ್ಯಕ್ಷ ಡಾ.ಅಜಯ್ ಸಿಂಗ್ ₹4 ಸಾವಿರ ಕೋಟಿ ಖರ್ಚು ಮಾಡುವುದಾಗಿ ಹೇಳಿದ್ದಾರೆ. ಎಲ್ಲ ₹5 ಸಾವಿರ ಕೋಟಿಯನ್ನೂ ಖರ್ಚು ಮಾಡಿ ಅಭಿವೃದ್ಧಿ ಕೈಗೆತ್ತಿಕೊಳ್ಳುವಂತೆ ಸೂಚಿಸಿದ್ದೇನೆ. ಅಷ್ಟೂ ಹಣ ಖರ್ಚಾದರೆ ಮತ್ತೆ ಕೊಡುತ್ತೇನೆ’ ಎಂದರು.

ಇದಕ್ಕೂ ಮುನ್ನ ಮಾತನಾಡಿದ್ದ ಅಜಯ್ ಸಿಂಗ್, ‘ಈ ಬಜೆಟ್‌ನಲ್ಲಿ ಮಂಡಳಿಗೆ ₹6 ಸಾವಿರ ಕೋಟಿ ಅನುದಾನ ಮೀಸಲಿಡಬೇಕು’ ಎಂದು ಮನವಿ ಮಾಡಿದ್ದರು.

‘ಬುಡಬುಡಿಕೆಗೆ ದೇವರು ಒಲಿಯಲ್ಲ’

‘ನರೇಂದ್ರ ಮೋದಿ ಅವರು ಎಲ್ಲಾ ಹಳೆ ಗುಡಿಗುಂಡಾರಳಿಗೆ ಅಲೆದಾಡಿ, ಗಂಟೆ ಬಾರಿಸುತ್ತಿದ್ದಾರೆ. ದೇವರು ನಿಮ್ಮ ಕೆಲಸದಿಂದ ಪ್ರಸನ್ನನಾಗುತ್ತಾನೆಯೇ ಹೊರತು ನೀವು ಬಾರಿಸುವ ಬುಡಬುಡಿಕೆಯಿಂದಲ್ಲ’ ಎಂದು ಮಲ್ಲಿಕಾರ್ಜುನ ಖರ್ಗೆ ಟೀಕಿಸಿದರು.

‘ಇವರು ಬರೀ ದೇವರು, ಧರ್ಮದ ಹೆಸರಿನಲ್ಲಿ ಲೂಟಿ ಮಾಡುತ್ತಿದ್ದಾರೆ. ಧರ್ಮ, ದೇವರು ಇರುವುದು ಜನರ ಕಲ್ಯಾಣಕ್ಕಾಗಿ. ಇವರು ವೋಟ್ ಸಲುವಾಗಿ ರಾಮಮಂದಿರ ಕಟ್ಟಿದ್ದೇನೆ ಎನ್ನುತ್ತಾರೆ. ಸೋಮನಾಥ ಮಂದಿರಕ್ಕೆ ಸಾವಿರ ವರ್ಷವಾಯಿತು ಎಂದು ಹೋಗುತ್ತಿದ್ದಾರೆ. 900 ವರ್ಷಗಳಾದಾಗ ಏಕೆ ನೆನಪಿಗೆ ಬಂದಿಲ್ಲ? ಮುಂಬರುವ ಅಸ್ಸಾಂ, ಪಶ್ಚಿಮ ಬಂಗಾಳ, ತಮಿಳುನಾಡು ಚುನಾವಣೆ ಕಾರಣಕ್ಕೆ ಈಗ ಸೋಮನಾಥ ಮಂದಿರ ನೆನಪಿಗೆ ಬರುತ್ತಿದೆ. ಜನರ ಮನಸ್ಸನ್ನು ಒಲಿಸಿಕೊಳ್ಳುವ ಪ್ರಯತ್ನ ಮಾಡುತ್ತಿದ್ದಾರೆ’ ಎಂದರು.

17ಕ್ಕೆ ಬಳ್ಳಾರಿಯಲ್ಲಿ ಸಮಾವೇಶ: ಶ್ರೀರಾಮುಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗಂಗಾವತಿ ಶಾಸಕ ಜನಾರ್ದನ ರೆಡ್ಡಿ ಅವರ ಮನೆ ಮೇಲೆ ನಡೆದ ದಾಳಿಯನ್ನು ಖಂಡಿಸಿ ಇದೇ 17 ರಂದು ಬಳ್ಳಾರಿಯಲ್ಲಿ ಬೃಹತ್ ಪ್ರತಿಭಟನಾ ಸಮಾವೇಶ ಆಯೋಜಿಸಲಾಗಿದೆ ಎಂದು ಮಾಜಿ ಸಚಿವ ಬಿ.ಶ್ರೀರಾಮುಲು ತಿಳಿಸಿದರು.

‘ಈ ಸಮಾವೇಶದ ಮೂಲಕ ಕಾಂಗ್ರೆಸ್ ಸರ್ಕಾರದ ಗೂಂಡಾ ಸಂಸ್ಕೃತಿಗೆ ತಕ್ಕ ಪಾಠ ಕಲಿಸಲಾಗುವುದು. ಈ ಹೋರಾಟದಲ್ಲಿ ರಾಜಿ ಇಲ್ಲ, ನ್ಯಾಯಕ್ಕಾಗಿ ನಮ್ಮ ಪ್ರತಿಭಟನೆ ನಿರಂತರವಾಗಿರಲಿದೆ’ ಎಂದು ಅವರು ಸುದ್ದಿಗೋಷ್ಠಿಯಲ್ಲಿ ಹೇಳಿದರು.

Ref No : ADM/ICTD/10588/2026 Date : 12.01.2026

THE BAGALKOTE DISTRICT CENTRAL CO-OP BANK., BAGALKOTE
HO : Sector No – 24, Navanagar, BAGALKOTE - 587103
Tel : 08354 – 236443, 235573, E-Mail : shrikant.801@bagalkotdccbank.com

E-Proc Ref No. BDCCBL/2025-26/SE0001 Date : 07.01.2026

E-TENDER NOTIFICATION
(Through e-procurement portal only)

The Bagalkote DCC Bank Ltd., Bagalkot having its Head Office at Bagalkote District engaged in banking business operating through 58 branches inviting Tender for Appointment of empanelled auditors (approved) by CERT-In for conducting IS Audit, VAPT, NFS-OSG, Cyber Security Gap Analysis Audit and training session cyber security of bank for the year 2025-26. Tenders are advised to note the qualification criteria specified in the E-Procurement Portal to quality for award of contract. The Bagalkote DCC Bank Ltd., Bagalkot will not be held responsible for any type of website problems at tenders end. The details of the Notification, schedule of event and specification can be had, by visiting the link https://www.kppp.karnataka.gov.in, there by registering with e-procurement platform. Last date & Time for Receipt of Tender is 14.01.2026 @ 4:00 PM. All Vendors are requested to get updated with corrigendum/ addendum (if any) issued online at the following e-procurement.

Sd/-
CHIEF EXECUTIVE OFFICER

ಕರ್ನಾಟಕ ಸರ್ಕಾರ
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ
ಕಾರ್ಯನಿರ್ವಾಹಕ ಇಂಜನೀಯರರು ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ ವಿಭಾಗ, ಬೆಳಗಾವಿ.
ದೂರವಾಣಿ ಸಂ:(0831) 2463850/ಫ್ಯಾಕ್ಸ್ ಸಂ:(0831) 2423008

No.EE/MI&GWDDD/BGM/TND/AE/2025-26/4720 Date: 12-01-2026

ಅವಧಿ ವಿಸ್ತರಣೆ ಅಲ್ಪಾವಧಿ ಟೆಂಡರ ಪ್ರಕಟಣೆ (ಕೆ.ಡಬ್ಲ್ಯೂ–4)

ಈ ಕಛೇರಿ ಟೆಂಡರ ಪ್ರಕಟಣೆ No.EE/MI&GWDDD/BGM/TND/AE/2025-26/4617 Dated:03–01–2026ರಲ್ಲಿ 4702 ಲೆಕ್ಕ ಶೀರ್ಷಿಕೆ ಕಾಮಗಾರಿಗಳಿಗಾಗಿ ಅಹ್ವಾನಿಸಲಾದ ಅಲ್ಪಾವಧಿ ಟೆಂಡರ ಪ್ರಕಟಣೆಗೆ ತಾಂತ್ರಿಕ ಕಾರಣಗಳಿಂದ ಈ ಕೆಳಗಿನಂತೆ ದಿನಾಂಕಗಳನ್ನು ಪರಿಷ್ಕರಿಸಲಾಗಿದೆ. (3 ಕಾಮಗಾರಿಗಳು ಮಾತ್ರ)
1.ಪೂರ್ವ ಟೆಂಡರ ಸಭೆ ದಿನಾಂಕ:16–01–2026 ಸಂಜೆ 16.00 ಗಂಟೆ
2.ಟೆಂಡರ ಕ್ವಾರಿಜ್ ದಿನಾಂಕ:16–01–2026 ಸಂಜೆ 17–30 ಘಂಟೆವರೆಗೆ
3. ಟೆಂಡರ ಸ್ವಿಕರಿಸುವ ಕೊನೆಯ ದಿನಾಂಕ:17–01–2026ರ ಸಂಜೆ 16–00ಘಂಟೆವರೆಗೆ. 4. ತಾಂತ್ರಿಕ ಬಿಡ್ ಭಾಗ–1 ದಿನಾಂಕ:19–01–2026 ರಂದು ತೆರೆಯಲಾಗುವುದು. (ಸಾಧ್ಯವಾದಲ್ಲಿ)
ಉಳಿದ ಉಪವಿಧಿಗಳಲ್ಲಿ / ಷರತ್ತುಗಳಲ್ಲಿ ಯಾವುದೇ ಬದಲಾವಣೆ ಇರುವದಿಲ್ಲ.

ಸಹಿ/–ಕಾರ್ಯನಿರ್ವಾಹಕ ಅಭಿಯಂತರರು,
ಸ.ನೀ ಮತ್ತು ಅಂ.ಅ.ಇ ವಿಭಾಗ, ಬೆಳಗಾವಿ.
DIPR/BGM/RO-NO-1627/KSMCA/2025-26

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ
(ಕರ್ನಾಟಕ ಸರ್ಕಾರದ ಅಧೀನ ಸಂಸ್ಥೆ)
ನಂ.2, 2/1 ಮತ್ತು 2/3, ಕಾಳಿದಾಸ ಮಾರ್ಗ, 1ನೇ ಮುಖ್ಯ ರಸ್ತೆ, ಗಾಂಧಿನಗರ
ಬೆಂಗಳೂರು – 560 009. ದೂ.ಸಂಖ್ಯೆ : 080–22265383, website: www.kiadb.in

ನಂ. ಐಎಡಿಬಿ/ಇಎನ್‌ಜಿಜೆ/ಇಟಿಎನ್‌ಡಿ–ಇಪಿ–72/3128/2025–26 ದಿನಾಂಕ: 12.01.2026

ಅಲ್ಪಾವಧಿ ಟೆಂಡರ್ ಆಹ್ವಾನ ಪ್ರಕಟಣೆ
ಕರ್ನಾಟಕ ಸರ್ಕಾರದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ

ಕೆಐಎಡಿಬಿಯು ಈ ಕೆಳಕಂಡ ಕಾಮಗಾರಿಗಳಿಗೆ ಸಾಕಷ್ಟು ಆರ್ಥಿಕ ಸಂಪನ್ಮೂಲ, ಸೂಕ್ತ ನಿರ್ಮಾಣ ಉಪಕರಣಗಳು, ತಾಂತ್ರಿಕ ಮಾನವಶಕ್ತಿ ಮತ್ತು ಇದೇ ರೀತಿಯ ಕೆಲಸದಲ್ಲಿ ಸಾಕಷ್ಟು ಅನುಭವ ಹೊಂದಿರುವ ಅರ್ಹ ಕೆಪಿಡಬ್ಲ್ಯುಡಿ ದರ್ಜೆ–3 (ಸಿವಿಲ್) ಗುತ್ತಿಗೆದಾರರಿಂದ, ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಕಾಯ್ದೆ 1999 ಮತ್ತು ನಿಯಮ 2000 ರನ್ವಯ ದ್ವಿ ಲಕೋಟೆ ಪದ್ಧತಿಯಡಿಯಲ್ಲಿ ಐಟಂ ದರ ಆಧಾರದ ಮೇಲೆ ವಿದ್ಯುನ್ಮಾನ ಪೋರ್ಟಲ್ ಮೂಲಕ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.
ಕಾಮಗಾರಿಯ ಹೆಸರು : 1) ಚಾಮರಾಜನಗರ ತಾಲ್ಲೂಕು ಮತ್ತು ಜಿಲ್ಲೆಯ ಬದನಗುಪ್ಪೆ–ಕೆಲ್ಲಂಬಳ್ಳಿ ಕೈಗಾರಿಕಾ ಪ್ರದೇಶದಲ್ಲಿ ರಸ್ತೆಗಳು ಮತ್ತು ನೀರು ಸರಬರಾಜು ಕೊಳವೆ ಮಾರ್ಗ (ರಸ್ತೆ ಸಂಖ್ಯೆ 3, 5, 6, 7 ಮತ್ತು 9) ಸುಧಾರಣೆ ಮತ್ತು ನಿರ್ವಹಣೆ ಮಾಡುವ ಕಾಮಗಾರಿ. (ಪ.ಜಾ ಗೆ ಮೀಸಲು).
2) ಚಾಮರಾಜನಗರ ತಾಲ್ಲೂಕು ಮತ್ತು ಜಿಲ್ಲೆಯ ಬದನಗುಪ್ಪೆ–ಕೆಲ್ಲಂಬಳ್ಳಿ ಕೈಗಾರಿಕಾ ಪ್ರದೇಶದಲ್ಲಿ ರಸ್ತೆಗಳು ಮತ್ತು ನೀರು ಸರಬರಾಜು ಕೊಳವೆ ಮಾರ್ಗ (ರಸ್ತೆ ಸಂಖ್ಯೆ 1, 2, 9ಬಿ ಮತ್ತು 10) ಸುಧಾರಣೆ ಮತ್ತು ನಿರ್ವಹಣೆ ಮಾಡುವ ಕಾಮಗಾರಿ. (ಪ.ಜಾ ಗೆ ಮೀಸಲು).
ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 23.01.2026 ಸಂಜೆ 4.00 ಗಂಟೆಯವರೆಗೆ.
ಅರ್ಜಿದಾರರು ಬಿಡ್ಡಿಂಗ್ ದಸ್ತಾವೇಜುಗಳನ್ನು ಕರ್ನಾಟಕ ಸರ್ಕಾರದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ https://kppp.karnataka.gov.in ಮೂಲಕ ಡೌನ್‌ಲೋಡ್ ಮಾಡಿಕೊಳ್ಳಬಹುದು.

ಸಹಿ/–
ಮುಖ್ಯ ಅಭಿಯಂತರರು–1, ಕೆಐಎಡಿಬಿ, ಬೆಂಗಳೂರು
DIPR/CP/4990/Zen/2025-26

ಕರ್ನಾಟಕ ನಗರ ಮೂಲಸೌಕರ್ಯ ಅಭಿವೃದ್ಧಿ ಮತ್ತು ಹಣಕಾಸು ನಿಗಮ ನಿಯಮಿತ
KUIDFC
ನಗರಾಭಿವೃದ್ಧಿ ಭವನ, ನಂ.22, 17ನೇ 'ಎಫ್' ಕ್ರಾಸ್, ಹಳೆ ಮದ್ರಾಸು ರಸ್ತೆ, ಇಂದಿರಾನಗರ 2ನೇ ಹಂತ,
ಬಿಎಂಟಿಸಿ ಡಿಪೋ ಹತ್ತಿರ, ಬೆಂಗಳೂರು–560 038. ದೂರವಾಣಿ: 91–80–25196100, 25196124 ಫ್ಯಾಕ್ಸ್: 080–25196110
ಇ–ಮೇಲ್ ವಿಳಾಸ: info@kuidfc.com ಅಂತರ್ಜಾಲ ವಿಳಾಸ: www.kuidfc.com

ಸಂಖ್ಯೆ: ಕೆಯುಐಡಿಎಫ್‌ಸಿ/ಯುಡಬ್ಲೂಎಮ್/ಟೆಂಡರ್/2025–26/25/5160 ದಿನಾಂಕ: 12.01.2026

ಅಲ್ಪಾವಧಿ ಟೆಂಡರ್ ಪ್ರಕಟಣೆ

ಕೆಯುಐಡಿಎಫ್‌ಸಿ ಸಂಸ್ಥೆಯು N.G.T ಪರಿಸರ ಪರಿಹಾರ ನಿಧಿ ಹಾಗೂ ಎಸ್.ಬಿ.ಎಂ (ನ)–2.0 ನಿಧಿಯಡಿಯಲ್ಲಿ ಅನುಷ್ಠಾನಗೊಳಿಸಲು ಉದ್ದೇಶಿಸಿರುವ ಈ ಕೆಳಕಂಡ ಯೋಜನೆಗೆ ಅರ್ಹ ಗುತ್ತಿಗೆದಾರರಿಂದ ಟೆಂಡರ್ ಆಹ್ವಾನಿಸಿದೆ. ಟೆಂಡರ್ ವಿವರಗಳು ಕೆ.ಪಿ.ಪಿ ಪೋರ್ಟಲ್ ನಲ್ಲಿ (https://kppp.karnataka.gov.in) ಲಭ್ಯವಿರುತ್ತದೆ.

ಕ್ರ. ಸಂ.	ಕಾಮಗಾರಿಯ ಹೆಸರು	ಟೆಂಡರ್ ಮೊತ್ತ (ಜಿಎಸ್‌ಟಿ ಹೊರತುಪಡಿಸಿ) ರೂ.ಲಕ್ಷಗಳಲ್ಲಿ	ಮುಂಗಡ ಭದ್ರತಾ ಠೇವಣಿ ರೂ.ಲಕ್ಷಗಳಲ್ಲಿ
1	“Construction of Sewage Treatment Plants (STP) of varying capacities of 2.34 to 2.79 MLD at **Kamatagi, Shirur, Belagali & Lokapur** ULBs of **Bagalkot District** and varying capacities of 0.60 to 2.65 MLD at **Thikota, Managuli & Devarahipparagi** ULBs of **Vijayapura District** along with 5 years Operation & Maintenance (including 1-year Defect liability period) under Swachh Bharat Mission (U)-2.0 fund through Design, Built, Operate and Transfer (DBOT) model. **(Package: SBM_BGM_Pkg-7)**	**2155.52**	**22.00**
2	“Construction of Sewage Treatment Plants (STP) of varying capacity of 2.63 MLD at **Alnavar** ULB of **Dharwad District** and varying capacities of 2.55 to 4.94 MLD at **Naregal, Gajendragad & Ron** ULBs of **Gadag District** and rehabilitation of existing 5.50 MLD FAL Type STP of **Lakshmishwar** ULB of **Gadag District** along with 5 years Operation & Maintenance (including 1-year Defect liability period) under Swachh Bharat Mission (U)-2.0 fund through Design, Built, Operate and Transfer (DBOT) model. **(Package: SBM_BGM_Pkg-8)**	**1832.86**	**18.50**
3	“Construction of Sewage Treatment Plants (STP) of capacity of 5.60 MLD at **Kumta** ULBs of **Uttara Kannada District** along with 5 years Operation & Maintenance (including 1-year Defect liability period) under Swachh Bharat Mission (U)-2.0 fund through Design, Built, Operate and Transfer (DBOT) model. **(Package: SBM_BGM_Pkg-9)**	**1012.13**	**10.50**
4	“Construction of Sewage Treatment Plants (STP) of varying capacity of 2.23 MLD to 4.88 MLD at **Naganur, Kankanawadi, Kabbura, Arabhavi, Boregaon, Channamma Kitturu, Kaagavada, Konnur, Kallolli, Mugalkhod, Raibagh, Shedbala & Ghataprabha** ULBs of **Belagavi District** along with 5 years Operation & Maintenance (including 1-year Defect liability period) under Swachh Bharat Mission (U)-2.0 fund through Design, Built, Operate and Transfer (DBOT) model. **(Package: SBM_BGM_Pkg-10)**	**5074.75**	**51.00**
5	“Construction of Sewage Treatment Plants (STP) of capacity of 3.03 MLD & 3.37 MLD at **Aurad & Hallikhed-B** ULBs of **Bidar District**, 2.26 & 3.56 MLD at **Yelburga & Kustagi** ULBs of **Koppal District** along with 5 years Operation & Maintenance (including 1-year Defect liability period) under Swachh Bharat Mission (U)-2.0 fund through Design, Built, Operate and Transfer (DBOT) model. **(Package: SBM/KLB_Pkg-7)**	**1521.50**	**15.50**
6	“Construction of Sewage System in **Tarikere** Town” under NGT and SBM (U)-2.0 fund in DBOT Model.	**2795.84**	**28.00**
7	“Construction of various capacities of Sewage Treatment Plant in **Alur, Koppa & Mudigere Towns**” under SBM (U)-2.0 fund in DBOT Model.	**691.36**	**11.00**
8	“Construction of Sewerage System in **Madikeri City**” under NGT & SBM (U)-2.0 fund and “Construction of various capacities of Sewerage Treatment Plant in **Somvarpet & Gudlupete Town**” under SBM (U)-2.0 fund in DBOT Model.	**1580.20**	**16.00**
9	“Construction of Sewerage Treatment Plants of various capacities ranging from 3.10 to 4.28 MLD in **Devanahalli, Anekal & Malur Towns**” under SBM (U)-2.0 fund in DBOT Model. **(Package: SBM_BLR_Pkg-1)**	**1283.58**	**13.00**
10	“Construction of Sewerage Treatment Plant of 3.89 MLD in **Hunasamaranahalli** under SBM (U)-2.0 fund in DBOT Model.	**571.15**	**9.00**
11	“Construction of Sewerage Treatment Plants of various capacities ranging from 1.44 to 5.79 MLD in **Mulabagilu, Srinivasapura, Vijayapura, Gowribidanuru, Gudibande Towns**” under SBM (U)-2.0 fund in DBOT Model. **(Package: SBM_BLR_Pkg-2)**	**2437.38**	**25.00**
12	“Construction of Sewerage Treatment Plants of various capacities ranging from 1.95 to 4.35 MLD in **Gubbi, Turuvekere and Pavagada Towns**” under SBM (U)-2.0 fund in DBOT Model. **(Package: SBM_BLR_Pkg-3)**	**1150.26**	**12.00**
13	Construction of Sewage Treatment Plant of 6.5 MLD in **Bangarpet** under SBM (U) 2.0 fund in DBOT model	**1141.60**	**12.00**
14	“Construction of sewerage system in **Srirangapatana town – Phase 2**” under NGT & SBM (U)-2.0 fund in DBOT model.	**634.30**	**10.00**
15	“Construction of Sewage Treatment Plant at **Bellur town**” under SBM (U)-2.0 fund in DBOT model.	**411.05**	**6.50**
16	“Construction of sewerage system in **Malavalli town**” under NGT & SBM (U)-2.0 fund in DBOT model.	**605.94**	**9.50**
17	“Construction of Sewage Treatment Plant in **H.D.Kote town**” under SBM (U)-2.0 fund in DBOT model.	**365.39**	**5.50**
18	Construction of Sewage Treatment Plant (STP) of capacity 7.30 MLD at **Athani** ULB of **Belagavi District** along with 5 years Operation & Maintenance (including 1-year Defect liability period) under Swachh Bharat Mission (U)-2.0 fund through Design, Built, Operate and Transfer (DBOT) model. **(Package: SBM_BGM_Pkg-11)**	**1231.03**	**12.50**

1) ಟೆಂಡರ್ ಆಹ್ವಾನಿಸಿರುವ ದಿನಾಂಕ: **14.01.2026**. 2) ಬಿಡ್ ಪೂರ್ವಭಾವಿ ಸಭೆಯ ದಿನಾಂಕ & ಸಮಯ: **22.01.2026 ಸಮಯ: 11.30 ಪೂರ್ವಾಹ್ನ**. 3) ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ & ಸಮಯ: **03.02.2026 ಸಮಯ: 5.30 ಅಪರಾಹ್ನ**. 4) ತಾಂತ್ರಿಕ ಬಿಡ್ ತೆರೆಯುವ ದಿನಾಂಕ & ಸಮಯ: **05.02.2026 ಸಮಯ: 11.30 ಪೂರ್ವಾಹ್ನ**. 5) ಆರ್ಥಿಕ ಬಿಡ್ ತೆರೆಯುವ ದಿನಾಂಕ & ಸಮಯ: **10.02.2026 ಸಮಯ: 11.30 ಪೂರ್ವಾಹ್ನ**.
ಆಸಕ್ತ ಟೆಂಡರ್‌ದಾರರು ಕೆಪಿಪಿ ಪೋರ್ಟಲ್ ಮುಖಾಂತರವೇ ಟೆಂಡರ್ ಸಲ್ಲಿಸತಕ್ಕದ್ದು. ಈ ಟೆಂಡರ್ ಬಗ್ಗೆ ಮುಂದಿನ ಯಾವುದೇ ಪ್ರಕಟಣೆಗಳನ್ನು ಕೆಪಿಪಿ ಪೋರ್ಟಲ್ ಹಾಗೂ KUIDFC Official Website ಗಳಲ್ಲಿ ಮಾತ್ರ ಪ್ರಕಟಿಸಲಾಗುವುದು.

ಸಹಿ/–
ಕಾರ್ಯಪಾಲಕ ಅಭಿಯಂತರರು, ಯೋಜನಾ ಮೇಲ್ವಿಚಾರಣಾ ಘಟಕ,
ಯುಡಬ್ಲ್ಯುಎಮ್–ಕೆಯುಐಡಿಎಫ್‌ಸಿ, ಬೆಂಗಳೂರು
ವಾಸಾಸಂಇ/ವಾಪ್ರ/4987/ಎಂಎಎ/2025–26

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ
ಕರ್ನಾಟಕ ರಾಜ್ಯ ಏಡ್ಸ್ ಪ್ರಿವೆನ್‌ಷನ್ ಸೊಸೈಟಿ
ಆರೋಗ್ಯ ಸೌಧ, 4ನೇ ಮಹಡಿ, 1ನೇ ಅಡ್ಡರಸ್ತೆ, ಮಾಗಡಿ ರಸ್ತೆ, ಬೆಂಗಳೂರು–560 023
ದೂರವಾಣಿ: 080-2955 7021, ಇ–ಮೇಲ್: pdksaps@gmail.com

ಸಂಖ್ಯೆ : ಕೆಎಸ್‌ಎಪಿಎಸ್/ಸಿಎಸ್‌ಟಿ/07/2025–26 ದಿನಾಂಕ: 09.01.2026

ಟೆಂಡರ್ ಪ್ರಕಟಣೆ
(ಕೆಪಿಪಿ ಪೋರ್ಟಲ್ ಮೂಲಕ ಮಾತ್ರ) (ದ್ವಿ–ಲಕೋಟೆ)

ಎಆರ್‌ಟಿ ಕೇಂದ್ರಗಳಿಂದ ನಿರ್ಧಿಷ್ಟಪಡಿಸಿದ ವೈರಲ್ ಲೋಡ್ ಲ್ಯಾಬ್ ಕೇಂದ್ರಗಳಿಗೆ ರಕ್ತದ ಮಾದರಿಗಳನ್ನು ಸಾಗಾಣಿಕೆ ಮಾಡುವ ಸಂಬಂಧ ಟೆಂಡರ್ (ದ್ವಿ–ಲಕೋಟೆ) ಇ–ಸಂಗ್ರಹಣ ವೇದಿಕೆಯ ಮೂಲಕ ಆಹ್ವಾನಿಸಲಾಗಿದ್ದು. ಟೆಂಡರ್ ಸಂಬಂದಿಸಿದ ನಿಯಾಮವಳಿಗಳನ್ನು ಇ–ಸಂಗ್ರಹಣ ವೇದಿಕೆಯ ವೆಬ್‌ಸೈಟ್: https://kppp.karnataka.gov.in ನಲ್ಲಿ ಪಡೆಯಬಹುದಾಗಿದೆ. ಇ–ಸಂಗ್ರಹಣ ವೇದಿಕೆ ಮೂಲಕ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ : 02/02/2026 ಸಂಜೆ 5:30.

ಸಹಿ/– ಯೋಜನಾ ನಿರ್ದೇಶಕರು
ಕರ್ನಾಟಕ ರಾಜ್ಯ ಏಡ್ಸ್ ಪ್ರಿವೆನ್‌ಷನ್ ಸೊಸೈಟಿ.
ವಾಸಾಸಂಇ/ವಾಪ್ರ/ಜಿಎ/4977/2025–26

ಕರ್ನಾಟಕ ಸರ್ಕಾರ
ಆಯುಷ್ ಇಲಾಖೆ
ಸರ್ಕಾರಿ ಹೋಮಿಯೋಪಥಿ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಆಸ್ಪತ್ರೆ.
ಡಾ:ಸಿದ್ಧಯ್ಯ ಪುರಾಣಿಕ್ ರಸ್ತೆ, ಬಸವೇಶ್ವರನಗರ, ಬೆಂಗಳೂರು–560079.

ಅಧಿಸೂಚನೆ ಸಂಖ್ಯೆ: ಸಹೋವೈಮ&ಆ/10/ಸರಬ/2025-26 ದಿನಾಂಕ: 31.12.2025

ಇ–ಟೆಂಡರ್ ಪ್ರಕಟಣೆ (ಕೆಪಿಪಿ ಪೋರ್ಟಲ್ ಮೂಲಕ ಮಾತ್ರ)

ಈ ಮಹಾವಿದ್ಯಾಲಯ ಮತ್ತು ಆಸ್ಪತ್ರೆ ಬೆಂಗಳೂರು ಇಲ್ಲಿನ ಕಟ್ಟಡಗಳನ್ನು ಮತ್ತು ಆವರಣಗಳನ್ನು ಶುಚಿಗೊಳಿಸಲು ಹಾಗೂ ಕಾವಲು ಕಾಯಲು ಅವಶ್ಯವಿರುವ ಭದ್ರತಾ / ಸ್ವಚ್ಛತಾ ಮತ್ತು ಇತರೆ ಸಿಬ್ಬಂದಿ ಸೇವೆಯನ್ನು ಒಂದು ವರ್ಷದ ಅವಧಿಗೆ ಹೊರಗುತ್ತಿಗೆ ಆಧಾರದ ಮೇಲೆ ಪಡೆಯುವ ಸಲುವಾಗಿ ದರಗುತ್ತಿಗೆ ನಿಗಧಿಪಡಿಸುವ ಇ-ಟೆಂಡರ್.

ಇ–ಟೆಂಡರ್ ಪ್ರಕ್ರಿಯೆ:

1.	ಬಿಡ್ ಆರಂಭದ ದಿನಾಂಕ:	08–01–2026, ಸಂಜೆ 4.00 ಗಂಟೆಗೆ
2.	ಬಿಡ್ ಸಲ್ಲಿಸಲು ಕೊನೆಯ ದಿನಾಂಕ:	22–01–2026, ಮಧ್ಯಾಹ್ನ 2.00 ಗಂಟೆಗೆ
3.	ತಾಂತ್ರಿಕ ಬಿಡ್ ತೆರೆಯುವಿಕೆ:	23–01–2026, ಮಧ್ಯಾಹ್ನ 2.30 ಗಂಟೆಗೆ
4.	ವಾಣಿಜ್ಯ ಬಿಡ್ ತೆರೆಯುವಿಕೆ: ಹಣಕಾಸು ಬಿಡ್ ತೆರೆಯುವ ದಿನಾಂಕ ಮತ್ತು ಸ್ಥಳವನ್ನು ತಾಂತ್ರಿಕವಾಗಿ ಅರ್ಹ ಬಿಡ್ದಾರರಿಗೆ ತಿಳಿಸಲಾಗುವುದು.	
5.	ಸ್ಥಳ: ಪ್ರಾಂಶುಪಾಲರ ಕಚೇರಿ. ಸರ್ಕಾರಿ ಹೋಮಿಯೋಪತಿ ವೈದ್ಯಕೀಯ. ಕಾಲೇಜು ಮತ್ತು ಆಸ್ಪತ್ರೆ ಬಸವೇಶ್ವರನಗರ, ಬೆಂಗಳೂರು–79.	

ಇ-ಟೆಂಡರ್ ನಿಯಮಗಳು/ನಿಬಂಧನೆಗಳನ್ನು ವೆಬ್‌ಸೈಟ್‌ನಲ್ಲಿ https://kppp.karntaka.gov.in ರಲ್ಲಿ ದಿನಾಂಕ: 03.01.2026 ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು

ಸಹಿ/–
ಅಧ್ಯಕ್ಷರು / ಪ್ರಾಚಾರ್ಯರು
DIPR/CP/RO4979/AAPL/2025-26

ಕರ್ನಾಟಕ ಸರ್ಕಾರ
ಜಿಲ್ಲಾ ಪಂಚಾಯತ್, ಬಳ್ಳಾರಿ.
ಕಾರ್ಯನಿರ್ವಾಹಕ ಅಭಿಯಂತರವರ ಕಛೇರಿ,
ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಬಳ್ಳಾರಿ.

ಸಂ: ಕಾನಿಇಂ/ಪಂ.ರಾ.ಇಂ.ವಿ/ಬ/ಎಇ–1 /ವಿ.ಲೆ.ಶೀ /ಟೆಂಡರು /2025–26/1671
ದಿನಾಂಕ 07–01–2026

ಅಲ್ಪಾವಧಿ ಟೆಂಡರು ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ)

ಕರ್ನಾಟಕ ರಾಜ್ಯಪಾಲರ ಪರವಾಗಿ ಪಂಚಾಯತ್‌ರಾಜ್ ಇಂಜಿನಿಯರಿಂಗ್ ಇಲಾಖೆಯಲ್ಲಿ ನೊಂದಾಯಿತ ಅರ್ಹ ಗುತ್ತಿಗೆದಾರರಿಂದ ಪಂ.ರಾ.ಇಂ. ವಿಭಾಗ, ಬಳ್ಳಾರಿ ವ್ಯಾಪ್ತಿಯ 2024–25 ನೇ ಸಾಲಿನ ಮಳೆ ಪರಿಹಾರ ಕಾರ್ಯಕ್ರಮ 5054 ಯೋಜನೆ ಒಟ್ಟು 01 ಕಾಮಗಾರಿಗಳಿಗೆ ಇ–ಪ್ರೊಕ್ಯೂರ್‌ಮೆಂಟ್ (ಕೆ.ಪಿ.ಪಿ.ಪಿ. ಪೋರ್ಟಲ್) ಮುಖಾಂತರ ಐಟಂವಾರು ದರಗಳಲ್ಲಿ ಟೆಂಡರು ಅಹ್ವಾನಿಸಿದೆ.
ಕಾಮಗಾರಿಗಳ ಇಂಡೆಂಟ್ ಸಂಖ್ಯೆ–
1.RDPR/2025-26/RD/WORK_INDENT18246/CALL-2
ಟೆಂಡರ್ ನಮೂನೆಗಳನ್ನು https://kppp.karnataka.gov.in ಅಂತರ್ಜಾಲದಲ್ಲಿ ದಿನಾಂಕ 07–01–2026 ರಿಂದ ದಿನಾಂಕ 14–01–2026 ರಂದು ಸಂಜೆ 4.30 ಗಂಟೆವರೆಗೆ ಡೌನ್ ಲೋಡ್ ಮಾಡಿಕೊಂಡು ಅವಶ್ಯ ಮಾಹಿತಿ ಹಾಗೂ ನಿಗಧಿತ ಇ.ಎಂ.ಡಿ. ಯೊಂದಿಗೆ ದಿನಾಂಕ: 14–01–2026 ರ 16.30 ಗಂಟೆಯವರಗೆ ಸ್ವೀಕರಿಸಲಾಗುವುದು. ಕಾಮಗಾರಿಯ ತಾಂತ್ರಿಕ ಬಿಡ್‌ನ್ನು ಆನ್ ಲೈನ್‌ನಲ್ಲಿ ದಿನಾಂಕ: 16–01–2026 ರಂದು ಬೆಳ್ಳಗೆ 10.30 ಗಂಟೆಗೆ ತೆರೆಯಲಾಗುವುದು. ಈ ಕುರಿತು ತಿದ್ದುಪಡಿಗಳೇನಾದರೂ ಇದ್ದಲ್ಲಿ ತಿದ್ದುಪಡಿಯನ್ನು (https://kppp.karnataka.gov.in) ವೆಬ್ ಸೈಟ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು. ಟೆಂಡರನ್ನು ಯಾವುದೇ ಕಾರಣ ನೀಡದೇ ತಿರಸ್ಕರಿಸುವ ಹಕ್ಕನ್ನು ಕಾಯ್ದಿರಿಸಲಾಗಿದೆ. ಹೆಚ್ಚಿನ ವಿವರಗಳನ್ನು ಈ ಕಛೇರಿ ವೇಳೆಯಲ್ಲಿ ಖುದ್ದಾಗಿ ಪಡೆಯಬಹುದಾಗಿರುತ್ತದೆ. ಕಛೇರಿ ದೂರವಾಣಿ ಸಂಖ್ಯೆ 08392–266173.

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು, ಪಂ.ರಾ.ಇಂ. ವಿಭಾಗ, ಬಳ್ಳಾರಿ.
ಡಿಐಪಿಆರ್/ಬಳ್ಳಾರಿ/897/ಕೆಎಸ್‌ಎಂಸಿಎ/2025–26

ನಗರಸಭಾ ಕಾರ್ಯಾಲಯ, ಹೂಟಗಳ್ಳಿ
ಎಸ್.ಆರ್.ಎಸ್. ಎದುರು, ಹೈಟೆನ್ಷನ್, ಜೋಡಿ ರಸ್ತೆ, ಹೂಟಗಳ್ಳಿ, ಮೈಸೂರು ಜಿಲ್ಲೆ–570018
ಸಹಾಯವಾಣಿ ಸಂಖ್ಯೆ : 0821–2001737, E-Mail: ka.hootagalli.cmc@gmail.com

ಸಂಖ್ಯೆ: ನಸಹೂ/ತಾಂತ್ರಿಕ/ಟೆಂಡರ್ ಪ್ರಕಟಣೆ/ಸಿ.ಆರ್–09/2025–26 ದಿನಾಂಕ: 12.01.2026

ಟೆಂಡರ್ ಪ್ರಕಟಣೆ

ಹೂಟಗಳ್ಳಿ ನಗರಸಭೆ ವ್ಯಾಪ್ತಿಯಲ್ಲಿ 2024–25 ಮತ್ತು 2025–26ನೇ ಸಾಲಿನ ನಗರಸಭಾ ನಿಧಿ ಅನುದಾನದಲ್ಲಿ ಕೆ.ಟಿ.ಪಿ.ಪಿ. ಕಾಯ್ದೆ 2000ರ ಪ್ರಕಾರ KW-03 ಹಾಗೂ KW-04 ನಿಯಮದಂತೆ KPP ಪೋರ್ಟಲ್ ಮೂಲಕ ವಿವಿಧ ಕಾಮಗಾರಿಗಳಿಗೆ ಐಟಂವಾರು ಟೆಂಡರ್ ಕರೆಯಲಾಗಿದ್ದು, ಲೋಕೋಪಯೋಗಿ ಇಲಾಖೆಯಲ್ಲಿ ಅರ್ಹ ನೊಂದಾಯಿತ ಸಿವಿಲ್ ಗುತ್ತಿಗೆದಾರರಿಂದ ಟೆಂಡರ್ ಆಹ್ವಾನಿಸಲಾಗಿದೆ. ಟೆಂಡರ್‌ಗಳನ್ನು https://kppp.karnataka.gov.in ಪೋರ್ಟಲ್ ಮೂಲಕ ಸಲ್ಲಿಸಬಹುದಾಗಿದೆ. ಕ್ರ. ಸಂ. 01 ರಿಂದ 03 ರ (KW-04) ಕಾಮಗಾರಿಗಳಿಗೆ ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ: 13.02.2026 ಸಂಜೆ 5.30 ಗಂಟೆಯವರೆಗೆ. ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 16.02.2026 ಬೆಳಗ್ಗೆ 11.00 ಗಂಟೆಗೆ. ಕ್ರ.ಸಂ. 04 ರ (KW-03) ಕಾಮಗಾರಿಗೆ ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ: 28.01.2026 ಸಂಜೆ 5.30 ಗಂಟೆಯವರೆಗೆ ಹಾಗೂ ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 30.01.2026 ಬೆಳಗ್ಗೆ 11.00 ಗಂಟೆಗೆ. ಈ ಕೆಳಕಂಡ ಕಾಮಗಾರಿಗಳು ನಗರಸಭೆಯ ಸಾಮಾನ್ಯ ನಿಧಿಯ ಕಾಮಗಾರಿಗಳಾಗಿದ್ದು, ಪೂರ್ಣಗೊಂಡ ಕಾಮಗಾರಿಗಳಿಗೆ ನಗರಸಭೆಯ ಆರ್ಥಿಕ ಪರಿಸ್ಥಿತಿಗನುಗುಣವಾಗಿ ಬಿಲ್ ಪಾವತಿಸಲಾಗುವುದು. ಹೆಚ್ಚಿನ ಮಾಹಿತಿಗಾಗಿ ಕಛೇರಿಯ ತಾಂತ್ರಿಕ ಶಾಖೆಯ ಅಭಿಯಂತರರನ್ನು ಸಂಪರ್ಕಿಸಬಹುದಾಗಿದೆ.

ಕ್ರ. ಸಂ	ಕಾಮಗಾರಿಗಳ ಇಂಡೆಂಟ್ ವಿವರಗಳು	ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ)	ಇ.ಎಂ.ಡಿ. ಮೊತ್ತ (ರೂ. ಗಳಲ್ಲಿ)
1	DMA/2025-26/OW/WORK_INDENT52912	500.00	6,36,000/–
2	DMA/2025-26/RD/WORK_INDENT53557	360.00	4,58,000/–
3	DMA/2024-25/OW/WORK_INDENT33683/CALL-3	350.00	4,46,000/–
4	DMA/2024-25/WS/WORK_INDENT33309/CALL-3	100.00	1,69,000/–

ಸಹಿ/– ಪೌರಾಯುಕ್ತರು
ನಗರಸಭೆ, ಹೂಟಗಳ್ಳಿ
ವಾಸಾಸಂಇ/ಮೈಸೂರು/ಶಿರಡಿಸಾಯಿ/1499/2025–26

ಗ್ರಾಮೀಣ ಕುಡಿಯುವ ನೀರು & ನೈರ್ಮಲ್ಯ ವಿಭಾಗ
ಕಾರ್ಯನಿರ್ವಾಹಕ ಇಂಜಿನೀಯರವರ ಕಚೇರಿ,
ಲೋಕುರ್ ಬಿಲ್ಡಿಂಗ್, ಯು.ಬಿ. ಹಿಲ್ಸ್ ರೋಡ್, ಧಾರವಾಡ – 580 001,
ದೂರವಾಣಿ : 9880253703, ಇ–ಮೇಲ್ : rwsddwd@rediffmail.com

ಸಂಖ್ಯೆ : ಕಾ.ನಿ.ಇಂ./ಗ್ರಾ.ಕು.ನೀ.&ನೈ.ವಿ./ಧಾ./ಸ ಇಂ–1/ಇ–ಟೆಂಡರ್/2025–26/1493
ದಿನಾಂಕ : 12–01–2026

ಟೆಂಡರ್ ಪ್ರಕಟಣೆ
(ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಮಾತ್ರ)

ಉಲ್ಲೇಖಿತ ಪತ್ರದಡಿ ಧಾರವಾಡ ಜಿಲ್ಲೆಯ 1) Hiring of Technical Consultants on Outsource Basis, 2) Providing Manpower Service to RDW&S Division Dharwad and Sub-Division Dharwad, Hubli, Kalaghatagi, Kundgol, Navaglund, District Dharwad, 3) Empanelment of Third-Party Inspection Agency under Jal Jeevan Mission and other works by Rural Drinking Water and Sanitation Department Dharwad District in Karnataka. (2026) ಗೆ ಟೆಂಡರ್ ಕರೆಯಲಾಗಿದೆ.
ವಿವರ ಈ ಕೆಳಗಿನಂತಿದೆ.

ಧಾರವಾಡ ಜಿಲ್ಲೆ : ಸಾಮಾನ್ಯ : Works Indent No. : 1) RWSSD/2025-26/SE0800, 2) RWSSD/2025-26/SE0799, 3) RWSSD/2025-26/SE0802. ಕನಿಷ್ಠ ಮೊತ್ತ : 0.86 ಲಕ್ಷ, ಗರಿಷ್ಠ ಮೊತ್ತ : 74.67 ಲಕ್ಷ.

ಗುತ್ತಿಗೆ ಕಾರ್ಯಾಕ್ರಮದ ವಿವರಗಳು ಈ ಕೆಳಗಿನಂತಿದೆ. (Calander of Events)
1) ಖಾಲಿ ಟೆಂಡರ್ ಫಾರ್ಮಗಾಗಿ ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಅರ್ಜಿ ಹಾಗೂ ಶೆಡ್ಯೂಲ್ ಬಿ–ಗಳನ್ನು ವೈಬ್‌ಸೈಟ್‌ನಲ್ಲಿ ಭರ್ತಿ ಮಾಡಿ ಸಲ್ಲಿಸಲು ಕೊನೆಯ ದಿನಾಂಕ : 12–01–2026 ರಿಂದ 20–01–2026 ರ ಸಂಜೆ 4.00 ಘಂಟೆಗೆ. 2) ತಾಂತ್ರಿಕ ಬಿಡ್ ತೆರೆಯುವ ಕೊನೆಯ ದಿನಾಂಕ : 21–01–2026 ರ ಸಂಜೆ 4.30 ಘಂಟೆಗೆ. 3) ಆರ್ಥಿಕ ಬಿಡ್ ತೆರೆಯುವ ಕೊನೆಯ ದಿನಾಂಕ : ತಾಂತ್ರಿಕ ಬಿಡ್ ಅನುಮೋದನೆಗೊಂಡ ನಂತರ.
ಸದರಿ ಮೇಲೆ ತಿಳಿಸಿದ ಕಾಮಗಾರಿಯ ಅಂತಿಮ ಹೆಸರು, ಟೆಂಡರ್‌ಗಿಟ್ಟ ಮೊತ್ತ, ಇ.ಎಮ್.ಡಿ. ಮೊತ್ತ ಮುಂತಾದ ವಿವರಗಳನ್ನು ವೆಬ್‌ಸೈಟ್ ; kppp.karnataka.gov.in ನಲ್ಲಿ ಪಡೆಯಬಹುದು. ಯಾವೂದೇ ಕಾರಣ ನೀಡದೆ, ಟೆಂಡರಗಳನ್ನು ಸ್ವೀಕರಿಸುವ ಅಥವಾ ತಿರಸ್ಕರಿಸುವ ಅಧಿಕಾರವನ್ನು ಈ ಕೆಳಗೆ ಮಾಡಿದವರು ಹೊಂದಿರುತ್ತಾರೆ.

ಸಹಿ/– ಕಾರ್ಯನಿರ್ವಾಹಕ ಇಂಜನೀಯರರು,
ಗ್ರಾ.ಕು.ನೀ & ನೈ. ವಿಭಾಗ, ಧಾರವಾಡ.
ಡಿಐಪಿಆರ್/ಧಾರವಾಡ/1092/ಮಣಿಪಾಲ್/2025–26

ಅಭಿಮತ ವಿಭಾಗ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75 ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-01 editpage@prajavani.co.in

ಅಭಿಮತ

ಸುಭಾಷಿತ

ನಮ್ಮ ನಾಗರಿಕತೆಯ ಪ್ರಭಾವ ಮತ್ತು ಸಂಪ್ರದಾಯವನ್ನು ಕಾಪಾಡಿಕೊಂಡು ಬರುವುದೇ ನಿಜವಾದ ಸ್ವರಾಜ್ಯ.
–ಮಹಾತ್ಮ ಗಾಂಧೀಜಿ

ಸಂಪಾದಕೀಯ

ಅಭಿವೃದ್ಧಿ ಹೆಸರಿನಲ್ಲಿ ಆಕ್ರಮಣ ಸಲ್ಲ ಘಟ್ಟಗಳ ಸುರಕ್ಷತೆಯಲ್ಲಿ ರಾಜಿ ಬೇಡ

ಅಪಾರ ಜೀವವೈವಿಧ್ಯವನ್ನು ಒಡಲೊಳಗೆ ಇಟ್ಟುಕೊಂಡು, ಭಾರತವೂ ಸೇರಿ ಜಗತ್ತನ್ನೇ ಅಮ್ಮನಂತೆ ಪೊರೆಯುತ್ತಿರುವ ಪಶ್ಚಿಮಘಟ್ಟಗಳ ಮೇಲೆ ಅಭಿವೃದ್ಧಿ ಹೆಸರಿನಲ್ಲಿ ಅವ್ಯಾಹತ ಆಕ್ರಮಣ ನಡೆಯುತ್ತಿದೆ. ಕಾಂಗ್ರೆಸ್, ಬಿಜೆಪಿ, ಜೆಡಿಎಸ್– ಯಾವ ಪಕ್ಷಗಳ ಆಡಳಿತಾವಧಿಯಲ್ಲೂ ಈ ಆಕ್ರಮಣವನ್ನು ತಪ್ಪಿಸುವ ನೈಜ ಕಾಳಜಿ ವ್ಯಕ್ತವಾಗಿಲ್ಲ. ಸರ್ಕಾರದ ನಡೆಯ ವಿರುದ್ಧ ಜನರು, ಪರಿಸರವಾದಿಗಳು, ಮಠಾಧೀಶರು ಹೋರಾಟ ನಡೆಸುತ್ತಲೇ ಬಂದಿದ್ದಾರೆ. ಹೋರಾಟ ತೀವ್ರಗೊಂಡಾಗ ಹಿಂದೆ ಸರಿಯುವ ಸರ್ಕಾರಗಳು, ಮತ್ತೊಂದು ರೂಪದಲ್ಲಿ ಯೋಜನೆಯ ಅನುಷ್ಠಾನಕ್ಕೆ ಹುನ್ನಾರ ನಡೆಸುತ್ತಲೇ ಬಂದಿರುವುದು ಮತ ಹಾಕಿ ಗೆಲ್ಲಿಸಿದವರಿಗೆ ಮಾಡುತ್ತಿರುವ ದ್ರೋಹ. ಬೇಡ್ತಿ-ಅಘನಾಶಿನಿ ಕೊಳ್ಳದಲ್ಲಿ ಜೀವವಿರೋಧಿ ಯೋಜನೆಗಳ ಅನುಷ್ಠಾನಕ್ಕೆ ಮುಂದಾದಾಗ ತೀವ್ರ ಹೋರಾಟ ನಡೆದಿತ್ತು. ಆಗ ಹಿಂದೆ ಸರಿದಿದ್ದ ಸರ್ಕಾರ, ಬೇಡ್ತಿ-ವರದಾ ಹಾಗೂ ಅಘನಾಶಿನಿ-ವೇದಾವತಿ ನದಿ ತಿರುವು ಯೋಜನೆಗಳತ್ತ ಈಗ ಹೆಜ್ಜೆ ಇಟ್ಟಿದೆ. ಇದನ್ನು ವಿರೋಧಿಸಿ 'ಬೇಡ್ತಿ-ಅಘನಾಶಿನಿ ಸಂರಕ್ಷಣಾ ಸಮಿತಿ'ಯ ನೇತೃತ್ವದಲ್ಲಿ ಶಿರಸಿಯಲ್ಲಿ ನಡೆದ ಬೃಹತ್ ಸಮಾವೇಶವು, 'ಮಾನವ ಹಕ್ಕು ಕಾಯ್ದೆಯ ಮಾದರಿಯಲ್ಲಿ ನದಿಗಳಿಗೂ ಜೀವಿಸುವ ಹಾಗೂ ಸಹಜ ಹರಿವು ಉಳಿಸಿಕೊಳ್ಳುವ ಹಕ್ಕು ನೀಡಬೇಕು' ಎಂಬ ಹಕ್ಕೊತ್ತಾಯ ಮಂಡಿಸಿದೆ. 2021ರಲ್ಲಿ ಮುಖ್ಯಮಂತ್ರಿಯಾಗಿದ್ದ ಬಿ.ಎಸ್. ಯಡಿಯೂರಪ್ಪ ಬೇಡ್ತಿ–ವರದಾ ನದಿ ಜೋಡಣೆಯ ಬಗ್ಗೆ ಬಜೆಟ್‌ನಲ್ಲಿ ಘೋಷಿಸಿದ್ದರು. ಸಮಗ್ರ ಯೋಜನಾ ವರದಿ (ಡಿಪಿಆರ್) ಸಿದ್ಧಪಡಿಸಲು ರಾಷ್ಟ್ರೀಯ ಜಲ ಅಭಿವೃದ್ಧಿ ಸಂಸ್ಥೆಯನ್ನು (ಎನ್‌ಡಬ್ಲ್ಯುಡಿಎ) ಕೋರಿದ್ದರು. ಆಗ ಯೋಜನೆ ಜಾರಿಯಾಗಲಿಲ್ಲ. ಬಸವರಾಜ ಬೊಮ್ಮಾಯಿ ಮುಖ್ಯಮಂತ್ರಿಯಾಗಿದ್ದ ವೇಳೆ, ಅರಣ್ಯಕ್ಕೆ ಧಕ್ಕೆಯಾಗದಂತೆ ಯೋಜನೆಗೆ ಹೊಸ ಸ್ವರೂಪ ನೀಡಲಾಗಿತ್ತು. 2025ರಲ್ಲಿ ಯೋಜನೆಯಲ್ಲಿ ಸಾಕಷ್ಟು ಮಾರ್ಪಾಟು ಮಾಡಿರುವ ಎನ್‌ಡಬ್ಲ್ಯುಡಿಎ ಸಲ್ಲಿಸಿದ್ದ ವರದಿಗೆ ಕೇಂದ್ರ ಸರ್ಕಾರ ಒಪ್ಪಿಗೆ ನೀಡಿದೆ. ಜಲಶಕ್ತಿ ಸಚಿವಾಲಯ ಸಿದ್ಧಪಡಿಸುವ ಡಿಪಿಆರ್‌ಗೆ ರಾಜ್ಯ ಸರ್ಕಾರ ಸಮ್ಮತಿ ಸೂಚಿಸಿದೆ. ₹10 ಸಾವಿರ ಕೋಟಿ ವೆಚ್ಚದ ಯೋಜನೆ ಇದಾಗಿದ್ದು, ಕೇಂದ್ರ ಸರ್ಕಾರ ₹9 ಸಾವಿರ ಕೋಟಿ ಭರಿಸಲಿದೆ.



ಪಶ್ಚಿಮಘಟ್ಟಗಳ ಸುರಕ್ಷತೆಗೆ ಧಕ್ಕೆ ತರುವ ಯಾವುದೇ ಯೋಜನೆಯನ್ನು ಸರ್ಕಾರ ಜಾರಿಗೊಳಿಸಬಾರದು. ಪರಿಸರ ಸಂರಕ್ಷಣೆ ಸರ್ಕಾರಕ್ಕೆ ಆದ್ಯತೆಯ ವಿಷಯವಾಗಬೇಕು.

ಬೇಡ್ತಿ ನದಿಯ ನೀರನ್ನು ವರದಾ ನದಿಗೆ ಹರಿಸಿದರೆ, ಹಾವೇರಿ, ಗದಗ, ಕೊಪ್ಪಳ ಜಿಲ್ಲೆಯ 16 ಲಕ್ಷ ಹೆಕ್ಟೇರ್ ಜಮೀನಿಗೆ ನೀರಾವರಿ ಸೌಲಭ್ಯ ಸಿಗುತ್ತದೆ; ಅಣೆಕಟ್ಟೆಯಲ್ಲಿ ಸಂಗ್ರಹಿಸಿಟ್ಟುಕೊಂಡರೆ ಹಾವೇರಿ ಜಿಲ್ಲೆಗೆ ವರ್ಷಪೂರ್ತಿ ನೀರು ಸಿಗುತ್ತದೆ ಎಂಬುದು ಈ ಭಾಗದ ರೈತರ, ಜನಪ್ರತಿನಿಧಿಗಳ ಆಶಯ. ರಾಜ್ಯದ ಎಲ್ಲ ಕಡೆಯ ಜನ, ಜಮೀನಿಗೆ ಸ್ಥಳೀಯವಾಗಿ ಅಥವಾ ಪರ್ಯಾಯ ಮೂಲಗಳನ್ನು ಹುಡುಕಿ, ನೀರೊದಗಿಸುವುದು ಸರ್ಕಾರದ ಕರ್ತವ್ಯವೂ ಹೌದು. ಅದಕ್ಕಾಗಿ, ಪಶ್ಚಿಮಘಟ್ಟದ ಮೇಲೆ ಕಣ್ಣು ಹಾಕುವುದು ಸಮರ್ಥನೀಯವಲ್ಲ. ಪಶ್ಚಿಮಘಟ್ಟವನ್ನು ಕಾಡುತ್ತಿರುವ ನದಿ ಜೋಡಣೆಯ ವಿಷಯದಲ್ಲಿ ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರ ಹಾಗೂ ರಾಜ್ಯದ ಕಾಂಗ್ರೆಸ್ ಸರ್ಕಾರ ಒಂದೇ ನಿಲುವು ತಾಳಿವೆ. ಹೀಗಾಗಿ, ಮುಂದೆ ಆಗಲಿರುವ ಅನಾಹುತಗಳಿಗೆ ಎರಡೂ ಸರ್ಕಾರಗಳೂ ಉತ್ತರದಾಯಿ ಆಗಲಿವೆ.

ಉತ್ತರ ಕನ್ನಡದಲ್ಲಿ ಶರಾವತಿ ಟೇಲರೇಸ್, ಕೈಗಾ ಅಣುಸ್ಥಾವರ ಸೇರಿ ಹಲವು ಯೋಜನೆಗಳಿವೆ. ಶರಾವತಿ ಪಂಪ್ಡ್ ಸ್ಟೋರೇಜ್, ಅಂಕೋಲಾದಲ್ಲಿ ಆಳಸಮುದ್ರ ಬಂದರು ಯೋಜನೆಗಳ ಜತೆಗೆ ರಸ್ತೆ, ರೈಲು ವಿಸ್ತರಣೆ ಯೋಜನೆಗಳೂ ಚಾಲನೆಯ ಹಂತದಲ್ಲಿವೆ. ಇದೆಲ್ಲದರ ಪರಿಣಾಮವೆಂಬಂತೆ, ಅಲ್ಲಲ್ಲಿ ಭೂ ಕುಸಿತವೂ ಉಂಟಾಗುತ್ತಿದೆ. ಭಾರತ ಭೂವೈಜ್ಞಾನಿಕ ಸಮೀಕ್ಷೆ (ಜಿಎಸ್‌ಐ) ಎರಡು ವರ್ಷಗಳ ಹಿಂದೆ ಅಧ್ಯಯನ ನಡೆಸಿ- 439 ಸ್ಥಳಗಳು ಭೂಕುಸಿತದ ಅಪಾಯ ಎದುರಿಸುತ್ತಿದ್ದು, ನದಿ ಜೋಡಣೆ ಸೇರಿ ಅಭಿವೃದ್ಧಿ ಯೋಜನೆಗಳಿಗೆ ಪಶ್ಚಿಮಘಟ್ಟ ನಾಶವಾದರೆ ಇಂತಹ ಅವಘಡಗಳು ಘಟಿಸುತ್ತಲೇ ಸಾಗುತ್ತವೆ ಎಂದು ವರದಿ ನೀಡಿತ್ತು. ಈಗಾಗಲೇ ಧಾರಣಾ ಸಾಮರ್ಥ್ಯ ಕಳೆದುಕೊಂಡಿರುವ ಜಿಲ್ಲೆಯಲ್ಲಿ ಮತ್ತಷ್ಟು ಯೋಜನೆಗಳ ಹೇರಿಕೆಯ ನಡೆ ಜನರ ಆಕ್ರೋಶಕ್ಕೆ ಕಾರಣವಾಗಿದೆ. ಒಂದೆಡೆ ಅರಣ್ಯ ಸಂರಕ್ಷಣೆಯ ಹೆಸರಿನಲ್ಲಿ ಮೂಲ ನಿವಾಸಿಗಳನ್ನು ಒಕ್ಕಲೆಬ್ಬಿಸಿ ತಬ್ಬಲಿಗಳನ್ನಾಗಿಸುವ ಯತ್ನ ನಡೆಯುತ್ತಿದೆ. ಮತ್ತೊಂದೆಡೆ ಜನರಿಗೆ ಆಸರೆಯಾಗಿರುವ ಅರಣ್ಯವನ್ನು ಅಭಿವೃದ್ಧಿ ಯೋಜನೆಗಳಿಗಾಗಿ ಬಲಿ ಕೊಡುವ ದುರಾಕ್ರಮಣವನ್ನೂ ಸರ್ಕಾರಗಳು ಮಾಡುತ್ತಿವೆ. ಇದು ತಪ್ಪಬೇಕೆಂಬುದು ಜನರ ನಿರೀಕ್ಷೆ. ಜನರು ತಮ್ಮ ಬಾಳ್ವೆಗೆ ಅವಲಂಬಿಸಿರುವ ಅರಣ್ಯ, ಹವಾಮಾನ ವೈಪರೀತ್ಯ ತಡೆಗೆ ಏಕೈಕ ಪರಿಹಾರವಾದ ಪಶ್ಚಿಮಘಟ್ಟದ ರಕ್ಷಣೆ ಸರ್ಕಾರದ ಕಾಯಕವಾಗಬೇಕು. ಅದನ್ನು ಬಿಟ್ಟು ಯಾರದ್ದೋ ಹಿತಾಸಕ್ತಿಗಾಗಿ ವಿನಾಶಕಾರಿ ಯೋಜನೆಗಳನ್ನು ಅನುಷ್ಠಾನ ಮಾಡುವುದು ಜನವಿರೋಧಿ ನಡೆ. ಸ್ಥಳೀಯ ಮೂಲ ನಿವಾಸಿಗಳು, ಪರಿಸರ ತಜ್ಞರು, ವಿಜ್ಞಾನಿಗಳ ಅಭಿಪ್ರಾಯವನ್ನು ಸರ್ಕಾರಗಳು ಇನ್ನಾದರೂ ಗೌರವಿಸಿ, ನದಿ ಜೋಡಣೆಯನ್ನು ಕೈಬಿಡಬೇಕು. ತನ್ಮೂಲಕ ಪರಿಸರ ರಕ್ಷಣೆಯ ತನ್ನ ಬಾಧ್ಯತೆಯನ್ನು ಹಾಗೂ ಕಳಕಳಿಯನ್ನು ಪ್ರದರ್ಶಿಸಬೇಕು.

ಜಾಲಡಿ

ಶತ್ರು ಇರದಿರಲು ಸಾಧ್ಯವೆ?

ಬುದ್ಧ, ಗಾಂಧೀಜಿ, ಕನಕ, ಬಸವಣ್ಣ, ಏಸುಕ್ರಿಸ್ತ ಮುಂತಾದವರಿಗೂ ಶತ್ರುಗಳಿದ್ದರು. ಹಾಗಿದ್ದ ಮೇಲೆ ನಾವು ಶತ್ರುಗಳಿಲ್ಲದಂತೆ ಬದುಕಲು ಪ್ರಯತ್ನಿಸುವುದು ಅಸಾಧ್ಯವಷ್ಟೇ ಅಲ್ಲ, ಅನಗತ್ಯ ಮತ್ತು ಅನಾರೋಗ್ಯಕರ ಕೂಡ. ನಮ್ಮ ಭಾವೋದ್ವೇಗಗಳನ್ನು ಘನತೆ-ಗೌರವದಿಂದ ವ್ಯಕ್ತಪಡಿಸುವುದನ್ನು ನಾವು ಕಲಿಯಬೇಕು.

ನಡಹಳ್ಳಿ ವಸಂತ್, ಆಪ್ತ ಸಮಾಲೋಚಕ, 'ಫೇಸ್‌ಬುಕ್'ನಿಂದ

ಕಿಡಿನುಡಿ

ಉದ್ಯೋಗವು ಸಾಂವಿಧಾನಿಕ ಹಕ್ಕು. ಗ್ರಾಮೀಣರಿಗೆ ನಿರಂತರವಾಗಿ ಲಭ್ಯವಾಗಬೇಕು. ಆದರೆ, ಕೇಂದ್ರ ಸರ್ಕಾರವು 'ವಿಬಿ–ಜಿ ರಾಮ್ ಜಿ' ಮೂಲಕ ಪ್ರತಿ ಗ್ರಾಮದಲ್ಲೂ ಉದ್ಯೋಗಕ್ಕೆ ಕಡಿವಾಣ ಹಾಕಿದೆ.

ಜಿ. ಕುಮಾರನಾಯಕ, ಸಂಸದ

25 ವರ್ಷಗಳ ಹಿಂದೆ

ಶನಿವಾರ, 13-1-2001

• ಮುಷರಫ್‌ಗೆ ಆಮಂತ್ರಣ ನೀಡಿಲ್ಲ: ಭಾರತ ಸ್ಪಷ್ಟನೆ

ಜಕಾರ್ತಾ, ಜ. 12– ಕಾಶ್ಮೀರ ಸಮಸ್ಯೆ ಬಗೆಹರಿಸಲು ಪ್ರಯತ್ನಿಸುವುದಕ್ಕಾಗಿ ಭಾರತದ ಜೊತೆ ಮಾತುಕತೆ ನಡೆಸಲು ಪಾಕಿಸ್ತಾನಿ ಸೇನಾ ಆಡಳಿತಗಾರ ಜನರಲ್ ಪರ್ವೇಜ್ ಮುಷರಫ್ ಅವರನ್ನು ನವದೆಹಲಿಗೆ ಭೇಟಿ ನೀಡಲು ಭಾರತ ಆಮಂತ್ರಣ ನೀಡಿಲ್ಲ.

ಜನರಲ್ ಮುಷರಫ್ ಅವರು ಭಾರತದ ಆಮಂತ್ರಣದ ಮೇಲೆ ದೆಹಲಿಗೆ ಹೋಗಲಿದ್ದಾರೆ ಎಂಬ ಪಾಕಿಸ್ತಾನದ ಕೆಲವು ಪತ್ರಿಕೆಗಳ ವರದಿ ಬಗ್ಗೆ ಇಲ್ಲಿನ ವಿಮಾನ ನಿಲ್ದಾಣದಲ್ಲಿ ಪ್ರತಿಕ್ರಿಯಿಸಿದ ಪ್ರಧಾನಿ ವಾಜಪೇಯಿ ಅವರು, 'ನಾನು ವರದಿ ನೋಡಿದ್ದೇನೆ. ಆದರೆ, ಇಲ್ಲಿಯವರೆಗೆ ಯಾವುದೇ ದಿನಾಂಕ ನಿಗದಿಯಾಗಿಲ್ಲ' ಎಂದರು.

• ವಿದ್ಯುತ್ ಕಳವು:ಕಠಿಣ ಕಾನೂನು

ಬೆಂಗಳೂರು, ಜ. 12– ವಿದ್ಯುತ್ ಕಳವು ನಿಯಂತ್ರಣಕ್ಕೆ ನೆರೆಯ ಆಂಧ್ರಪ್ರದೇಶ ಮತ್ತು ತಮಿಳುನಾಡು ರಾಜ್ಯಗಳಲ್ಲಿ ಜಾರಿಗೊಳಿಸಿರುವ ಕಾನೂನಿನ ರೀತಿಯಲ್ಲಿ ರಾಜ್ಯದಲ್ಲೂ ಕಾನೂನು ರೂಪಿಸುವಂತೆ ಸರ್ಕಾರಕ್ಕೆ ಶಿಫಾರಸು ಮಾಡುವುದಾಗಿ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮದ ಅಧ್ಯಕ್ಷ ವಿ.ಪಿ. ಬಳಿಗಾರ ತಿಳಿಸಿದರು.

ನಿಗಮದ ನಿವೃತ್ತಿ ಪಿಂಚಣಿ ಮತ್ತು ಉಪದಾನ (ಗ್ರಾಚ್ಯುಟಿ) ಟ್ರಸ್ಟಿನ ಉದ್ಘಾಟನಾ ಸಮಾರಂಭದ ಅಧ್ಯಕ್ಷತೆ ವಹಿಸಿ ಅವರು ಮಾತನಾಡುತ್ತಿದ್ದರು.

75 ವರ್ಷಗಳ ಹಿಂದೆ

ಶನಿವಾರ, 13-1-1951

• ಕಾರ್ಪೊರೇಷನ್ ಮೇಯರ್ ಆಗಿ ಆರ್. ಅನಂತರಾಮನ್ ಆಯ್ಕೆ

ಬೆಂಗಳೂರು, ಜ. 12– ಇಂದು ನಡೆದ ಕಾರ್ಪೊರೇಷನ್ ಸಭೆಯಲ್ಲಿ ಕಾಂಗ್ರೆಸ್ ಪಕ್ಷದ ಉಮೇದುದಾರರಾದ ಆರ್. ಅನಂತರಾಮನ್‌ರವರು ಮೇಯರ್ ಆಗಿ ಬಹುಮತದಿಂದ ಚುನಾಯಿತರಾದರು.

ಡೆಪ್ಯುಟಿ ಮೇಯರ್ ಆಗಿ ಕಾಂಗ್ರೆಸ್ ಉಮೇದುದಾರರಾದ ಜಯಶೀಲನ್ ಬಹುಮತದಿಂದ ಆರಿಸಲ್ಪಟ್ಟರು.

ಮೇಯರ್ ಹಾಗೂ ಉಪ ಮೇಯರ್ ಸ್ಥಾನಗಳಿಗೆ ಸ್ಪರ್ಧಿಸಿದ್ದ ಸಂಯುಕ್ತ ಪೌರ ಪಕ್ಷದ ಉಮೇದುದಾರರಾದ ಕೆ.ಎಂ. ನಾಗಣ್ಣ ಮತ್ತು ಡಿ.ಎನ್. ಹೊಸಾಳಿಯವರು ಸೋತರು.

ಭಾಷಾ ಮಸೂದೆ: ಸಂಘರ್ಷ ಬೇಡ

ವಿಶ್ಲೇಷಣೆ

ನಿರಂಜನಾರಾಧ್ಯ ವಿ.ಪಿ.

ಮಲಯಾಳಂ ಭಾಷಾ ಮಸೂದೆಯಿಂದ ಕಾಸರಗೋಡು ಕನ್ನಡಿಗರ ಭಾಷಾ ಹಿತಾಸಕ್ತಿಗೆ ಧಕ್ಕೆಯಾಗುತ್ತದೆಂದು ಹೇಳಲಾಗುತ್ತಿದೆ. ಈ ಮಸೂದೆ ಎರಡು ರಾಜ್ಯಗಳ ನಡುವಿನ ವಿವಾದದ ರೂಪದಲ್ಲೂ ಬಿಂಬಿತಗೊಳ್ಳುತ್ತಿದೆ. ಇಂಥ ನೀತಿಗಳನ್ನು ರಾಜಕೀಯ ಪ್ರತಿಷ್ಠೆಯ ರೂಪದಲ್ಲಿ ನೋಡದೆ, ಸಾಂವಿಧಾನಿಕ ನೆಲೆಗಟ್ಟಿನಲ್ಲಿ ಗಮನಿಸಬೇಕಾಗಿದೆ.

'ಮಲಯಾಳಂ ಭಾಷಾ ಮಸೂದೆ 2025' ವಿವಾದಕ್ಕೆ ಗುರಿಯಾಗಿದೆ. ಒಂದೆಡೆ, ಕರ್ನಾಟಕ ಹಾಗೂ ಕೇರಳ ರಾಜ್ಯದ ಮುಖ್ಯಮಂತ್ರಿಗಳ ನಡುವೆ ವಾಗ್ವಾದ ನಡೆಯುತ್ತಿದ್ದರೆ, ಮತ್ತೊಂದೆಡೆ ಕರ್ನಾಟಕ ಗಡಿನಾಡ ಅಭಿವೃದ್ಧಿ ಪ್ರಾಧಿಕಾರವು ಕೇರಳದ ರಾಜ್ಯಪಾಲರನ್ನು ಭೇಟಿಯಾಗಿದೆ; ಕನ್ನಡ ಭಾಷಿಕರಿಗೆ ಮತ್ತು ಕನ್ನಡ ಮಾಧ್ಯಮದ ಮಕ್ಕಳಿಗೆ ಮಾರಕವಾಗುವ ಅಂಶಗಳನ್ನು ಕೈಬಿಡಲು ಒತ್ತಾಯಿಸಿದೆ. ಈ ಬೆಳವಣಿಗೆಗಳನ್ನು, ರಾಜಕೀಯ ಸಂಘರ್ಷಕ್ಕಿಂತ ಸಂವಿಧಾನದ ಹಾಗೂ ಭಾಷಾ ಕಲಿಕೆಗೆ ಸಂಬಂಧಿಸಿದಂತೆ ಕರ್ನಾಟಕ ರಾಜ್ಯ ರೂಪಿಸಿದ 'ಕನ್ನಡ ಭಾಷಾ ಕಲಿಕಾ ಅಧಿನಿಯಮ 2015'ರ ಹಿನ್ನೆಲೆಯಲ್ಲಿ ವಿಶ್ಲೇಷಿಸಬೇಕಿದೆ.

ಭಾರತೀಯ ಸಂವಿಧಾನವು ದೇಶದ ಭಾಷಾ ವೈವಿಧ್ಯ ಗುರ್ತಿಸಿ, ಪ್ರಜಾಸತ್ತಾತ್ಮಕ ಚೌಕಟ್ಟಿನಲ್ಲಿ ಭಾಷಾ ಹಕ್ಕುಗಳನ್ನು ವ್ಯವಸ್ಥಿತಗೊಳಿಸಿದೆ. ರಾಜ್ಯಗಳಿಗೆ ತಮ್ಮ ಪ್ರಾದೇಶಿಕ ಭಾಷೆಗಳನ್ನು ಅಧಿಕೃತ ಭಾಷೆಗಳಾಗಿ ಘೋಷಿಸಿಕೊಳ್ಳಲು ಸಂವಿಧಾನವು ಅವಕಾಶಗಳನ್ನು ನೀಡಿದ್ದರೂ, ಅದಕ್ಕೆ ಮಿತಿಗಳನ್ನೂ ವಿಧಿಸಿದೆ.

ಸಂವಿಧಾನದ ವಿಧಿ 345ರ ಪ್ರಕಾರ, ಯಾವುದೇ ರಾಜ್ಯವು ತನ್ನ ಶಾಸನಮಂಡಳಿಯ ಮೂಲಕ ಒಂದು ಅಥವಾ ಹೆಚ್ಚು ಭಾಷೆಗಳನ್ನು ತನ್ನ ಅಧಿಕೃತ ಭಾಷೆಗಳಾಗಿ ಘೋಷಿಸಬಹುದು. ಇದು ರಾಜ್ಯಗಳಿಗೆ ತಮ್ಮ ಭಾಷಾ ಅನನ್ಯತೆಯನ್ನು ಕಾನೂನಾತ್ಮಕವಾಗಿ ಸ್ಥಾಪಿಸುವ ಅಧಿಕಾರ ನೀಡುತ್ತದೆ. ಈ ಅವಕಾಶವನ್ನು ಬಳಸಿಕೊಂಡು ತಮಿಳುನಾಡು, ಕರ್ನಾಟಕ ಹಾಗೂ ಕೇರಳ ತಂತಮ್ಮ ಭಾಷೆಗಳನ್ನು ಅಧಿಕೃತ ಭಾಷೆಗಳೆಂದು ಕ್ರಮವಾಗಿ 1956, 1962 ಮತ್ತು 1969ರಲ್ಲಿಯೇ ಘೋಷಿಸಿಕೊಂಡಿವೆ.

ಸಂವಿಧಾನದ ವಿಧಿ 346, ರಾಜ್ಯ ಮತ್ತೊಂದು ರಾಜ್ಯದ ಜೊತೆ ಮತ್ತು ಕೇಂದ್ರ ಸರ್ಕಾರದ ನಡುವೆ ಸಂವಹನಕ್ಕೆ ಬಳಸಬೇಕಾದ ಭಾಷೆಯ ಬಗ್ಗೆ ಪ್ರಸ್ತಾಪಿಸುತ್ತ, ಎರಡು ಅಥವಾ ಮೂರು ರಾಜ್ಯಗಳು ಹಿಂದಿಯನ್ನು ಅಧಿಕೃತ ಸಂವಹನ ಭಾಷೆಯಾಗಿ ಒಪ್ಪುವುದಾದರೆ, ಆ ಭಾಷೆಯನ್ನು ಸಂವಹನ ಭಾಷೆಯನ್ನಾಗಿ ಬಳಸಬಹುದೆಂದು ಹೇಳುತ್ತದೆ. ಸಾಮಾನ್ಯವಾಗಿ ಇಂಗ್ಲಿಷ್ ಅಥವಾ ಹಿಂದಿಯನ್ನು ಸಂಪರ್ಕ ಭಾಷೆಯನ್ನಾಗಿ ಬಳಸುವ ಅವಕಾಶವನ್ನು ಇದು ಒದಗಿಸುತ್ತದೆ.

ವಿಧಿ 347ರ ಪ್ರಕಾರ ಸಂವಿಧಾನದಲ್ಲಿರುವ ಮತ್ತೊಂದು ಪ್ರಮುಖ ಅಂಶ, ಯಾವುದೇ ರಾಜ್ಯದಲ್ಲಿ, ರಾಜ್ಯದ ಅಧಿಕೃತ ಭಾಷೆಯನ್ನು ಹೊರತುಪಡಿಸಿ ಮತ್ತೊಂದು ಭಾಷೆ ಮಾತನಾಡುವ ದೊಡ್ಡ ಜನಸಂಖ್ಯೆಯಿದ್ದಲ್ಲಿ, ಅಗತ್ಯವಾದರೆ ರಾಷ್ಟ್ರಪತಿ ಅವರು ಅಂತಹ ಭಾಷೆಗೆ ರಾಜ್ಯದಲ್ಲಿ ಅಥವಾ ನಿರ್ದಿಷ್ಟ ಭೌಗೋಳಿಕ ಪ್ರದೇಶದಲ್ಲಿ ಅಧಿಕೃತ ಭಾಷೆಯ ಸ್ಥಾನ ನೀಡಲು ನಿರ್ದೇಶಿಸಬಹುದು. ಇದು ಭಾಷಾ ಅಲ್ಪಸಂಖ್ಯಾತರ ರಕ್ಷಣೆಗೆ ಸಂವಿಧಾನದಲ್ಲಿನ ಒಂದು ಪ್ರಮುಖ ವ್ಯವಸ್ಥೆಯಾಗಿದೆ. ಇದರಿಂದ 8ನೇ ಶೆಡ್ಯೂಲ್‌ನಲ್ಲಿರುವ 22 ಭಾಷೆಗಳಿಗೂ ರಾಷ್ಟ್ರೀಯ ಮಟ್ಟದಲ್ಲಿ ಸಾಂವಿಧಾನಿಕ ಮಾನ್ಯತೆ ದೊರೆಯುತ್ತದೆ. ವಿಧಿ 345ರಲ್ಲಿರುವ ಸಂವಿಧಾನಾತ್ಮಕ ಸ್ವಾತಂತ್ರ್ಯ ಮತ್ತು ಅವಕಾಶ ಬಳಸಿಕೊಂಡು, ರಾಜ್ಯಗಳು ತಮ್ಮ ಭಾಷೆಗಳನ್ನು ಆಡಳಿತ, ಶಿಕ್ಷಣ, ನ್ಯಾಯಾಂಗ, ಇತ್ಯಾದಿ ಕ್ಷೇತ್ರಗಳಲ್ಲಿ ಅಧಿಕೃತ ಭಾಷೆಯಾಗಿ ಅಳವಡಿಸಿಕೊಳ್ಳಬಹುದು. ಈ ಸ್ವಾತಂತ್ರ್ಯ ಕನ್ನಡ, ತಮಿಳು, ತೆಲುಗು, ಮಲಯಾಳ, ಮುಂತಾದ ಭಾಷೆಗಳ ಅಭಿವೃದ್ಧಿಗೆ ದೊಡ್ಡಮಟ್ಟದಲ್ಲಿ ನೆರವಾಗಿದೆ.

ರಾಜ್ಯಗಳಿಗಿರುವ ಈ ಸಂವಿಧಾನಾತ್ಮಕ ಅವಕಾಶದ ಬಗ್ಗೆ ಮಾತನಾಡುವಾಗ ಇತಿಮಿತಿಗಳ ಬಗ್ಗೆಯೂ ತಿಳಿಯಬೇಕಾಗುತ್ತದೆ. ಸಂವಿಧಾನದ ವಿಧಿ 29 ಮತ್ತು 30ರ ಅನ್ವಯ, ಭಾಷಾ ಮತ್ತು ಧಾರ್ಮಿಕ ಅಲ್ಪಸಂಖ್ಯಾತರು ತಮ್ಮ ಭಾಷೆ ಮತ್ತು ಸಂಸ್ಕೃತಿಯನ್ನು ಸಂರಕ್ಷಿಸಿಕೊಳ್ಳುವ ಮೂಲಭೂತ ಹಕ್ಕನ್ನು ಹೊಂದಿದ್ದಾರೆ. ರಾಜ್ಯಗಳು ಅಧಿಕೃತ ಭಾಷೆಯನ್ನು ಕಡ್ಡಾಯಗೊಳಿಸುವಾಗ ಈ ಹಕ್ಕುಗಳಿಗೆ ಧಕ್ಕೆಯಾಗದಂತೆ ನೀತಿ–ಕಾನೂನುಗಳನ್ನು ರೂಪಿಸಬೇಕಾಗುತ್ತದೆ. ಜೊತೆಗೆ, ವಿಧಿ 350ಎ ಭಾಷಾ ಅಲ್ಪಸಂಖ್ಯಾತ ಮಕ್ಕಳಿಗೆ ಪ್ರಾಥಮಿಕ ಶಿಕ್ಷಣವನ್ನು ಮಾತೃಭಾಷೆಯಲ್ಲಿ ಒದಗಿಸಲು ರಾಜ್ಯಗಳು ಮತ್ತು ಸ್ಥಳೀಯ ಸಂಸ್ಥೆಗಳಿಗೆ ನಿರ್ದೇಶಿಸುತ್ತದೆ. ವಿಧಿ 350ಬಿ ಭಾಷಾ ಅಲ್ಪಸಂಖ್ಯಾತರ ಹಿತರಕ್ಷಣೆಗಳನ್ನು ತನಿಖೆ ಮಾಡಲು ಮತ್ತು ವರದಿ ಮಾಡಲು ರಾಷ್ಟ್ರಪತಿ ಅವರು ವಿಶೇಷ ಅಧಿಕಾರಿಯನ್ನು ನೇಮಿಸಲು ಅವಕಾಶ ನೀಡುತ್ತದೆ. ಇದು ಭಾಷಾವೈವಿಧ್ಯ ಮತ್ತು ಸಮಾನತೆಯನ್ನು ಖಾತರಿಗೊಳಿಸುತ್ತದೆ; ಪ್ರಾಥಮಿಕ ಹಂತದಲ್ಲಿ ಮಕ್ಕಳಿಗೆ ಅವರ ಮಾತೃಭಾಷೆಯಲ್ಲಿ ಶಿಕ್ಷಣ ದೊರೆಯಬೇಕೆಂಬ ನೈತಿಕ ಜವಾಬ್ದಾರಿಯನ್ನು ರಾಜ್ಯಗಳಿಗೆ ವಿಧಿಸುತ್ತದೆ. ಒಟ್ಟಾರೆ, ರಾಜ್ಯಗಳು ರೂಪಿಸುವ ಭಾಷಾನೀತಿಗಳು ದೇಶ ಅಥವಾ ಪ್ರಾದೇಶಿಕ ಸಂಘರ್ಷಗಳಿಗೆ ಕಾರಣವಾಗಬಾರದು ಎಂಬುದು ಸಂವಿಧಾನದ ಮೂಲತತ್ತ್ವ ಹಾಗೂ ಆಶಯ. ಈ ಹಿನ್ನೆಲೆಯಲ್ಲಿ, ರಾಜ್ಯಗಳು ಭಾಷಾನೀತಿ ರೂಪಿಸುವಾಗ ಪ್ರಾದೇಶಿಕ ಸಹಕಾರ, ಸಾಮರಸ್ಯ, ಕೊಡು–ಕೊಳ್ಳುವಿಕೆ ಮತ್ತು ಎಲ್ಲಕ್ಕಿಂತ ಮಿಗಿಲಾಗಿ ದಕ್ಷಿಣ ಭಾರತದಲ್ಲಿ ಅನಾದಿಕಾಲದಿಂದಲೂ ನಡೆದುಬಂದಿರುವ ಭ್ರಾತೃತ್ವವನ್ನು ಗಮನದಲ್ಲಿ ಇರಿಸಿಕೊಳ್ಳಬೇಕಾಗಿದೆ.

ತಮಿಳುನಾಡಿನ 'ತಮಿಳು ಭಾಷಾ ಕಲಿಕಾ ಕಾಯ್ದೆ' (2006), ಕರ್ನಾಟಕದ 'ಕನ್ನಡ ಭಾಷಾ ಕಲಿಕಾ ಕಾಯ್ದೆ' (2015) ಮತ್ತು ಕೇರಳ ತರಲು ಹೊರಟಿರುವ 'ಮಲಯಾಳಂ ಭಾಷಾ ಮಸೂದೆ 2025'ರಲ್ಲಿ ಕೆಲವು ಮೂಲಭೂತ ಸಾಮ್ಯತೆಗಳಿವೆ. ತಮ್ಮ ಭಾಷೆಯ ಅನನ್ಯತೆಯನ್ನು ಸಂರಕ್ಷಿಸುವ ಮೂಲಕ ಶಿಕ್ಷಣದಲ್ಲಿ ತಮ್ಮ ಭಾಷೆಗಳನ್ನು ಕನಿಷ್ಠ ಒಂದು ಭಾಷೆಯನ್ನಾಗಿಯಾದರೂ ಕಲಿಸುವ ಮೂಲಕ, ಇಂದಿನ ಆಂಗ್ಲಭಾಷೆಯ ಯಜಮಾನಿಕೆಯ ಶಿಕ್ಷಣದ ಖಾಸಗೀಕರಣದ ಜಗತ್ತಿನಲ್ಲಿ ತಮ್ಮ ನುಡಿಯನ್ನು ಉಳಿಸಿ ಬೆಳೆಸುವ ಕಳಕಳಿ ಇದೆ. ತಾಯ್ನುಡಿ ಕಲಿಕೆಯು, ಭಾಷೆಯನ್ನು ಉಳಿಸಿ ಬೆಳೆಸುವಲ್ಲಿ ಮತ್ತು ಮಕ್ಕಳ ಬೌದ್ಧಿಕ ಬೆಳವಣಿಗೆಗೆ ಅಗತ್ಯವಾದ ಸಾಧನವೆಂದು ಪರಿಗಣಿಸಲಾಗಿದೆ. ಸಾಮಾನ್ಯವಾಗಿ ಈ ಅಂಶಗಳ ಬಗ್ಗೆಯೂ ಯಾರಿಗೂ ತಕರಾರಿಲ್ಲ.

ತಕರಾರಿರುವುದು, ನಮ್ಮ ಭಾಷೆಯನ್ನು ಉಳಿಸಿ ಬೆಳೆಸುವ ಭರದಲ್ಲಿ, ಸಂವಿಧಾನದ ಮಾನ್ಯತೆ ಇರುವ ಉಳಿದೆಲ್ಲ ಭಾಷೆ ಅಥವಾ ರಾಜ್ಯದ ಉಳಿದ ಭಾಷಾ ಸಮುದಾಯಗಳ ನಿರ್ದಿಷ್ಟ ಭಾಷೆಗಳನ್ನು, ಭಾಷಾ ಶ್ರೇಷ್ಠತೆ ಅಥವಾ ಭಾಷಾ ದುರಭಿಮಾನದ ನೆಲೆಯಲ್ಲಿ ಮೂಲೆಗುಂಪಾಗಿಸುವ ಪ್ರಯತ್ನದ ಬಗ್ಗೆ. ಉದ್ದೇಶಿತ ಮಲಯಾಳಂ ಭಾಷಾ ಮಸೂದೆಯ ಬಗ್ಗೆ ಕರ್ನಾಟಕದ ಪ್ರಮುಖ ತಕರಾರು ಇದಾಗಿದೆ. ಕೇರಳದ ಗಡಿ ಜಿಲ್ಲೆಗಳಲ್ಲಿರುವ ಭಾಷಾ ಅಲ್ಪಸಂಖ್ಯಾತರ (ಕೆಲವು ಜಿಲ್ಲೆಯಲ್ಲಿ ಅವರೇ ಬಹುಸಂಖ್ಯಾತರು) ಮಕ್ಕಳ ಶಿಕ್ಷಣದ ಹಕ್ಕನ್ನು ಕಾಪಾಡುವ ವಿಷಯದಲ್ಲಿ ಮಸೂದೆ ಗೊಂದಲಮಯವಾಗಿದೆ.

ಉದ್ದೇಶಿತ ಮಸೂದೆಯ ಪ್ರಕರಣ 6(1)ರ ಅನ್ವಯ, ಹತ್ತನೇ ತರಗತಿಯವರೆಗೆ ಕೇರಳದ ಎಲ್ಲಾ ಸರ್ಕಾರಿ ಮತ್ತು ಅನುದಾನಿತ ಶಾಲೆಗಳಲ್ಲಿ ಮಲಯಾಳ ಕಡ್ಡಾಯ ಪ್ರಥಮ ಭಾಷೆಯಾಗಿದೆ. ಪ್ರಕರಣ 6(3)ರ ಅಡಿಯಲ್ಲಿ, ಮಲಯಾಳ ಹೊರತುಪಡಿಸಿ ಬೇರೆ ಯಾವುದೇ ಭಾಷೆಯನ್ನು ಮಾತೃಭಾಷೆಯಾಗಿ ಹೊಂದಿರುವ ವಿದ್ಯಾರ್ಥಿಗಳಿಗೆ ಅವರ ಮಾತೃಭಾಷೆಯ ಜೊತೆಗೆ ಮಲಯಾಳ ಕಲಿಯಲು ಅವಕಾಶ ನೀಡಲಾಗುವುದೆಂದು ಹೇಳುತ್ತದೆ. ಅಂದರೆ, ಕನ್ನಡ ಭಾಷೆಯ ಮಕ್ಕಳು ಮಲಯಾಳ ಭಾಷೆಯನ್ನು ಕಡ್ಡಾಯ ಪ್ರಥಮ ಭಾಷೆಯಾಗಿ ಕಲಿಯಬೇಕೆ ಅಥವಾ ಕನ್ನಡ ಭಾಷೆಯನ್ನು ಪ್ರಥಮ ಭಾಷೆಯನ್ನಾಗಿ ಕಲಿಯುವ ಮೂಲಕ ಮಲಯಾಳ ಭಾಷೆಯನ್ನು ಕಲಿಯಲು ಅವಕಾಶವಿದೆಯೇ ಎಂಬ ಗೊಂದಲವಿದೆ. ಅಂದರೆ, ಕನ್ನಡವೂ ಸೇರಿದಂತೆ ಇತರೆ ಭಾಷಾ ಅಲ್ಪಸಂಖ್ಯಾತ ಶಾಲೆಗಳಲ್ಲಿ, ಶಿಕ್ಷಣ ಮಾಧ್ಯಮ ಮಾತೃಭಾಷೆ ಆಗಿದ್ದಾಗ್ಯೂ, ಮಕ್ಕಳು ತಮ್ಮ ತಾಯ್ನುಡಿಯನ್ನು ಪ್ರಥಮ ಭಾಷೆಯನ್ನಾಗಿ ಕಲಿಯುವ ಅವಕಾಶವನ್ನು ಕಸಿಯುವ ಆತಂಕವನ್ನು ಮಸೂದೆ ಸೃಷ್ಟಿಸಿದೆ. ಇದು ಸಂವಿಧಾನದ ಮೂಲತತ್ತ್ವಕ್ಕೆ ವಿರುದ್ಧ.

ಇದೇ ವಿಷಯಕ್ಕೆ ಸಂಬಂಧಿಸಿದಂತೆ, ಕನ್ನಡ ಭಾಷಾ ಕಲಿಕಾ ಅಧಿನಿಯಮ ಕನ್ನಡವನ್ನು ಪ್ರಥಮ ಅಥವಾ ದ್ವಿತೀಯ ಭಾಷೆಯಾಗಿ ಕಲಿಯುವ ಅವಕಾಶವನ್ನು ನೀಡುತ್ತದೆ. ಜೊತೆಗೆ, ತಾಯ್ನುಡಿ ಕನ್ನಡವಲ್ಲದ ವಿದ್ಯಾರ್ಥಿಗಳಿಗೆ ತಮ್ಮ ತಾಯ್ನುಡಿಯನ್ನು ಮೂರನೇ ಭಾಷೆಯಾಗಿ ಕಲಿಯಲು ಅವಕಾಶ ನೀಡುತ್ತದೆ. ಉದಾಹರಣೆಗೆ, ಕರ್ನಾಟಕದಲ್ಲಿ ಮಲಯಾಳ, ತಮಿಳು, ತೆಲುಗು, ಉರ್ದು, ಇತ್ಯಾದಿ ಮಾಧ್ಯಮದಲ್ಲಿ ಕಲಿಯುತ್ತಿರುವ ಮಕ್ಕಳು ತಮ್ಮ ಮಾತೃಭಾಷೆಯನ್ನು ಪ್ರಥಮ ಅಥವಾ ದ್ವಿತೀಯ ಭಾಷೆಯನ್ನಾಗಿ ಕಲಿಯುವ ಅವಕಾಶವನ್ನು ಕಲ್ಪಿಸುತ್ತದೆ. ಉದಾಹರಣೆಗೆ, ಕರ್ನಾಟಕದಲ್ಲಿ ಮಲಯಾಳ ಮಾಧ್ಯಮದಲ್ಲಿ ಕಲಿಯುತ್ತಿರುವ ಕೇರಳದ ಮಕ್ಕಳು, ತಮ್ಮ ತಾಯ್ನುಡಿ ಮಲಯಾಳ ಅನ್ನು ಮೊದಲ ಭಾಷೆಯಾಗಿ ತೆಗೆದುಕೊಂಡರೆ, ಕನ್ನಡ ಭಾಷೆಯನ್ನು ಎರಡನೇ ಭಾಷೆಯನ್ನಾಗಿ ಅಥವಾ ಕನ್ನಡವನ್ನು ಮೊದಲ ಭಾಷೆಯಾಗಿ ತೆಗೆದುಕೊಂಡರೆ ಮಲಯಾಳವನ್ನು ಎರಡನೇ ಭಾಷೆಯಾಗಿ ತೆಗೆದುಕೊಳ್ಳುವ ಅವಕಾಶವನ್ನು ಕಾಯ್ದೆ ಕಲ್ಪಿಸಿದೆ. ಕನ್ನಡ ಕಲಿಕಾ ಅಧಿನಿಯಮವು ಬಹುಭಾಷಿಕತೆಯ ನೆಲೆಯಲ್ಲಿ ಒಳಗೊಳ್ಳುವಿಕೆಯ ತತ್ತ್ವವನ್ನು ಪ್ರತಿಪಾದಿಸಿದರೆ, ಮಲಯಾಳಂ ಮಸೂದೆಯು ಭಾಷಾ ಪ್ರಾಬಲ್ಯವನ್ನು ಮೆರೆದು ಉಳಿದ ಭಾಷೆಗಳನ್ನು ಹೊರದೂಡುವ ತತ್ತ್ವವನ್ನು ಒಳಮಾಡಿಕೊಂಡಿದೆ.

ಭಾಷಾನೀತಿಗಳು ಒಳಗೊಳ್ಳುವಿಕೆಯ ನೀತಿಗಳಾಗಬೇಕೇ ಹೊರತು ಹೊರಗಿಡುವ ಸ್ವರೂಪ ಹೊಂದಬಾರದು. ಈ ಹಿನ್ನೆಲೆಯಲ್ಲಿ, ಕರ್ನಾಟಕದ ಮುಖ್ಯಮಂತ್ರಿ ಸಾಂವಿಧಾನಿಕ ಮತ್ತು ಭಾಷಾ ಸಮಾನತೆಯ ನೆಲೆಯಲ್ಲಿ ಎತ್ತಿರುವ ಪ್ರಶ್ನೆಗಳನ್ನು ಕೇರಳದ ಮುಖ್ಯಮಂತ್ರಿ ರಾಜಕೀಯ ಪ್ರತಿಷ್ಠೆಯಾಗಿ ನೋಡದೆ, ಕರ್ನಾಟಕದಲ್ಲಿ ನೆಲೆಸಿರುವ ಮಲಯಾಳಿಗಳು ಮತ್ತು ಕೇರಳದಲ್ಲಿ ನೆಲೆಸಿರುವ ಕನ್ನಡಿಗರ ನಡುವಿನ ಶಾಂತಿ, ಸಹಬಾಳ್ವೆ ಮತ್ತು ಸಾಮರಸ್ಯದ ವಿಷಯವನ್ನಾಗಿ ನೋಡುವುದು ಹಾಗೂ ಉದ್ದೇಶಿತ ಮಸೂದೆಗೆ ಸೂಕ್ತ ತಿದ್ದುಪಡಿ ತರುವುದು ಸಾಂವಿಧಾನಿಕ ನಡೆಯಾಗುತ್ತದೆ.

ವಾಚಕರ ವಾಣಿ

ನದಿಯ ನೋವಿಗೆ ನೂರೆಂಟು ಮುಖಗಳು

ಬೇಡ್ತಿ–ವರದಾ ಹಾಗೂ ಅಘನಾಶಿನಿ–ವೇದಾವತಿ ನದಿಗಳನ್ನು ಜೋಡಿಸುವ ಯೋಜನೆಗೆ ವ್ಯಾಪಕ ಆಕ್ರೋಶ ವ್ಯಕ್ತವಾಗುತ್ತಿದೆ. ಉತ್ತರಕನ್ನಡ ಜಿಲ್ಲೆಯ ಶಿರಸಿಯಲ್ಲಿ 'ಮಾನವರಂತೆ ನದಿಗಳಿಗೂ ಜೀವದ ಹಕ್ಕು ನೀಡಬೇಕು' ಎಂಬ ಹಕ್ಕೊತ್ತಾಯದ ಮೂಲಕ ಸಾವಿರಾರು ಜನರು ನದಿಗಳ ಜೋಡಣೆಯನ್ನು ವಿರೋಧಿಸಿದ್ದಾರೆ. ಜೋಡಣೆಯಿಂದ ಪಶ್ಚಿಮಘಟ್ಟಗಳ ವಿನಾಶದ ಜೊತೆಗೆ ನದಿಗಳ ಮೂಲವೂ ಅವನತಿ ಹೊಂದುತ್ತದೆ.

ಈ ಹಿಂದೆ ಕೈಗಾ ಅಣುಸ್ಥಾವರದ ಸ್ಥಾಪನೆಗೆ ದೊಡ್ಡ ಹೋರಾಟ ನಡೆದಿತ್ತು. ಆದರೂ, ಅಣುಸ್ಥಾವರ ರಚನೆಯಾಗಿ ಕಾರ್ಯ ನಿರ್ವಹಿಸುತ್ತಿದೆ. ಇದರಿಂದ ಈ ಭಾಗದ ಜನರು ಅನುಭವಿಸುತ್ತಿರುವ ನೋವು ಅಷ್ಟಿಷ್ಟಲ್ಲ. ಜನರ ಬದುಕಿಗೆ ವಿನಾಶಕಾರಿಯಾದ ಹಾಗೂ ಅವೈಜ್ಞಾನಿಕವಾದ ನದಿಗಳ ಜೋಡಣೆ ಯೋಜನೆಯನ್ನು ಕೈಬಿಡುವುದೇ ಒಳಿತು.

ರಾಹುಲ್ ಹಂಚಿನಾಳ, ದಾಂಡೇಲಿ

ಮಕ್ಕಳಿಗೆ ಪತ್ರಿಕೆ ಓದುವ ಅಭ್ಯಾಸ ಬೆಳೆಸಿ

ಇತ್ತೀಚೆಗೆ ಸಾಂಸ್ಕೃತಿಕ ಕಾರ್ಯಕ್ರಮವೊಂದಕ್ಕೆ ಹೋಗಿದ್ದೆ. ಮಕ್ಕಳಿಂದ ಫ್ಯಾಷನ್ ಶೋ ಇತ್ತು. ಅದಕ್ಕೆ ಮೊದಲು ನಿರೂಪಕರು ಅಲ್ಲಿದ್ದ ಕೆಲವು ಮಕ್ಕಳನ್ನು ವೇದಿಕೆಗೆ ಕರೆದರು. ಅವರಿಂದ ಕನ್ನಡ ದಿನಪತ್ರಿಕೆ ಓದಿಸಲು ಪ್ರಯತ್ನಿಸಿ, ಸ್ವಲ್ಪ ಯಶಸ್ವಿಯೂ ಆದರು. ಈ ರೀತಿಯ ಚಟುವಟಿಕೆಗಳು ಪ್ರಶಂಸನೀಯ. ರಸಪ್ರಶ್ನೆ, ಪ್ರಬಂಧ ಸ್ಪರ್ಧೆಗಳಂತೆ ಮಕ್ಕಳ ಕಾರ್ಯಕ್ರಮಗಳಲ್ಲಿ ಯಾರು ಸ್ಪಷ್ಟವಾಗಿ ದಿನಪತ್ರಿಕೆ ಓದುತ್ತಾರೋ ಅವರಿಗೆ ಬಹುಮಾನ ನೀಡಿ ಪ್ರೋತ್ಸಾಹಿಸುವ ಸ್ಪರ್ಧಾ ವೇದಿಕೆಗಳು ಸೃಷ್ಟಿಯಾದರೆ, ಪತ್ರಿಕೆ ಓದುವ ಹವ್ಯಾಸವನ್ನು ಮಕ್ಕಳಿಗೆ ಕಲಿಸಿಕೊಟ್ಟಂತಾಗುತ್ತದೆ. ಅವರಲ್ಲಿ ಸಾಮಾನ್ಯಜ್ಞಾನ ಬೆಳೆಯಲೂ ಸಹಕಾರಿಯಾಗುತ್ತದೆ.

ಟಿ.ಎಸ್. ಪ್ರತಿಭಾ, ಚಿತ್ರದುರ್ಗ

ಜಲ, ತರು, ನಿಧಿ ನಿಕ್ಷೇಪ ಯಾರದ್ದು?

ಗದಗ ತಾಲ್ಲೂಕಿನ ಲಕ್ಕುಂಡಿಯಲ್ಲಿ ಮನೆಯ ಪಾಯ ಅಗೆಯುವಾಗ ಸಿಕ್ಕಿದ ನಿಧಿಯನ್ನು ಸರ್ಕಾರದ ಸುಪರ್ದಿಗೆ ನೀಡಿರುವುದು ವರದಿಯಾಗಿದೆ. ಈ ರೀತಿ ಸಿಗುವ ನಿಧಿಯನ್ನು ಸರ್ಕಾರಕ್ಕೆ ನೀಡಬೇಕೆಂಬ ನಿಯಮವಿದೆ. ಭೂಮಿಯನ್ನು ವಿವಿಧ ರೀತಿಯ ಹಕ್ಕು ಬದಲಾವಣೆ ಮಾಡಲಾಗುತ್ತದೆ. ಆಗ ದಸ್ತಾವೇಜು ದಾಖಲೆಗಳಲ್ಲಿ ಈ ಭೂಮಿಯಲ್ಲಿ ಇನ್ನುಮುಂದೆ ಸಿಗುವ ಜಲ, ತರು, ನಿಧಿ ನಿಕ್ಷೇಪಗಳು ನಿಮ್ಮಗಳದ್ದೇ ಆಗಿವೆ. ಅನುಭವಿಸಿಕೊಂಡು ಹೋಗಿ ಎಂದು ಹಾರೈಸಿ ಪತ್ರದ ಒಕ್ಕಣೆ ಮುಗಿಸುತ್ತಾರೆ. ಇದನ್ನು ನೋಂದಣಿ ಮತ್ತು ಮುದ್ರಾಂಕ ಇಲಾಖೆಯ ಉಪ ನೋಂದಣಾಧಿಕಾರಿಯು ನೋಂದಾಯಿಸಿ ಸಹಿ ಮತ್ತು ಠಸ್ಸೆ ಹಾಕುತ್ತಾರೆ. ಹೀಗೆ ಪತ್ರದ ಸಾರಾಂಶ ಒಪ್ಪಿಕೊಂಡು ನೋಂದಾಯಿಸಿದ ರೀತಿಯಂತೆ ನಿಧಿ ನಿಕ್ಷೇಪಗಳ ಹಕ್ಕು ಭೂಮಿ ಕೊಂಡುಕೊಂಡ ವ್ಯಕ್ತಿಗೆ ಸಿಗುವುದಿಲ್ಲವೇಕೆ? ಆ ಹಕ್ಕು ಕೊಡಲಾಗದಿದ್ದರೆ ನೋಂದಣಿ ಇಲಾಖೆಯವರು ಪತ್ರದಲ್ಲಿನ ಜಲ, ತರು, ನಿಧಿ ನಿಕ್ಷೇಪಗಳ ಪ್ರಸ್ತಾವವನ್ನು ಇನ್ನಾದರೂ ಕೈಬಿಡಲಿ.

ಲಕ್ಷ್ಮೀಕಾಂತರಾಜು ಎಂ.ಜಿ., ಗುಬ್ಬಿ

ಪರೀಕ್ಷೆಗೆ ವಿದ್ಯಾರ್ಥಿಗಳ ಸಕಾರಾತ್ಮಕ ಸಿದ್ಧತೆ

ಪರೀಕ್ಷೆಗಳು ಮಕ್ಕಳ ಜೀವನದ ಮಹತ್ವಘಟ್ಟವಾದರೂ, ಅವು ಭಯ ಮತ್ತು ಒತ್ತಡದ ಮೂಲವಾಗಬಾರದು. ಇತ್ತೀಚೆಗೆ ಅಂಕಗಳ ಮೇಲಿನ ಅತಿಯಾದ ನಿರೀಕ್ಷೆಯಿಂದ ಮಕ್ಕಳು ಮಾನಸಿಕವಾಗಿ ಕುಗ್ಗುತ್ತಿರುವುದು ಕಂಡುಬರುತ್ತಿದೆ. ಮಕ್ಕಳನ್ನು ಪರೀಕ್ಷೆಗೆ ತಯಾರು ಮಾಡುವಲ್ಲಿ ಪೋಷಕರು ಮತ್ತು ಶಿಕ್ಷಕರು ಮಾನವೀಯ ಹಾಗೂ ಸಕಾರಾತ್ಮಕ ದೃಷ್ಟಿಕೋನ ಅಳವಡಿಸಿಕೊಳ್ಳಬೇಕು. ವಿಷಯದ ಅರಿವು, ಸಮಯ ನಿರ್ವಹಣೆ ಮತ್ತು ಆತ್ಮವಿಶ್ವಾಸಕ್ಕೆ ಒತ್ತು ನೀಡಿದರೆ ಮಕ್ಕಳು ಧೈರ್ಯದಿಂದ ಪರೀಕ್ಷೆ ಎದುರಿಸಬಲ್ಲರು. ಈ ವಿಚಾರಕ್ಕೆ ಪೋಷಕರು ಗಮನ ನೀಡಬೇಕಿದೆ.

ಮಹಮ್ಮದ್ ಜಲಾಲುದ್ದೀನ್, ಮಂಗಳೂರು

ಭಾರತ ಪ್ರಕಾಶಿಸಲು ಯುವಜನ ಬೇಡವೆ?

ಸ್ವಾಮಿ ವಿವೇಕಾನಂದರ ಜಯಂತಿಯನ್ನು 'ಯುವ ದಿನ'ವಾಗಿ ಆಚರಿಸಲಾಗುತ್ತದೆ. ಆದರೆ, ದೇಶದಲ್ಲಿ ಯುವಜನತೆಗೆ ಬೇಕಾದ ಸೌಲಭ್ಯಗಳು ಸಿಗುತ್ತಿವೆಯೇ ಎಂಬ ಪ್ರಶ್ನೆ ಕಾಡುತ್ತದೆ. ಭಾರತದಲ್ಲಿ ಯುವಜನರ ಸಂಖ್ಯೆ ಶೇ 60ಕ್ಕಿಂತ ಹೆಚ್ಚಿದೆ. ಈ ಯುವ ಸಂಪನ್ಮೂಲವನ್ನು ಬಳಸಿಕೊಳ್ಳದ ಭಾರತ ಪ್ರಕಾಶಿಸುವುದಾದರೂ ಹೇಗೆ?

ಕೇಂದ್ರ ಮತ್ತು ರಾಜ್ಯ ಸರ್ಕಾರದಿಂದ ಹಲವು ಜಾತಿಗಳಿಗೆ ಪ್ರತ್ಯೇಕ ಅಭಿವೃದ್ಧಿ ನಿಗಮ ಸ್ಥಾಪಿಸಲಾಗಿದೆ. ಹಾಗೆಯೇ ಯುವಜನತೆಗೊಂದು ಅಭಿವೃದ್ಧಿ ನಿಗಮ ಸ್ಥಾಪಿಸಲಿ, ಮತ್ತು ಯುವಜನ ಆಯೋಗ ಸ್ಥಾಪಿಸಿ ಅವರ ದೂರುದುಮ್ಮಾನ ಆಲಿಸುವ ಕೆಲಸವಾಗಲಿ. ಜತೆಗೆ, ಸರ್ಕಾರದ ವಿವಿಧ ಇಲಾಖೆಗಳಲ್ಲಿ ಖಾಲಿ ಇರುವ ಹುದ್ದೆಗಳ ಭರ್ತಿಗೆ ತ್ವರಿತವಾಗಿ ಅಧಿಸೂಚನೆ ಪ್ರಕಟಿಸಬೇಕಿದೆ.

ನಾಗಾರ್ಜುನ ಹೊಸಮನಿ, ಕಲಬುರಗಿ

ಶಿಕ್ಷಣ ಕ್ಷೇತ್ರಕ್ಕೆ ಹೆಚ್ಚಿನ ಅನುದಾನ ನೀಡಿ

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಬಜೆಟ್ ಮಂಡನೆಯ ಪೂರ್ವಭಾವಿ ಸಿದ್ಧತಾ ಸಭೆ ಆರಂಭಿಸಿರುವುದು ಸರಿಯಷ್ಟೆ. ಶಿಕ್ಷಣ ದೇಶದ ಅಭಿವೃದ್ಧಿಯ ಬೆನ್ನೆಲುಬು. ಅದು ಪ್ರಾಥಮಿಕ ಶಿಕ್ಷಣ ಇರಬಹುದು ಅಥವಾ ಉನ್ನತ ಶಿಕ್ಷಣ ಇರಬಹುದು. ಈ ಕ್ಷೇತ್ರವನ್ನು ಸದೃಢಗೊಳಿಸದ ಹೊರತು ದೇಶ ಪ್ರಗತಿ ಕಾಣದು. ಪ್ರತಿಯೊಬ್ಬ ನಾಗರಿಕನಿಗೂ ಉತ್ತಮ ಶಿಕ್ಷಣ ಸಿಗುವಂತಾಗಬೇಕು. ಇದು ಸರ್ಕಾರದ ಪ್ರಥಮ ಜವಾಬ್ದಾರಿ.

ಪ್ರಸ್ತುತ ರಾಜ್ಯದಲ್ಲಿ ಶಿಕ್ಷಣಕ್ಕೆ ಮೀಸಲಿಡುತ್ತಿರುವ ಅನುದಾನ ಕಡಿಮೆಯಿದೆ. ಹಾಗಾಗಿ, 2026–27ನೇ ಸಾಲಿನ ರಾಜ್ಯ ಬಜೆಟ್‌ನಲ್ಲಿ ಈ ಕ್ಷೇತ್ರಕ್ಕೆ ಹೆಚ್ಚಿನ ಅನುದಾನ ಮೀಸಲಿಡಬೇಕಿದೆ. ಶಿಕ್ಷಣ ಕ್ಷೇತ್ರವನ್ನು ಬಲಪಡಿಸದೆ ಹೋದರೆ ಅಭಿವೃದ್ಧಿ ಅಸಮಗ್ರವಾಗಿಯೇ ಉಳಿಯುತ್ತದೆ.

ಪ್ರೊ. ಟಿ. ನಾರಾಯಣಪ್ಪ, ಬೆಂಗಳೂರು

ಚುರುಮುರಿ



ಧನಲಕ್ಷ್ಮೀ ವಿಚಾರ

• ಲಿಂಗರಾಜು ಡಿ.ಎಸ್.

ನಾನು, ತುರೇಮಣೆ ಪಾರ್ಕಲ್ಲಿ ಕುಂತಿದ್ದಾಗ ಒಬ್ಬ ಬುಡುಬುಡಿಕೆಯೋನು ಬಂದು ಅಮರಿಕೊಂಡ.

'ಲಕ್ಷ್ಮೀ ವಿಚಾರ ಲಕ್ಷ್ಮೀ ವಿಚಾರ, ಧನಲಕ್ಷ್ಮೀ ವಿಚಾರ, ಗೌಡ, ನಿನ್ನ ಮನಸ್ಸಲ್ಲಿ ಒಂದು ವಿಚಾರ ಕಟಕಟಾ ಅಂತ ಕಡೀತಾ ಅದ. ಸತ್ಯವಾದ್ರೆ ಸತ್ಯ ಅನ್ನು, ಸುಳ್ಳಾದ್ರೆ ಸುಳ್ಳು ಅನ್ನು. ನಡೀತಾ ಇದ್ದೋನು ನಿಂತುಬುಟ್ಟೆ, ನಿಂತಿದ್ದೋನು ಕುಂತುಬುಟ್ಟೆ. ಹೌದಾ ಗೌಡ... ನಿನ್ನೆಸರು?'

'ನಾರಾಯಣ' ಅಂದ್ರು ತುರೇಮಣೆ.

'ನಾರಾಯಣ ಅಂದ್ರೆ ವೃಶ್ಚಿಕ ರಾಶಿ, ನಿನ್ನ ರಾಶಿಗೊಂದು ಮಿಸ್ಟೀಕದೆ ಗೌಡ, ಮಂಗಳವಾರ ಮಕಚೌರ ಮಾಡಬ್ಯಾಡ, ಬೇಸ್ತವಾರ ಬಡಗಲ ದಿಕ್ಕಿಗೆ ಹೋಗಬ್ಯಾಡ, ಅರ್ಥವಾಯಿತಾ ಗೌಡ?'

'ಆತು ಕಣಪ್ಪ' ತುರೇಮಣೆ ಒಪ್ಪಿಕ್ಕಂದರು.

'ರಾಜಕಾರಣಿಗಳಂಗೆ ದೇವರ ದುಡ್ಡಿಗೆ, ಋಷಿ–ಮುನಿಗಳ ಹೆಸರಿನ ನಿಗಮ, ಮಂಡಳಿಗಳ ದುಡ್ಡಿಗೆ ಕೈಯಿಕ್ಕಬ್ಯಾಡ, ಅರ್ಥವಾಯಿತಾ ಗೌಡ, ರಾಜಕೀಯದ ಸುದ್ದಿ ಓದಬ್ಯಾಡ, ಕೇಳಬ್ಯಾಡ, ನಿನ್ನ ಬುದ್ಧಿ ನಿನ್ನ ಕೈಯಲ್ಲಿರಲಿ, ಶಾಸಕನಾದ ಮ್ಯಾಲೆ ಕ್ಯಾಮೆ ಬುಟ್ಟು ಗಾಳಿಗಂಟಲು ಮಾಡೋರ ಸಾವಾಸ ಬ್ಯಾಡ ಗೌಡ' ಎಂದ ಬುಡುಬುಡಿಕಣ್ಣ.

'ಸರಿ' ಅಂದ್ರು ತುರೇಮಣೆ.

'ರಾಜಕಾರಣಿಗಳೆಲ್ಲ ದೊಡ್ಡ ಮನುಷ್ಯರು. ಅವರ ದುಡ್ಡು ವರ್ಷಕ್ಕೆ ನೂರು ಭಾಗ, ಇನ್ನೂರು ಭಾಗ ಹೆಚ್ಚಿಗೆಯಾಗುತ್ತೆ. ಆದ್ರೆ ನಿನ್ನ ಕೈಯಾಗೆ ರೊಕ್ಕ, ರುಪಾಯಿ ನಿಂದ್ರಂಗಿಲ್ಲ ಗೌಡ, ತೂತುಮಡಕೆ ಹಂಗೆ ಸೋರಿ ಹೋಯ್ತಾ ಅದೆ ಗೌಡ, ಅದಕ್ಕೆ ಒಂದು ಮುಟ್ಟು, ಒಂದು ಚಿಟ್ಟು, ಒಂದು ಕೇಡು ಬಿಡುಗಡೆ ಆಗಬೇಕು.'

ಹೂ ಅಂದರು ತುರೇಮಣೆ.

'ನಿನ್ನ ಕಾಡ್ತಾ ಇರೋ ಕಂಟಕ ವೊಡೆದು ಕೊಡ್ತೀನಿ. ಮೂರು ಅರಿಸಿನಕೊಂಬು, ಮೂರು ಕಾಳು ಉಪ್ಪು, ಮೂರು ಕಾಳು ಕರಿಮೆಣಸು, ನಿನ್ನ ಮನಸ್ಸಿಗೆ ಒಪ್ಪಿದ ದಕ್ಷಿಣೆ ಮಡಗು ಗೌಡ, ಈ ತಾಯತ ತಕ್ಕೋ' ಅಂದೋನು ನೂರು ರುಪಾಯಿ ಇಸುಗಂದು ಕಡೆದು ಹೋಯ್ತಿದ್ದರೆ, ಬುಡುಬುಡಿಕಣ್ಣನ ಮಾತಿನ ಮ್ಯಾಜಿಕ್ಕು ಮತ್ತು ಲಾಜಿಕ್ಕು ಗೊತ್ತಾಗದೇ ಬೆಪ್ಪಾಗಿದ್ದೆವು.

ಸಂಗತ

ಸಂಚಾರ ನಿಯಮ: ಬೇಕು ನಾಗರಿಕ ಪ್ರಜ್ಞೆ

ನಾಗರಿಕ ಪ್ರಜ್ಞೆಯ ಕೊರತೆ ಹಾಗೂ ಚಿತ್ತ ಕ್ಷೋಭೆ ಬಹುತೇಕ ರಸ್ತೆ ಅಪಘಾತಗಳಿಗೆ ಕಾರಣ. ಸಂಚಾರ ನಿಯಮಗಳು ನಾಗರಿಕ ಪ್ರಜ್ಞೆಯಾಗಿ ಬದಲಾಗುವುದು ಅಗತ್ಯ.

• ಡಾ. ಎ. ಶ್ರೀಧರ

ನಮ್ಮ ದೇಶದಲ್ಲಿ ರಸ್ತೆಗಳ ಸ್ಥಿತಿಗತಿ ಬಗ್ಗೆ ವಸ್ತುನಿಷ್ಠ ಅಭಿಪ್ರಾಯ ಏನೆಂದು ಕೇಳಿದರೆ– ತಜ್ಞರು, ಸಾರ್ವಜನಿಕರು ಹಾಗೂ ವಾಹನ ಸವಾರರಿಂದ ಎದುರಾಗುವ ನಿರೀಕ್ಷಿತ ಉತ್ತರ: 'ರಸ್ತೆಗಳು ಅತಿ ಕೆಟ್ಟದಾಗಿವೆ' ಎನ್ನುವುದೇ ಆಗಿದೆ. ಆದರೆ, ಸುಗಮ ಹಾಗೂ ಸುರಕ್ಷಿತ ಸಂಚಾರಕ್ಕೆ ರಸ್ತೆಗಳ ಗುಣಮಟ್ಟವಷ್ಟೇ ಸಾಲದು, ವಾಹನ ಓಡಿಸುವವರ ಮನಃಸ್ಥಿತಿಯೂ ಉತ್ತಮವಾಗಿರಬೇಕು. ಬಹುಪಾಲು ಸಣ್ಣಪುಟ್ಟ ರಸ್ತೆ ಅಪಘಾತಗಳಿಗೆ ರಸ್ತೆಯ ಕಡೆ ಚಾಲಕನ ಸಂಪೂರ್ಣ ಗಮನ ಇರದಿರುವುದೇ ಕಾರಣವಾಗಿರುತ್ತದೆ.

ವಾಹನ ಚಾಲನೆ ಮಾಡುವಾಗ ವ್ಯಕ್ತಿಯ ವರ್ತನೆಗಳು ಹೇಗಿರಬೇಕು ಎನ್ನುವುದನ್ನು 'ಅಗತ್ಯ ಸಾಮಾಜಿಕ ವರ್ತನೆ' ಎಂದು ಕಲಿಸಿಕೊಡುವ ರಾಷ್ಟ್ರಗಳಿವೆ. ಆ ದೇಶಗಳಲ್ಲಿ ರಸ್ತೆ ಅಪಘಾತಗಳ ಸಂಖ್ಯೆ ಕಡಿಮೆ. ನಮ್ಮಲ್ಲಿ ಅಡ್ಡಾದಿಡ್ಡಿ ಗಾಡಿ ಓಡಿಸುವುದು, ಎಲ್ಲೆಂದರಲ್ಲಿ ವಾಹನ ನಿಲ್ಲಿಸುವ ವರ್ತನೆಗಳು ಸಾಮಾನ್ಯವಾಗಿವೆ. ರಸ್ತೆ ನಿಯಮಗಳ ಉಲ್ಲಂಘನೆ ಚಾಲಕರಿಂದ ಮಾತ್ರವಲ್ಲ, ರಸ್ತೆ ಬಳಸುವ ಇತರರಲ್ಲಿಯೂ ಕಾಣಬಹುದು. ಶಿಕ್ಷೆ ಮತ್ತು ಶಿಕ್ಷಣದ ಕೊರತೆಯೇ ಇಂಥ ವರ್ತನೆಗಳಿಗೆ ಮುಖ್ಯ ಕಾರಣ.

ಕೆಟ್ಟ ರಸ್ತೆಗಳಿಗಿಂತಲೂ ಹದಗೆಟ್ಟ ಮನಃಸ್ಥಿತಿಯೇ ಗಂಭೀರ ಅಪಘಾತಗಳಿಗೆ ಮುಖ್ಯ ಕಾರಣ ಎನ್ನುವುದನ್ನು ಅಧ್ಯಯನಗಳು ಸಾಬೀತುಪಡಿಸಿವೆ.

ದೇಶ ಎಷ್ಟೇ ಮುಂದುವರಿದಿರಲಿ, ಎಷ್ಟೇ ಜಾಗೃತ ನಾಗರಿಕಪ್ರಜ್ಞೆ ಇರಲಿ, ಕೆಲವೊಮ್ಮೆ ವ್ಯಕ್ತಿಯ ಮನಸ್ಸು ಎಲ್ಲವನ್ನು ಬದಿಗಿರಿಸಿ ಅಪಾಯಕ್ಕೆ ಆಹ್ವಾನ ನೀಡುತ್ತದೆ. ಇದಕ್ಕೆ ಉತ್ತಮ ಉದಾಹರಣೆ, ಅಮೆರಿಕದ ಲಾಸ್ ಏಂಜಲೀಸ್ ಪ್ರದೇಶದ ಸುಸಜ್ಜಿತ ಹೆದ್ದಾರಿಯಲ್ಲಿ ಇತ್ತೀಚೆಗೆ ಸಂಭವಿಸಿದ ರಸ್ತೆ ಅಪಘಾತ. ಆ ದುರಂತದಲ್ಲಿ ಅಪಘಾತಕ್ಕೀಡಾದ ದುಬಾರಿ ಬೆಲೆಯ ಕಾರಿನ ಚಾಲನೆ ಮಾಡುತ್ತಿದ್ದವರು, 55 ವರ್ಷದ ವಾನ್ಸ್ ಎನ್ನುವ ವ್ಯಕ್ತಿ. ಆತ ಜನಪ್ರಿಯ ವಿಡಿಯೊ ಗೇಮ್ಸ್ 'ಕಾಲ್ ಆಫ್ ಡ್ಯೂಟಿ' ಸೃಷ್ಟಿಕರ್ತ. ಅಪಘಾತ ನಡೆದ ಕೆಲವು ಕ್ಷಣಗಳಲ್ಲಿ ಕಾರು ಕರಕಲಾಗಿತ್ತು. ಅಪಘಾತ ನಡೆದ ಕ್ಷಣ ಮತ್ತು ಕಾರು ಹತ್ತಿ ಉರಿಯುತ್ತಿರುವ ವಿಡಿಯೊ ದೃಶ್ಯವನ್ನು ಗಮನಿಸಿದರೆ, ವಾಹನದ ವೇಗ ಮತ್ತು ಮಾನಸಿಕ ಆವೇಗ ಅಪಘಾತಕ್ಕೆ ಕಾರಣವಿರಬಹುದು ಎನ್ನಿಸುತ್ತದೆ. ಗರಿಷ್ಠ ಸುರಕ್ಷತೆಯನ್ನು ಒಳಗೊಂಡ ವಾಹನ ಹಾಗೂ ಚಾಲಕನ ಕೌಶಲವು ಅತ್ಯುತ್ತಮವಾಗಿದ್ದರೂ, ಮನಸ್ಸು ಕ್ಷಣ ಹಿಡಿತ ತಪ್ಪಿದರೂ ದುರಂತ ತಪ್ಪಿದ್ದಲ್ಲ.

ಆಟೊಮೊಬೈಲ್ ಯಂತ್ರಗಳನ್ನು ಮನುಷ್ಯನ ಹತೋಟಿಗೆ ಸಿಗುವಂತೆಯೇ ರಚಿಸಲಾಗಿದ್ದರೂ, ಅವುಗಳ ಕಾರ್ಯಕ್ಷಮತೆಗೂ ಇತಿಮಿತಿಗಳಿವೆ. ಮನಸ್ಸು ಮತ್ತು ಶರೀರ ಸುಸ್ಥಿತಿಯಲ್ಲಿ ಇದ್ದಾಗಲೂ ನೆನಪುಗಳು ಯಾವುದೇ ಕಡಿವಾಣಕ್ಕೆ ಸಿಗದೆ ಪ್ರಜ್ಞೆಯನ್ನು ಸೆಳೆದಿಟ್ಟುಕೊಳ್ಳಬಲ್ಲವು. ಪರವಶತೆ ವ್ಯಕ್ತಿಯ ಅರಿವಿಗೆ ಬಂದು ನಿಯಂತ್ರಣದ ಪ್ರಯತ್ನಕ್ಕೂ ಮೊದಲೇ ದುರಂತ ಸಂಭವಿಸಿಬಿಡುತ್ತದೆ.



ಇತ್ತೀಚೆಗೆ ಬೆಂಗಳೂರಿನ ಹೊರವಲಯದ ಹೆದ್ದಾರಿಯೊಂದರಲ್ಲಿ ದ್ವಿಚಕ್ರ ವಾಹನ ಸವಾರನೊಬ್ಬ ಗಮನಸೆಳೆದ. ಆತನ ವಾಹನದ ಕಾಲಬಳಿಯ ಪುಟ್ಟ ಸ್ಥಳದ ಎರಡೂ ಕಡೆಗಳಲ್ಲಿ ಸಾಕುನಾಯಿಗಳ ತಲೆಗಳು ಕಾಣಿಸುತ್ತಿದ್ದವು. ಅವುಗಳ ಬಾಲ ಆಗಾಗ್ಗೆ ನೆಲಕ್ಕೆ ತಾಗುತ್ತಿತ್ತು. ಅವಸರದಲ್ಲಿ ಇರುವವನಂತೆ ವೇಗವಾಗಿ ವಾಹನ ಓಡಿಸುತ್ತಿದ್ದ ಆ ವ್ಯಕ್ತಿ ಮಧ್ಯವಯಸ್ಸಿನವರು. ಪ್ರಾಣಿಪ್ರಿಯರ ಪಾಲಿಗೆ ಅದು ಪ್ರಾಣ ಬಾಯಿಗೆ ಬರುವಂತಹ ಕೆಟ್ಟ ದೃಶ್ಯ.

ವಾಹನ ಚಾಲನೆ ಬರೀ ಅಭ್ಯಾಸದಿಂದ ಹೆಚ್ಚಾಗುವ ಕೌಶಲ ಎನ್ನುವುದು ಜನಪ್ರಿಯ ನಂಬಿಕೆ. ಆದರೆ, ರಸ್ತೆಯ ಸ್ಥಿತಿಗತಿ ಮತ್ತು ವ್ಯಕ್ತಿಯ ಮಾನಸಿಕತೆ ಬದಲಾಗುತ್ತಲೇ ಇರುತ್ತದೆ. ವ್ಯಕ್ತಿಯ ಬಲವಾದ ಅಭ್ಯಾಸಗಳಿಗೂ ಸವಾಲಾಗಿ ನಿಲ್ಲುವ ಸಹಜ ಮಾನಸಿಕ ಲಕ್ಷಣಗಳಾದ ಒಳಪ್ರೇರಣೆ, ಭಾವೋದ್ವೇಗ ಮತ್ತು ಅವಸರದ ಪ್ರತಿಕ್ರಿಯೆಗಳು ಚಾಲನೆಯ ಮೇಲಿನ ಹತೋಟಿಯನ್ನು ಕ್ಷಣದಲ್ಲಿ ತಪ್ಪಿಸಬಲ್ಲವು.

ವಿವಿಧ ಗಾತ್ರದ ವಾಹನಗಳು, ಅವುಗಳ ನಡುವೆಯೇ ಓಡಾಡುವ ಜನರು, ವಾಹನ ಚಲಾಯಿಸುತ್ತಾ ಮೊಬೈಲಿನಲ್ಲಿ ಮಾತನಾಡುವವರು, ಸತತವಾಗಿ ಹಾರ್ನ್ ಮಾಡುವವರು, ಕೊಂಚ ಸಂದು ಸಿಕ್ಕಿದರೂ ಮುನ್ನುಗ್ಗುವ ವಾಹನ ಸವಾರರು, ಸಂಚಾರ ನಿಯಂತ್ರಣದ ದೀಪಗಳಿಗೆ ಬೆಲೆ ಕೊಡದಿರುವವರು, ಇಂಥ ವಿಭಿನ್ನ ಮನಃಸ್ಥಿತಿಯ ಜನರು ನಮ್ಮ ಚಾಲನೆಯ ಮೇಲೆ ಪ್ರಭಾವ ಬೀರುತ್ತಾರೆ. ಮುಂದೆ ಇರುವವರನ್ನು ಹಿಂದೆ ಹಾಕುವುದೇ ಬದುಕಿನ ಗುರಿ ಎಂದು ವರ್ತಿಸುವವರೂ ಇದ್ದಾರೆ. ಇಂಥ ಸನ್ನಿವೇಶಗಳಲ್ಲಿ ಮನಸ್ಸನ್ನು ಸ್ಥಿರವಾಗಿ ಇರಿಸಿಕೊಳ್ಳುವುದು ಯಾರಿಗಾದರೂ ಸಾಹಸವೇ ಸರಿ. ದಿನನಿತ್ಯವೂ ಇಂತಹ ಪರಿಸ್ಥಿತಿಯನ್ನು ಎದುರಿಸಲೇಬೇಕಾದ ನಾಗರಿಕರು ತಮ್ಮ ಮಾನಸಿಕ ಸಮತೋಲನ ಕಾಪಾಡಿಕೊಳ್ಳುವುದು ಸುಲಭವಲ್ಲ.

ತಳಮಳ, ಆತಂಕ, ಅವಸರ ಹೆಚ್ಚಿದಷ್ಟೂ ಮಾನಸಿಕ ಹಾಗೂ ದೈಹಿಕ ಆರೋಗ್ಯ ಹದಗೆಡುವ ಸಾಧ್ಯತೆಗಳು ಹೆಚ್ಚುತ್ತವೆ. ಹಾಗಾಗಿಯೇ ವಾಹನ ಓಡಿಸುವಾಗ ಸಾವಧಾನ, ಸಮಾಧಾನದ ಮನಃಸ್ಥಿತಿ ಕಲಿಸುವ ಪ್ರಯತ್ನ ಬಾಲ್ಯದಿಂದಲೇ ಆರಂಭವಾಗಬೇಕು. ಅನುಕರಣೆ ಎಂಬ ಕಲಿಕೆಯ ಕ್ರಮದ ಮೂಲಕವೇ ಮಕ್ಕಳಲ್ಲಿ ಸಂಚಾರಪ್ರಜ್ಞೆ ಮೂಡಿಸುವ ಅಗತ್ಯವಿದೆ. ಈ ಕಲಿಕೆ ಮಕ್ಕಳಿಗೆ ಮಾತ್ರ ಸೀಮಿತವಲ್ಲ. ಇದೊಂದು ಅಗತ್ಯ ನಾಗರಿಕ ಪ್ರಜ್ಞೆಯಾಗಿ ರೂಪುಗೊಳ್ಳಬೇಕು.

ಲೇಖಕ: ಮನೋವಿಜ್ಞಾನಿ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ತಾಂತ್ರಿಕ ಶಿಕ್ಷಣ ಪಡೆದವರಲ್ಲಿ ಹೆಚ್ಚುತ್ತಿರುವ ನಿರುದ್ಯೋಗ; ಉದ್ಯಮ ಮತ್ತು ಕೋರ್ಸ್ ನಡುವೆ ಅಂತರ ಏರಿಕೆ

ರಾಜ್ಯ ಸರ್ಕಾರದ 'ಯುವನಿಧಿ' ಯೋಜನೆಗೆ ಗಣನೀಯ ಸಂಖ್ಯೆಯಲ್ಲಿ ಎಂಜಿನಿಯರಿಂಗ್ ಪದವೀಧರರು ನೋಂದಣಿ ಮಾಡಿಕೊಂಡಿರುವುದು ರಾಜ್ಯದ ಶೈಕ್ಷಣಿಕ ಮತ್ತು ಔದ್ಯೋಗಿಕ ಮಾರುಕಟ್ಟೆಯಲ್ಲಿ ಚರ್ಚೆಗೆ ಗ್ರಾಸವಾಗಿದೆ. ಎಂಜಿನಿಯರಿಂಗ್ ಓದಿದರೆ ಉತ್ತಮ ಉದ್ಯೋಗ ಖಚಿತ ಎನ್ನುವ ಭಾವನೆ ಕ್ಷೀಣಿಸಿದ್ದು, ಉದ್ಯೋಗ ಸಿಗುವುದೇ ಕಷ್ಟ ಎನ್ನುವಂಥ ಪರಿಸ್ಥಿತಿ ನಿರ್ಮಾಣವಾಗಿದೆ. ತಾಂತ್ರಿಕ ಪದವೀಧರರ ನಡುವೆ ಶೇ 83ರಷ್ಟು ಮಂದಿ ನಿರುದ್ಯೋಗಿಗಳಾಗಿದ್ದಾರೆ ಎಂದು ಅಧ್ಯಯನವೊಂದು ತಿಳಿಸಿದೆ. ಇಂಥ ಸ್ಥಿತಿ ಸೃಷ್ಟಿಯಾಗಲು ಕೌಶಲ ಇಲ್ಲದಿರುವುದು ಸೇರಿದಂತೆ ಕಾರಣಗಳು ಹಲವು ಎಂದು ಪರಿಣತರು ಅಭಿಪ್ರಾಯಪಡುತ್ತಾರೆ

ಎಂಜಿನಿಯರಿಂಗ್: ಕೆಲಸ ಸಿಗುವುದು ಕಷ್ಟ

• ಬಿ.ವಿ.ಶ್ರೀನಾಥ್, ಸೂರ್ಯನಾರಾಯಣ ವಿ.

ರಾಜ್ಯ ಸರ್ಕಾರವು ಗ್ಯಾರಂಟಿ ಯೋಜನೆಗಳ ಭಾಗವಾಗಿ ಜಾರಿಗೊಳಿಸಿರುವ 'ಯುವನಿಧಿ' (ಪದವೀಧರ ನಿರುದ್ಯೋಗಿಗಳಿಗೆ ಭತ್ಯೆ) ಪ್ರಯೋಜನ ಪಡೆಯಲು 2026ರ ಜ.1ರವರೆಗೆ ಒಟ್ಟು 3.79 ಲಕ್ಷ ಯುವಕ ಯುವತಿಯರು ನೋಂದಣಿ ಮಾಡಿಕೊಂಡಿದ್ದಾರೆ. ಈ ಪೈಕಿ ಎಂಜಿನಿಯರಿಂಗ್ ಪದವೀಧರರ ಸಂಖ್ಯೆ (ಶೇ 13) ಗಮನಾರ್ಹವಾಗಿದೆ. 43,529 ಎಂಜಿನಿಯರಿಂಗ್ ಪದವೀಧರರ ಜತೆಗೆ ಎಂಜಿನಿಯರಿಂಗ್ ಸ್ನಾತಕೋತ್ತರ (374), ಡಿಪ್ಲೊಮಾ (4,250) ಪಡೆದವರೂ ಇದ್ದಾರೆ.

ದೇಶದಲ್ಲಿ ಎಂಜಿನಿಯರಿಂಗ್ ಮತ್ತು ವೈದ್ಯಕೀಯ ಪದವಿಗಳು ವಿದ್ಯಾರ್ಥಿಗಳಲ್ಲಿ ಮತ್ತು ಪೋಷಕರಲ್ಲಿ ಅಪಾರ ಹುರುಪು ಹುಟ್ಟಿಸಿದ್ದ ಕೋರ್ಸ್‌ಗಳಾಗಿದ್ದವು. ಬಹುತೇಕ ಪೋಷಕರು ಇವೆರಡರಲ್ಲಿ ಯಾವುದಾದರೊಂದನ್ನು ಓದಬೇಕು ಎಂದು ತಮ್ಮ ಮಕ್ಕಳ ಮೇಲೆ ಒತ್ತಡ ಹೇರುತ್ತಾ, ಈ ಬಗ್ಗೆ ಅಪಾರ ಆಸೆ, ಕನಸು ಕಟ್ಟಿಕೊಂಡಿರುತ್ತಿದ್ದರು. ಅತಿ ಹೆಚ್ಚು ಅಂಕಗಳನ್ನು ಪಡೆದ ಕೆಲವರು ವೈದ್ಯಕೀಯ ಆಯ್ದುಕೊಂಡರೆ, ನಂತರದ ಬಹುತೇಕರು ಎಂಜಿನಿಯರಿಂಗ್ ಸೇರುತ್ತಿದ್ದರು. ಎಂಜಿನಿಯರಿಂಗ್ ಪದವೀಧರರ ಪೈಕಿ ಗಣನೀಯ ಸಂಖ್ಯೆಯ ಮಂದಿ ವಿದೇಶಗಳಲ್ಲಿ ಕೆಲಸ ಗಿಟ್ಟಿಸುವುದರೊಂದಿಗೆ ಪದವಿಯ ಬಗೆಗಿನ ಆಕರ್ಷಣೆ ಮತ್ತಷ್ಟು ಹೆಚ್ಚಾಯಿತು. ಬೇಡಿಕೆಯನ್ನು ಆಧರಿಸಿ ಹೊಸಹೊಸ ಎಂಜಿನಿಯರಿಂಗ್ ಕಾಲೇಜುಗಳೂ ಹುಟ್ಟಿಕೊಂಡವು. ಹೀಗೆ ದಶಕಗಳಿಂದ ತಾಂತ್ರಿಕ ಪದವೀಧರರ ಸಂಖ್ಯೆ ಹೆಚ್ಚುತ್ತಲೇ ಸಾಗುತ್ತಿರುವುದರ ಪರಿಣಾಮ ಈಗ ಕಾಣತೊಡಗಿದೆ. ತಾಂತ್ರಿಕ ಪದವಿ ಪಡೆದವರ ನಡುವೆ ನಿರುದ್ಯೋಗ ಪ್ರಮಾಣ ಏರಿಕೆಯಾಗುತ್ತಿದೆ.

ಅಂದಾಜಿನ ಪ್ರಕಾರ, ಭಾರತದಲ್ಲಿ 8,917 ಎಂಜಿನಿಯರಿಂಗ್ ಕಾಲೇಜುಗಳಿದ್ದು, ಈ ಪೈಕಿ 2,292 ಸರ್ಕಾರಿ ಮತ್ತು 6,625 ಖಾಸಗಿ ಕಾಲೇಜುಗಳಾಗಿವೆ. ಪ್ರತಿವರ್ಷ ಸುಮಾರು 15 ಲಕ್ಷ ಮಂದಿ ಪದವೀಧರರು ಈ ಕಾಲೇಜುಗಳಿಂದ ಹೊರಬರುತ್ತಿದ್ದು, ಇವರ ಪೈಕಿ ಬಹುತೇಕರು ನಿರುದ್ಯೋಗಿಗಳಾಗುತ್ತಿದ್ದಾರೆ. ಇಲ್ಲವೇ ಕಡಿಮೆ ಸಂಬಳದ ಉದ್ಯೋಗಗಳಲ್ಲಿ ನೆಲೆ ನಿಲ್ಲುತ್ತಿದ್ದಾರೆ. 2025ರಲ್ಲಿ ಎಂಜಿನಿಯರಿಂಗ್ ಪದವೀಧರರ ನಡುವೆ ನಿರುದ್ಯೋಗದ ಪ್ರಮಾಣವು ಶೇ 83ರಷ್ಟಿದೆ ಎಂದು ಅಂತರರಾಷ್ಟ್ರೀಯ ನೇಮಕಾತಿ ಸಂಸ್ಥೆ 'ಅನ್‌ಸ್ಟಾಪ್'ನ ಅಧ್ಯಯನ ವರದಿ ತಿಳಿಸಿದೆ.

ಕಾರಣಗಳು: ಎಂಜಿನಿಯರಿಂಗ್ ಪದವೀಧರರಲ್ಲಿ ಉದ್ಯಮಕ್ಕೆ ಅಗತ್ಯವಾದ ಪ್ರಾಯೋಗಿಕ ಜ್ಞಾನದ ಕೊರತೆ, ಹೊಸ ಬೆಳವಣಿಗೆಗಳ ತಿಳಿವಳಿಕೆ ಇಲ್ಲದಿರುವುದು, ಕಾಲೇಜು–ಕಂಪನಿಗಳ ನಡುವಿನ ಸಮನ್ವಯದ ಸಮಸ್ಯೆ ಪದವೀಧರರ ನಿರುದ್ಯೋಗಕ್ಕೆ ಮುಖ್ಯ ಕಾರಣಗಳಾಗಿವೆ. ಜತೆಗೆ, ಹಳೆಯ ಕೋರ್ಸ್‌ಗಳು, ಹಳೆಯ ಪಠ್ಯಕ್ರಮ ಉದ್ಯಮ ಮತ್ತು ಕೋರ್ಸ್‌ಗಳ ನಡುವಿನ ಅಂತರ ಹೆಚ್ಚಿಸುತ್ತಿವೆ ಎನ್ನಲಾಗುತ್ತಿದೆ. ಕಂಪನಿಗಳಿಗೆ ಅಗತ್ಯವಾದ ಕೌಶಲಗಳು ಕಾಲೇಜಿನಲ್ಲಿ ಕಲಿಸಲಾಗುತ್ತಿಲ್ಲ. ಉದಾಹರಣೆಗೆ, ಅಂತರಶಿಸ್ತೀಯ ಕೌಶಲಗಳಿಗೆ ಕಂಪನಿಗಳಲ್ಲಿ ಬೇಡಿಕೆ ಇದೆ. ಆದರೆ, ಬಹುತೇಕ ಕಾಲೇಜುಗಳಲ್ಲಿ ಅವುಗಳನ್ನು ಕಲಿಸುವ ವ್ಯವಸ್ಥೆ ಇಲ್ಲ. ಈ ಅಂತರಗಳನ್ನು ನೀಗಲು ಪಠ್ಯಕ್ರಮ ರೂಪಿಸುವುದರಲ್ಲಿ ಉದ್ಯಮ ರಂಗದವರನ್ನೂ ಭಾಗೀದಾರರನ್ನಾಗಿ ಮಾಡಿಕೊಳ್ಳುವುದು ಉತ್ತಮ ಎನ್ನುವ ಸಲಹೆ ವ್ಯಕ್ತವಾಗಿದೆ.



ಬೆಂಗಳೂರಿನ ಪ್ರತಿಷ್ಠಿತ ಎಂಜಿನಿಯರಿಂಗ್ ಕಾಲೇಜಿನ ಪ್ರಾಂಶುಪಾಲರು ಹೇಳುವಂತೆ, ಎಂಜಿನಿಯರಿಂಗ್ ವಿದ್ಯಾರ್ಥಿಗಳಲ್ಲಿ ನಿರುದ್ಯೋಗ ಹೆಚ್ಚಳಕ್ಕೆ ಹಲವು ಕಾರಣಗಳಿವೆ. ತಾಂತ್ರಿಕತೆ ಅತ್ಯಂತ ವೇಗವಾಗಿ ಬೆಳವಣಿಗೆ ಹೊಂದುತ್ತಿದ್ದು, ಅದಕ್ಕೆ ತಕ್ಕಂತೆ ಅಪ್‌ಡೇಟ್ ಆಗುವ ಜತೆಗೆ ಕೌಶಲ ಅಭಿವೃದ್ಧಿ ಮಾಡಿಕೊಳ್ಳಬೇಕು. ಸಾಫ್ಟ್‌ವೇರ್‌ಗಳು, ಸಾಧನಗಳು, ಪ್ರಯೋಗಗಳು ತುಂಬಾ ದುಬಾರಿಯಾಗಿರುವುದರಿಂದ ಅದಕ್ಕೆ ಸಾಕಷ್ಟು ಸಂಪನ್ಮೂಲಗಳು ಬೇಕು.

'ಪದವೀಧರರಲ್ಲಿ ಹೆಚ್ಚಿನವರು ಉದ್ಯಮ ರಂಗವನ್ನು ಆಯ್ದುಕೊಳ್ಳುತ್ತಿರುವುದರಿಂದ ಕಾಲೇಜುಗಳಲ್ಲಿ ಉತ್ತಮ ಅಧ್ಯಾಪಕರ ಕೊರತೆ ಇದ್ದು, ಇದೂ ವಿದ್ಯಾರ್ಥಿಗಳ ಕಲಿಕೆಯ ಗುಣಮಟ್ಟದ ಮೇಲೆ ಪರಿಣಾಮ ಬೀರುತ್ತಿದೆ. ವಿದ್ಯಾರ್ಥಿಗಳಲ್ಲಿ ಆಸಕ್ತಿ, ಶ್ರದ್ಧೆ, ಗಾಂಭೀರ್ಯ, ಶ್ರಮ ಕಡಿಮೆಯಾಗುತ್ತಿವೆ. ಉತ್ತಮ ವಿದ್ಯಾರ್ಥಿಗಳಿಗೆ ಕೆಲಸ ಸಿಕ್ಕೇ ಸಿಗುತ್ತದೆ. ಆರಂಭದಲ್ಲಿ ಸಂಬಳ ಕಡಿಮೆ ಇದ್ದರೂ ನಂತರದಲ್ಲಿ ಉತ್ತಮ ಕಂಪನಿಗಳಲ್ಲಿ ಅವಕಾಶ ಸಿಗುತ್ತದೆ' ಎನ್ನುತ್ತಾರೆ ಅವರು.

ಕೆಲವು ಎಂಜಿನಿಯರಿಂಗ್ ಕಾಲೇಜುಗಳಲ್ಲಿ ಕಂಪನಿಗಳು ಸ್ಕಿಲ್ ಲ್ಯಾಬ್‌ಗಳನ್ನು ರೂಪಿಸಿದ್ದು, ಅಲ್ಲಿ ಪದವಿಯ ಜತೆಗೆ ವಿದ್ಯಾರ್ಥಿಗಳಿಗೆ ತರಬೇತಿಯನ್ನೂ ನೀಡಲಾಗುತ್ತದೆ. ಹೀಗಾಗಿ ಅಂಥ ಕಾಲೇಜುಗಳ ಶೇ 85ರಷ್ಟು ಪದವೀಧರರಿಗೆ ಉದ್ಯೋಗ ಸಿಗುತ್ತಿದೆ. ವಿದ್ಯಾರ್ಥಿಗಳು ಮತ್ತು ಕಾಲೇಜುಗಳು ಕಾಲಮಾನದ ಅಗತ್ಯ, ಬೇಡಿಕೆಗಳಿಗೆ ತಕ್ಕಂತೆ ಸಜ್ಜುಗೊಳ್ಳಬೇಕು ಎನ್ನುವುದು ಪರಿಣತರ ಅಭಿಪ್ರಾಯ.

ಎಂಜಿನಿಯರಿಂಗ್ ಪದವೀಧರರಿಗೆ ಉದ್ಯೋಗ ಸಿಗುವುದು ಕಷ್ಟ ಎನ್ನುವುದನ್ನು ಸಾಮಾನ್ಯೀಕರಿಸಲಾಗುವುದಿಲ್ಲ. ಎಂಜಿನಿಯರಿಂಗ್‌ನಲ್ಲಿ ಎಲ್ಲ ವಿಭಾಗಗಳೂ ಬೇಡಿಕೆ ಕಳೆದುಕೊಂಡಿವೆ ಎನ್ನಲೂ ಆಗುವುದಿಲ್ಲ. ನಿರ್ದಿಷ್ಟ ನಗರಗಳ, ನಿರ್ದಿಷ್ಟ ಕಾಲೇಜುಗಳಲ್ಲಿ, ಐಐಟಿಗಳಲ್ಲಿ ಓದಿದವರಿಗೆ ವಿಶೇಷ ಬೇಡಿಕೆ ಇದೆ. ಹಾಗೆಯೇ, ಮಷಿನ್ ಲರ್ನಿಂಗ್, ಡೇಟಾ ಸೈನ್ಸ್, ಕೃತಕ ಬುದ್ಧಿಮತ್ತೆ ಮುಂತಾದ ಕೆಲವು ಕೋರ್ಸ್‌ಗಳನ್ನು ಮಾಡಿದವರಿಗೂ ಬೇಡಿಕೆ ಇದೆ. ಆದರೆ, ಇವುಗಳಲ್ಲಿಯೂ ಹಿಂದಿನ ದಿನಗಳಿಗೆ ಹೋಲಿಸಿದರೆ ಪರಿಸ್ಥಿತಿ ಬದಲಾಗಿದೆ ಎನ್ನುವುದು ಸುಳ್ಳಲ್ಲ. ಐಐಟಿಗಳಲ್ಲಿ ಪದವಿ ಪಡೆದವರ ನಡುವೆ ನಿರುದ್ಯೋಗ ಹೆಚ್ಚುತ್ತಿದೆ ಮತ್ತು ಉದ್ಯೋಗ ಪಡೆದವರ ಸಂಬಳದ ಪ್ಯಾಕೇಜ್ ಕಡಿಮೆ ಆಗುತ್ತಿದೆ ಎಂದು ಮಾಧ್ಯಮಗಳಲ್ಲಿ ವರದಿಯಾಗಿದೆ. ಈ ದಿಸೆಯಲ್ಲಿ ಎಂಜಿನಿಯರಿಂಗ್ ವಿದ್ಯಾರ್ಥಿಗಳು, ಕಾಲೇಜುಗಳು, ಪೋಷಕರು ಜಾಗೃತರಾಗಬೇಕಾದ ಸಮಯ ಇದಾಗಿದೆ ಎಂದು ಪರಿಣತರು ಎಚ್ಚರಿಸಿದ್ದಾರೆ.

ಆಧಾರ: ರಾಜ್ಯ ಸರ್ಕಾರದ ಪ್ರಕಟಣೆ, ಅನ್‌ಸ್ಟಾಪ್ ಟ್ಯಾಲೆಂಟ್ ವರದಿ (2025), ಇಂಟರ್‌ನ್ಯಾಷನಲ್ ಜರ್ನಲ್ ಆಫ್ ರಿಸರ್ಚ್ ಇನ್ ಸೋಷಿಯಲ್ ಸೈನ್ಸ್ ಆ್ಯಂಡ್ ಹ್ಯುಮಾನಿಟೀಸ್ (ಐಜೆಆರ್‌ಎಸ್‌ಎಸ್), ಮಾಧ್ಯಮ ವರದಿಗಳು

ಅನ್‌ಸ್ಟಾಪ್ ಟ್ಯಾಲೆಂಟ್ ವರದಿ

- 2025ರಲ್ಲಿ ದೇಶದ 12 ರಾಜ್ಯಗಳ 30,120 ಮಂದಿ ಪದವೀಧರರನ್ನು ಸಂಪರ್ಕಿಸಿ, ಸಿದ್ಧಪಡಿಸಿರುವ ವರದಿ
- ಸಮೀಕ್ಷೆಗಾಗಿ ಸಂಪರ್ಕಿಸಿರುವವರ ಪೈಕಿ ಶೇ 72ರಷ್ಟು ಮಂದಿ ಎಂಜಿನಿಯರಿಂಗ್ ಪದವೀಧರರು. ಶೇ 16ರಷ್ಟು ಬಿ–ಸ್ಕೂಲ್ ಪದವೀಧರರು ಮತ್ತು ಶೇ 12ರಷ್ಟು ಕಲೆ, ವಿಜ್ಞಾನ, ವಾಣಿಜ್ಯ ವಿಷಯಗಳ ಪದವೀಧರರು ಕೂಡ ಭಾಗಿ
- ವಿವಿಧ ಕ್ಷೇತ್ರಗಳಲ್ಲಿ ತೊಡಗಿರುವ 700 ಉದ್ದಿಮೆಗಳೂ ಸಮೀಕ್ಷೆಯಲ್ಲಿ ಭಾಗಿ

ವರದಿ ಹೇಳುವುದೇನು?

- 2025ರಲ್ಲಿ ಪದವಿ ಪಡೆದಿದ್ದ ಎಂಜಿನಿಯರಿಂಗ್ ಪದವೀಧರರಲ್ಲಿ ಶೇ 83ರಷ್ಟು ಮಂದಿಗೆ ಕೆಲಸದ ಆಫರ್ ಸಿಕ್ಕಿಲ್ಲ
- ಕೆಲಸ ಸಿಕ್ಕಿದವರಿಗೂ ಸಂಬಳ ಕಡಿಮೆ
- ಪದವೀಧರರಲ್ಲಿ ಕೌಶಲಗಳ ಕೊರತೆ. ಶೇ 63ರಷ್ಟು ಕಂಪನಿಗಳು ಈ ಸಮಸ್ಯೆಯನ್ನು ಎದುರಿಸುತ್ತಿವೆ
- ನೇಮಕಾತಿ ಸಂದರ್ಭದಲ್ಲಿ ಕೌಶಲಕ್ಕೆ ಆದ್ಯತೆ ಕೊಟ್ಟು, ನಂತರ ಸಂದರ್ಶನದಲ್ಲಿ ಅವರ ಪ್ರದರ್ಶನ, ಆ ಬಳಿಕ ಅವರ ಶೈಕ್ಷಣಿಕ ಸಾಧನೆಯ ಬಗ್ಗೆ ಗಮನ ಹರಿಸುತ್ತವೆ
- ಇಂಟರ್ನ್‌ಶಿಪ್‌ಗೆ ಸೇರಿದ ಎಂಜಿನಿಯರಿಂಗ್ ಪದವೀಧರರಲ್ಲಿ ನಾಲ್ವರಲ್ಲಿ ಒಬ್ಬರಿಗೆ ಗೌರವ ಧನ ಸಿಗುವುದೇ ಇಲ್ಲ, ನಾಲ್ವರಲ್ಲಿ ಒಬ್ಬರಿಗೆ ₹10 ಸಾವಿರದಷ್ಟು ಸಿಗುತ್ತದೆ

ಏನು ಮಾಡಬಹುದು?

- ಈಗಿನ ತಂತ್ರಜ್ಞಾನ ಮತ್ತು ಮಾರುಕಟ್ಟೆಯಲ್ಲಿರುವ ಬೇಡಿಕೆಗೆ ತಕ್ಕಂತೆ ಎಂಜಿನಿಯರಿಂಗ್ ಪಠ್ಯಗಳ ಪರಿಷ್ಕರಣೆ ನಡೆಯಬೇಕು. ಇದಕ್ಕಾಗಿ ಶಿಕ್ಷಣ ಸಂಸ್ಥೆಗಳು ಉದ್ದಿಮೆಗಳೊಂದಿಗೆ ಪಾಲುದಾರಿಕೆ ಹೊಂದಬೇಕು. ಕೋರ್ಸ್‌ಗಳನ್ನು ರೂಪಿಸುವುದಕ್ಕಾಗಿ ಹಾಗೂ ಆಗಬೇಕಿರುವ ಬದಲಾವಣೆಗಳು ಮತ್ತು ಅಗತ್ಯವಿರುವ ಕೌಶಲಗಳ ಬಗ್ಗೆ ಸಲಹೆ ಸೂಚನೆಗಳನ್ನು ನೀಡಲು ಉದ್ದಿಮೆ ತಜ್ಞರನ್ನೊಳಗೊಂಡ ಸಲಹಾ ಸಮಿತಿಗಳನ್ನು ವಿಶ್ವವಿದ್ಯಾಲಯಗಳು ರಚಿಸಬೇಕು
- ವಿದ್ಯಾರ್ಥಿಗಳು/ಪದವೀಧರರಿಗೆ ಉದ್ದಿಮೆ ಹಾಗೂ ಮಾಡುವ ಕೆಲಸದ ಬಗ್ಗೆ ಪ್ರಾಯೋಗಿಕ ಅನುಭವ ಸಿಗುವಂತೆ ಮಾಡಬೇಕು. ಗೌರವಧನ ಸಹಿತ ಇಂಟರ್ನ್‌ಶಿಪ್‌ಗೆ ಅವಕಾಶ ಕಲ್ಪಿಸುವುದಕ್ಕಾಗಿ ಶಿಕ್ಷಣ ಸಂಸ್ಥೆಗಳು ವಿವಿಧ ಕಂಪನಿಗಳು, ನವೋದ್ಯಮಗಳು ಮತ್ತು ಸಂಶೋಧನಾ ಪ್ರಯೋಗಾಲಯಗಳ ಜೊತೆ ಪಾಲುದಾರಿಕೆ ಹೊಂದಬೇಕು
- ಈಗಿರುವ ಕೋರ್ಸ್‌ಗಳ ಜೊತೆಗೆ ಕೃತಕ ಬುದ್ಧಿಮತ್ತೆ, ಡೇಟಾ ಸೈನ್ಸ್ ಮತ್ತು ಸೈಬರ್ ಭದ್ರತೆ ಮುಂತಾದ ಕ್ಷೇತ್ರಗಳಿಗೆ ಸಂಬಂಧಿಸಿದ ತಾಂತ್ರಿಕ, ಪ್ರೋಗ್ರಾಮಿಂಗ್ ಮತ್ತು ಕೌಶಲಗಳ ತರಬೇತಿಗಳನ್ನು ಸೇರ್ಪಡೆಗೊಳಿಸಲು ವಿವಿಗಳು ಕ್ರಮ ಕೈಗೊಳ್ಳಬೇಕು
- ಎಂಜಿನಿಯರಿಂಗ್ ಕೋರ್ಸ್ ಮಾಡುತ್ತಿರುವಾಗಲೇ ವಿದ್ಯಾರ್ಥಿಗಳಿಗೆ ವೃತ್ತಿ ಮಾರ್ಗದರ್ಶನ ಕೌನ್ಸೆಲಿಂಗ್ ನಡೆಸಬೇಕು. ವಿವಿಗಳು ರಚನಾತ್ಮಕವಾದ ವೃತ್ತಿ ಮಾರ್ಗದರ್ಶನ ಕಾರ್ಯಕ್ರಮಗಳನ್ನು ರೂಪಿಸಬೇಕು
- ಹೊಸ ಪದವೀಧರರನ್ನು ನೇಮಕ ಮಾಡಿಕೊಳ್ಳುವ ಕಂಪನಿಗಳಿಗೆ ಸರ್ಕಾರ ಪ್ರೋತ್ಸಾಹ ಧನ ನೀಡಬೇಕು
- ಉದ್ಯೋಗಾವಕಾಶಗಳು ನಗರ ಕೇಂದ್ರಿತವಾಗುವುದನ್ನು ತಪ್ಪಿಸಲು ಸಣ್ಣ ನಗರಗಳಲ್ಲಿ ಉದ್ಯೋಗ ಸೃಷ್ಟಿಸಲು, ಮೂಲಸೌಕರ್ಯ ಅಭಿವೃದ್ಧಿ ಪಡಿಸಲು, ಉದ್ದಿಮೆಗಳಿಗೆ ಪ್ರೋತ್ಸಾಹ ನೀಡಲು ಸರ್ಕಾರ ಕ್ರಮ ವಹಿಸಬೇಕು

ರಾಷ್ಟ್ರೀಯ

ಕರೂರು ಕಾಲ್ತುಳಿತ: ಸಿಬಿಐ ಮುಂದೆ ವಿಜಯ್ ಹಾಜರು

ಪ್ರಜಾವಾಣಿ ವಾರ್ತೆ/ ಪಿಟಿಐ

ವಿಜಯ್

ನವದೆಹಲಿ: ಕರೂರು ಕಾಲ್ತುಳಿತ ದುರಂತ ಪ್ರಕರಣಕ್ಕೆ ಸಂಬಂಧಿಸಿದಂತೆ ತಮಿಳಗ ವೆಟ್ರಿ ಕಳಗಂ (ಟಿವಿಕೆ) ಪಕ್ಷದ ಅಧ್ಯಕ್ಷ, ನಟ ವಿಜಯ್ ಅವರು ಸೋಮವಾರ ಕೇಂದ್ರೀಯ ತನಿಖಾ ಸಮಿತಿಯ (ಸಿಬಿಐ) ಕೇಂದ್ರ ಕಚೇರಿಯಲ್ಲಿ ಏಳು ತಾಸು ವಿಚಾರಣೆಗೆ ಒಳಗಾದರು.

ಕಳೆದ ಸೆಪ್ಟೆಂಬರ್ 27ರಂದು ತಮಿಳುನಾಡಿನ ಕರೂರು ಜಿಲ್ಲೆಯಲ್ಲಿ ನಟ ವಿಜಯ್ ಅವರು ಭಾಗವಹಿಸಿದ್ದ ರ‍್ಯಾಲಿಯಲ್ಲಿ ಕಾಲ್ತುಳಿತ ಉಂಟಾಗಿ 41 ಮಂದಿ ಮೃತಪಟ್ಟು, 60 ಮಂದಿ ಗಾಯಗೊಂಡಿದ್ದರು.

ಕಾಲ್ತುಳಿತ ನಡೆದ ದಿನ ತಾವು ಸ್ಥಳಕ್ಕೆ ತಡವಾಗಿ ಬಂದದ್ದು ಏಕೆ, ಅವಘಡದ ಸುಳಿವು ಇದ್ದರೂ ಯಾವುದೇ ಕ್ರಮ ಕೈಗೊಳ್ಳಲಿಲ್ಲವೇಕೆ ಎನ್ನುವುದೂ ಸೇರಿ ಕೆಲವು ಪ್ರಶ್ನೆಗಳನ್ನು ಸಿಬಿಐ ಅಧಿಕಾರಿಗಳು ಕೇಳಿದರು ಎಂದು ಮೂಲಗಳು ತಿಳಿಸಿವೆ.

ತಾವಾಗಲೀ, ತಮ್ಮ ಪಕ್ಷವಾಗಲೀ ಕಾಲ್ತುಳಿತ ಪ್ರಕರಣಕ್ಕೆ ಕಾರಣವಲ್ಲ; ಜಿಲ್ಲಾಡಳಿತವೇ ಅದಕ್ಕೆ ಹೊಣೆ ಎಂದು ವಿಜಯ್ ಹೇಳಿದರೆಂದೂ ಹೇಳಿವೆ.

ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಟಿವಿಕೆಯ ಹಲವು ಪದಾಧಿಕಾರಿಗಳನ್ನು ಸಿಬಿಐ ಅಧಿಕಾರಿಗಳು ಈಗಾಗಲೇ ಪ್ರಶ್ನಿಸಿದ್ದಾರೆ. ದೋಷಾರೋಪ ಪಟ್ಟಿ ಸಲ್ಲಿಕೆಗೂ ಮುನ್ನ ಸಿಬಿಐ ಅಧಿಕಾರಿಗಳು ವಿಜಯ್ ಅವರನ್ನು ಪ್ರಶ್ನಿಸಿದ್ದಾರೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ತಮಿಳುನಾಡು ಸರ್ಕಾರ ರಚಿಸಿದ್ದ ಎಸ್‌ಐಟಿ ಪ್ರಕರಣದ ತನಿಖೆ ನಡೆಸುತ್ತಿತ್ತು. ಸುಪ್ರೀಂ ಕೋರ್ಟ್ ಪ್ರಕರಣವನ್ನು ಸಿಬಿಐ ತನಿಖೆಗೆ ಒಪ್ಪಿಸಿ ಆದೇಶ ಹೊರಡಿಸಿತ್ತು.

'ಸುಪ್ರೀಂ' ಮೆಟ್ಟಿಲೇರಿದ 'ಜನ ನಾಯಗನ್' ನಿರ್ಮಾಪಕ

ನವದೆಹಲಿ (ಪಿಟಿಐ): ನಟ ವಿಜಯ್ ಅಭಿನಯದ 'ಜನ ನಾಯಗನ್' ಸಿನಿಮಾಕ್ಕೆ ಸೆನ್ಸಾರ್ ಪ್ರಮಾಣಪತ್ರ ನೀಡುವಂತೆ ನಿರ್ದೇಶಿಸಿ ಏಕಸದಸ್ಯ ಪೀಠ ನೀಡಿದ್ದ ಆದೇಶಕ್ಕೆ ತಡೆ ನೀಡಿರುವ ಮದ್ರಾಸ್ ಹೈಕೋರ್ಟ್‌ನ ಮಧ್ಯಂತರ ಆದೇಶವನ್ನು ಪ್ರಶ್ನಿಸಿ ಸಿನಿಮಾ ನಿರ್ಮಾಣ ಸಂಸ್ಥೆ ಸುಪ್ರೀಂ ಕೋರ್ಟ್ ಮೆಟ್ಟಿಲೇರಿದೆ.

'ಜನ ನಾಯಗನ್' ಸಿನಿಮಾಕ್ಕೆ ತಕ್ಷಣ ಸೆನ್ಸಾರ್ ಪ್ರಮಾಣಪತ್ರ ನೀಡಬೇಕು ಎಂದು ಚಲನಚಿತ್ರ ಪ್ರಮಾಣೀಕರಣ ಮಂಡಳಿಗೆ (ಸಿಬಿಎಫ್‌ಸಿ) ಏಕಸದಸ್ಯ ಪೀಠ ನಿರ್ದೇಶನ ನೀಡಿತ್ತು. ಈ ಆದೇಶಕ್ಕೆ ಮದ್ರಾಸ್ ಹೈಕೋರ್ಟ್ ಜನವರಿ 9ರಂದು ತಡೆ ನೀಡಿತ್ತು.

ಇದನ್ನು ಪ್ರಶ್ನಿಸಿ ಕೆವಿಎನ್ ಪ್ರೊಡಕ್ಷನ್ಸ್ ಎಲ್‌ಎಲ್‌ಪಿ ಸಂಸ್ಥೆ ಸುಪ್ರೀಂ ಕೋರ್ಟ್‌ಗೆ ಸೋಮವಾರ ಮೇಲ್ಮನವಿ ಸಲ್ಲಿಸಿದೆ.

ಸಿನಿಮಾ ಬಿಡುಗಡೆಗೆ ಜನವರಿ 9ರಂದು ದಿನ ನಿಗದಿಯಾಗಿತ್ತು. ಆದರೆ ಪ್ರಮಾಣಪತ್ರ ಸಿಗದ ಕಾರಣ ಸಿನಿಮಾ ಬಿಡುಗಡೆ ವಿಳಂಬಗೊಂಡಿದೆ. ರಾಜಕೀಯ ಪ್ರವೇಶಿಸಿರುವ ವಿಜಯ್ ಅವರ ಕೊನೆಯ ಸಿನಿಮಾ ಎಂದು ಹೇಳಲಾಗುತ್ತಿರುವ ಕಾರಣ ಈ ಸಿನಿಮಾ ಅಭಿಮಾನಿಗಳಲ್ಲಿ ಭಾರಿ ನಿರೀಕ್ಷೆ ಮೂಡಿಸಿದೆ.

ಜೈಲಿನಲ್ಲಿ 25 ವರ್ಷ ಲೆಕ್ಕ ಹಾಕಿದ್ದು ಹೇಗೆ?: 'ಸುಪ್ರೀಂ'

ನವದೆಹಲಿ (ಪಿಟಿಐ): '2005ರಿಂದ ಜೈಲಿನಲ್ಲಿದ್ದುಕೊಂಡು 25 ವರ್ಷ ಕಳೆಯಿತು ಎಂದು ಲೆಕ್ಕ ಹಾಕಿದ್ದು ಹೇಗೆ' ಎಂದು ಭೂಗತ ಪಾತಕಿ ಅಬು ಸಲೇಂನನ್ನು ಸುಪ್ರೀಂ ಕೋರ್ಟ್ ಸೋಮವಾರ ಪ್ರಶ್ನಿಸಿತು.

1993ರಲ್ಲಿ ಮುಂಬೈನಲ್ಲಿ ನಡೆದ ಸರಣಿ ಬಾಂಬ್ ದಾಳಿ ಪ್ರಕರಣದ ದೋಷಿ ಸಲೇಂನನ್ನು ಸುದೀರ್ಘ ಕಾನೂನು ಹೋರಾಟದ ಬಳಿಕ ಪೋರ್ಚುಗಲ್ 2005ರ ನವೆಂಬರ್ 11ರಂದು ಭಾರತಕ್ಕೆ ಗಡೀಪಾರು ಮಾಡಿತ್ತು.

ಅರ್ಜಿ ವಿಚಾರಣೆ ವೇಳೆ ಸಲೇಂ, 'ಪೋರ್ಚುಗಲ್ ಸರ್ಕಾರಕ್ಕೆ ಭಾರತ ನೀಡಿರುವ ವಾಗ್ದಾನದ ಪ್ರಕಾರ, 25 ವರ್ಷಕ್ಕಿಂತ ಹೆಚ್ಚಿನ ಜೈಲು ಶಿಕ್ಷೆಯನ್ನು ವಿಧಿಸುವಂತಿಲ್ಲ. ಭಾರತದಲ್ಲಿ ಈಗಾಗಲೇ 25 ವರ್ಷ ಜೈಲುವಾಸವನ್ನು ಮುಗಿಸಿದ್ದೇನೆ' ಎಂದು ನ್ಯಾಯಾಲಯಕ್ಕೆ ತಿಳಿಸಿದ.

ಇದಕ್ಕೆ ಪ್ರತಿಕ್ರಿಯಿಸಿದ ನ್ಯಾಯಮೂರ್ತಿಗಳಾದ ವಿಕ್ರಮ್ ನಾಥ್ ಮತ್ತು ಸಂದೀಪ್ ಮೆಹ್ತಾ, '2005ರಿಂದ 25 ವರ್ಷಗಳನ್ನು ಲೆಕ್ಕಾಚಾರ ಹಾಕಿದ್ದು ಹೇಗೆ' ಎಂದು ಸಲೇಂ ಪರ ವಕೀಲರನ್ನು ಪ್ರಶ್ನಿಸಿದರು. ಬಳಿಕ ಸಲೇಂ ಪರ ವಕೀಲರ ವಾದವನ್ನು ಆಲಿಸಿ, ವಿಚಾರಣೆಯನ್ನು ಫೆಬ್ರುವರಿ 9ಕ್ಕೆ ಮುಂದೂಡಿದರು.

'ಸಲೇಂ ಜೈಲುವಾಸದ 25 ವರ್ಷ ಇನ್ನೂ ಮುಗಿದಿಲ್ಲ' ಎಂದು ಕಳೆದ ವರ್ಷ ಜುಲೈನಲ್ಲಿ ಬಾಂಬೆ ಹೈಕೋರ್ಟ್ ಹೇಳಿತ್ತು. ಇದನ್ನು ಪ್ರಶ್ನಿಸಿ ಸಲೇಂ ಸುಪ್ರೀಂ ಕೋರ್ಟ್ ಮೆಟ್ಟಿಲೇರಿದ್ದ.

ಪದಬಂಧ 6283

ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಉಪಾಯದಿಂದ ಹಾಕಿದ ಬುನಾದಿ (4)
3.ಆದಾಯ ಮತ್ತು ಖರ್ಚು (4)
5.ಬಿಡದಿ ಬಳಿಯಿರುವ ಹೆಂಡತಿ (3)
6.ಮರಳ ಹತ್ತಿರ ಹುಚ್ಚನಿದ್ದಾನಲ್ಲಾ! (3)
7.ಗಮನವಿಟ್ಟಾಗ ಗಂಭೀರವಾದುದು ಕಂಡಿದೆ (3)
9.ತನಯ ಹೀಗೆ ಮಗ್ನ! (3)
11.ಸಮಾನಾಗಿಲ್ಲದಿರುವುದು (3)
12.ಕನ್ನಡಿಗನ ಹಿಡಿದಿರುವ ಲೆನ್ಸು (3)
14.ಈತ ಮೃತ್ಯುದೇವತೆಯ ಮಗ (4)
15.ಗಣಪತಿಯ ಇನ್ನೊಂದು ಹೆಸರು (4)

ಮೇಲಿಂದ ಕೆಳಕ್ಕೆ
1.ಒಪ್ಪವಾಗಿ ಹಾಡಿನ ಧಾಟಿಯಿಂದ ಮೂಡಿರುವ ಪ್ರೀತಿ (4)
2.ಮಯನಿಲ್ಲಿ ಉಲ್ಟಾ ನಿಂತಿದ್ದಾನೆ (2)
3.ಆದಿವಾಸಿಯಲ್ಲಿನ ಮೂಲ! (2)
4.ಯಮನ ಹತ್ತಿರ ಕಾಣಿಸಿರುವ ಜೋಡಿ (3)
6.ಈತ ಕಟ್ಟಾ ಸಂಪ್ರದಾಯವಂತ (4)
8.ಹೊಸ ಹೂವಿದು (4)
10.ಬಲು ರುಚಿಯಾದ ಅಡುಗೆ (4)
11.ದಾಯಾದಿಯ ಬೀಳ್ಕೊಡುವಿಕೆ! (3)
12.ಮನೆತನದವರು ನೀಡಿರುವ ಓಟು (2)
13.ವಿರಮಿಸುತ್ತಿದ್ದಾಗ ಮೂಡಿರುವ ಸೂರ್ಯ (2)



6282ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 5.ಗಬ್ಬಿಲ 7.ಕನ್ನಡಿ 8.ಗುಲಾಬಿ 9.ಕರ 10.ಹರ್ಡೇಕರ್ ಮಂಜಪ್ಪ 11.ಬತ್ತಿ 13.ಡವಾಲಿ 16.ದಾವಣಿ 17.ಲಾಲಸ

ಮೇಲಿಂದ ಕೆಳಕ್ಕೆ: 1.ಅಂಗಡಿ 2.ಅಲಗು 3.ತಕಲಿ 4.ಗಡಿಯಾರ 6.ಅಂಬಿಗರಚೌಡಯ್ಯ 9.ಕಪ್ಪ 10.ಹತ್ತಿ 11.ಬಲಿದಾನ 12.ಕಳಲೆ 14.ಲಿಲಾವು 15.ವಾಸನೆ

ಸುಡೊಕು 6667

ಆಡುವುದು ಹೀಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

	7	9			3		8	
				8				9
8	1		2	6		7		
	8			2		1		5
	9	2	8		5			
5				3			2	
9		7	5					6
	5			7		9	4	
	3		6		1		7	2

6666ಸುಡೊಕು

9	2	8	3	6	7	4	5	1
3	6	4	9	1	5	8	7	2
5	7	1	2	4	8	9	6	3
7	4	2	6	3	9	1	8	5
8	3	9	5	7	1	2	4	6
1	5	6	8	2	4	3	9	7
2	8	5	1	9	6	7	3	4
4	9	3	7	5	2	6	1	8
6	1	7	4	8	3	5	2	9

ನಿಜವಾದ ನಾಯಕತ್ವವೆಂದರೆ ...

ನುಡಿ ಬೆಳಗು

ದೀಪಾ ಹಿರೇಗುತ್ತಿ

1979ರ ಹೊತ್ತು. ಭಾರತ ಉಪಗ್ರಹ ಉಡಾವಣೆಯಲ್ಲಿ ಅಂಬೆಗಾಲಿಡುತ್ತಿದ್ದ ಕಾಲ. ಡಾ. ಅಬ್ದುಲ್ ಕಲಾಂ ಎಸ್‌ಎಲ್‌ವಿ3 ಎಂಬ ಉಪಗ್ರಹ ಉಡಾವಣಾ ವಾಹನ ಯೋಜನೆಯ ನಿರ್ದೇಶಕರಾಗಿದ್ದರು. ಡಾ. ಸತೀಶ್ ಧವನ್ ಇಸ್ರೊ ಅಧ್ಯಕ್ಷರಾಗಿದ್ದರು. ರೋಹಿಣಿ ಉಪಗ್ರಹವನ್ನು ಈ ಉಡಾವಣಾ ವಾಹನದ ಪರೀಕ್ಷಾರ್ಥವಾಗಿ ಉಡಾವಣೆ ಮಾಡಬೇಕಿತ್ತು. ಸಂಪನ್ಮೂಲ ಕಡಿಮೆಯಿತ್ತು. ಈ ಯೋಜನೆಯನ್ನು ಯಶಸ್ವಿಯಾಗಿಸಬೇಕೆಂದು ನಮ್ಮ ವಿಜ್ಞಾನಿಗಳು ಹಗಲೂ ರಾತ್ರಿ ದುಡಿಯುತ್ತಿದ್ದರು. ಉಡಾವಣೆಯ ದಿನ ಹತ್ತಿರ ಬಂತು. ದೇಶದ ಜನರೆಲ್ಲರ ನಿರೀಕ್ಷೆಗಳು ನಮ್ಮ ವಿಜ್ಞಾನಿಗಳ ಮೇಲಿದ್ದವು. ಆದರೆ ಉಡಾವಣೆಯಾದ ಕೆಲವೇ ನಿಮಿಷಗಳಲ್ಲಿ ಸಣ್ಣ ತಾಂತ್ರಿಕ ದೋಷದಿಂದ ವರ್ಷ ವರ್ಷಗಳ ಶ್ರಮ ಮಣ್ಣುಪಾಲಾಯಿತು.

ಈ ಆಗು ಹೋಗುಗಳನ್ನು ವೀಕ್ಷಿಸುತ್ತಿದ್ದ ವಿಜ್ಞಾನಿಗಳು ಮೌನವಾದರು. ವಾತಾವರಣ ಬಿಗುವಾಯಿತು. ಕಿರಿಯ ವಿಜ್ಞಾನಿಗಳು ಟೀಕೆಗೆ ಹೆದರಿದರು. ಸಾರ್ವಜನಿಕವಾಗಿ ಅವಮಾನವಾಗುತ್ತದಲ್ಲ ಎಂದು ನೊಂದರು. ಹೊರಗೆ ಮಾಧ್ಯಮದವರು ಕಾಯುತ್ತಿದ್ದರು. ಯೋಜನಾ ನಿರ್ದೇಶಕರಾಗಿದ್ದ ಕಲಾಂ ಮಾಧ್ಯಮದೊಂದಿಗೆ ಮಾತಾಡಬೇಕಿತ್ತು. ಆದರೆ ಡಾ. ಧವನ್ ಮುಂದೆ ಹೋಗಿ ತಾವೇ ಮಾಧ್ಯಮದವರೊಂದಿಗೆ ಹೇಳಿದರು, 'ಈ ಯೋಜನೆ ವಿಫಲವಾಗಿದೆ. ಆದರೆ ನಾನು ನನ್ನ ವಿಜ್ಞಾನಿಗಳನ್ನು, ಸಿಬ್ಬಂದಿಯನ್ನು ಬೆಂಬಲಿಸುತ್ತೇನೆ. ಮುಂದಿನ ವರ್ಷ ಅವರು ಖಂಡಿತ ಯಶಸ್ವಿಯಾಗುತ್ತಾರೆ.'

ಅವರು ಯಾರ ಹೆಸರನ್ನೂ ಹೇಳಲಿಲ್ಲ, ತಮ್ಮನ್ನು ತಾವು ಸಮರ್ಥಿಸಿಕೊಳ್ಳಲೂ ಇಲ್ಲ. ಆದರೆ ಅವರ ತಂಡದ ಮೇಲಿನ ಭಾರ ಅದೆಷ್ಟೋ ಕಡಿಮೆಯಾಗಿತ್ತು. ಮತ್ತೆ ಉತ್ಸಾಹದಿಂದ ತಂಡ ಕೆಲಸ ಮುಂದುವರಿಸಿತು. 1980ರ ಜುಲೈ 18, ಒಂದು ವರ್ಷದ ನಂತರ ಅದೇ ತಂಡ ಎಸ್‌ಎಲ್‌ವಿ3ಯಲ್ಲಿ ರೋಹಿಣಿ ಉಪಗ್ರಹವನ್ನಿಟ್ಟು ಭೂಮಿಯ ಕಕ್ಷೆಗೆ ಯಶಸ್ವಿಯಾಗಿ ಕಳಿಸಿತು. ಸ್ವಂತ ರಾಕೆಟ್ ಉಪಯೋಗಿಸಿಕೊಂಡು ಉಪಗ್ರಹ ಉಡಾವಣೆ ಮಾಡಿದ ಆರನೇ ದೇಶವಾಗಿ ಭಾರತ ಇತಿಹಾಸ ಬರೆಯಿತು. ಮಾಧ್ಯಮದವರು ಬಂದರು. ಆದರೆ ಈ ಸಲ ಡಾ.ಧವನ್ ಮಾಡಿದ್ದು ಒಬ್ಬ ನಿಜವಾದ ನಾಯಕ ಮಾಡುವಂತಹ ಕೆಲಸವಾಗಿತ್ತು. ತಮ್ಮನ್ನು ಸುತ್ತುವರಿದ ಮಾಧ್ಯಮದವರಿಂದ ಎರಡು ಹೆಜ್ಜೆ ಹಿಂದೆ ಸರಿದ ಡಾ.ಧವನ್, ಡಾ.ಕಲಾಂ ಅವರ ಹತ್ತಿರ ಈ ಪತ್ರಿಕಾಗೋಷ್ಠಿ ನಡೆಸಿ ಸಂಭ್ರಮದ ಸುದ್ದಿಯನ್ನು ದೇಶದೊಂದಿಗೆ ಹಂಚಿಕೊಳ್ಳಲು ಹೇಳಿದರು.

ಸೋಲಿನ ಹೊಣೆಯನ್ನು ಏಕಾಂಗಿಯಾಗಿ ಹೊತ್ತ ಡಾ.ಸತೀಶ್ ಧವನ್ ಗೆಲುವಿನ ಶ್ರೇಯಸ್ಸನ್ನು ಎಲ್ಲರೊಂದಿಗೂ ಹಂಚಿಕೊಂಡರು. ನಾಯಕತ್ವ ಅಂದರೆ ಅಧಿಕಾರ ಚಲಾಯಿಸುವುದಲ್ಲ, ಅದೊಂದು ಜವಾಬ್ದಾರಿ. ನಾಯಕತ್ವ ಎಂದರೆ ಯಾವಾಗಲೂ ಹೊಗಳಿಕೆಯನ್ನೇ ನಿರೀಕ್ಷಿಸುವುದಲ್ಲ. ಬದಲಾಗಿ ಟೀಕೆಗಳನ್ನೂ ತೆರೆದ ಮನಸ್ಸಿನಿಂದ ಸ್ವೀಕರಿಸುವುದು. ಮಹಾನ್ ನಾಯಕರು ಬೇರೆಯವರನ್ನು ತುಳಿಯುವುದರಿಂದಲ್ಲ, ಎತ್ತಿ ಹಿಡಿಯುವುದರಿಂದ ರೂಪುಗೊಳ್ಳುತ್ತಾರೆ ಎಂಬುದನ್ನು ತೋರಿಸಿದರು ಧವನ್. ಡಾ.ಕಲಾಂ ಈ ಘಟನೆಯನ್ನು ಆಗಾಗ ನೆನಪಿಸಿಕೊಳ್ಳುತ್ತಿದ್ದರು.

ಸೋಲನ್ನು ಘನತೆಯಿಂದ ಸ್ವೀಕರಿಸಿ ತಂಡದ ಸ್ಥೈರ್ಯ ಕುಸಿಯದಂತೆ ಮಾಡಿ ಗೆಲುವು ಬಂದಾಗ ತಂಡಕ್ಕೆ ಸಮಪಾಲು ಕೊಟ್ಟು ಅವರನ್ನು ಮತ್ತಷ್ಟು ಸಾಧಿಸಲು ಉತ್ತೇಜಿಸುವ ಇಂತಹ ನಾಯಕತ್ವದ ಗುಣಗಳು ಸಮಾಜದ ಎಲ್ಲ ಕಡೆಗೂ ಬೇಕಾಗಿದೆ. ಸೋತರೆ ಬೇರೆಯವರ ಮೇಲೆ ಗೂಬೆ ಕೂರಿಸುವ ಮತ್ತು ಗೆದ್ದಾಗ ತಮ್ಮಿಂದಲೇ ಎಂದು ಅಹಂಕಾರ ಪಡುವ ನಾಯಕರಿಂದ ಎರಡನೇ ಹಂತದ ನಾಯಕತ್ವ ಬೆಳೆಯುವುದಿಲ್ಲ. ಸಹಾನುಭೂತಿಯ ವಿಶಿಷ್ಟ ಗುಣದಿಂದ ನಾಯಕರು ಸಾಧಾರಣ ತಂಡವನ್ನೂ ಮತ್ತಷ್ಟು ಕೆಲಸ ಮಾಡಲು ಪ್ರೇರೇಪಿಸಿ ಇತಿಹಾಸ ನಿರ್ಮಿಸುವಂತೆ ಮಾಡಬಲ್ಲರು. ಅದ್ಭುತಗಳನ್ನು ಸಾಧಿಸಬಲ್ಲರು.

ಗುಂಡಣ್ಣ

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

13 ಜನವರಿ 2026 ಮಂಗಳವಾರ, ಶ್ರೀ ವಿಶ್ವಾವಸು ನಾಮ ಸಂವತ್ಸರ ದಕ್ಷಿಣಾಯನ ಹೇಮಂತ ಋತು ತಿಥಿ: ಪೌಷ ಕೃಷ್ಣ ದಶಮಿ ಗಂ 15-18 ನಕ್ಷತ್ರ: ವಿಶಾಖ ಗಂ 24-07 ಯೋಗ: ಶೂಲ ಗಂ. 19-05 ಕರಣ: ವಿಷ್ಟಿ ಗಂ. 15-18 ನಂತರ ಬವ ಗಂ 28-37 ಧನು ಮಾಸದ 29 ನೇ ದಿನ. ಮಳೆ ನಕ್ಷತ್ರ : ಉತ್ತರಾಷಾಢ 1 ನೇ ಪಾದ. ರಾಹುಕಾಲ : ಮಧ್ಯಾಹ್ನ 03-00 -04-30 ಸೂರ್ಯೋದಯ : 07-01 ಸೂರ್ಯಾಸ್ತ : 06-18, ಮುಸ್ಲಿಂ ದಿನಾಂಕ : 23 ರಜಬ್, ಅದೃಷ್ಟ ಸಂಖ್ಯೆ : 11, 4

ಮೇಷ: ಕುಟುಂಬದಲ್ಲಿ ಊಹೆಗೂ ನಿಲುಕದ ಜವಾಬ್ದಾರಿಗಳನ್ನು ನಿಭಾಯಿಸಬೇಕಾಗುತ್ತದೆ. ಹಿರಿಯರಿಂದ ಹಿತವಾಕ್ಯಗಳು, ಮಾರ್ಗದರ್ಶನ ಸಿಗಲಿವೆ. ಆಯ್ಕೆ ಸರಿಯಾಗಿದ್ದು ಕೆಲಸಗಳನ್ನು ಮಾಡಿ ಮುಗಿಸುವಿರಿ.

ವೃಷಭ: ಆರ್ಥಿಕ ನಿರ್ವಹಣೆಗಾಗಿ ಕೆಲವು ಖರ್ಚುಗಳನ್ನು ನಿಲ್ಲಿಸುವಿರಿ. ಆದರೆ ಆರೋಗ್ಯದ ವಿಚಾರದಲ್ಲಿ ಖರ್ಚುವೆಚ್ಚದ ಲೆಕ್ಕಾಚಾರವನ್ನು ಮಾಡುವುದು ಸಮಂಜಸವಲ್ಲ. ಧೈರ್ಯ ಜತೆಗಿರಲಿದೆ.

ಮಿಥುನ: ಇನ್ನೊಬ್ಬರೊಂದಿಗೆ ಹೋಲಿಕೆ ಮಾಡಿಕೊಂಡು ಜೀವನ ನಡೆಸುವುದು ಸರಿಯಲ್ಲ. ಹೋಟೆಲ್ ಅಥವಾ ಸಮಾರಂಭಗಳಲ್ಲಿ ಊಟ ಮಾಡುವಾಗ ಎಚ್ಚರದಿಂದಿರಿ. ಉಲ್ಲಾಸವಿರುವುದು.

ಕರ್ಕಾಟಕ: ಬಹಳ ದಿನಗಳಿಂದ ಕಾಡುತ್ತಿದ್ದ ಭೂಮಿಗೆ ಸಂಬಂಧಿಸಿದ ಸಮಸ್ಯೆಯೊಂದು ನಿರಾತಂಕವಾಗಿ ಬಗೆಹರಿಯುವುದು. ಕುಟುಂಬದವರಿಂದ ಉತ್ತಮ ಪ್ರತಿಕ್ರಿಯೆಗಳನ್ನು ಕಾಣುವಿರಿ.

ಸಿಂಹ: ಪಾಲಿಗೆ ಬಂದದ್ದನ್ನು ಸಂತೋಷದಿಂದ ಸ್ವೀಕರಿಸಿದಲ್ಲಿ ಅಸ್ತಿತ್ವ ಮತ್ತು ನೆಮ್ಮದಿ ಉಳಿದುಕೊಳ್ಳುವುದು. ಉದ್ಯೋಗದಲ್ಲಿ ಸಿಗುವಂಥ ವರ್ಗಾವಣೆಯ ಅವಕಾಶಗಳನ್ನು ಬಿಟ್ಟುಕೊಳ್ಳಬೇಡಿ.

ಕನ್ಯಾ: ಕೋರ್ಟು ಕಚೇರಿ ದೂರುಗಳಂಥ ಗೊಡವೆಗಳಿಗೆ ಪ್ರಾಮುಖ್ಯತೆ ಕೊಡುವುದು ಸರಿಯಲ್ಲ. ಕಾಡುವ ಸಮಸ್ಯಾಸರಪಳಿ ಹೆಚ್ಚಿನ ಶ್ರಮವಿಲ್ಲದೆ ಪರಿಹಾರವಾಗುವುದು.

ತುಲಾ: ವಿದ್ಯಾರ್ಥಿಗಳಿಗೆ ಪರಿಶ್ರಮಕ್ಕೆ ತಕ್ಕ ಫಲ ಸಿಗದಿದ್ದಲ್ಲಿ ದುಡುಕು ನಿರ್ಧಾರ ತೆಗೆದುಕೊಳ್ಳಬೇಡಿ. ಏಕಾಂಗಿಯಾಗಿರುವವರಿಗೆ ಸಂಗಾತಿ ಸಿಗುವ ಲಕ್ಷಣಗಳಿವೆ. ನವಚೈತನ್ಯ ಇರಲಿದೆ.

ವೃಶ್ಚಿಕ: ಕೆಲಸ ಕಾರ್ಯದಲ್ಲಿ ಸಮಾನ ಮನಸ್ಕರು ಸಿಗುವುದರಿಂದ ವ್ಯವಸ್ಥಿತವಾಗಿ ಮಾತುಕತೆ ನಡೆದು ಕಾರ್ಯಭಾರ ಸುಗಮವಾಗುತ್ತದೆ. ಕೆಲಸಗಳನ್ನು ಮುಂದೂಡುವುದು ಒಳ್ಳೆಯದಲ್ಲ.

ಧನು: ಶ್ವಾಸಕೋಶಕ್ಕೆ ಸಂಬಂಧಪಟ್ಟ ಕಾಯಿಲೆಗಳ ಲಕ್ಷಣಗಳು ಗಮನಕ್ಕೆ ಬಂದಲ್ಲಿ, ತಕ್ಷಣವೇ ವೈದ್ಯರನ್ನು ಸಂಪರ್ಕಿಸಿ. ಸುತ್ತಮುತ್ತಲಲ್ಲಿ ನಡೆದ ಘಟನೆಗಳಿಂದ ಮನಸ್ಸು ಪರಿವರ್ತನೆಯಾಗಲಿದೆ.

ಮಕರ: ಸಾಕಷ್ಟು ಸಮಯ ದೊರಕುವಂತೆ ಯೋಜನೆಗಳನ್ನು ಹಾಕಿಕೊಳ್ಳುವುದು ಉತ್ತಮ. ಸಾಕುಪ್ರಾಣಿಯ ಆರೋಗ್ಯದಲ್ಲಿ ಚೇತರಿಕೆ ಕಂಡುಬರುತ್ತದೆ. ಪುಸ್ತಕ ಓದುವ ಹವ್ಯಾಸ ಹುಟ್ಟಲಿದೆ.

ಕುಂಭ: ಉತ್ಪಾದಿಸಿದ ವಸ್ತುಗಳಿಗೆ ಪ್ರಾಂತ್ಯದಲ್ಲಿ ಬೇಡಿಕೆ ದೊರೆತು ಸಂತೋಷಕರ ವಾತಾವರಣ ನಿಮ್ಮದಾಗಲಿದೆ. ಮನೆಯಲ್ಲಿ ದೇವತಾ ಕಾರ್ಯಗಳನ್ನು ನಡೆಸಲು ಮುಂದಾಗುವಿರಿ.

ಮೀನ: ಹಲವು ಕಾರ್ಯದಲ್ಲಿ ದೇಹಾಯಾಸ ಮಾತ್ರ ಸಿಗುವುದು. ಕೆಲವು ದಿನಗಳ ಕಿರು ಪ್ರಯಾಣದ ನಂತರ ಮನೆಗೆ ಹಿಂತಿರುಗಿ ಬರುವಿರಿ. ಬಹಳ ದಿನಗಳ ನಿರೀಕ್ಷಿತ ಬೆಳವಣಿಗೆ ಸಂಭವಿಸಬಹುದು.

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ:	25,683
ಇಂದಿನ ಅಂತ್ಯ:	25,790
ದಿನದ ಗರಿಷ್ಠ:	25,813
	106

ಮೊಟ್ಟೆ ಧಾರಣೆ (ಎನ್‌ಇಸಿಸಿ)

ಬೆಂಗಳೂರು	
100 ಕ್ಕೆ	₹605
12 ಕ್ಕೆ	₹90
ಮೈಸೂರು: 100 ಕ್ಕೆ	₹605

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹182.50
ಆರ್‌ಎಸ್‌ಎಸ್-5	₹177.50
ಗುಡ್ ಲಾಟ್	₹166

ರಾಮನಗರ ರೇಷ್ಮೆಗೂಡು

ಮಿಶ್ರತಳಿ(ಸಿ.ಬಿ)	₹333-745
ದ್ವಿತಳಿ (ಬಿ.ವಿ)	₹267-899

ಮುದ್ರೆಮನೆ ಕಾಫಿ

ಎಪಿ	₹26250
ಎಸಿ	₹14420
ಆರ್‌ಪಿ	₹17000
ಆರ್‌ಸಿ	₹10150

ಮುಂಬೈ ಖಾದ್ಯ ತೈಲ (ಆವರಣದಲ್ಲಿ ಕಳೆದ ವಹಿವಾಟಿನ ದರ) (10 ಕೆ.ಜಿಗೆ)

ಶೇಂಗಾ (ರಿಫೈನ್ಡ್)	₹1630 (1605)
ಸೋಯಾ (ರಿಫೈನ್ಡ್)	₹1315 (1315)
ಸೂರ್ಯಕಾಂತಿ (ರಿಫೈನ್ಡ್)	₹1545 (1535)
ಪಾಮೋಲಿನ್	₹1265 (1275)

ಅಡಿಕೆ ಧಾರಣೆ

ಕುಮಟಾ	
ಚಾಲಿ	46099-51019
ಚಿಪ್ಪು	29999-38099
ಕೋಕ	13569-32089
ಫ್ಯಾಕ್ಟರಿ	9569-32089
ಹೊಸಚಾಲಿ	40090-46451
ಪುತ್ತೂರು	
ಕೋಕ	20000-35500
ಹೊಸತು	26000-46000
ಹಳತು	45000-54500
ಸಾಗರ	
ಬಿಳಿಗೋಟು	15200-37815
ಚಾಲಿ	35100-46199
ಕೋಕ	17214-33989
ಕೆಂಪುಗೋಟು	32670-42099
ರಾಶಿ	41199-56870
ಸಿಪ್ಪೆಗೋಟು	8299-25700
ಶಿವಮೊಗ್ಗ	
ಬೆಟ್ಟೆ	53410-67299
ಗೊರಬಲು	19010-41696
ರಾಶಿ	45299-57109
ಸರಕು	70009-91640
ಶಿರಸಿ	
ಬೆಟ್ಟೆ	30599-54009
ಬಿಳಿಗೋಟು	26199-43599
ಚಾಲಿ	47181-51808
ಕೆಂಪುಗೋಟು	25699-38299
ರಾಶಿ	53609-58009
ಯಲ್ಲಾಪುರ	
ಆಪಿ	63279-77777
ಬಿಳಿಗೋಟು	17699-33345
ಕೋಕ	11089-31899
ಹಳೆಚಾಲಿ	38495-50809
ಹೊಸಚಾಲಿ	35699-43511
ಕೆಂಪುಗೋಟು	21899-39409
ರಾಶಿ	52399-63170
ತಟ್ಟಿಬೆಟ್ಟೆ	37510-54379

ಟಿಸಿಎಸ್ ಲಾಭ ಶೇ 14ರಷ್ಟು ಇಳಿಕೆ

ಒಂದು ಬಾರಿಯ ವೆಚ್ಚದಿಂದಾಗಿ ಲಾಭ ಕಡಿಮೆ

• ಪ್ರತಿ ಷೇರಿಗೆ ₹57 ಲಾಭಾಂಶ ಘೋಷಣೆ

ಮುಂಬೈ (ಪಿಟಿಐ): ದೇಶದ ಅತಿದೊಡ್ಡ ಐ.ಟಿ. ಸೇವಾ ಕಂಪನಿಯಾದ ಟಾಟಾ ಕನ್ಸಲ್ಟೆನ್ಸಿ ಸರ್ವಿಸಸ್ (ಟಿಸಿಎಸ್) ಡಿಸೆಂಬರ್ ತ್ರೈಮಾಸಿಕದ ಹಣಕಾಸಿನ ಫಲಿತಾಂಶವನ್ನು ಸೋಮವಾರ ಪ್ರಕಟಿಸಿದ್ದು, ಕಂಪನಿಯ ಲಾಭವು ಶೇ 13.91ರಷ್ಟು ಕುಸಿದಿದೆ.

ಕಂಪನಿಯು ಈ ತ್ರೈಮಾಸಿಕ ದಲ್ಲಿ ₹10,657 ಕೋಟಿ ಲಾಭ ಗಳಿಸಿದೆ. ಹೊಸ ಕಾರ್ಮಿಕ ಸಂಹಿತೆಗಳು ಕಂಪನಿಯ ಲಾಭದ ಮೇಲೆ ಪರಿಣಾಮ ಉಂಟು ಮಾಡಿವೆ. ಈ ಪರಿಣಾಮ ಒಂದು ಬಾರಿಗೆ ಮಾತ್ರ ಇರಲಿದೆ ಎಂದು ಕಂಪನಿ ಸ್ಪಷ್ಟಪಡಿಸಿದೆ.

ಕಂಪನಿಯ ಆಡಳಿತ ಮಂಡಳಿಯು ಈ ಬಾರಿ ತನ್ನ ಷೇರುದಾರರಿಗೆ ಪ್ರತಿ ಷೇರಿಗೆ ₹57 ಲಾಭಾಂಶ ನೀಡಲು ಶಿಫಾರಸು ಮಾಡಿದೆ. ಇದರಲ್ಲಿ ₹46 ವಿಶೇಷ ಲಾಭಾಂಶವೂ ಸೇರಿದೆ.

ಹಿಂದಿನ ವರ್ಷದ ಇದೇ ತ್ರೈಮಾಸಿಕದಲ್ಲಿ ₹12,380 ಕೋಟಿ ಲಾಭ ಗಳಿಸಿತ್ತು. ಈ ವರ್ಷದ ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ಕಂಪನಿಯು ₹12,075 ಕೋಟಿ ಲಾಭ ಗಳಿಸಿತ್ತು.

ಹೊಸ ಕಾರ್ಮಿಕ ಸಂಹಿತೆಗಳನ್ನು ಜಾರಿಗೆ ತಂದ ಪರಿಣಾಮವಾಗಿ ಕಂಪನಿಯು ₹2,128 ಕೋಟಿಯ 'ಶಾಸನಾತ್ಮಕ ವೆಚ್ಚವನ್ನು' ಭರಿಸ ಬೇಕಾಯಿತು. ಒಂದು ಬಾರಿಯ ಈ ವೆಚ್ಚ ಇಲ್ಲವಾಗಿದ್ದರೆ ಕಂಪನಿಯ ಲಾಭವು ಶೇ 8.5ರಷ್ಟು ಹೆಚ್ಚಳ ಕಂಡು, ₹13,438 ಕೋಟಿಗೆ ತಲುಪಿರುತ್ತಿತ್ತು ಎಂದು ಪ್ರಕಟಣೆ ತಿಳಿಸಿದೆ.

ದೇಶದ ಖಾಸಗಿ ರಂಗದಲ್ಲಿ ಅತಿಹೆಚ್ಚಿನ ಸಂಖ್ಯೆಯಲ್ಲಿ ಉದ್ಯೋಗ ನೀಡಿರುವ ಕಂಪನಿಗಳ ಪೈಕಿ ಒಂದಾಗಿರುವ ಟಿಸಿಎಸ್ ನೌಕರರ ಸಂಖ್ಯೆಯು ಡಿಸೆಂಬರ್ ತ್ರೈಮಾಸಿಕದಲ್ಲಿ 11,151ರಷ್ಟು ಕಡಿಮೆ ಆಗಿದೆ. ಕಂಪನಿಯಲ್ಲಿ ಈಗ 5.82 ಲಕ್ಷ ನೌಕರರು ಇದ್ದಾರೆ.

ಡಿಸೆಂಬರ್ ತ್ರೈಮಾಸಿಕದಲ್ಲಿ ಕಂಪನಿಯ ವರಮಾನವು ₹67,087 ಕೋಟಿಗೆ ಹೆಚ್ಚಳ ಕಂಡಿದೆ, ಪ್ರಮಾಣದ ಲೆಕ್ಕದಲ್ಲಿ ಶೇ 4.86ರಷ್ಟು ಹೆಚ್ಚಾಗಿದೆ.

ಕಂಪನಿಯು ಕೃತಕ ಬುದ್ಧಿಮತ್ತೆ ವಿಭಾಗದಿಂದ ಗಳಿಸುವ ವರಮಾನವು ವಾರ್ಷಿಕ ಲೆಕ್ಕದಲ್ಲಿ ಶೇ 17ರಷ್ಟು ಹೆಚ್ಚಳ ಕಂಡಿದೆ. ಅಷ್ಟೇ ಅಲ್ಲ, ಜಾಗತಿಕ ಮಟ್ಟದಲ್ಲಿ ಸವಾಲುಗಳು ಮುಂದುವರಿದಿದ್ದರೂ, ಕಂಪನಿಯು ಉತ್ತರ ಅಮೆರಿಕದಿಂದ ಗಳಿಸುವ ವರಮಾನವು ಕಳೆದ ವರ್ಷದ ಇದೇ ಅವಧಿಗೆ ಹೋಲಿಸಿದರೆ ಶೇ 1.3ರಷ್ಟು ಹೆಚ್ಚಾಗಿದೆ.

ಎಚ್‌ಸಿಎಲ್ ಲಾಭ ಇಳಿಕೆ

ನವದೆಹಲಿ (ಪಿಟಿಐ): ಐ.ಟಿ. ಸೇವಾ ವಲಯದ ಪ್ರಮುಖ ಕಂಪನಿಯಾಗಿರುವ ಎಚ್‌ಸಿಎಲ್ ಟೆಕ್ ಡಿಸೆಂಬರ್ ತ್ರೈಮಾಸಿಕದಲ್ಲಿ ₹4,076 ಕೋಟಿ ಲಾಭ ಗಳಿಸಿದ್ದು, ಲಾಭದ ಪ್ರಮಾಣವು ಶೇ 11.2ರಷ್ಟು ಕಡಿಮೆ ಆಗಿದೆ.

ಕಂಪನಿಯ ಕಾರ್ಯಾಚರಣೆ ವರಮಾನವು ಶೇ 13.3ರಷ್ಟು ಹೆಚ್ಚಾಗಿ ₹33,872 ಕೋಟಿಗೆ ತಲುಪಿದೆ. ಕಾರ್ಯಾಚರಣೆ ವರಮಾನವು ಹಿಂದಿನ ವರ್ಷದ ಇದೇ ತ್ರೈಮಾಸಿಕದಲ್ಲಿ ₹29,890 ಕೋಟಿ ಇತ್ತು. ಕಂಪನಿಯು ಪ್ರತಿ ಷೇರಿಗೆ ₹12 ಲಾಭಾಂಶ ಘೋಷಿಸಿದೆ.

ಖಗೋಳ ವಿಜ್ಞಾನಿ ಶ್ರೀನಿವಾಸ ಕುಲಕರ್ಣಿಗೆ ರಾಯಲ್ ಸೊಸೈಟಿಯ ಚಿನ್ನದ ಪದಕ

ಪ್ರಜಾವಾಣಿ ವಾರ್ತೆ/ಪಿಟಿಐ

ಲಂಡನ್ (ಪಿಟಿಐ): ಅಮೆರಿಕದಲ್ಲಿ ನೆಲಸಿರುವ ಭಾರತ ಮೂಲದ ಖಗೋಳ ವಿಜ್ಞಾನಿ ಪ್ರೊಫೆಸರ್ ಶ್ರೀನಿವಾಸ ಕುಲಕರ್ಣಿ ಅವರಿಗೆ ಇಂಗ್ಲೆಂಡ್‌ನ ರಾಯಲ್ ಅಸ್ಟ್ರೊನಾಮಿಕಲ್ ಸೊಸೈಟಿಯ (ಆರ್‌ಎಎಸ್) ಚಿನ್ನದ ಪದಕ ಲಭಿಸಿದೆ.

ಶ್ರೀನಿವಾಸ ಕುಲಕರ್ಣಿ

ಖಗೋಳ ವಿಜ್ಞಾನಕ್ಕೆ ಸಂಬಂಧಿಸಿದಂತೆ ಹಲವು ಮಹತ್ವದ ಸಂಶೋಧನೆಗಳನ್ನು ಕೈಗೊಂಡಿರುವ ಶ್ರೀನಿವಾಸ್ ಕುಲಕರ್ಣಿ ಅವರು, ರಾಜ್ಯಸಭಾ ಸದಸ್ಯೆ ಸುಧಾ ಮೂರ್ತಿ ಅವರ ಸಹೋದರ.

ಮಹಾರಾಷ್ಟ್ರದಲ್ಲಿ ಜನಿಸಿರುವ ಕುಲಕರ್ಣಿ ಅವರು, ಕ್ಯಾಲಿಫೋರ್ನಿಯಾ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯಲ್ಲಿ ಪ್ರಾಧ್ಯಾಪಕರಾಗಿದ್ದಾರೆ. ಖಗೋಳ ವಸ್ತುಗಳು ಮತ್ತು ಗಾಮಾ ಕಿರಣಗಳ ಸ್ವಯಂಸ್ಫೋಟ ಸೇರಿದಂತೆ ಖಗೋಳ ಕ್ಷೇತ್ರಕ್ಕೆ ಸಂಬಂಧಿಸಿದ ಹಲವು ವಿಷಯಗಳ ಬಗ್ಗೆ ಸಂಶೋಧನೆ ಕೈಗೊಂಡು ಯಶಸ್ವಿಯಾಗಿದ್ದಾರೆ.

'ಖಗೋಳ ಭೌತಶಾಸ್ತ್ರದಲ್ಲಿ ಕ್ಷಣಿಕ ಬಹುತರಂಗಾಂತರದ ಕುರಿತಾದ ಸುಸ್ಥಿರ, ನವೀನ ಮತ್ತು ಅಭೂತಪೂರ್ವ ಅನ್ವೇಷಣೆ'ಯ ಕೊಡುಗೆಯನ್ನು ಚಿನ್ನದ ಪದಕ ಆಯ್ಕೆಗೆ ಪರಿಗಣಿಸಲಾಗಿದೆ.

1984ರಿಂದಲೂ ರಾಯಲ್ ಸಂಸ್ಥೆಯು ಚಿನ್ನದ ಪದಕವನ್ನು ನೀಡುತ್ತಿದೆ. ಖ್ಯಾತ ವಿಜ್ಞಾನಿಗಳಾದ ಸ್ಟೀಫನ್ ಹಾಕಿಂಗ್, ಜಾಸ್‌ಲಿನ್ ಬೆಲ್ ಬರ್ನೆಲ್, ಆಲ್ಬರ್ಟ್ ಐನ್‌ಸ್ಟೀನ್ ಮತ್ತು ಎಡ್ವಿನ್ ಹಬಲ್ ಅವರು ಈ ಪದಕ ಪಡೆದಿದ್ದಾರೆ. ಇವರ ಸಾಲಿಗೆ ಕುಲಕರ್ಣಿ ಸೇರಿದ್ದಾರೆ.

'ಈ ಪದಕವನ್ನು ಪಡೆದ ಖ್ಯಾತನಾಮರ ಪಟ್ಟಿಗೆ ನನ್ನನ್ನು ಸೇರಿಸಿರುವುದು ನನಗೆ ಆಶ್ಚರ್ಯವಾಗಿದೆ. ಇದು ನನ್ನ ಜೀವನದಲ್ಲಿ ಅತ್ಯಂತ ಖುಷಿಕೊಡುವಂಥದ್ದು' ಎಂದು ಕುಲಕರ್ಣಿ ಅವರು ಸಂತಸ ಹಂಚಿಕೊಂಡಿದ್ದಾರೆ.

2024ರಲ್ಲಿ ಖಗೋಳ ಕ್ಷೇತ್ರದ ಅನ್ವೇಷಣೆಗಾಗಿ 'ಶಾ' ಪುರಸ್ಕಾರವನ್ನೂ (ಹಾಂಕಾಂಗ್ ನೀಡುವ ಪ್ರಶಸ್ತಿ) ಕುಲಕರ್ಣಿ ಪಡೆದಿದ್ದಾರೆ. ಖಗೋಳ ವಿಜ್ಞಾನದ ಸಾಧನಗಳ ಅನ್ವೇಷಕರಾಗಿರುವ ಕುಲಕರ್ಣಿ ಅವರು, ಈವರೆಗೆ 10 ಸಾಧನಗಳನ್ನು ರೂಪಿಸಿದ್ದಾರೆ.

ಸದ್ಯ ಕುಲಕರ್ಣಿ ಅವರು ನಾಸಾದ ನೇರಳಾತೀತ ಕಿರಣಗಳ ಅನ್ವೇಷಣೆಗೆ ಸಂಬಂಧಿಸಿದ (ಯುವಿಎಕ್ಸ್) ಸಂಶೋಧನೆಯ ಕಾರ್ಯಯೋಜನೆಯ ಭಾಗವಾಗಿದ್ದಾರೆ. ನೇರಳಾತೀತ ಕಿರಣಗಳ ಕುರಿತಾದ ಅತ್ಯಂತ ಸೂಕ್ಷ್ಮ ಸಂಶೋಧನೆ ಇದಾಗಿದೆ.

ಕುಲಕರ್ಣಿ ಅವರು 1978ರಲ್ಲಿ ದೆಹಲಿಯ ಭಾರತೀಯ ತಾಂತ್ರಿಕ ಸಂಸ್ಥೆಯಲ್ಲಿ (ಐಐಟಿ) ಸ್ನಾತಕೋತ್ತರ ಪದವಿ, 1983ರಲ್ಲಿ ಬಾರ್ಕ್‌ಲೆಯಲ್ಲಿ ಪಿಎಚ್.ಡಿ ಪದವಿ ಪಡೆದಿದ್ದಾರೆ.

ಮಾರುಕಟ್ಟೆಗೆ ಹೊಸ ಹುಣಸೆ

ಪ್ರಜಾವಾಣಿ ವಾರ್ತೆ

ತುಮಕೂರು: ಬೇಸಿಗೆ ಆರಂಭಕ್ಕೂ ಮುನ್ನವೇ ನಗರದ ಎಪಿಎಂಸಿ ಮಾರುಕಟ್ಟೆಗೆ ಹೊಸ ಹುಣಸೆ ಹಣ್ಣಿನ ಆವಕ ಶುರುವಾಗಿದೆ. ಸೋಮವಾರ ಬಂದ ಮೊದಲ ಹಣ್ಣಿಗೆ ಪೂಜೆ ಸಲ್ಲಿಸಿ ಹರಾಜು ಪ್ರಕ್ರಿಯೆ ಆರಂಭಿಸಲಾಯಿತು. ಸ್ಥಳೀಯ ವರ್ತಕರ ಮೂಲಕ ತಮಿಳುನಾಡಿನ ವರ್ತಕರು ಮತ್ತು ಮಧ್ಯವರ್ತಿಗಳು ಹುಣಸೆ ಖರೀದಿಸಿದರು.

ಮೊದಲ ದಿನವೇ ಒಂದು ಟನ್ ಹಣ್ಣು ಆವಕವಾಗಿದ್ದು, ಕ್ವಿಂಟಲ್ ಹುಣಸೆ ₹15 ಸಾವಿರದಿಂದ ₹26 ಸಾವಿರದವರೆಗೂ ಮಾರಾಟವಾಯಿತು. ಆರಂಭದಲ್ಲೇ ಉತ್ತಮ ಬೆಲೆ ಸಿಕ್ಕಿರುವುದು ರೈತರ ನಿರೀಕ್ಷೆ ಹೆಚ್ಚಿಸಿದೆ.

ಈ ಬಾರಿ ಇಳುವರಿ ಸಾಧಾರಣ ಪ್ರಮಾಣದಲ್ಲಿರುವ ಕಾರಣ ಉತ್ತಮ ಬೆಲೆ ಸಿಗಬಹುದು ಎಂಬುದು ವರ್ತಕರ ಅಂದಾಜು.

ಹಿಂದಿನ ವರ್ಷ ಕ್ವಿಂಟಲ್ ಹುಣಸೆ ₹10 ಸಾವಿರದಿಂದ ₹35 ಸಾವಿರದವರೆಗೆ ಮಾರಾಟವಾಗಿತ್ತು. ಒಮ್ಮೆ ₹40 ಸಾವಿರದ ಗಡಿಯನ್ನೂ ತಲುಪಿತ್ತು. ಕಳೆದ ಸಾಲಿನಲ್ಲಿ ಇಳುವರಿ ಕುಂಠಿತಗೊಂಡಿದ್ದರಿಂದ ಉತ್ತಮ ಬೆಲೆ ಸಿಕ್ಕಿತ್ತು.

ಫೆಬ್ರುವರಿ ವೇಳೆಗೆ ಆವಕ ಹೆಚ್ಚಾಗಲಿದ್ದು, ಮಾರ್ಚ್‌ಗೆ ಬಿರುಸು ಪಡೆದುಕೊಳ್ಳಲಿದೆ. ಹಣ್ಣಿನಲ್ಲಿ ತೇವಾಂಶ ಕಡಿಮೆ ಇದ್ದು, ಗುಣಮಟ್ಟ ಚೆನ್ನಾಗಿದ್ದರೆ ಉತ್ತಮ ಬೆಲೆ ಸಿಗಬಹುದು. ಹಿಂದಿನ ವರ್ಷದಷ್ಟೇ ಆವಕ ಆದರೆ ಉತ್ತಮ ಬೆಲೆ ಸಿಗಬಹುದು. ಆವಕ, ಬೇಡಿಕೆ ಮೇಲೆ ಧಾರಣೆ ನಿರ್ಧಾರವಾಗಲಿದೆ ಎಂದು ಮಾರುಕಟ್ಟೆ ಮೂಲಗಳು ತಿಳಿಸಿವೆ.

ಪ್ರಮುಖ ಹುಣಸೆ ಮಾರುಕಟ್ಟೆಗಳಲ್ಲಿ ಒಂದಾಗಿರುವ ತುಮಕೂರು ಎಪಿಎಂಸಿಯಲ್ಲಿ ನಡೆಯುವ ಹರಾಜಿಗೆ ನೆರೆಯ ತಮಿಳುನಾಡು, ಆಂಧ್ರ ಪ್ರದೇಶದಿಂದಲೇ ಹೆಚ್ಚಿನ ಸಂಖ್ಯೆಯ ವರ್ತಕರು, ದಲ್ಲಾಳಿಗಳು ಹರಾಜು ಪ್ರಕ್ರಿಯೆಯಲ್ಲಿ ಭಾಗವಹಿಸುತ್ತಾರೆ.

ಪ್ರತಿ ವರ್ಷ ಸಾಮಾನ್ಯವಾಗಿ ಫೆಬ್ರುವರಿ ವೇಳೆಗೆ ಹುಣಸೆ ಹಣ್ಣು ಮಾರುಕಟ್ಟೆಗೆ ಬರಲು ಶುರುವಾಗುತ್ತೆ. ಬೇಸಿಗೆ ಬಿಸಿಲು ಹೆಚ್ಚಾದಂತೆ ಆವಕ ಹೆಚ್ಚುತ್ತಾ ಹೋಗುತ್ತದೆ. ಈ ವರ್ಷ ಚಳಿಗಾಲದೊಂದಿಗೆ ಹುಣಸೆ ಮಾರುಕಟ್ಟೆಗೆ ಕಾಲಿಟ್ಟಿದೆ ಎಂದು ಎಪಿಎಂಸಿ ವರ್ತಕ ದೇವೇಂದ್ರಪ್ಪ ಹೇಳಿದರು.

ಬೆಳ್ಳಿ ಕೆ.ಜಿಗೆ ₹15 ಸಾವಿರ ಏರಿಕೆ

ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಸೋಮವಾರ ನಡೆದ ವಹಿವಾಟಿನಲ್ಲಿ ಚಿನ್ನ ಮತ್ತು ಬೆಳ್ಳಿ ಧಾರಣೆಯು ಸಾರ್ವಕಾಲಿಕ ಗರಿಷ್ಠ ಮಟ್ಟಕ್ಕೆ ಏರಿಕೆಯಾಗಿದೆ.

ಬೆಳ್ಳಿ ದರವು ಕೆ.ಜಿಗೆ ₹15 ಸಾವಿರದಷ್ಟು ಹೆಚ್ಚಳವಾಗಿ, ₹2.65 ಲಕ್ಷದಂತೆ ಮಾರಾಟವಾಗಿದೆ. 10 ಗ್ರಾಂ ಚಿನ್ನದ (ಶೇ 99.9ರಷ್ಟು ಪರಿಶುದ್ಧತೆ) ದರವು ₹2,900ರಷ್ಟು ಏರಿಕೆಯಾಗಿ, ₹1,44,600ಕ್ಕೆ ತಲುಪಿದೆ ಎಂದು ಅಖಿಲ ಭಾರತ ಸರಾಫ್ ಅಸೋಸಿಯೇಷನ್ ತಿಳಿಸಿದೆ.

ಜಾಗತಿಕ ಮಾರುಕಟ್ಟೆಯಲ್ಲಿ ಹೆಚ್ಚಿದ ರಾಜಕೀಯ ಬಿಕ್ಕಟ್ಟು ಮತ್ತು ಅಮೆರಿಕದ ಫೆಡರಲ್ ರಿಸರ್ವ್ ಬಡ್ಡಿ ದರ ಕಡಿತ ಮಾಡುವ ನಿರೀಕ್ಷೆಯು ಚಿನ್ನ ಮತ್ತು ಬೆಳ್ಳಿ ಧಾರಣೆ ಏರಿಕೆಗೆ ಕಾರಣ ಎಂದು ಮಾರುಕಟ್ಟೆ ತಜ್ಞರು ತಿಳಿಸಿದ್ದಾರೆ.

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ಲಿಂಗೈಕ್ಯ

ಬಿ.ಆರ್. ಪ್ರಸಾದ್
ಪರಿಚಯ ಫೌಂಡೇಶನ್ ಸಂಸ್ಥಾಪಕರಾದ ಶ್ರೀ ಬಿ ಆರ್ ಪ್ರಸಾದ್ ರವರು 01-01-2026 ಶನಿವಾರ ಲಿಂಗೈಕ್ಯರಾದರೆಂದು ತಿಳಿಸಲು ವಿಷಾದಿಸುತ್ತೇವೆ.
ದುಃಖ ತಪ್ತ ಶಿಷ್ಯ ವೃಂದ

ಭಾರತವೇ ಮುಖ್ಯ: ಗೊರ್

ಒಂದನೇ ಪುಟದಿಂದ...

'ನೈಜ ಸ್ನೇಹಿತರು ಮಾತ್ರ ಭಿನ್ನಾಭಿಪ್ರಾಯ ಹೊಂದಬಹುದು, ಕೊನೆಗೆ ತಮ್ಮ ಭಿನ್ನಾಭಿಪ್ರಾಯವನ್ನು ಅವರು ಬಗೆಹರಿಸಿಕೊಳ್ಳುತ್ತಾರೆ' ಎಂದು ಭಾರತಕ್ಕೆ ಬಂದಿಳಿದ ಬಳಿಕ ತಮ್ಮ ಮೊದಲ ಭಾಷಣದಲ್ಲಿ ಮೋದಿ–ಟ್ರಂಪ್ ನಡುವಿನ ಸ್ನೇಹವನ್ನು ಉಲ್ಲೇಖಿಸಿ ಅಭಿಪ್ರಾಯಪಟ್ಟಿದ್ದಾರೆ.

'ಭಾರತವು ಜಗತ್ತಿನ ದೊಡ್ಡ ದೇಶವಾಗಿದೆ. ಆದ್ದರಿಂದ ಒಪ್ಪಂದವನ್ನು ಲಗುಬಗೆಯಲ್ಲಿ ಮುಗಿಸುವುದು ಸಾಧ್ಯವಿಲ್ಲ. ಆದರೂ, ಆದಷ್ಟು ಬೇಗ ಒಪ್ಪಂದಕ್ಕೆ ಬರುವ ಯತ್ನಗಳನ್ನು ನಡೆಸಿದ್ದೇವೆ' ಎಂದು ಸೋಮವಾರ ಇಲ್ಲಿನ ರಾಯಭಾರ ಕಚೇರಿಯ ನೌಕರರನ್ನು ಉದ್ದೇಶಿಸಿ ಹೇಳಿದ್ದಾರೆ.

'ನಮ್ಮ ಸಂಬಂಧದಲ್ಲಿ ವ್ಯಾಪಾರವೇ ಅತಿ ಮುಖ್ಯವಾದ ವಿಚಾರ. ಇನ್ನಿತರ ಕ್ಷೇತ್ರಗಳಾದ ಭದ್ರತೆ, ಭಯೋತ್ಪಾದನೆ ನಿಗ್ರಹ, ಇಂಧನ, ತಂತ್ರಜ್ಞಾನ, ಶಿಕ್ಷಣ ಹಾಗೂ ಆರೋಗ್ಯ ಕ್ಷೇತ್ರದಲ್ಲಿಯೂ ನಾವು ಜೊತೆಗೂಡಿ ಕೆಲಸ ಮಾಡಲಿದ್ದೇವೆ' ಎಂದರು.

ಅಧ್ಯಕ್ಷ ಟ್ರಂಪ್ ಅವರೊಂದಿಗೆ ನಾನು ಇಡೀ ವಿಶ್ವದಾದ್ಯಂತ ಪ್ರಯಾಣ ಬೆಳೆಸಿದ್ದೇನೆ. ಪ್ರಧಾನಿ ಮೋದಿ ಅವರೊಂದಿಗೆ ಟ್ರಂಪ್ ಸ್ನೇಹವು ನೈಜ ವಾದದ್ದು ಎಂದು ಎಂದಿದ್ದಾರೆ.

ಭಾರತವು 'ಫಾಕ್ಸ್ ಸಿಲಿಕಾ ಒಕ್ಕೂಟ'ದ ಸದಸ್ಯ ರಾಷ್ಟ್ರವಾಗಿ ಸೇರ್ಪಡೆಯಾಗಲಿದೆ ಎಂದು ಘೋಷಿಸಿದ್ದಾರೆ.

'ಈ ರಾಷ್ಟ್ರಗಳ ಗುಂಪಿಗೆ ಸೇರಲು ಭಾರತವನ್ನು ಆಹ್ವಾನಿಸುತ್ತಿರುವುದಕ್ಕೆ ನನಗೆ ತುಂಬಾ ಖುಷಿಯಾಗುತ್ತಿದೆ. ಭಾರತವು ಮುಂದಿನ ತಿಂಗಳ ವೇಳೆಗೆ ಪೂರ್ಣ ಪ್ರಮಾಣದ ಸದಸ್ಯತ್ವ ಪಡೆಯಲಿದೆ' ಎಂದು ಇದೇ ವೇಳೆ ತಿಳಿಸಿದ್ದಾರೆ.

ಸುರಕ್ಷಿತ, ಸಮೃದ್ಧ ಹಾಗೂ ನಾವೀನ್ಯ ಆಧಾರಿತ ಸಿಲಿಕಾನ್ ಪೂರೈಕೆ ಸರಪಳಿಯನ್ನು ದೃಢಪಡಿಸುವ ನಿಟ್ಟಿನಲ್ಲಿ ಅಮೆರಿಕ ನೇತೃತ್ವದಲ್ಲಿ 'ಫಾಕ್ಸ್ ಸಿಲಿಕಾ ಒಕ್ಕೂಟ' ಸ್ಥಾಪನೆಯಾಗಿದೆ.

ರಾಜ್ಯದ ಪಿಎಚ್‌ಸಿಗಳಿಗೆ ಸೌರ ವಿದ್ಯುತ್: ಸೆಲ್ಕೋ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮುಂದಿನ ಮೂರು ವರ್ಷದಲ್ಲಿ ರಾಜ್ಯದ ಎಲ್ಲ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಸೌರಫಲಕಗಳನ್ನು ಅಳವಡಿಸುವ ಗುರಿ ಹೊಂದಲಾಗಿದೆ' ಎಂದು ಸೆಲ್ಕೋ ಫೌಂಡೇಷನ್‌ನ ಸಿಇಒ ಹರೀಶ್ ಹಂದೆ ಹೇಳಿದರು.

ಕಳೆದ ಮೂರು ವರ್ಷಗಳಲ್ಲಿ ರಾಯಚೂರು, ಕಲಬುರಗಿ, ಯಾದಗಿರಿ, ಬೆಳಗಾವಿ ಸೇರಿದಂತೆ ಹಲವು ಜಿಲ್ಲೆಗಳ 2,500 ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ (ಪಿಎಚ್‌ಸಿ) ಸೌರಫಲಕ ಅಳವಡಿಸಲಾಗಿದೆ. ಅಲ್ಲಿ ಉತ್ಪಾದನೆಯಾದ ವಿದ್ಯುತ್‌ನಿಂದಲೇ ಆಸ್ಪತ್ರೆಯ ಹಲವು ಕೆಲಸಗಳು ನಡೆಯುತ್ತಿವೆ. ಈ ಸೌರಫಲಕಗಳನ್ನು ಅಳವಡಿಸಲು ಐಕಿಯಾ ಮತ್ತು ರಾಜ್ಯ ಸರ್ಕಾರ ಹಣಕಾಸಿನ ನೆರವು ನೀಡಿದೆ ಎಂದು ಸೋಮವಾರ ಹೇಳಿದರು.

ರಾಜ್ಯದ 10 ಲಕ್ಷ ಮಹಿಳೆಯರು ಸೆಲ್ಕೋ ಫೌಂಡೇಷನ್ ನೆರವಿನಿಂದ ಸ್ಥಾಪಿಸಿದ ಸೌರ ವಿದ್ಯುತ್ ಅನ್ನು ಹೊಲಿಗೆ ಯಂತ್ರ, ಖಾರದ ಪುಡಿ ಮಾಡುವ ಯಂತ್ರ, ರೊಟ್ಟಿ ಯಂತ್ರಗಳಿಗೆ ಬಳಸುತ್ತಿದ್ದಾರೆ. ಇದು ಅವರ ಜೀವನೋಪಾಯಕ್ಕೆ ನೆರವಾಗಿದೆ ಎಂದರು.

ಇದೇ ವೇಳೆ ಅಂತರರಾಷ್ಟ್ರೀಯ ಸೌರ ಒಕ್ಕೂಟವು (ಐಎಸ್‌ಎ) ಸೆಲ್ಕೋ ಫೌಂಡೇಷನ್ ಜೊತೆಗೆ ಒಪ್ಪಂದ ಮಾಡಿಕೊಂಡಿತು.

ಅಂತರರಾಷ್ಟ್ರೀಯ ಸೌರ ಒಕ್ಕೂಟದ ಮಹಾನಿರ್ದೇಶಕ ಆಶಿಶ್ ಖನ್ನಾ ಮತ್ತು ಸೆಲ್ಕೋ ಫೌಂಡೇಷನ್‌ನ ಸಿಇಒ ಹರೀಶ್ ಹಂದೆ ಅವರು ಒಪ್ಪಂದ ಪತ್ರವನ್ನು ವಿನಿಮಯ ಮಾಡಿಕೊಂಡರು

ಈ ಒಪ್ಪಂದದ ಪ್ರಕಾರ, ಮುಂದಿನ ಎರಡು ವರ್ಷಗಳಲ್ಲಿ ಆಫ್ರಿಕಾದ 30 ದೇಶಗಳಲ್ಲಿನ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಸೌರ ಫಲಕ ಅಳವಡಿಸುವುದು, ಸೌರ ಫಲಕ ಅಳವಡಿಕೆಗೆ ಹಣಕಾಸಿನ ನೆರವು ಸಿಗುವಂತೆ ಮಾಡಲಾಗುತ್ತದೆ ಎಂದು ಹಂದೆ ತಿಳಿಸಿದರು. 'ಇಲ್ಲಿ ನಾವು ನಡೆಸುವ ಕಾರ್ಯಕ್ರಮಗಳನ್ನು ಅಲ್ಲಿಯೂ ನಡೆಸಲಾಗುತ್ತದೆ' ಎಂದರು.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

ಉದ್ಯೋಗಾವಕಾಶ

General

ಕಂಪನಿಗಳಿಗೆ ಬೇಕಾಗಿದ್ದಾರೆ: ಟಯೋಟಾ, ಬ್ರಿಟಾನಿಯಾ, ಟಾಟಾಮೋಟಾರ್ಸ್, TVSಗಳಿಗೆ SSLC,PUC, Degree, Diploma, ITIನವರು 18,500/- 60,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿದೆ. 9035075571.

Part-Time Jobs

ಮನೆಯಿಂದಲೇ ಕೆಲಸಗಳಿಗೆ ಮಹಿಳೆಯರಿಗೆ, ವಿದ್ಯಾರ್ಥಿಗಳಿಗೆ, ಪುರುಷರಿಗೆ ಕರ್ನಾಟಕದಾದ್ಯಂತ ಕಂಪನಿಗಳಿಗೆ ಆದ್ಯತೆ. 20,000/- 35,000/- ಸಂಪಾದಿಸಿ, ಕೊರಿಯರ್ ಸೌಲಭ್ಯವಿದೆ. 9964311522, 9742133993

Wanted

ಕರ್ನಾಟಕದಾದ್ಯಂತ ಕಂಪನಿಗಳಿಗೆ work form Home ಕೆಲಸಕ್ಕೆ ಯುವಕರು ಯುವತಿಯರು ಬೇಕಾಗಿದ್ದಾರೆ. 19000-25000. 7,10, ವಿದ್ಯಾರ್ಹತೆಯಿಲ್ಲದವರಿಗೂ. 7996021216

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಮೃತರ ಸಂಖ್ಯೆ 544ಕ್ಕೆ ಏರಿಕೆ • 10,600 ಮಂದಿ ಬಂಧನ

ಸಂಧಾನಕ್ಕೆ ಸಿದ್ಧವಾದ ಇರಾನ್: ಟ್ರಂಪ್

ದುಬೈ (ಎಪಿ): ಆಡಳಿತ ವಿರೋಧಿ ಪ್ರತಿಭಟನೆಯನ್ನು ಹತ್ತಿಕ್ಕಿ, ಪ್ರತಿಭಟನಕಾರರ ಸಾವಿಗೆ ಕಾರಣವಾಗುತ್ತಿರುವ ಇರಾನ್ ವಿರುದ್ಧ ದಾಳಿ ಮಾಡುವ ಬೆದರಿಕೆ ಹಾಕಿದ ಬೆನ್ನಲ್ಲೇ ಇರಾನ್ ಸಂಧಾನಕ್ಕೆ ಸಿದ್ಧವಾಗಿದೆ ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹೇಳಿದ್ದಾರೆ.

'ಇರಾನ್ ಕರೆ ಮಾಡಿ, ಮಾತುಕತೆ ನಡೆಸಲು ಬಯಸುತ್ತಿರುವುದಾಗಿ ಹೇಳಿದೆ. ಅವರ ಮನವಿ ಮೇರೆಗೆ ನಾವು ಸಹ ಮಾತುಕತೆಗೆ ಮುಂದಾಗಿದ್ದೇವೆ' ಎಂದು ಅವರು ತಿಳಿಸಿದ್ದಾರೆ.

'ಆದರೆ, ಅಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಪ್ರತಿಭಟನಕಾರರು ಸಾವಿಗೀಡಾಗುತ್ತಿದ್ದಾರೆ. ಅಲ್ಲಿನ ಸರ್ಕಾರವು ಪ್ರತಿಭಟನಕಾರರನ್ನು ಬಂಧಿಸುತ್ತಿದೆ. ಈ ಸಮಸ್ಯೆಗಳು ಮೊದಲು ಬಗೆಹರಿಯಬೇಕು. ಈ ನಿಟ್ಟಿನಲ್ಲಿ ಮೊದಲು ಕೆಲಸ ಮಾಡಬೇಕು' ಎಂದು ಅವರು ಭಾನುವಾರ ತಡರಾತ್ರಿ ಸುದ್ದಿಗಾರರಿಗೆ ಹೇಳಿದ್ದಾರೆ.

ಆದರೆ, ಟ್ರಂಪ್ ಅವರ ಹೇಳಿಕೆಗಳನ್ನು ಇರಾನ್ ತಕ್ಷಣಕ್ಕೆ ಒಪ್ಪಿಕೊಂಡಿಲ್ಲ.

'ಇರಾನ್‌ನ ಜನರು ಸ್ವಾತಂತ್ರ್ಯಕ್ಕಾಗಿ ಹಿಂದೆಂದೂ ಕೇಳರಿಯದ ರೀತಿಯಲ್ಲಿ ಹೋರಾಟ ನಡೆಸುತ್ತಿದ್ದಾರೆ. ಅವರಿಗೆ ಎಲ್ಲ ರೀತಿಯಲ್ಲಿ ಸಹಾಯ ಮಾಡಲು ಅಮೆರಿಕ ಸಿದ್ಧವಿದೆ' ಎಂದು ಟ್ರಂಪ್ ಶನಿವಾರ ಹೇಳಿದ್ದರು. ಅದಕ್ಕೆ ಭಾನುವಾರ ಪ್ರತಿಕ್ರಿಯಿಸಿದ್ದ ಇರಾನ್, 'ಅಮೆರಿಕ ದಾಳಿ ನಡೆಸಿದರೆ ಅದಕ್ಕೆ ತಕ್ಕ ಪ್ರತ್ಯುತ್ತರ ನೀಡುವುದಾಗಿ' ಗುಡುಗಿತ್ತು.

ಮೃತರ ಸಂಖ್ಯೆ 544ಕ್ಕೆ ಏರಿಕೆ: ಇರಾನ್ ಆಡಳಿತವನ್ನು ಪ್ರಶ್ನಿಸಿ ದೇಶವ್ಯಾಪಿ ಎರಡು ವಾರಗಳಿಂದ ನಡೆಯುತ್ತಿರುವ ಪ್ರತಿಭಟನೆ, ಹಿಂಸಾಚಾರದಲ್ಲಿ ಮೃತಪಟ್ಟವರ ಸಂಖ್ಯೆ 544ಕ್ಕೆ ಏರಿದೆ. ಈ ಪೈಕಿ 496 ಮಂದಿ ಪ್ರತಿಭಟನಕಾರರಾಗಿದ್ದರೆ, 48 ಮಂದಿ ಭದ್ರತಾ ಸಿಬ್ಬಂದಿ ಆಗಿದ್ದಾರೆ.

ಪ್ರತಿಭಟನೆಯನ್ನು ಹತ್ತಿಕ್ಕುತ್ತಿರುವ ಇರಾನ್ ಆಡಳಿತವು, ಇಲ್ಲಿಯವರೆಗೂ 10,600 ಮಂದಿಯನ್ನು ಬಂಧಿಸಿದೆ ಎಂದು ಅಮೆರಿಕ ಮೂಲದ ಮಾನವ ಹಕ್ಕುಗಳ ಕಾರ್ಯಕರ್ತರ ಸಂಸ್ಥೆ ವರದಿ ಮಾಡಿದೆ.

> ದೇಶದಲ್ಲಿ ನಡೆಯುತ್ತಿದ್ದ ಪ್ರತಿಭಟನೆಯಿಂದ ಉಂಟಾಗಿದ್ದ ಅಶಾಂತಿ ಈಗ ಇಲ್ಲವಾಗಿದ್ದು, ಪರಿಸ್ಥಿತಿ ಸಂಪೂರ್ಣ ನಿಯಂತ್ರಣದಲ್ಲಿದೆ
>
> **ಅಬ್ಬಾಸ್ ಅರಾಘ್ಚಿ,** ಇರಾನ್ ವಿದೇಶಾಂಗ ಸಚಿವ

ಆದರೆ, ಇರಾನ್ ಸರ್ಕಾರ ಇಲ್ಲಿಯವರೆಗೆ ಯಾವುದೇ ಸಾವು ನೋವಿನ ಅಂಕಿ ಅಂಶಗಳನ್ನು ಪ್ರಕಟಿಸಿಲ್ಲ. ಇಂಟರ್‌ನೆಟ್ ಸ್ಥಗಿತ ಮತ್ತು ದೂರವಾಣಿ ಸಂಪರ್ಕ ಕಡಿತಗೊಂಡಿರುವ ಕಾರಣ ಇರಾನ್‌ನಲ್ಲಿ ನಡೆಯುತ್ತಿರುವ ಪ್ರತಿಭಟನೆ ತೀವ್ರತೆಯನ್ನು ಅಳೆಯುವುದು ಇತರ ದೇಶಗಳಿಗೆ ಕಷ್ಟಕರವಾಗಿದೆ ಎಂದು ಮೂಲಗಳು ತಿಳಿಸಿವೆ.

ಸೆಲೆಬ್ರಿಟಿಗಳಿಗೆ ಬೆದರಿಕೆ: ಪ್ರತಿಭಟನಕಾರರಿಗೆ ಬೆಂಬಲ ಸೂಚಿಸಿದ್ದ ಸೆಲೆಬ್ರಿಟಿಗಳು ಮತ್ತು ಸಾಂಸ್ಕೃತಿಕ ನಾಯಕರರ ಕುರಿತು ಇರಾನ್‌ನ ರೆವಲ್ಯೂಷನರಿ ಗಾರ್ಡ್ ಮಾಹಿತಿ ಪಡೆದುಕೊಳ್ಳುತ್ತಿದೆ. ಅದರ ನಿಯಂತ್ರಣದಲ್ಲಿರುವ ಅರೆ ಸರ್ಕಾರಿ ಸುದ್ದಿ ಸಂಸ್ಥೆ 'ಫಾರ್ಸ್' ಈ ನಾಯಕರನ್ನು ಕರೆಸಿ ವಿಚಾರಿಸುತ್ತಿದೆ ಎಂದು ಗೊತ್ತಾಗಿದೆ.

ಇಂಟರ್‌ನೆಟ್ ಸ್ಥಗಿತಗೊಳ್ಳುವ ಮೊದಲು ಪ್ರತಿಭಟನೆಗೆ ಬೆಂಬಲ ನೀಡಿದ್ದ ಬರಹಗಾರರು, ಸಾಂಸ್ಕೃತಿಕ ನಾಯಕರು, ಸೆಲೆಬ್ರಿಟಿಗಳನ್ನು ಈ ಮೂಲಕ ಬೆದರಿಸಲಾಗುತ್ತಿದೆ. 'ದೇಶದಲ್ಲಿನ ಅಶಾಂತಿಗೆ ನಿಮ್ಮ ಪ್ರಚೋದನೆ ಕಾರಣವಾಗಿದೆ. ಸಾರ್ವಜನಿಕರ ಆಸ್ತಿ ನಾಶ, ಹಿಂಸಾಚಾರದಲ್ಲಿ ಭದ್ರತಾ ಪಡೆ ಸಿಬ್ಬಂದಿಯ ಸಾವಿಗೂ ಕಾರಣರಾಗಿದ್ದೀರಿ ಎಂದು ಆರೋಪಿಸಲಾಗುತ್ತಿದೆ' ಎಂದು ಮೂಲಗಳು ತಿಳಿಸಿವೆ.

ಎಚ್ಚರಿಕೆಯ ಸಂದೇಶ: ಪ್ರತಿಭಟನೆಗೆ ಮುಂದಾಗುವ ಜನರಿಗೆ ಪೊಲೀಸರು ಎಚ್ಚರಿಕೆಯ ಸಂದೇಶ ರವಾನಿಸಿರುವುದು ಗೊತ್ತಾಗಿದೆ. 'ಗಲಭೆಕೋರರ ಮೇಲೆ ಸರ್ಕಾರ ಕಟ್ಟುನಿಟ್ಟಿನ ಕ್ರಮಗಳನ್ನು ತೆಗೆದುಕೊಳ್ಳುತ್ತದೆ. ಹೀಗಾಗಿ ನಿಮ್ಮ ಮಕ್ಕಳು, ಕುಟುಂಬದವರು ಪ್ರತಿಭಟನೆಗಳಲ್ಲಿ ಭಾಗವಹಿಸದಂತೆ ಎಚ್ಚರವಹಿಸಿ ಎಂದು ಅದು ಪೋಷಕರಿಗೆ ಸೂಚಿಸಿದೆ.

ಸರ್ಕಾರದ ಪರ ಬೀದಿಗಿಳಿದ ಜನ: ಸರ್ಕಾರದ ವಿರುದ್ಧ ನಡೆಯುತ್ತಿದ್ದ ಪ್ರತಿಭಟನೆ ತಕ್ಕ ಮಟ್ಟಿಗೆ ಹತೋಟಿಗೆ ಬಂದ ಬೆನ್ನಲ್ಲೇ, ಟೆಹರಾನ್‌ನಲ್ಲಿ ಸರ್ಕಾರಕ್ಕೆ ಬೆಂಬಲ ಸೂಚಿಸಿ ಸಾವಿರಾರು ಮಂದಿ ಬೀದಿಗಿಳಿದು ಪ್ರತಿಭಟನೆ ನಡೆಸಿದರು. ರ‍್ಯಾಲಿ ಮಾಡಿದ ಪ್ರತಿಭಟನಕಾರರು, ಸರ್ಕಾರದ ಪರ ಘೋಷಣೆಗಳನ್ನು ಕೂಗಿದ ಫಲಕಗಳನ್ನು ಪ್ರದರ್ಶಿಸಿದರು.

ಅಮೆರಿಕ ಜತೆ ಸಂವಹನ ಮಾರ್ಗ ಮುಕ್ತವಾಗಿದೆ: ಇರಾನ್

ಪ್ಯಾರಿಸ್ (ಎಎಫ್‌ಪಿ): ಇರಾನ್ ಮತ್ತು ಅಮೆರಿಕ ನಡುವೆ ರಾಜತಾಂತ್ರಿಕ ಸಂಬಂಧಗಳ ಕೊರತೆಯ ಹೊರತಾಗಿಯೂ ವಿಶೇಷ ರಾಯಭಾರಿ ಮೂಲಕ ಸಂವಹನ ಮಾರ್ಗ ಮುಕ್ತವಾಗಿದೆ ಎಂದು ಇರಾನ್ ವಿದೇಶಾಂಗ ಸಚಿವಾಲಯದ ವಕ್ತಾರರು ಸೋಮವಾರ ಹೇಳಿದ್ದಾರೆ.

'ವಿದೇಶಾಂಗ ಸಚಿವ ಅಬ್ಬಾಸ್ ಅರಾಘ್ಚಿ ಮತ್ತು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ನಡುವೆ ವಿಶೇಷ ರಾಯಭಾರಿಯ ಸಂವಹನ ಮಾರ್ಗ ಮುಕ್ತವಾಗಿದೆ' ಎಂದು ಸಚಿವಾಲಯದ ವಕ್ತಾರ ಎಸ್ಮಾಯಿಲ್ ಬಘೈ ಪ್ರತಿಕ್ರಿಯಿಸಿದ್ದಾರೆ.

ಅಗತ್ಯವಿದ್ದಾಗ ಎರಡೂ ದೇಶಗಳು ಸಂದೇಶಗಳನ್ನು ವಿನಿಮಯ ಮಾಡಿಕೊಳ್ಳುತ್ತವೆ ಎಂದ ಅವರು, 'ಅಮೆರಿಕಕ್ಕೆ ಇರಾನ್‌ನಲ್ಲಿ ಯಾವುದೇ ರಾಜತಾಂತ್ರಿಕ ಉಪಸ್ಥಿತಿ ಇಲ್ಲದಿದ್ದರೂ, ಅದರ ಹಿತಾಸಕ್ತಿಗಳನ್ನು ಸ್ವಿಸ್ ರಾಯಭಾರ ಕಚೇರಿ ಪ್ರತಿನಿಧಿಸುತ್ತದೆ' ಎಂದು ಅವರು ಹೇಳಿದ್ದಾರೆ.

'ಮಾತುಕತೆಗಳು ಪರಸ್ಪರ ಹಿತಾಸಕ್ತಿ, ಕಾಳಜಿಗಳನ್ನು ಗೌರವಿಸುವ ಆಧಾರದಲ್ಲಿರಬೇಕು. ಅದು ಏಕಪಕ್ಷೀಯ ಮತ್ತು ಯಾವುದೇ ನಿರ್ದೇಶನವನ್ನು ಆಧರಿಸಿರಬಾರದು' ಎಂದಿದ್ದಾರೆ.

ಇರಾನ್ ಜನರಿಗೆ ಕೆನಡಾ, ಜರ್ಮನ್ ಬೆಂಬಲ

ಇರಾನ್‌ನ ಪ್ರತಿಭಟನಕಾರರಿಗೆ ಬೆಂಬಲ ವ್ಯಕ್ತಪಡಿಸಿರುವ ಕೆನಡಾ ಸರ್ಕಾರ, 'ಇರಾನ್ ಆಡಳಿತವು ತನ್ನ ಭಯಾನಕ ದಮನಕಾರಿ ನೀತಿಗೆ ತಡೆ ನೀಡಬೇಕು. ಪ್ರತಿಭಟನಕಾರರನ್ನು ಬೆದರಿಸುವುದನ್ನು ನಿಲ್ಲಿಸಬೇಕು. ನಾಗರಿಕರ ಮಾನವ ಹಕ್ಕುಗಳನ್ನು ಗೌರವಿಸಬೇಕು' ಎಂದು ಸೋಮವಾರ ಆಗ್ರಹಿಸಿದೆ.

ತನ್ನ ನಾಗರಿಕರ ಪ್ರತಿಭಟನೆಯನ್ನು ಹತ್ತಿಕ್ಕುತ್ತಿರುವ ಇರಾನ್ ಕ್ರಮವನ್ನು ಜರ್ಮನ್ ಚಾನ್ಸೆಲರ್ ಫ್ರೆಡರಿಕ್ ಮೆರ್ಜ್ ಖಂಡಿಸಿದ್ದಾರೆ. 'ಇರಾನ್ ನಾಯಕತ್ವವು ತನ್ನ ಜನರನ್ನು ಬೆದರಿಸುವ ಬದಲಿಗೆ ರಕ್ಷಣೆ ನೀಡಬೇಕು' ಎಂದು ಅವರು ಹೇಳಿದ್ದಾರೆ.

ಅನ್ಯ ದೇಶದ ಹಸ್ತಕ್ಷೇಪಕ್ಕೆ ಚೀನಾ ವಿರೋಧ: 'ಅಂತರರಾಷ್ಟ್ರೀಯ ಸಂಬಂಧಗಳಲ್ಲಿನ ಬಲಪ್ರಯೋಗವನ್ನು ವಿರೋಧಿಸುವುದಾಗಿ' ಚೀನಾ ಹೇಳಿದೆ. ಇರಾನ್ ಸರ್ಕಾರದ ಪ್ರತಿನಿಧಿಗಳು ಮತ್ತು ಅಲ್ಲಿನ ಜನರು ಸಮಸ್ಯೆ ಬಗೆಹರಿಸಿಕೊಳ್ಳಲು ಮತ್ತು ರಾಷ್ಟ್ರೀಯ ಸ್ಥಿರತೆ ಕಾಪಾಡಿಕೊಳ್ಳಲು ಸಮರ್ಥರಿದ್ದಾರೆ' ಎಂದು ಅದು ಪ್ರತಿಪಾದಿಸಿದೆ.

'ಅನ್ಯ ದೇಶಗಳ ಆಂತರಿಕ ವಿಚಾರದಲ್ಲಿ ಮತ್ತೊಂದು ದೇಶ ಹಸ್ತಕ್ಷೇಪ ಮಾಡಬಾರದು. ಎಲ್ಲ ದೇಶಗಳ ಸಾರ್ವಭೌಮತ್ವ ಮತ್ತು ಭದ್ರತೆಯನ್ನು ಅಂತರರಾಷ್ಟ್ರೀಯ ಕಾನೂನಿನ ಅನ್ವಯ ಪೂರ್ಣವಾಗಿ ರಕ್ಷಿಸಬೇಕು' ಎಂದು ಚೀನಾ ವಿದೇಶಾಂಗ ಸಚಿವಾಲಯದ ವಕ್ತಾರ ಮಾವೋ ನಿಂಗ್ ಹೇಳಿದ್ದಾರೆ.

'ಪ್ರತಿಭಟನಾ ಅಲೆ: ಭಯೋತ್ಪಾದಕರ ವಿರುದ್ಧದ ಯುದ್ಧ'

ಪ್ಯಾರಿಸ್ (ಎಎಫ್‌ಪಿ): ಇರಾನ್ ದೇಶದಾದ್ಯಂತ ಎದ್ದಿರುವ ಪ್ರತಿಭಟನಾ ಅಲೆ ಕುರಿತು ಪ್ರತಿಕ್ರಿಯೆ ನೀಡಿರುವ ಸಂಸತ್ತಿನ ಸ್ಪೀಕರ್ ಮೊಹಮ್ಮದ್ ಬಘೇರ್ ಗಾಲಿಬಾಫ್, 'ಇದು ಭಯೋತ್ಪಾದಕರ ವಿರುದ್ಧದ ಯುದ್ಧ' ಎಂದು ಪ್ರತಿಪಾದಿಸಿದ್ದಾರೆ.

ರಾಜಧಾನಿ ಟೆಹ್ರಾನ್‌ನಲ್ಲಿ ಸೋಮವಾರ ನಡೆದ ಸರ್ಕಾರದ ಪರ ರ‍್ಯಾಲಿಯಲ್ಲಿ ಮಾತನಾಡಿದ ಅವರು, 'ಇರಾನ್ ಆರ್ಥಿಕ ಯುದ್ಧ, ಮಾನಸಿಕ ಯುದ್ಧ, ಅಮೆರಿಕ ಮತ್ತು ಇಸ್ರೇಲ್‌ನೊಂದಿಗಿನ 'ಮಿಲಿಟರಿ ಯುದ್ಧ' ಮತ್ತು ಭಯೋತ್ಪಾದಕರ ವಿರುದ್ಧದ ಯುದ್ಧಗಳನ್ನು ನಡೆಸುತ್ತಿದೆ' ಎಂದು ಹೇಳಿದರು.

'ಶತ್ರುಗಳು ತನ್ನ ಗುರಿಗಳನ್ನು ಸಾಧಿಸಲು ಇರಾನ್ ಎಂದಿಗೂ ಅವಕಾಶ ನೀಡಿಲ್ಲ' ಎಂದ ಅವರು, 'ಇಸ್ರೇಲ್‌ಗೆ ಸಾವು, ಅಮೆರಿಕಕ್ಕೆ ಸಾವು' ಎಂಬ ಘೋಷಣೆಗಳನ್ನು ಕೂಗಿದರು.

'ಹೊಸ ದಾಳಿಯ ಸಂದರ್ಭದಲ್ಲಿ ಇರಾನ್ ಸೇನೆಯು ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್‌ಗೆ ಮರೆಯಲಾಗದ ಪಾಠ ಕಲಿಸುತ್ತದೆ' ಎಂದೂ ಪ್ರತಿಜ್ಞೆ ಮಾಡಿದರು.

ಸುದ್ದಿ 2 ನಿಮಿಷ

ಚಿಲ್ಲರೆ ಹಣದುಬ್ಬರ ಏರಿಕೆ

ನವದೆಹಲಿ (ಪಿಟಿಐ): ಆಹಾರ ಪದಾರ್ಥಗಳ ಬೆಲೆಯಲ್ಲಿನ ಹೆಚ್ಚಳದಿಂದ ಚಿಲ್ಲರೆ ಹಣದುಬ್ಬರವು ಡಿಸೆಂಬರ್ ತಿಂಗಳಿನಲ್ಲಿ ಶೇ 1.33ಕ್ಕೆ ಏರಿಕೆಯಾಗಿದೆ ಎಂದು ರಾಷ್ಟ್ರೀಯ ಸಾಂಖ್ಯಿಕ ಕಚೇರಿ (ಎನ್‌ಎಸ್‌ಒ) ಸೋಮವಾರ ತಿಳಿಸಿದೆ. ಇದು ಮೂರು ತಿಂಗಳ ಗರಿಷ್ಠ ಮಟ್ಟದ ಏರಿಕೆ ಆಗಿದೆ.

ಗ್ರಾಹಕ ಬೆಲೆ ಸೂಚ್ಯಂಕ (ಸಿಪಿಐ) ಆಧಾರಿತ ಚಿಲ್ಲರೆ ಹಣದುಬ್ಬರವು ನವೆಂಬರ್‌ನಲ್ಲಿ ಶೇ 0.71ರಷ್ಟಿತ್ತು. 2024ರ ಡಿಸೆಂಬರ್‌ನಲ್ಲಿ ಶೇ 5.22ರಷ್ಟು ದಾಖಲಾಗಿತ್ತು.

ತರಕಾರಿಗಳು, ಮೊಟ್ಟೆ, ಮಾಂಸ ಮತ್ತು ಮೀನು, ಮಸಾಲೆ ಪದಾರ್ಥಗಳು, ಧಾನ್ಯಗಳ ಬೆಲೆಯಲ್ಲಿನ ಹೆಚ್ಚಳವೇ ಹಣದುಬ್ಬರ ಏರಿಕೆಗೆ ಕಾರಣ ಎಂದು ತಿಳಿಸಿದೆ. ನಗರ ಪ್ರದೇಶದಲ್ಲಿ ಹಣದುಬ್ಬರ ಪ್ರಮಾಣ ಶೇ 2.03ರಷ್ಟಿದ್ದರೆ, ಗ್ರಾಮೀಣ ಪ್ರದೇಶದಲ್ಲಿ ಶೇ 0.76ರಷ್ಟಿದೆ.

ಚಿಲ್ಲರೆ ಹಣದುಬ್ಬರ ಪ್ರಮಾಣವು ಶೇ 4ರ ಹಂತದಲ್ಲಿ ಇರಬೇಕು, ಅದು ಶೇ 2ಕ್ಕಿಂತ ಕಡಿಮೆ ಆಗಬಾರದು ಎಂಬುದು ಆರ್‌ಬಿಐಗೆ ಕೇಂದ್ರ ಸರ್ಕಾರ ನಿಗದಿ ಮಾಡಿರುವ ಗುರಿ. ಡಿಸೆಂಬರ್ ತಿಂಗಳಿನಲ್ಲೂ ಇದೇ ಮಟ್ಟದಲ್ಲಿ ಚಿಲ್ಲರೆ ಹಣದುಬ್ಬರ ಇದೆ.

ಕೇರಳದಲ್ಲಿ ಚಿಲ್ಲರೆ ಹಣದುಬ್ಬರ ಹೆಚ್ಚಿನ ಪ್ರಮಾಣದಲ್ಲಿದ್ದು, ಶೇ 9.49ರಷ್ಟಿದೆ. ಕರ್ನಾಟಕದಲ್ಲಿ ಶೇ 2.99, ಆಂಧ್ರಪ್ರದೇಶ ಶೇ 2.71, ತಮಿಳುನಾಡು ಶೇ 2.67 ಮತ್ತು ಜಮ್ಮು ಕಾಶ್ಮೀರದಲ್ಲಿ ಶೇ 2.26ರಷ್ಟು ದಾಖಲಾಗಿದೆ ಎಂದು ತಿಳಿಸಿದೆ.

ಐಒಸಿಎಲ್ ಬಂಕ್‌ಗಳಲ್ಲಿ ಮಾರುತಿ ಕಾರು ರಿಪೇರಿ

ನವದೆಹಲಿ (ಪಿಟಿಐ): ಇಂಡಿಯನ್ ಆಯಿಲ್ ಕಾರ್ಪೊರೇಷನ್‌ನ (ಐಒಸಿಎಲ್) ಪೆಟ್ರೋಲ್ ಬಂಕ್‌ಗಳಲ್ಲಿ ವಾಹನಗಳ ರಿಪೇರಿ ಸೇವಾ ಘಟಕ ಆರಂಭಿಸಲು ಮಾರುತಿ ಸುಜುಕಿ ಇಂಡಿಯಾ ಕಂಪನಿಯು ಮುಂದಾಗಿದೆ. ಈ ವಿಚಾರವಾಗಿ ಇಂಡಿಯನ್ ಆಯಿಲ್ ಮತ್ತು ಮಾರುತಿ ಸುಜುಕಿ ನಡುವೆ ಒಪ್ಪಂದ ಆಗಿದೆ.

ಇದರ ಭಾಗವಾಗಿ ದೇಶದಾದ್ಯಂತ ಇಂಡಿಯನ್ ಆಯಿಲ್‌ನ ಹಲವು ಬಂಕ್‌ಗಳಲ್ಲಿ ಸೇವಾ ಘಟಕಗಳು ಆರಂಭವಾಗಲಿವೆ. ಈ ಘಟಕಗಳ ಮೂಲಕ ಗ್ರಾಹಕರು ತಮ್ಮ ಮಾರುತಿ ಸುಜುಕಿ ಕಾರಿನ ನಿರ್ವಹಣೆ ಕೆಲಸ, ಸಣ್ಣ-ಪುಟ್ಟ ರಿಪೇರಿ ಹಾಗೂ ಕೆಲವು ಪ್ರಮುಖ ರಿಪೇರಿ ಕೆಲಸಗಳನ್ನು ಮಾಡಿಸಿಕೊಳ್ಳಬಹುದು. ಇದರಿಂದಾಗಿ ಕಾರು ರಿಪೇರಿ ಕೆಲಸಗಳು ಹೆಚ್ಚು ಸುಲಭವಾಗಿ ಲಭ್ಯವಾಗುವಂತೆ ಆಗುತ್ತದೆ ಎಂದು ಮಾರುತಿ ಸುಜುಕಿ ಪ್ರಕಟಣೆ ತಿಳಿಸಿದೆ.

ಈಗ ಮಾರುತಿ ಸುಜುಕಿ ಕಂಪನಿ ದೇಶದ 2,882 ನಗರಗಳಲ್ಲಿ ಒಟ್ಟು 5,780ಕ್ಕೂ ಹೆಚ್ಚಿನ ಸೇವಾ ಕೇಂದ್ರಗಳನ್ನು ಹೊಂದಿದೆ. ಹೊಸ ಒಪ್ಪಂದದಿಂದಾಗಿ ಕಂಪನಿಯ ಸೇವಾ ಜಾಲವು ಇನ್ನಷ್ಟು ವಿಸ್ತರಣೆ ಕಾಣಲಿದೆ ಎಂದು ಪ್ರಕಟಣೆ ತಿಳಿಸಿದೆ.

'ನಾವು ದೇಶದಾದ್ಯಂತ 41 ಸಾವಿರ ಬಂಕ್‌ಗಳನ್ನು ಹೊಂದಿದ್ದೇವೆ. ಅಗತ್ಯ ಸೇವೆಗಳನ್ನು ಗ್ರಾಹಕರ ಹತ್ತಿರ ತರುವ ವಿಶಿಷ್ಟವಾದ ಶಕ್ತಿ ನಮಗಿದೆ. ಮಾರುತಿ ಸುಜುಕಿ ಜೊತೆ ಪಾಲುದಾರಿಕೆ ಮೂಲಕ ನಾವು ವಿಶ್ವದರ್ಜೆಯ ವಾಹನ ರಿಪೇರಿ ಸೇವೆಗಳನ್ನು ನಮ್ಮ ಇಂಧನ ಮಾರಾಟದ ಜೊತೆ ಬೆಸೆಯುತ್ತಿದ್ದೇವೆ' ಎಂದು ಇಂಡಿಯನ್ ಆಯಿಲ್‌ನ ಮಾರುಕಟ್ಟೆ ವಿಭಾಗದ ನಿರ್ದೇಶಕ ಸೌಮಿತ್ರ ಪಿ. ಶಿವಾಸ್ತವ ಹೇಳಿದ್ದಾರೆ.

ಹಕ್ಕಿ ಡಿಕ್ಕಿ: ವಿಮಾನ ತುರ್ತು ಭೂಸ್ಪರ್ಶ

ವಾರಾಣಸಿ (ಪಿಟಿಐ): ಗೋರಖ್‌ಪುರದಿಂದ ಬೆಂಗಳೂರಿಗೆ ಹೊರಟಿದ್ದ ಇಂಡಿಗೊ ಏರ್‌ಲೈನ್ಸ್ ವಿಮಾನಕ್ಕೆ ಹಕ್ಕಿ ಡಿಕ್ಕಿ ಹೊಡೆದಿದ್ದರಿಂದ ಇಲ್ಲಿನ ಲಾಲ್ ಬಹದ್ದೂರ್ ಶಾಸ್ತ್ರಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ತುರ್ತು ಭೂಸ್ಪರ್ಶ ಮಾಡಲಾಯಿತು.

'ಭಾನುವಾರ ರಾತ್ರಿ ಈ ಘಟನೆ ನಡೆದಿದ್ದು, ವಿಮಾನ ಭೂಸ್ಪರ್ಶವಾದ ಬಳಿಕ ಎಲ್ಲ 216 ಪ್ರಯಾಣಿಕರನ್ನು ಸುರಕ್ಷಿತವಾಗಿ ಸ್ಥಳಾಂತರಿಸಲಾಗಿದೆ. ಪ್ರಯಾಣಿಕರಿಗೆ ಪರ್ಯಾಯ ವ್ಯವಸ್ಥೆ ಮಾಡಲಾಗಿದೆ. ಹಕ್ಕಿ ಡಿಕ್ಕಿಯಿಂದ ವಿಮಾನದ ಮುಂಭಾಗಕ್ಕೆ ಹಾನಿಯಾಗಿದೆ' ಎಂದು ವಿಮಾನ ನಿಲ್ದಾಣದ ನಿರ್ದೇಶಕ ಪುನೀತ್ ಗುಪ್ತಾ ತಿಳಿಸಿದ್ದಾರೆ.

ಮುಂಬೈ ಧಾರಣೆ (ಶೇಂಗಾ)

12-01-2026	
ಜಾವಾ 70/80(ಹೊಸ)	11000-11100
ಜಾವಾ 80/90(ಹೊಸ)	10300-10400
ದಪ್ಪ ಮಧ್ಯಪ್ರದೇಶ (ಹೊಸ)	8000-8100
ದಪ್ಪ ಗುಜರಾತ್ (ಹೊಸ)	9300-9400
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1640 (1615)
ಒಂದು ವಾರದ ಡೆಲಿವರಿ	1635 (1610)
ಪಾಮ್ ವಾರದ ಡೆಲಿವರಿ	1263 (1273)
ಸೂರ್ಯಕಾಂತಿ ಎಣ್ಣೆ ಕಚ್ಚಾ	1470 (1475)
ಚಿನ್ನ-ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಅಪರಂಜಿ ಚಿನ್ನ 10 ಗ್ರಾಂ	1,40,250 (1,38,000)
ಬೆಳ್ಳಿ ಕೆ.ಜಿಗೆ	2,60,000 (2,47,800)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

'ಶಕ್ಸ್‌ಗಾಮ್ ಕಣಿವೆ ಚೀನಾದ ಭಾಗ'

ಬೀಜಿಂಗ್ (ಪಿಟಿಐ): ಶಕ್ಸ್‌ಗಾಮ್ ಕಣಿವೆಯು ತನ್ನ ಭೂಭಾಗವಾಗಿದೆ ಎಂದು ಚೀನಾ ಪುನರುಚ್ಚರಿಸಿದ್ದು, ಅಲ್ಲಿ ಕೈಗೊಂಡಿರುವ ಮೂಲಸೌಕರ್ಯ ಯೋಜನೆಗಳು ಆಕ್ಷೇಪಕ್ಕೆ ಹೊರತಾಗಿವೆ ಎಂದು ಪ್ರತಿಪಾದಿಸಿದೆ.

ಶಕ್ಸ್‌ಗಾಮ್ ಕಣಿವೆಯಲ್ಲಿ ಚೀನಾ ಕೈಗೊಂಡಿರುವ ಮೂಲಸೌಕರ್ಯ ಅಭಿವೃದ್ಧಿ ಯೋಜನೆಗಳ ಕುರಿತು ಭಾರತ ಕಳೆದ ಶುಕ್ರವಾರ ಆಕ್ಷೇಪ ವ್ಯಕ್ತಪಡಿಸಿತ್ತು.

ಇದು ಭಾರತದ ಪ್ರದೇಶವಾಗಿರುವುದರಿಂದ ತನ್ನ ಹಿತಾಸಕ್ತಿ ಕಾಪಾಡಿಕೊಳ್ಳಲು ಅಗತ್ಯ ಕ್ರಮ ಕೈಗೊಳ್ಳುವ ಹಕ್ಕುಗಳನ್ನು ಕಾಯ್ದಿರಿಸಿಕೊಂಡಿದೆ ಎಂದು ಹೇಳಿತ್ತು.

'ಶಕ್ಸ್‌ಗಾಮ್ ಕಣಿವೆ ಭಾರತದ ಭೂಪ್ರದೇಶ. 1963ರಲ್ಲಿ ಸಹಿ ಹಾಕಿದ ಚೀನಾ–ಪಾಕಿಸ್ತಾನ ಗಡಿ ಒಪ್ಪಂದವೆಂದು ಕರೆಯಲಾಗುವ ಒಪ್ಪಂದವನ್ನು ನಾವು ಎಂದಿಗೂ ಒಪ್ಪಿಲ್ಲ ಮತ್ತು ಮಾನ್ಯತೆ ನೀಡಿಲ್ಲ. ಈ ಒಪ್ಪಂದವು ಕಾನೂನುಬಾಹಿರ' ಎಂದು ವಿದೇಶಾಂಗ ಸಚಿವಾಲಯದ ವಕ್ತಾರ ರಣಧೀರ್ ಜೈಸ್ವಾಲ್ ತಿಳಿಸಿದ್ದರು.

ಜೈಸ್ವಾಲ್ ಅವರ ಹೇಳಿಕೆಗೆ ಪ್ರತಿಕ್ರಿಯಿಸಿದ ಚೀನಾ ವಿದೇಶಾಂಗ ಸಚಿವಾಲಯದ ವಕ್ತಾರೆ ಮಾವೋ ನಿಂಗ್, 'ನೀವು ಹೇಳಿದ ಪ್ರದೇಶವು ಚೀನಾದ ಪ್ರದೇಶದ ಭಾಗವಾಗಿದೆ. ನಮ್ಮ ಭೂಪ್ರದೇಶದಲ್ಲಿ ಮೂಲಸೌಕರ್ಯ ಚಟುವಟಿಕೆಗಳನ್ನು ಕೈಗೊಂಡಿದೆ. ಚೀನಾ ಮತ್ತು ಪಾಕಿಸ್ತಾನ ಗಡಿ ಒಪ್ಪಂದಕ್ಕೆ ಸಹಿ ಹಾಕಿವೆ' ಎಂದಿದ್ದಾರೆ.

ಕಕ್ಷೆ ತಲುಪಲು ಮತ್ತೆ ವಿಫಲ

ಒಂದನೇ ಪುಟದಿಂದ...

'ಇಸ್ರೊ ವಿಜ್ಞಾನಿಗಳು ಉಡಾವಣಾ ವಾಹಕದ ಕ್ಷಣ ಕ್ಷಣದ ಮಾಹಿತಿ ನೀಡುತ್ತಿದ್ದರು. ಆರಂಭಿಕ ಹಂತವು ನಿರೀಕ್ಷೆಯಂತೆಯೇ ಸಾಗಿತ್ತು. ಆದರೆ ಮೂರನೇ ಹಂತದ ಕೊನೆಯಲ್ಲಿ ದೋಷ ಕಾಣಿಸಿಕೊಂಡಿತು. ಬಳಿಕ ರಾಕೆಟ್ ಪಥ ಬದಲಿಸಿತು. ತಾಂತ್ರಿಕ ದೋಷದ ಕಾರಣ ಪತ್ತೆಗಾಗಿ ಲಭ್ಯವಿರುವ ದತ್ತಾಂಶವನ್ನು ವಿಶ್ಲೇಷಿಸಲಾಗುತ್ತಿದೆ' ಎಂದು ಇಸ್ರೊ ಅಧ್ಯಕ್ಷ ವಿ.ನಾರಾಯಣನ್ ತಿಳಿಸಿದರು.

ಐದನೇ ಬಾರಿ ವೈಫಲ್ಯ ಕಂಡ ಪಿಎಸ್‌ಎಲ್‌ವಿ

ಉಪಗ್ರಹವನ್ನು ಕಕ್ಷೆಗೆ ಸೇರಿಸುವಲ್ಲಿ ಅತ್ಯಂತ ವಿಶ್ವಾಸಾರ್ಹ ರಾಕೆಟ್ ಎಂದೇ ಪಿಎಸ್‌ಎಲ್‌ವಿ (ಧ್ರುವೀಯ ಉಪಗ್ರಹ ಉಡ್ಡಯನ ವಾಹನ) ಹೆಸರುವಾಸಿಯಾಗಿದೆ. ಈ ಮಾದರಿಯ ರಾಕೆಟ್‌ಗಳನ್ನು ಚಂದ್ರಯಾನ–1, ಮಂಗಳಯಾನ, ಆದಿತ್ಯ ಎಲ್–1 ಸೇರಿದಂತೆ 64 ಬಾರಿ ಉಡ್ಡಯನಕ್ಕೆ ಇಸ್ರೊ ಬಳಕೆ ಮಾಡಿದೆ. ಇದು ಈವರೆಗೆ ಐದು ಬಾರಿ ವೈಫಲ್ಯ ಕಂಡಿದೆ. ಕಳೆದ ವರ್ಷ ಮೇ 25ರಂದು ನಭಕ್ಕೆ ಚಿಮ್ಮಿದ್ದ ಪಿಎಸ್‌ಎಲ್‌ವಿ–ಸಿ61 ರಾಕೆಟ್ ಕೂಡ ಉಪಗ್ರಹಗಳನ್ನು ನಿಗದಿತ ಕಕ್ಷೆಗೆ ಸೇರಿಸುವಲ್ಲಿ ವಿಫಲವಾಗಿತ್ತು.

ನಭಕ್ಕೆ ಚಿಮ್ಮಿದ ಪಿಎಸ್‌ಎಲ್‌ವಿ–ಸಿ62 —ಪಿಟಿಐ ಚಿತ್ರ

ರಾಕೆಟ್‌ನಲ್ಲಿ ಇದ್ದಿದ್ದು ಏನೇನು?

ಪಿಎಸ್‌ಎಲ್‌ವಿ ರಾಕೆಟ್‌ನಲ್ಲಿ, ಥಾಯ್ಲೆಂಡ್ ಮತ್ತು ಬ್ರಿಟನ್ ಅಭಿವೃದ್ಧಿಪಡಿಸಿದ ಭೂ ಸರ್ವೇಕ್ಷಣಾ ಉಪಗ್ರಹ, ಕೆಐಡಿ ಕ್ಯಾಪ್ಸ್ಯೂಲ್ ಸೆಪರೇಷನ್, ಧ್ರುವ ಸ್ಪೇಸ್‌ನ ಐದು ಉಪಗ್ರಹಗಳು, ಬ್ರೆಜಿಲ್‌ನ ಐದು ಹಾಗೂ ಬ್ರಿಟನ್, ಅಂತರಿಕ್ಷ ಪ್ರತಿಷ್ಠಾನ (ನೇಪಾಳ ಮತ್ತು ಭಾರತ), ಲಕ್ಷ್ಮಣ ಜ್ಞಾನಪೀಠ ಮತ್ತು ಆರ್ಬಿಟ್‌ಏಡ್ (ಭಾರತ) ಹಾಗೂ ಆರ್ಬಿಟಲ್ ಪ್ಯಾರಾಡಿಯಮ್‌ನ (ಸ್ಪೇನ್, ಫ್ರಾನ್ಸ್) ತಲಾ ಒಂದೊಂದು ಉಪಗ್ರಹಗಳು ಇದ್ದವು.

ಫಸ್ಟ್‌ಲುಕ್ ಬಿಡುಗಡೆಗೊಳಿಸಿದ ಆರ್‌.ಚಂದ್ರು

‘ವೀರಂ ವಿರೋಧಂ’ಗೆ ಆರ್.ಚಂದ್ರು ಸಾಥ್

‘ಮನಸಾಗಿದೆ’ ಮತ್ತು ‘ಮಂಡ್ಯ ಹೈದ’ ಸಿನಿಮಾ ಮೂಲಕ ಚಂದನವನದಲ್ಲಿ ಗುರುತಿಸಿಕೊಂಡಿರುವ ಯುವ ನಟ ಅಭಯ್ ಚಂದ್ರು ಮೂರನೇ ಸಿನಿಮಾ ಶೀಘ್ರದಲ್ಲೇ ಸೆಟ್ಟೇರಲಿದೆ.

ಇತ್ತೀಚೆಗೆ ನಿರ್ದೇಶಕ, ನಿರ್ಮಾಪಕ ಆರ್.ಚಂದ್ರು ಅವರು ಅಭಯ್ ಹೊಸ ಸಿನಿಮಾ ‘ವೀರಂ ವಿರೋಧಂ’ನ ಶೀರ್ಷಿಕೆ ಹಾಗೂ ಫಸ್ಟ್‌ಲುಕ್ ಬಿಡುಗಡೆಗೊಳಿಸಿದರು. ತೇಜಸ್ ಕ್ರಿಯೇಶನ್ಸ್ ಅಡಿಯಲ್ಲಿ ಐದು ಚಿತ್ರಗಳನ್ನು ನಿರ್ಮಾಣ ಮಾಡಿರುವ ಎಸ್. ಚಂದ್ರಶೇಖರ್ ಈ ಸಿನಿಮಾ ನಿರ್ದೇಶಿಸುತ್ತಿದ್ದಾರೆ. ಈ ಮೂಲಕ ಅವರು ನಿರ್ದೇಶನದಲ್ಲಿ ಹೊಸ ಹೆಜ್ಜೆ ಇಡುತ್ತಿದ್ದಾರೆ. ಅವರೇ ಸಿನಿಮಾಗೆ ಬಂಡವಾಳ ಹೂಡುವುದರ ಜೊತೆಗೆ ಕಥೆಯನ್ನೂ ಬರೆದಿದ್ದಾರೆ. ‘ಇದೊಂದು ಸೆಸ್ಪೆನ್ಸ್, ಥ್ರಿಲ್ಲರ್ ಹಾಗೂ ಮಿಸ್ಟರಿ ಅಂಶಗಳು ಇರುವ ಕಥೆಯಾಗಿದೆ. ಅಭಯ್ ಚಂದ್ರು ಜನ್ಮದಿನದ ಅಂಗವಾಗಿ ಫಸ್ಟ್‌ಲುಕ್ ಬಿಡುಗಡೆ ಮಾಡಿದ್ದೇವೆ. ನಾಯಕಿ, ತಾರಾಗಣದ ವಿವರವನ್ನು ಮುಹೂರ್ತದ ದಿನ ನೀಡುತ್ತೇವೆ’ ಎಂದಿದ್ದಾರೆ ಚಂದ್ರಶೇಖರ್.

ಅಭಯ್ ಈ ಸಿನಿಮಾದಲ್ಲಿ ಇನ್‌ಸ್ಪೆಕ್ಟರ್ ಆಗಿ ನಟಿಸುತ್ತಿದ್ದು, ಸಂತೋಷ್ ಜೋಶ್ವಾ ಸಂಗೀತ, ಶಂಕರ್ ಛಾಯಾಚಿತ್ರಗ್ರಹಣ, ವೆಂಕಟ್ ಗೌಡ ಎಸ್. ಸಂಕಲನ, ರವಿವರ್ಮಾ-ಥ್ರಿಲ್ಲರ್ ಮಂಜು ಸಾಹಸ ನಿರ್ದೇಶನ, ಕಂಬಿರಾಜು ನೃತ್ಯ ನಿರ್ದೇಶನ ಚಿತ್ರಕ್ಕಿರಲಿದೆ.

ರಾವಣಾಸುರಂ ಹಾಡು ಬಿಡುಗಡೆ

ಎಂ.ಜೆ.ಜಯರಾಜ್ ನಿರ್ದೇಶಿಸಿ, ನಾಯಕರಾಗಿ ನಟಿಸಿರುವ ‘ದೈವ’ ಸಿನಿಮಾದ ‘ರಾವಣಾಸುರಂ’ ಹಾಡು ಇತ್ತೀಚೆಗೆ ಕಲ್ಪವೃಕ್ಷ ಕ್ರಿಯೇಷನ್ಸ್ ಯುಟ್ಯೂಬ್ ಚಾನಲ್‌ನಲ್ಲಿ ಬಿಡುಗಡೆಯಾಗಿದೆ.

ಕಲ್ಪವೃಕ್ಷ ಕ್ರಿಯೇಷನ್ಸ್ ಬ್ಯಾನರ್ ಅಡಿಯಲ್ಲಿ ಜಯಮ್ಮ ಪದ್ಮರಾಜ್ ಈ ಸಿನಿಮಾವನ್ನು ನಿರ್ಮಿಸಿದ್ದು, ರಾಮಪ್ಪ ಸೋಮಪ್ಪ ಮೇಗಲಮನಿ, ಸೋಮಶೇಖರ್ ಜಿ.ಪಟ್ಟಣಶೆಟ್ಟಿ ನಿರ್ಮಾಣಕ್ಕೆ ಜೊತೆಯಾಗಿದ್ದಾರೆ.

‘ಇದೊಂದು ಪಕ್ಕಾ ದೇಸಿ ಕಥಾಹಂದರ ಹೊಂದಿರುವ ಚಿತ್ರವಾಗಿದೆ. ಚಿತ್ರದಲ್ಲಿ ಕಾಲಭೈರವನ ಆರಾಧಕನಾಗಿ ಜೋಗಯ್ಯನ ಪಾತ್ರದಲ್ಲಿ ಎರಡು ಗೆಟಪ್‌ಗಳಲ್ಲಿ ಜಯರಾಜ್ ಕಾಣಿಸಿಕೊಂಡಿದ್ದಾರೆ’ ಎಂದಿದೆ ಚಿತ್ರತಂಡ. ನಾಯಕನನ್ನು ಪರಿಚಯಿಸುವ ‘ರಾವಣಾಸುರಂ’ ಹಾಡಿಗೆ ಮೂರ್ತಿ ಟಿ.ಎಂ. ಸಾಹಿತ್ಯವಿದ್ದು, ಅನಿರುದ್ಧ ಶಾಸ್ತ್ರಿ ಮತ್ತು ವಿಜೇತ ಮಂಜಯ್ಯ ಹಾಡಿದ್ದಾರೆ. ವಿಜೇತ್ ಮಂಜಯ್ಯ ಸಂಗೀತ ನಿರ್ದೇಶನದಲ್ಲಿ ಮೂಡಿಬಂದಿರುವ ಹಾಡಿಗೆ ವಿನಯ್ ನೃತ್ಯ ನಿರ್ದೇಶನ ಮಾಡಿದ್ದಾರೆ.

ಈಗಾಗಲೇ ಚಿತ್ರೀಕರಣ ಮುಗಿಸಿರುವ ‘ದೈವ’ ಚಿತ್ರ ಸದ್ಯದಲ್ಲೇ ಪ್ರೇಕ್ಷಕರ ಎದುರು ಬರಲಿದೆ. ಚಿತ್ರಕ್ಕೆ ಸಿದ್ಧಾರ್ಥ್ ಎಚ್.ಆರ್. ಛಾಯಾಚಿತ್ರಗ್ರಹಣವಿದ್ದು, ಸುರಭಿ, ನೀತು ರಾಯ್, ಬಲ ರಾಜವಾಡಿ, ಮಂಜುರಾಜ್ ಸೂರ್ಯ, ಅರುಣ್ ಬಚ್ಚನ್ ಮುಂತಾದವರು ತಾರಾಬಳಗದಲ್ಲಿದ್ದಾರೆ.

ಎಂ.ಜೆ.ಜಯರಾಜ್



ಸದ್ಯದಲ್ಲೇ ವೈಲ್ಡ್ ಟೈಗರ್ ಸಫಾರಿ

‘ಕೆ.ಜಿ.ಎಫ್’ ಸಿನಿಮಾ ಖ್ಯಾತಿಯ ಸಂಭಾಷಣೆಕಾರ ಚಂದ್ರಮೌಳಿ ನಿರ್ದೇಶನದ ‘ವೈಲ್ಡ್ ಟೈಗರ್ ಸಫಾರಿ’ ಸಿನಿಮಾ ರಿಲೀಸ್‌ಗೆ ಸಜ್ಜಾಗುತ್ತಿದ್ದು, ಚಿತ್ರದ ಟೀಸರ್ ಇತ್ತೀಚೆಗೆ ದುಬೈನಲ್ಲಿ ಬಿಡುಗಡೆಯಾಯಿತು.

ಬಾಲಿವುಡ್‌ನ ಖ್ಯಾತ ನೃತ್ಯ ನಿರ್ದೇಶಕ ರೆಮೋ ಡಿಸೋಜಾ ಟೀಸರ್ ರಿಲೀಸ್ ಮಾಡಿದರು. ಸಿನಿಮಾದಲ್ಲಿ ಶಿಥಿಲ್ ಪೂಜಾರಿ ನಾಯಕನಾಗಿ ನಟಿಸಿದ್ದು, ಅವರಿಗೆ ಇದು ಮೊದಲ ಕನ್ನಡ ಸಿನಿಮಾ. ನಾಯಕಿಯಾಗಿ ನಿಮಿಕಾ ರತ್ನಾಕರ್ ಬಣ್ಣಹಚ್ಚಿದ್ದಾರೆ. ಈ ಸಿನಿಮಾ ಕನ್ನಡದ ಜೊತೆಗೆ ಹಿಂದಿಯಲ್ಲೂ ಬಿಡುಗಡೆಯಾಗುತ್ತಿದೆ. ವಿಕೆ ಫಿಲ್ಮ್ ಬ್ಯಾನರ್‌ನಲ್ಲಿ ಸಿನಿಮಾ ಮೂಡಿಬಂದಿದ್ದು ದುಬೈನಲ್ಲಿ ನೆಲೆಸಿರುವ ವಿನೋದ್ ಕುಮಾರ್, ಕಿಶೋರ್ ಕುಮಾರ್, ಪ್ರಸನ್ನ ಕುಮಾರ್ ಹಾಗೂ ನಿರ್ದೇಶಕ ಗುರುದತ್ ಗಾಣಿಗ ನಿರ್ಮಾಣದಲ್ಲಿ ಜೊತೆಯಾಗಿದ್ದಾರೆ.

ಸದ್ಯ ಚಿತ್ರೀಕರಣ ಪೂರ್ಣಗೊಳಿಸಿ ಪೋಸ್ಟ್ ಪ್ರೊಡಕ್ಷನ್ ಕೆಲಸದಲ್ಲಿ ನಿರತವಾಗಿದೆ ಚಿತ್ರತಂಡ. ಟೀಸರ್‌ನಲ್ಲಿ ಮಾಸ್ ಅವತಾರದಲ್ಲಿ ಶಿಥಿಲ್ ಕಾಣಿಸಿಕೊಂಡಿದ್ದು, ಇದೊಂದು ಆ್ಯಕ್ಷನ್ ಜಾನರ್‌ನ ಸಿನಿಮಾ ಎನ್ನುವ ಸುಳಿವು ನೀಡಿದೆ. ಆ್ಯಕ್ಷನ್ ಜೊತೆಗೆ ಪ್ರತೀಕಾರದ ಕಥೆ ಸಿನಿಮಾದಲ್ಲಿದೆ ಎಂದಿದೆ ಚಿತ್ರತಂಡ. ಕೆ.ಜಿ.ಎಫ್ ಸಿನಿಮಾದಲ್ಲಿ ಮಿಂಚಿದ್ದ ನಟ ಅವಿನಾಶ್ ಹಾಗೂ ಅಚ್ಯುತ್ ಕುಮಾರ್ ಪ್ರಮುಖ ಪಾತ್ರದಲ್ಲಿ ನಟಿಸಿದ್ದು, ಬಾಲಿವುಡ್‌ನಲ್ಲಿ ನಟರಾಗಿ ಹಾಗೂ ನೃತ್ಯ ಸಂಯೋಜಕರಾಗಿ ಖ್ಯಾತಿ ಹೊಂದಿರುವ ಧರ್ಮೇಶ್ ಮತ್ತು ಸುಶಾಂತ್ ಪೂಜಾರಿಯೂ ತಾರಾಬಳಗದಲ್ಲಿದ್ದಾರೆ. ಹಿಂದಿಯ ‘ಎಬಿಸಿಡಿ’ ಸಿನಿಮಾದಲ್ಲಿ ನಟಿಸಿದ್ದ ಕೆಲ ಕಲಾವಿದರೂ ಚಿತ್ರದಲ್ಲಿರಲಿದ್ದಾರೆ. ಸಿನಿಮಾಗೆ ಸಚಿನ್ ಬಸ್ರೂರು ಸಂಗೀತವಿದೆ.

ರಾಣಿ @30

ರಾಣಿ ಮುಖರ್ಜಿ

ನಟಿ ರಾಣಿ ಮುಖರ್ಜಿ ಬಣ್ಣದ ಲೋಕಕ್ಕೆ ಕಾಲಿಟ್ಟು 30 ವರ್ಷ ಉರುಳಿದೆ. 1996ರಲ್ಲಿ ತೆರೆಕಂಡ ‘ರಾಜಾ ಕಿ ಆಯೇಗಿ ಬಾರಾತ್’ ಸಿನಿಮಾ ಮೂಲಕ ರಾಣಿ ಮೊದಲ ಹೆಜ್ಜೆ ಇಟ್ಟಿದ್ದರು.

ಯಶ್ ರಾಜ್ ಫಿಲ್ಮ್ಸ್ ನಿರ್ಮಾಣದ ‘ಮರ್ದಾನಿ 3’ ಸಿನಿಮಾ ಬಿಡುಗಡೆ ಹೊಸ್ತಿಲಲ್ಲಿ ಈ ಮೂವತ್ತು ವರ್ಷಗಳ ಪಯಣವನ್ನು ರಾಣಿ ಮುಖರ್ಜಿ ಒಂದು ಪತ್ರದ ಮುಖೇನ ಮೆಲುಕು ಹಾಕಿದ್ದಾರೆ. ‘ಕುತೂಹಲ, ಭಯ, ಕಥೆಯ ಕುರಿತ ಪ್ರೀತಿ ನನ್ನ ಈ ಪಯಣವನ್ನು ಆರಂಭಿಸಿತು. ಇದು ಈಗ ವೃತ್ತಿಯಾಗಿ ಬದಲಾಗಿದೆ. ಮೂರು ದಶಕಗಳು ಉರುಳಿದ್ದರೂ, ಇಂದಿಗೂ ನಾನು ಹೊಸಬಳಾಗಿಯೇ ಹೆಜ್ಜೆಗಳನ್ನು ಇಡುತ್ತಿದ್ದೇನೆ. ಹೊಸ ಸವಾಲುಗಳಿಗಾಗಿ ಎದುರು ನೋಡುತ್ತಿರುತ್ತೇನೆ. ಎಲ್ಲಿಯವರೆಗೂ ಹೇಳಲು ಕಥೆಗಳು, ಭಾವನೆಗಳು ಇರುತ್ತಾವೆಯೋ ಅಲ್ಲಿಯವರೆಗೂ ಈ ಸುಂದರವಾದ ಕಲೆಯ ವಿದ್ಯಾರ್ಥಿ-ಯಾಗಿರುತ್ತೇನೆ’ ಎಂದಿದ್ದಾರೆ 47 ವರ್ಷದ ರಾಣಿ ಮುಖರ್ಜಿ.

“‘ಬಂಟಿ ಔರ್ ಬಬ್ಲಿ’ಯಲ್ಲಿ ದೊಡ್ಡ ಕನಸನ್ನು ಹೊತ್ತ ಸಣ್ಣ ಪಟ್ಟಣದ ಹುಡುಗಿಯಾಗಿ, ‘ನೋ ಒನ್ ಕಿಲ್ಡ್ ಜೆಸ್ಸಿಕಾ’ದಲ್ಲಿ ದಿಟ್ಟ ಪತ್ರಕರ್ತೆಯಾಗಿ, ‘ಮರ್ದಾನಿ’ಯಲ್ಲಿ ಪೊಲೀಸ್ ಅಧಿಕಾರಿಯಾಗಿ ನಟಿಸುವಾಗ ಆ ಪಾತ್ರಗಳ ಜೊತೆಯಲ್ಲಿ ಒಂದು ದೃಢವಾದ ಸಂಬಂಧದ ಭಾವನೆ ಬಂದಿತ್ತು. ಈ ಪಾತ್ರಗಳು ಎಂದಿಗೂ ಹಿಂದಡಿ ಇಡದೆ, ಪುರುಷ ಪ್ರಧಾನ ವ್ಯವಸ್ಥೆಯನ್ನು ಒಡೆಯುವಂತೆ ಕಂಡವು. ನನ್ನ ಜೀವನದಲ್ಲಿ ಮದುವೆ, ಮಕ್ಕಳು ಎನ್ನುವುದು ಈ ಪಯಣಕ್ಕೆ ಅಡ್ಡಿಯಾಗಲೇ ಇಲ್ಲ. ಇದು ಸಿನಿಮಾ ಮೇಲಿನ ನನ್ನ ಗಮನವನ್ನು ಇನ್ನಷ್ಟು ಕೇಂದ್ರೀಕರಿಸಿತು’ ಎಂದಿದ್ದಾರೆ ರಾಣಿ.

ರಾಣಿ ನಟನೆಯ ‘ಮರ್ದಾನಿ 3’ ಸಿನಿಮಾ ಇದೇ 30ರಂದು ತೆರೆಕಾಣುತ್ತಿದ್ದು, ಚಿತ್ರವನ್ನು ಅಭಿರಾಜ್ ಮಿನವಾಲ ನಿರ್ದೇಶಿಸಿದ್ದಾರೆ.

ಆಯೋಗದ ಉತ್ತರ ಕೋರಿದ ‘ಸುಪ್ರೀಂ’

ಪಶ್ಚಿಮ ಬಂಗಾಳ: ಎಸ್‌ಐಆರ್ ವೇಳೆ ವ್ಯಾಪಕ ಅಕ್ರಮ– ಟಿಎಂಸಿ ಸಂಸದರಿಂದ ಹೊಸ ಅರ್ಜಿ

ನವದೆಹಲಿ (ಪಿಟಿಐ): ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ವೇಳೆ ಅನಿಯಂತ್ರಿತವಾಗಿ ಅಕ್ರಮಗಳು ನಡೆದಿವೆ ಎಂದು ಆರೋಪಿಸಿ ತೃಣಮೂಲ ಕಾಂಗ್ರೆಸ್ ಸಂಸದರು ಸಲ್ಲಿಸಿದ ಮಧ್ಯಂತರ ಅರ್ಜಿ ವಿಚಾರಣೆ ನಡೆಸಿದ ಸುಪ್ರೀಂ ಕೋರ್ಟ್, ಈ ಕುರಿತು ಉತ್ತರ ನೀಡುವಂತೆ ಚುನಾವಣಾ ಆಯೋಗಕ್ಕೆ ತಿಳಿಸಿದೆ.

ರಾಜ್ಯದಲ್ಲಿ ನಡೆಯುತ್ತಿರುವ ಎಸ್‌ಐಆರ್‌ನ ಕಾರ್ಯವಿಧಾನವನ್ನು ಪ್ರಶ್ನಿಸಿ ತೃಣಮೂಲ ಕಾಂಗ್ರೆಸ್ ನಾಯಕ, ರಾಜ್ಯಸಭಾ ಸದಸ್ಯರಾದ ಡೆರೆಕ್ ಒಬ್ರಯಾನ್, ಡೋಲಾ ಸೇನ್ ಸಲ್ಲಿಸಿದ ಅರ್ಜಿಯ ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್, ಜಾಯ್‌ಮಾಲ್ಯ ಅವರಿದ್ದ ನ್ಯಾಯಪೀಠ, ಇದಕ್ಕೆ ಉತ್ತರಿಸುವಂತೆ ಆಯೋಗಕ್ಕೆ ಸೂಚಿಸಿತು.

ಮುಖ್ಯಾಂಶಗಳು

- ಎಸ್‌ಐಆರ್ ವೇಳೆ ಅನಿಯಂತ್ರಿತ ಅಕ್ರಮ
- ಟಿಎಂಸಿ ಸಂಸದರಿಂದ ಸುಪ್ರೀಂ ಕೋರ್ಟ್‌ಗೆ ಮಧ್ಯಂತರ ಅರ್ಜಿ
- ಉತ್ತರ ನೀಡುವಂತೆ ಆಯೋಗಕ್ಕೆ ಸೂಚಿಸಿದ ಸುಪ್ರೀಂ

ಡೆರೆಕ್ ಒಬ್ರಯಾನ್ ಪರ ಹಾಜರಾದ ಹಿರಿಯ ವಕೀಲ ಕಪಿಲ್ ಸಿಬಲ್, ‘ಎಸ್‌ಐಆರ್ ಕುರಿತು ಚುನಾವಣಾ ಆಯೋಗವು ತನ್ನ ಸೂಚನೆಗಳನ್ನು ಸಾಮಾಜಿಕ ಜಾಲತಾಣ ‘ವಾಟ್ಸ್‌ಆ್ಯಪ್’ ಮೂಲಕ ನೀಡುತ್ತಿದೆ. ಯಾವುದೇ ಔಪಚಾರಿಕ ಆದೇಶಗಳಿಲ್ಲದೇ, ಮತಗಟ್ಟೆ ಮಟ್ಟದ ಅಧಿಕಾರಿಗಳಿಗೆ ಕೆಲಸ ಮಾಡುವಂತೆ ತಿಳಿಸಲಾಗುತ್ತಿದೆ’ ಎಂದು ದೂರಿದರು.

ಅಲ್ಲದೇ, ‘ಆಯೋಗವು ಮತದಾರರ ಪ್ರತ್ಯೇಕ ವರ್ಗವೊಂದನ್ನು ಸೃಷ್ಟಿಸಿದೆ. ಇದು ತಾರತಮ್ಯದಿಂದ ಕೂಡಿದೆ. ಈ ವರ್ಗದ ಮತದಾರರ ವಿವರಗಳಲ್ಲಿ ಇರುವ ಲೋಪಗಳು ಅಥವಾ ವ್ಯತ್ಯಾಸಗಳ ಕಾರಣದಿಂದ ಮತದಾರರ ಪಟ್ಟಿಯಲ್ಲಿ ಸೇರ್ಪಡೆಯಾಗುವ ಅರ್ಹತೆಯನ್ನು ಸಾಬೀತು ಪಡಿಸಲು ವಿಚಾರಣೆಗೆ ಹಾಜರಾಗುವಂತೆ ನೋಟಿಸ್ ನೀಡಬಹುದಾಗಿದೆ’ ಎಂದು ನ್ಯಾಯಪೀಠದ ಗಮನಸೆಳೆದರು.

ಈ ವಿಚಾರವನ್ನು ಪರಿಗಣಿಸಿದ ಸುಪ್ರೀಂ ಕೋರ್ಟ್, ಇಬ್ಬರು ಸಂಸದರ ಅರ್ಜಿಗೆ ಸಂಬಂಧಿಸಿದಂತೆ, ಉತ್ತರವನ್ನು ವಾರದ ಒಳಗಾಗಿ ನೀಡುವಂತೆ ಆಯೋಗಕ್ಕೆ ಸೂಚಿಸಿತು. ಮುಂದಿನ ವಿಚಾರಣೆಯನ್ನು ಜನವರಿ 19ಕ್ಕೆ ನಿಗದಿಪಡಿಸಿತು.

ಸಿಇಸಿಗೆ ಪತ್ರ ಬರೆದ ಮಮತಾ

ಮಮತಾ ಬ್ಯಾನರ್ಜಿ

ಕೋಲ್ಕತ್ತ (ಪಿಟಿಐ): ‘2002ರ ಮತದಾರರ ಪಟ್ಟಿಯನ್ನು ಕೃತಕ ಬುದ್ಧಿಮತ್ತೆ (ಎ.ಐ) ಆಧರಿಸಿ ಡಿಜಿಟಲೀಕರಣಗೊಳಿಸಿದ್ದರಿಂದ ಎಸ್‌ಐಆರ್ ಪ್ರಕ್ರಿಯೆಯಲ್ಲಿ ನೈಜ ಮತದಾರರನ್ನು ಗುರುತಿಸಲು ಸಂಕಷ್ಟ ಎದುರಾಗಿದೆ’ ಎಂದು ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರು ಮುಖ್ಯ ಚುನಾವಣಾ ಆಯುಕ್ತ (ಸಿಇಸಿ) ಗ್ಯಾನೇಶ್ ಕುಮಾರ್ ಅವರಿಗೆ ಪತ್ರದಲ್ಲಿ ತಿಳಿಸಿದ್ದಾರೆ.

ಎಸ್‌ಐಆರ್ ಕುರಿತಂತೆ ಸಿಇಸಿಗೆ ಐದನೇ ಪತ್ರ ಬರೆದಿರುವ ಅವರು, ‘2002ರ ಮತದಾರರ ಪಟ್ಟಿಯನ್ನು ಎ.ಐ ಟೂಲ್ ಬಳಸಿ ಡಿಜಿಟಲೀಕರಣಗೊಳಿಸುವ ವೇಳೆ ಹಲವು ತಪ್ಪುಗಳು ಉಂಟಾಗಿವೆ. ದೊಡ್ಡ ಪ್ರಮಾಣದ ದತ್ತಾಂಶಗಳ ಹೊಂದಾಣಿಕೆಯಾಗಿಲ್ಲ. ನೈಜ ಮತದಾರರನ್ನು ತಪ್ಪಾಗಿ ವರ್ಗೀಕರಣ ಮಾಡಲಾಗಿದೆ’ ಎಂದು ಪತ್ರದಲ್ಲಿ ದೂರಿದ್ದಾರೆ.

ಹೆಚ್ಚಿದ ಒತ್ತಡ: ಪ್ರತಿಭಟನೆ

ಕೋಲ್ಕತ್ತ (ಪಿಟಿಐ): ಎಸ್‌ಐಆರ್ ಪ್ರಕ್ರಿಯೆಯಲ್ಲಿ ಹೆಚ್ಚಿನ ಒತ್ತಡದಿಂದ ಮತಗಟ್ಟೆ ಮಟ್ಟದ ಅಧಿಕಾರಿಗಳು (ಬಿಎಲ್‌ಒ) ಮೃತಪಟ್ಟಿದ್ದರೂ ಆಯೋಗವು ಸಂಪೂರ್ಣವಾಗಿ ನಿರ್ಲಕ್ಷ್ಯ ವಹಿಸಿದೆ ಎಂದು ಆರೋಪಿಸಿ ಪಶ್ಚಿಮ ಬಂಗಾಳ ಚುನಾವಣಾ ಆಯೋಗದ ಕಚೇರಿಯ ಮುಂದೆ ಬಿಎಲ್‌ಒಗಳು ಸೋಮವಾರ ಪ್ರತಿಭಟನೆ ನಡೆಸಿದರು.

ಬಿಎಲ್‌ಒ ಅಧಿಕಾರ್ ರಕ್ಷಾ ಸಮಿತಿ ನೇತೃತ್ವದಲ್ಲಿ ಪ್ರತಿಭಟನೆ ನಡೆಸಿದ ಅವರು, ಎಸ್‌ಐಆರ್ ಪ್ರಕ್ರಿಯೆಯಿಂದ ರಾಜ್ಯದಾದ್ಯಂತ ಬಿಎಲ್‌ಒಗಳು ಹೆಚ್ಚಿನ ಒತ್ತಡಕ್ಕೆ ಸಿಲುಕಿದ್ದಾರೆ. ಹೆಚ್ಚಿನ ಕೆಲಸದ ಒತ್ತಡವು ಆರೋಗ್ಯದ ಮೇಲೂ ತೀವ್ರ ಪರಿಣಾಮ ಬೀರುತ್ತಿದೆ ಎಂದು ಆರೋಪಿಸಿದ್ದಾರೆ.

ಎಸ್‌ಐಆರ್: ನೌಕಾಪಡೆಯ ಮಾಜಿ ಮುಖ್ಯಸ್ಥರಿಗೆ ಇ.ಸಿ ನೋಟಿಸ್

ಪಣಜಿ (ಪಿಟಿಐ): ನೌಕಾಪಡೆಯ ಮಾಜಿ ಮುಖ್ಯಸ್ಥ ಅಡ್ಮಿರಲ್ ಅರುಣ್ ಪ್ರಕಾಶ್ ಅವರಿಗೆ ನೋಟಿಸ್ ನೀಡಿರುವ ಚುನಾವಣಾ ಆಯೋಗ (ಇ.ಸಿ), ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕಣೆ (ಎಸ್‌ಐಆರ್) ಭಾಗವಾಗಿ ತಮ್ಮ ಗುರುತನ್ನು ದೃಢಪಡಿಸಲು ವಿಚಾರಣೆಗೆ ಹಾಜರಾಗುವಂತೆ ಸೂಚಿಸಿದೆ.

ನಿವೃತ್ತಿಯ ಬಳಿಕ ಗೋವಾದಲ್ಲಿ ನೆಲಸಿರುವ ಅರುಣ್ ಅವರ ಕುರಿತು 2002ರ ಮತದಾರರ ಪಟ್ಟಿಯಲ್ಲಿನ ಮಾಹಿತಿ ಮತ್ತು ಈಗಿನ ಮಾಹಿತಿ ತಾಳೆಯಾಗುತ್ತಿಲ್ಲ ಎಂದು ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಈ ವಿಚಾರ ಸಾಮಾಜಿಕ ಜಾಲತಾಣದಲ್ಲಿ ಚರ್ಚೆಗೆ ಗ್ರಾಸವಾಗಿದೆ. ‘ಅರುಣ್ ಅವರ ಪಿಂಚಣಿ ಪಾವತಿ ಆದೇಶ ಮತ್ತು ಜೀವಿತ ಪ್ರಮಾಣಪತ್ರವು ಸರ್ಕಾರಿ ದತ್ತಾಂಶಗಳಲ್ಲಿ ಲಭ್ಯವಿರುವುದರಿಂದ ಎಸ್‌ಐಆರ್ ತಂಡಕ್ಕೆ ಇನ್ನೇನು ಬೇಕು’ ಎಂದು ‘ಎಕ್ಸ್’ ಬಳಕೆದಾರರು ಪ್ರಶ್ನಿಸಿದ್ದಾರೆ.

‘ನಿವೃತ್ತಿಯಾಗಿ 20 ವರ್ಷಗಳಾಗಿದ್ದು, ನಾನು ಯಾವುದೇ ಸೌಲಭ್ಯವನ್ನು ಕೇಳಿಲ್ಲ ಮತ್ತು ಪಡೆದಿಲ್ಲ. ನಾನು ಮತ್ತು ನನ್ನ ಪತ್ನಿ ಎಸ್‌ಐಆರ್ ಅರ್ಜಿಗಳನ್ನು ಭರ್ತಿ ಮಾಡಿದ್ದೇವೆ. 2026ರ ಗೋವಾ ಮತದಾರರ ಕರಡು ಪಟ್ಟಿಯಲ್ಲಿ ನಮ್ಮ ಹೆಸರಿದೆ’ ಎಂದು ಅರುಣ್ ಅವರು ‘ಎಕ್ಸ್’ನಲ್ಲಿ ಪೋಸ್ಟ್ ಮಾಡಿದ್ದಾರೆ.

‘ಸರಿಯಾದ ಮಾಹಿತಿಗಳು ದಾಖಲಾಗದಿದ್ದರೆ ಎಸ್‌ಐಆರ್ ಅರ್ಜಿಯನ್ನು ಪರಿಷ್ಕರಿಸಬೇಕು. ಬಿಎಲ್‌ಒಗಳು ನಮ್ಮನ್ನು ಮೂರು ಬಾರಿ ಭೇಟಿ ಮಾಡಿದ್ದಾರೆ. ಅವರು ಹೆಚ್ಚಿನ ಮಾಹಿತಿಯನ್ನು ಕೇಳಬಹುದಿತ್ತು. 82 ವಯಸ್ಸಿನ ನನಗೆ ಮತ್ತು 78 ವಯಸ್ಸಿನ ನನ್ನ ಪತ್ನಿಗೆ 18 ಕಿ.ಮೀ. ದೂರದಲ್ಲಿನ ವಿಚಾರಣಾ ಕೇಂದ್ರಕ್ಕೆ ಬೇರೆ ಬೇರೆ ದಿನಗಳಲ್ಲಿ ಹಾಜರಾಗಲು ಸೂಚಿಸಲಾಗಿದೆ’ ಎಂದು ಬೇಸರ ವ್ಯಕ್ತಪಡಿಸಿದ್ದಾರೆ.

‘ಅರುಣ್ ಅವರ ಅರ್ಜಿಯನ್ನು ಪರಿಶೀಲಿಸುತ್ತೇವೆ. ಅಧಿಕಾರಿಗಳು ಅವರನ್ನು ಭೇಟಿ ಮಾಡಲಿದ್ದಾರೆ’ ಎಂದು ಗೋವಾ ಜಿಲ್ಲಾಧಿಕಾರಿ ತಿಳಿಸಿದ್ದಾರೆ.

ಅಗತ್ಯ ಮಾಹಿತಿ ನೀಡಿಲ್ಲ: ಆಯೋಗ

ಅಡ್ಮಿರಲ್ ಅರುಣ್ ಪ್ರಕಾಶ್ ಅವರಿಗೆ ನೋಟಿಸ್ ನೀಡಿರುವ ಬಗ್ಗೆ ಸ್ಪಷ್ಟನೆ ನೀಡಿರುವ ಭಾರತೀಯ ಚುನಾವಣಾ ಆಯೋಗ, ‘ಹಿಂದಿನ ಎಸ್‌ಐಆರ್‌ಗೆ ಸಂಬಂಧಿಸಿದ ಕಡ್ಡಾಯ ಮಾಹಿತಿಗಳನ್ನು ಅರುಣ್ ಅವರ ಅರ್ಜಿ ಹೊಂದಿರಲಿಲ್ಲ’ ಎಂದು ತಿಳಿಸಿದೆ.

ಕೋರ್ಟಾಲಿಂ ವಿಧಾನಸಭಾ ಕ್ಷೇತ್ರದ ಬೂತ್ ಮಟ್ಟದ ಅಧಿಕಾರಿಯು ಅರುಣ್ ಅವರಿಂದ ಭರ್ತಿ ಮಾಡಿದ ಅರ್ಜಿಯನ್ನು ಸಂಗ್ರಹಿಸಿದ್ದಾರೆ. ಆದರೆ ಅವರ ಅರ್ಜಿಯಲ್ಲಿ ಮತದಾರರ ಹೆಸರು. ಎಪಿಕ್ ಸಂಖ್ಯೆ, ಸಂಬಂಧಿಕರ ಹೆಸರು, ವಿಧಾನಸಭಾ ಕ್ಷೇತ್ರದ ಹೆಸರು ಮತ್ತು ಸಂಖ್ಯೆ ಸೇರಿದಂತೆ ಹಿಂದಿನ ಎಸ್‌ಐಆರ್‌ಗೆ ಸಂಬಂಧಿಸಿದ ಅಗತ್ಯ ಮಾಹಿತಿಗಳು ಇರಲಿಲ್ಲ ಎಂದು ತಿಳಿಸಿದ್ದಾರೆ.

ಇಂಥ ಸಮಸ್ಯೆಗಳಾದಾಗ ಸ್ವಯಂಚಾಲಿತವಾಗಿ ನೋಟಿಸ್ ಜಾರಿಯಾಗುತ್ತದೆ ಎಂದು ಮಾಹಿತಿ ನೀಡಿದ್ದಾರೆ.

ಚಿಟಿಕೆ ಸುದ್ದಿ

ಧನಕರ್ ಆಸ್ಪತ್ರೆಗೆ ದಾಖಲು

ನವದೆಹಲಿ (ಪಿಟಿಐ): ಮಾಜಿ ಉಪ ರಾಷ್ಟ್ರಪತಿ ಜಗದೀಪ್ ಧನಕರ್ ಅವರ ಆರೋಗ್ಯದಲ್ಲಿ ಏರುಪೇರಾಗಿರುವ ಕಾರಣ ಅವರನ್ನು ಅಖಿಲ ಭಾರತೀಯ ವೈದ್ಯಕೀಯ ವಿಜ್ಞಾನ ಸಂಸ್ಥೆಗೆ (ಎಐಐಎಂಎಸ್) ಸೋಮವಾರ ದಾಖಲಿಸಲಾಗಿದೆ.

‘ಧನಕರ್ ಅವರು ಜನವರಿ 10ರಂದು ಎರಡು ಬಾರಿ ಪ್ರಜ್ಞೆ ತಪ್ಪಿದ್ದರು. ವೈದ್ಯಕೀಯ ಪರೀಕ್ಷೆಗಾಗಿ ಅವರನ್ನು ಸೋಮವಾರ ಆಸ್ಪತ್ರೆಗೆ ಕರೆತರಲಾಗಿತ್ತು. ವೈದ್ಯರ ಸೂಚನೆಯಂತೆ ಅವರನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ’ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

‘ಕಲ್ಲಿದ್ದಲು: ಸುಲಿಗೆ ಹಣ ಚುನಾವಣಾ ವೆಚ್ಚಕ್ಕೆ’

ನವದೆಹಲಿ (ಪಿಟಿಐ): ಛತ್ತೀಸಗಢದ ಈ ಹಿಂದಿನ ಕಾಂಗ್ರೆಸ್ ನೇತೃತ್ವದ ಸರ್ಕಾರದ ಆಡಳಿತದಲ್ಲಿ, ಕಲ್ಲಿದ್ದಲು ತೆರಿಗೆಯ ಹೆಸರಿನಲ್ಲಿ ಅಕ್ರಮವಾಗಿ ಸಂಗ್ರಹಿಸಿದ ₹540 ಕೋಟಿ ಸುಲಿಗೆಯ ಹಣವನ್ನು ಚುನಾವಣಾ ಸಂಬಂಧಿತ ವೆಚ್ಚಗಳಿಗೆ, ರಾಜಕಾರಣಿಗಳು ಮತ್ತು ಅಧಿಕಾರಿಗಳಿಗೆ ಲಂಚ ನೀಡಲು ಬಳಸಲಾಗಿದೆ ಎಂದು ಜಾರಿ ನಿರ್ದೇಶನಾಲಯ (ಇ.ಡಿ) ಸೋಮವಾರ ಹೇಳಿದೆ.

ಮುಖ್ಯಮಂತ್ರಿ ಕಚೇರಿಯಲ್ಲಿ ಕಾರ್ಯದರ್ಶಿಯಾಗಿದ್ದು ಅಮಾನತುಗೊಂಡ ರಾಜ್ಯ ಆಡಳಿತ ಸೇವಾ ಅಧಿಕಾರಿ ಸೌಮ್ಯಾ ಚೌರಾಸಿಯಾ ಮತ್ತು ಇನ್ನೊಬ್ಬ ವ್ಯಕ್ತಿಯ ಒಟ್ಟು ₹2.66 ಕೋಟಿ ಮೌಲ್ಯದ ಆಸ್ತಿಗಳನ್ನು ಈ ಆರೋಪದ ನಂಟಿನ ಹಣ ಅಕ್ರಮ ವರ್ಗಾವಣೆ ತನಿಖೆಯ ಭಾಗವಾಗಿ ಮುಟ್ಟುಗೋಲು ಹಾಕಿಕೊಳ್ಳಲಾಗಿದೆ ಎಂದಿದೆ.

ಹಣ ಅಕ್ರಮ ವರ್ಗಾವಣೆ ತಡೆ ಕಾಯ್ದೆಯಡಿ (ಪಿಎಂಎಲ್‌ಎ) ಒಟ್ಟು ಎಂಟು ಸ್ಥಿರ ಆಸ್ತಿಗಳು, ಭೂಮಿ ಮತ್ತು ವಸತಿ ಫ್ಲಾಟ್‌ಗಳನ್ನು ತಾತ್ಕಾಲಿಕವಾಗಿ ಮುಟ್ಟುಗೋಲು ಹಾಕಿಕೊಳ್ಳಲಾಗಿದೆ.

ಗುಜರಾತ್‌ನಲ್ಲಿ ಭೇಟಿಯಾದ ಮೋದಿ–ಫ್ರೆಡರಿಕ್ ಮೆರ್ಜ್ • 19 ಒಪ್ಪಂದಗಳಿಗೆ ಉಭಯ ದೇಶಗಳು ಸಹಿ

‘ಭಾರತ–ಜರ್ಮನಿ ನಡುವಿನ ಸಂಬಂಧಕ್ಕೆ ನವ ಶಕ್ತಿ’

ಪ್ರಜಾವಾಣಿ ವಾರ್ತೆ

ಅಹಮದಾಬಾದ್: ಗುಜರಾತ್‌ನ ಗಾಂಧಿನಗರದಲ್ಲಿರುವ ಮಹಾತ್ಮ ಮಂದಿರದಲ್ಲಿ ಭಾರತ ಮತ್ತು ಜರ್ಮನಿ ನಡುವೆ ಸೋಮವಾರ ಮಹತ್ವದ ದ್ವಿಪಕ್ಷೀಯ ಮಾತುಕತೆಗಳು ನಡೆದವು.

ಮಾತುಕತೆ ಮುಗಿದ ಬಳಿಕ ಪತ್ರಕರ್ತರಿಗೆ ಮಾಹಿತಿ ನೀಡಿದ ಪ್ರಧಾನಿ ನರೇಂದ್ರ ಮೋದಿ ಅವರು, ‘ಎರಡೂ ರಾಷ್ಟ್ರಗಳು ಇತ್ತೀಚೆಗಷ್ಟೇ ಪಾಲುದಾರಿಕೆಯ 25ನೇ ವರ್ಷ ಹಾಗೂ 75 ವರ್ಷಗಳ ರಾಜತಾಂತ್ರಿಕ ಸಂಬಂಧವನ್ನು ಪೂರೈಸಿವೆ. ಇಂತಹ ಮಹತ್ವದ ಘಟ್ಟದಲ್ಲಿ ಜರ್ಮನಿಯ ಚಾನ್ಸಲರ್ ಫ್ರೆಡರಿಕ್ ಮೆರ್ಜ್ ಅವರು ಭೇಟಿ ನೀಡಿದ್ದಾರೆ’ ಎಂದು ಹೇಳಿದ್ದಾರೆ.

‘ಫ್ರೆಡರಿಕ್ ಮೆರ್ಜ್ ಅವರ ಭೇಟಿಯು ಭಾರತ ಮತ್ತು ಜರ್ಮನಿ ನಡುವಿನ ಬೆಳೆಯುತ್ತಿರುವ ಆರ್ಥಿಕತೆ ಮತ್ತು ಕಾರ್ಯತಂತ್ರದ ಸಂಬಂಧಕ್ಕೆ ನವ ಶಕ್ತಿ ನೀಡಲಿದೆ’ ಎಂದು ಮೋದಿ ಬಣ್ಣಿಸಿದ್ದಾರೆ.

‘ನಮ್ಮ ದ್ವಿಪಕ್ಷೀಯ ವ್ಯಾಪಾರ 50 ಶತಕೋಟಿ ಡಾಲರ್‌ಗಳನ್ನು ದಾಟಿ ಸಾರ್ವಕಾಲಿಕ ಎತ್ತರಕ್ಕೇರಿದೆ. ಜರ್ಮನಿಯ 2,000ಕ್ಕೂ ಅಧಿಕ ಕಂಪನಿಗಳು ಭಾರತದಲ್ಲಿ ಕಾರ್ಯಾಚರಿಸುತ್ತಿವೆ. ನಮ್ಮ ದೇಶದ ಮೇಲೆ ಅವರಿಗಿರುವ ವಿಶ್ವಾಸವನ್ನು ಇದು ತೋರಿಸುತ್ತದೆ’ ಎಂದಿದ್ದಾರೆ.

> ಏಷ್ಯಾದ ರಾಷ್ಟ್ರಗಳಿಗೆ ಮೆರ್ಜ್ ಅವರ ಮೊದಲ ಭೇಟಿ ಭಾರತದೊಂದಿಗೆ ಆರಂಭವಾಗಿರುವುದು ಜರ್ಮನಿ ಮತ್ತು ಭಾರತ ದೇಶಗಳ ಸಂಬಂಧದ ಮಹತ್ವ ತಿಳಿಸುತ್ತದೆ
>
> **ನರೇಂದ್ರ ಮೋದಿ,** ಪ್ರಧಾನಿ

ಆರ್ಥಿಕತೆ, ರಕ್ಷಣಾ ಕ್ಷೇತ್ರ, ಔಷಧ ವಲಯ, ಕಾರ್ಯತಂತ್ರಗಳ ಪಾಲುದಾರಿಕೆ, ಶಿಕ್ಷಣ, ಕಾನೂನುಬದ್ಧ ವಲಸೆ ಸೇರಿದಂತೆ 19 ಒಪ್ಪಂದಗಳಿಗೆ ಭಾರತ ಮತ್ತು ಜರ್ಮನಿ ಸಹಿ ಹಾಕಿವೆ.

ಭಾರತೀಯ ಪಾಸ್‌ಪೋರ್ಟ್ ಹೊಂದಿರುವವರಿಗೆ ವೀಸಾ ಮುಕ್ತ ಸಾರಿಗೆ, ಇಂಡೊ–ಪೆಸಿಫಿಕ್ ಕುರಿತ ಮಾತುಕತೆಗೆ ವೇದಿಕೆ ರೂಪಿಸುವುದು, ನವೀಕರಿಸಬಹುದಾದ ಇಂಧನ ಕ್ಷೇತ್ರದ ಹೂಡಿಕೆ (1.24 ಶತಕೋಟಿ ಯುರೊ ಮೊತ್ತದ ಪಾಲುದಾರಿಕೆಯ ಕಾರ್ಯಕ್ರಮ), ಗ್ರೀನ್ ಹೈಡ್ರೋಜನ್ ಪಾಲುದಾರಿಕೆ, ಪಿಎಂ ಇ-ಬಸ್ ಸೇವೆ, ಅಹಮದಾಬಾದ್‌ನಲ್ಲಿ ಜರ್ಮನಿಯ ಕಾನ್ಸುಲ್ ಸ್ಥಾಪನೆ ವಿಚಾರ ಗಳನ್ನೂ ಈ ವೇಳೆ ಘೋಷಿಸಲಾಯಿತು.

ಅಹಮದಾಬಾದ್‌ನ ಅಂತರರಾಷ್ಟ್ರೀಯ ಗಾಳಿಪಟ ಉತ್ಸವದಲ್ಲಿ ಜರ್ಮನಿಯ ಚಾನ್ಸಲರ್ ಫ್ರೆಡರಿಕ್ ಮೆರ್ಜ್ ಅವರೊಂದಿಗೆ ಪ್ರಧಾನಿ ನರೇಂದ್ರ ಮೋದಿ ಅವರು ಗಾಳಿಪಟ ಹಾರಿಸಿ ಸಂಭ್ರಮಿಸಿದರು —ಪಿಟಿಐ ಚಿತ್ರ

ಅಂತಿಮಗೊಳ್ಳದ ಜಲಾಂತರ್ಗಾಮಿ ಖರೀದಿ ಒಪ್ಪಂದ

ನವದೆಹಲಿ: ಜರ್ಮನಿಯಿಂದ ಆರು ಸಾಂಪ್ರದಾಯಿಕ ಜಲಾಂತರ್ಗಾಮಿಗಳನ್ನು ಖರೀದಿಸುವ ನಿಟ್ಟಿನಲ್ಲಿ ಭಾರತದ ಮಾತುಕತೆ ಸಕಾರಾತ್ಮವಾಗಿ ನಡೆದಿದೆಯಾದರೂ ಖರೀದಿ ಒಪ್ಪಂದವು ಇನ್ನೂ ಅಂತಿಮಗೊಳ್ಳಬೇಕಿದೆ ಎಂದು ಹಿರಿಯ ಅಧಿಕಾರಿಯೊಬ್ಬರು ಸೋಮವಾರ ‘ಪ್ರಜಾವಾಣಿ’ಗೆ ತಿಳಿಸಿದ್ದಾರೆ.

ಉಭಯ ದೇಶಗಳ ನಡುವೆ ರಕ್ಷಣಾ ಕ್ಷೇತ್ರದಲ್ಲಿ ಮಹತ್ವದ ಒಪ್ಪಂದಗಳು ನಡೆಯಲಿವೆ ಎಂಬ ಇಂಗಿತ ವ್ಯಕ್ತವಾದ ನಂತರ ಈ ಪ್ರತಿಕ್ರಿಯೆ ಹೊರಬಿದ್ದಿದೆ. ಉಭಯ ದೇಶಗಳೂ ಅಹಮದಾಬಾದ್‌ನಲ್ಲಿ ನಡೆಸಿದ ಮಾತುಕತೆಯಲ್ಲಿ ರಕ್ಷಣೆ ಮತ್ತು ಭದ್ರತೆ ಆದ್ಯತೆಯ ವಿಷಯವಾಗಿದ್ದವು ಎಂದೂ ಹೇಳಿದ್ದಾರೆ.

ಇಂದು ಬೆಂಗಳೂರಿಗೆ ಫ್ರೆಡರಿಕ್

ಜರ್ಮನಿಯ ಚಾನ್ಸಲರ್ ಫ್ರೆಡರಿಕ್ ಮೆರ್ಜ್ ಅವರು, ಮಂಗಳವಾರ ಬೆಂಗಳೂರಿಗೆ ಬರಲಿದ್ದಾರೆ. ಆಡುಗೋಡಿಯಲ್ಲಿರುವ ಜರ್ಮನ್ ಮೂಲದ ಬಾಷ್ ಕಂಪನಿಯ ಕ್ಯಾಂಪಸ್‌ಗೆ ಅವರು ಭೇಟಿ ನೀಡುವರು. ಮೆರ್ಜ್ ಅವರು 80 ಮಂದಿ ನಿಯೋಗದೊಂದಿಗೆ ಭಾರತಕ್ಕೆ ಬಂದಿದ್ದಾರೆ.

ಕಾರು ಸ್ಫೋಟ ಶಾಹೀನ್ ಜತೆ ರಮೀಜ್ ಸಂಪರ್ಕ

ಪ್ರಜಾವಾಣಿ ವಾರ್ತೆ

ಲಖನೌ (ಪಿಟಿಐ): ವೈದ್ಯೆಗೆ ಲೈಂಗಿಕ ಕಿರುಕುಳ ನೀಡಿದ ಆರೋಪದಡಿ ಬಂಧನಕ್ಕೊಳಗಾಗಿರುವ ಕಿಂಗ್ ಜಾರ್ಜ್ ವೈದ್ಯಕೀಯ ವಿಶ್ವವಿದ್ಯಾಲಯದ ವೈದ್ಯ ರಮೀಜ್ ಮಲಿಕ್, ದೆಹಲಿಯ ಕೆಂಪು ಕೋಟೆ ಬಳಿ ನಡೆದ ಕಾರು ಸ್ಫೋಟ ಪ್ರಕರಣದ ಆರೋಪಿ ವೈದ್ಯೆ ಶಾಹೀನ್ ಸಯೀದ್ ಜೊತೆ ಸಂಪರ್ಕದಲ್ಲಿದ್ದರು ಎಂಬುದು ಗೊತ್ತಾಗಿದೆ.

ನಿಷೇಧಿತ ಇಸ್ಲಾಮಿಕ್ ಸಂಘಟನೆ ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾ (ಪಿಎಫ್‌ಐ) ಜತೆಗೂ ರಮೀಜ್ ಸಂಪರ್ಕದಲ್ಲಿದ್ದರು. ಪರಾರಿಯಾಗುವ ಸಂದರ್ಭದಲ್ಲಿ ಪಿಎಫ್‌ಐನಿಂದ ಕಾನೂನು ಸಹಾಯವನ್ನು ಕೋರಿದ್ದರು. ಇಸ್ಲಾಂ ಧರ್ಮಗುರು ಜಾಕಿರ್ ನಾಯ್ಕ್ ಅವರನ್ನು ತನ್ನ ಆದರ್ಶ ವ್ಯಕ್ತಿ ಎಂದೂ ಪರಿಗಣಿಸಿದ್ದರು ಎಂದು ಮೂಲಗಳು ತಿಳಿಸಿವೆ.

ರಮೀಜ್ ಕುರಿತು ಮಾಹಿತಿ ನೀಡುವಂತೆ ಉತ್ತರ ಪ್ರದೇಶದ ಭಯೋತ್ಪಾದನಾ ನಿಗ್ರಹ ಪಡೆಯು ಪೊಲೀಸರನ್ನು ಕೇಳಿದೆ.

ಮಣಿಪುರದ ಇಂಫಾಲ್‌ನಲ್ಲಿ ಬೀದಿಗಿಳಿದ ಮೈತೇಯಿ ಸಮುದಾಯದ ಸಂತ್ರಸ್ತರು

ಪುನರ್ವಸತಿಗೆ ಆಗ್ರಹಿಸಿ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಗುವಾಹಟಿ: ಮಣಿಪುರದಲ್ಲಿ ನಡೆದ ಸಂಘರ್ಷದಿಂದ ಸ್ಥಳಾಂತರಗೊಂಡ ಮೈತೇಯಿ ಸಮುದಾಯದ ಜನರಲ್ಲಿ ಆಕ್ರೋಶ ಹೆಚ್ಚುತ್ತಿದ್ದು, ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ ಸೋಮವಾರ ಇಂಫಾಲ್‌ನಲ್ಲಿ ಪ್ರತಿಭಟನೆ ನಡೆಸಿದರು.

ಮೈತೇಯಿ ಸಮುದಾಯವನ್ನು ಪ್ರತಿನಿಧಿಸುವ ಸಂಸ್ಥೆಗಳ ವೇದಿಕೆಯಾದ ‘ಮಣಿಪುರ ಏಕತೆ ಸಮನ್ವಯ ಸಮಿತಿ’ಯು (ಸಿಒಸಿಒಎಂಐ) ಆಯೋಜಿಸಿದ್ದ ಪ್ರತಿಭಟನೆಯಲ್ಲಿ ನೂರಾರು ಮಂದಿ ಪಾಲ್ಗೊಂಡರು. ಸಂಘರ್ಷದ ಸಮಯದಲ್ಲಿ ಕುಕಿ ಪ್ರಾಬಲ್ಯದ ಜಿಲ್ಲೆಗಳಿಂದ ಸ್ಥಳಾಂತರಗೊಂಡ ಮೈತೇಯಿ ಸಮುದಾಯದ ಜನರಿಗೆ ಅವರ ಮನೆಗಳಿಗೆ ತೆರಳಲು ಅನುಕೂಲವಾಗುವಂತಹ ಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ಒತ್ತಾಯಿಸಿದರು.

ಮುಖ್ಯಾಂಶಗಳು

- ಮನೆಗಳಿಗೆ ಮರಳಲು ಅವಕಾಶ ನೀಡಿ: ಆಗ್ರಹ
- ‘ಲೋಕ ಭವನ’ಕ್ಕೆ ಮುತ್ತಿಗೆಗೆ ಯತ್ನ
- ರಾಜ್ಯಪಾಲ ಅಜಯ್ ಕುಮಾರ್ ಜತೆ ಚರ್ಚೆ

‘ಸ್ಥಳಾಂತರಗೊಂಡವರ ಪುನರ್ವಸತಿಗೆ ಡಿಸೆಂಬರ್ ಒಳಗಾಗಿ ಕ್ರಮಗಳನ್ನು ತೆಗೆದುಕೊಳ್ಳಲಾಗುತ್ತಿದೆ ಎಂದು ಸರ್ಕಾರ ಈ ಹಿಂದೆ ಭರವಸೆ ನೀಡಿದ್ದರೂ ಅದು ಈಡೇರಿಲ್ಲ. ಜನರು ಪರಿಹಾರ ಶಿಬಿರಗಳಲ್ಲಿ ಸಂಕಷ್ಟದಿಂದ ಬದುಕುತ್ತಿದ್ದಾರೆ. ಕೆಲವರು ಆತ್ಮಹತ್ಯೆ ಮಾಡಿಕೊಂಡಿದ್ದು, ಅನೇಕ ಮಂದಿ ಸೂಕ್ತ ವೈದ್ಯಕೀಯ ಸೌಲಭ್ಯಗಳ ಕೊರತೆಯಿಂದ ಮೃತಪಟ್ಟಿದ್ದಾರೆ’ ಎಂದು ಚುರಾಚಂದ್‌ಪುರದಿಂದ ಸ್ಥಳಾಂತರಗೊಂಡ ಮೀರಂಬಂ ರತನ್ ಸಿಂಗ್ ಹೇಳಿದರು.

ಕೈಯಲ್ಲಿ ಭಿತ್ತಿಪತ್ರಗಳನ್ನು ಹಿಡಿದಿದ್ದ ಪುರುಷರು ಮತ್ತು ಮಹಿಳೆಯರು ತಮ್ಮ ಬೇಡಿಕೆಗಳ ಬಗ್ಗೆ ನಿರ್ಲಕ್ಷ್ಯ ವಹಿಸಿರುವುದನ್ನು ಖಂಡಿಸಿ ಘೋಷಣೆಗಳನ್ನು ಕೂಗಿದರು. ಲೋಕ ಭವನದ (ರಾಜ್ ಭವನ) ಕಡೆಗೆ ಮೆರವಣಿಗೆ ನಡೆಸಲು ಪ್ರಯತ್ನಿಸಿದ ಪ್ರತಿಭಟನಕಾರರನ್ನು ಭದ್ರತಾ ಪಡೆಗಳು ತಡೆದವು.

ಆ ಬಳಿಕ ಸಿಒಸಿಒಎಂಐ ನಿಯೋಗವು ರಾಜ್ಯಪಾಲ ಅಜಯ್ ಕುಮಾರ್ ಭಲ್ಲಾ ಅವರನ್ನು ಭೇಟಿಯಾಗಿ ಬೇಡಿಕೆಗಳ ಕುರಿತು ಚರ್ಚಿಸಿತು. ನಿರ್ವಸಿತರ ಪುನರ್ವಸತಿಗಾಗಿ ಎಲ್ಲ ಪ್ರಯತ್ನಗಳು ನಡೆಯುತ್ತಿವೆ ಎಂದು ಭಲ್ಲಾ ಹೇಳಿದರು. ಮಣಿಪುರದಲ್ಲಿ ಕಳೆದ ವರ್ಷದ ಫೆಬ್ರುವರಿಯಿಂದ ರಾಷ್ಟ್ರಪತಿ ಆಳ್ವಿಕೆ ಜಾರಿಯಲ್ಲಿದೆ.

ಇ.ಡಿ.ಗೆ ಬೆದರಿಕೆ ವ್ಯಕ್ತಿ ಬಂಧನ

ನವದೆಹಲಿ (ಪಿಟಿಐ): ₹5,900 ಕೋಟಿಗೂ ಅಧಿಕ ಹೂಡಿಕೆಯ ವಂಚನೆಗೆ ಸಂಬಂಧಿಸಿದಂತೆ ಹೈದರಾಬಾದ್‌ನಲ್ಲಿ ಕ್ರಮ ಕೈಗೊಳ್ಳಲು ಮುಂದಾದ ಜಾರಿ ನಿರ್ದೇಶನಾಲಯದ (ಇ.ಡಿ) ಅಧಿಕಾರಿಗಳನ್ನು ತಡೆದು, ಬೆದರಿಸಿದ ಆರೋಪದ ಕಾರಣ ವ್ಯಕ್ತಿಯೊಬ್ಬರನ್ನು ಬಂಧಿಸಲಾಗಿದೆ.

ಕಲ್ಯಾಣ್ ಬ್ಯಾನರ್ಜಿ ಎಂಬವರು ಬಂಧಿತ ವ್ಯಕ್ತಿ. ಸಿಕಂದರಾಬಾದ್‌ನ ಅವರಿಗೆ ಸೇರಿದ ಸ್ಥಳದಲ್ಲಿ ದಾಳಿ ನಡೆದಿತ್ತು. ನಾಂಪಲ್ಲಿ ವಿಶೇಷ ನ್ಯಾಯಾಲಯ ಜನವರಿ 23ರವರೆಗೆ ವಶಕ್ಕೆ ನೀಡಿದೆ ಎಂದು ಇ.ಡಿ. ಅಧಿಕಾರಿಗಳು ತಿಳಿಸಿದ್ದಾರೆ.

ನೊಹೆರಾ ಶೇಖ್ ಮತ್ತಿತರರು ಜನರಿಂದ ₹5,978 ಕೋಟಿ ಹಣ ಸಂಗ್ರಹಿಸಿ, ವಾರ್ಷಿಕ ಶೇ 36ರಷ್ಟು ಲಾಭ ಕೊಡುವುದಾಗಿ ನಂಬಿಸಿದ್ದರು. ಆದರೆ ಮೂಲಧನವನ್ನೂ ನೀಡದೆ ವಂಚಿಸಿದ್ದರು.

ಆಯುಷ್ ವೈದ್ಯರ ಬೇಡಿಕೆ ಅರ್ಜಿ ಪ್ರತಿಕ್ರಿಯೆ ಕೇಳಿದ ಸುಪ್ರೀಂ ಕೋರ್ಟ್

ನವದೆಹಲಿ (ಪಿಟಿಐ): ಅಲೋಪಥಿ ವೈದ್ಯರಂತೆ ಆಯುಷ್ ವೈದ್ಯರನ್ನು ‘ನೋಂದಾಯಿತ ವೃತ್ತಿಪರ ವೈದ್ಯರು’ ಎಂದು ಘೋಷಿಸುವಂತೆ ಕೋರಿ ಸಲ್ಲಿಸಲಾದ ಅರ್ಜಿಯ ಕುರಿತು ಪ್ರತಿಕ್ರಿಯೆ ನೀಡುವಂತೆ ಸುಪ್ರೀಂ ಕೋರ್ಟ್ ಕಾನೂನು, ಆರೋಗ್ಯ ಮತ್ತು ಆಯುಷ್ ಸಚಿವಾಲಯಗಳಿಗೆ ಸೋಮವಾರ ಸೂಚಿಸಿದೆ.

ನಿರ್ದಿಷ್ಟ ವೈದ್ಯಕೀಯ ಪ್ರಕರಣಗಳಲ್ಲಿ ಔಷಧಗಳ ಜಾಹೀರಾತುಗಳನ್ನು ನಿಯಂತ್ರಿಸುವ 1954ರ ಕಾನೂನಿನ ಷೆಡ್ಯೂಲ್ ಅನ್ನು ಪ್ರಸ್ತುತ ಸನ್ನಿವೇಶಕ್ಕೆ ತಕ್ಕಂತೆ ಪರಿಶೀಲಿಸಿ, ಸುಧಾರಿಸಲು ತಜ್ಞರ ಸಮಿತಿ ರಚಿಸುವಂತೆ ಕೇಂದ್ರ ಸರ್ಕಾರಕ್ಕೆ ನಿರ್ದೇಶನ ನೀಡಬೇಕೆಂದು ಕೋರಿ ಕಾನೂನು ವಿದ್ಯಾರ್ಥಿ ನಿತಿನ್ ಉಪಾಧ್ಯಾಯ ಎಂಬವರು ಸಾರ್ವಜನಿಕ ಹಿತಾಸಕ್ತಿ ಅರ್ಜಿ (ಪಿಐಎಲ್) ಸಲ್ಲಿಸಿದ್ದಾರೆ.

ನಿತಿನ್ ಅವರ ತಾಯಿಯೂ ಆದ ವಕೀಲೆ ಅಶ್ವಿನಿ ಉಪಾಧ್ಯಾಯ ಅವರ ವಾದವನ್ನು ಆಲಿಸಿದ ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್ ಮತ್ತು ನ್ಯಾಯಮೂರ್ತಿ ಜಾಯ್‌ಮಾಲ್ಯ ಬಾಗ್ಚಿ ಅವರನ್ನೊಳಗೊಂಡ ಪೀಠವು, ಪಿಐಎಲ್ ಆಧರಿಸಿ ನೋಟಿಸ್ ಜಾರಿ ಮಾಡಿದೆ.

‘ನಿತಿನ್ ನಿಮ್ಮ ಮಗನೇ?’ ಎಂದು ನ್ಯಾಯಮೂರ್ತಿ ಸೂರ್ಯಕಾಂತ್ ಅವರು ಅಶ್ವಿನಿ ಅವರನ್ನು ಕೇಳಿದರು.

‘ಹೌದು’ ಎಂದು ಅಶ್ವಿನಿ ಉತ್ತರಿಸಿದರು.

‘ಅವನಿಗೆ ಚಿನ್ನದ ಪದಕ ಸಿಗುತ್ತದೆ ಎಂದು ನಾವು ಭಾವಿಸಿದ್ದೆವು. ಆದರೆ, ಅವನು ಈಗ ಪಿಐಎಲ್‌ಗಳನ್ನು ಸಲ್ಲಿಸುತ್ತಿದ್ದಾನೆ. ನೀವು ಈಗ ಏಕೆ ಅಧ್ಯಯನ ಮಾಡಬಾರದು? ನಿಮ್ಮ ಮಗನಿಗಷ್ಟೇ ಒಂದು ನೋಟಿಸ್ ಕೊಡಿ. ಇದರಿಂದ ಅವನು ಚೆನ್ನಾಗಿ ಓದುವಂತಾಗಲಿ’ ಎಂದು ಪೀಠವು ಸೂಚಿಸಿದೆ.

ಮಿಂಚಿದ ದೇವದತ್ತ; ಕರ್ನಾಟಕ ಸೆಮಿಗೆ

ವಿಜಯ್ ಹಜಾರೆ ಟ್ರೋಫಿ: ಕರುಣ್ ಅರ್ಧಶತಕ
ವಿದ್ಯಾಧರ್ ದಾಳಿ • ಮುಗ್ಗರಿಸಿದ ಮುಂಬೈ

• ಗಿರೀಶ ದೊಡ್ಡಮನಿ

ಬೆಂಗಳೂರು: ಸೋಮವಾರ ಇಡೀ ದಿನ ಮೈಕೊರೆಯುತ್ತಿದ್ದ ಚಳಿಗಾಳಿಗೆ ಮತ್ತಷ್ಟು ತಂಪೇರಿಸುತ್ತಿದ್ದ ತುಂತುರು ಮಳೆ ಹನಿಗಳು. ಈ ವಾತಾವರಣದ ನಡುವೆಯೂ ಪಟ್ಟುಬಿಡದೇ ಹೋರಾಡಿದ ಕರ್ನಾಟಕದ ಕ್ರಿಕೆಟ್ ತಂಡವು ವಿಜಯ್ ಹಜಾರೆ ಟ್ರೋಫಿ ಏಕದಿನ ಕ್ರಿಕೆಟ್ ಟೂರ್ನಿಯ ಸೆಮಿಫೈನಲ್‌ಗೆ ರಹದಾರಿ ಗಿಟ್ಟಿಸಿಕೊಂಡಿತು.

ನಗರದ ಹೊರವಲಯದಲ್ಲಿರುವ ಸಿಂಗಹಳ್ಳಿಯ ಬಿಸಿಸಿಐ ಶ್ರೇಷ್ಠತಾ ಕೇಂದ್ರದ ಮೈದಾನ (1)ದಲ್ಲಿ ನಡೆದ ಕ್ವಾರ್ಟರ್ ಫೈನಲ್‌ನಲ್ಲಿ ಕರ್ನಾಟಕವು 55 ರನ್‌ಗಳಿಂದ (ವಿಜೆಡಿ ನಿಯಮದನ್ವಯ) ಮುಂಬೈ ಎದುರು ಜಯಗಳಿಸಿತು. ಹಾಲಿ ಚಾಂಪಿಯನ್ ತಂಡವು 254 ರನ್‌ಗಳ ಗೆಲುವಿನ ಗುರಿ ಬೆನ್ನಟ್ಟುವ ವೇಳೆ ಸಂಜೆ 4.20ಕ್ಕೆ ಮಳೆ ಜೋರಾಯಿತು. ಆಗ ತಂಡವು 33 ಓವರ್‌ಗಳಲ್ಲಿ 1 ವಿಕೆಟ್‌ಗೆ 187 ರನ್ ಗಳಿಸಿತ್ತು. ವಿ.ಜಯದೇವನ್ ನಿಯಮದಡಿ ಗಳಿಸಬೇಕಿದ್ದ ಕನಿಷ್ಠ ಮೊತ್ತಕ್ಕಿಂತಲೂ 55 ರನ್ ಮುಂದಿತ್ತು.

ಮಳೆಯ ಮುನ್ಸೂಚನೆ ಮೊದಲೆ ಇದ್ದ ಕಾರಣ ವೇಗವಾಗಿ ರನ್ ಕಲೆಹಾಕುವ ತಂತ್ರಗಾರಿಕೆಯಲ್ಲಿ ದೇವದತ್ತ ಪಡಿಕ್ಕಲ್ (ಔಟಾಗದೇ 81) ಮತ್ತು ಕರುಣ್ ನಾಯರ್ (ಔಟಾಗದೇ 74) ಯಶಸ್ವಿಯಾದರು. ಪ್ರಸಕ್ತ ಟೂರ್ನಿಯಲ್ಲಿ ನಾಲ್ಕು ಶತಕ ಗಳಿಸಿರುವ ದೇವದತ್ತ ಅವರು ಐದನೇಯ ಬಾರಿ ಮೂರಂಕಿ ಗಡಿ ದಾಟುವ ಅವಕಾಶವು ಮಳೆಯಿಂದಾಗಿ ಕೈತಪ್ಪಿತು. ಆದರೆ ಅತ್ಯಧಿಕ ರನ್ ಗಳಿಸಿರುವ ಬ್ಯಾಟರ್‌ಗಳ ಪಟ್ಟಿಯಲ್ಲಿ ಅಗ್ರಸ್ಥಾನ ಉಳಿಸಿಕೊಂಡರು. ಅವರ ಖಾತೆಯಲ್ಲಿ ಈಗ ಒಟ್ಟು 721 ರನ್‌ಗಳು ಇವೆ. ದೇವದತ್ತ ಮತ್ತು ಕರುಣ್ ಅವರು ಮುರಿಯದ ಎರಡನೇ ವಿಕೆಟ್ ಜೊತೆಯಾಟದಲ್ಲಿ 143 ರನ್ ಗಳಿಸಿದರು.

ದೇವದತ್ತ ಅವರಿಗೆ ಅದೃಷ್ಟವೂ ಜೊತೆಯಾಯಿತು. 9ನೇ ಓವರ್‌ನಲ್ಲಿ ಸಾಯಿರಾಜ್ ಪಾಟೀಲ ಬೌಲಿಂಗ್‌ನಲ್ಲಿ ಓಂಕಾರ್ ಅವರು ಬೌಂಡರಿಲೈನ್ ಬಳಿ ಕ್ಯಾಚ್ ಕೈಚೆಲ್ಲಿದರು. ಆಗ ದೇವದತ್ತ 24 ರನ್ ಗಳಿಸಿದ್ದರು. ಸ್ವಲ್ಪ ಹೊತ್ತಿನ ನಂತರ ಮೋಹಿತ್ ಅವಸ್ಥಿ ಓವರ್‌ನಲ್ಲಿ ಸ್ಲಿಪ್‌ನಲ್ಲಿದ್ದ ಅಂಗಕ್ರಿಷ್ ರಘುವಂಶಿ ಸುಲಭ ಕ್ಯಾಚ್ ಪಡೆಯುವಲ್ಲಿ ಎಡವಿದರು. ಮುಂಬೈ ಫೀಲ್ಡರ್‌ಗಳ ಕಳಪೆ ಫೀಲ್ಡಿಂಗ್ ನಿಂದಾಗಿ ಬ್ಯಾಟರ್‌ಗಳಿಗೆ ಬೌಂಡರಿಗಳೂ ಸರಾಗವಾಗಿ ಲಭಿಸಿದವು.

10ನೇ ಓವರ್‌ನಲ್ಲಿ ಮಯಂಕ್ ಅಗರವಾಲ್ (12 ರನ್) ವಿಕೆಟ್ ಪಡೆಯುವಲ್ಲಿ ಮೋಹಿತ್ ಯಶಸ್ವಿಯಾದರು. ನಂತರ ದೇವದತ್ತ ಮತ್ತು ಕರುಣ್ ಅವರದ್ದೇ ಆಟ ನಡೆಯಿತು. ದೇವದತ್ತ 62 ಎಸೆತಗಳಲ್ಲಿ ಹಾಗೂ ಕರುಣ್ 44 ಎಸೆತಗಳಲ್ಲಿ ತಮ್ಮ ಅರ್ಧಶತಕ ತಲುಪಿದರು.

ವಿದ್ಯಾಧರ್, ಮುಲಾನಿ ಮಿಂಚು: ಬೆಳಿಗ್ಗೆ ಟಾಸ್ ಗೆದ್ದ ಕರ್ನಾಟಕ ತಂಡವು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ನಾಯಕನ ನಿರ್ಧಾರವನ್ನು ಬೌಲರ್‌ಗಳೂ ಸಮರ್ಥಿಸುವಂತೆ ಬೌಲಿಂಗ್ ಮಾಡಿದರು. ಮುಂಬೈ ತಂಡವು 50 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 254 ರನ್ ಗಳಿಸಿತು.

ಸ್ವರ್ಧಾತ್ಮಕ ಪಿಚ್‌ನಲ್ಲಿ ಮುಂಬೈ ಆರಂಭಿಕ ಜೋಡಿ ಅಂಗಕ್ರಿಷ್ ಮತ್ತು ಇಶಾನ್ ಮೂಲಚಂದಾನಿ ತಾಳ್ಮೆಯಿಂದ ಆಡಿ 36 ರನ್ ಕಲೆಹಾಕಿದರು. ಈ ಹಂತದಲ್ಲಿ ರಾಯಚೂರು ಹುಡುಗ ವಿದ್ಯಾಧರ್ ಪಾಟೀಲ 'ಬಿಸಿ' ಮುಟ್ಟಿಸಿದರು. ವಿದ್ಯಾಧರ್ ಎಸೆತದಲ್ಲಿ ಇಶಾನ್ ಕೊಟ್ಟ ಕ್ಯಾಚ್ ದೇವದತ್ತ ಕೈಸೇರಿತು. ಇನ್ನೊಂದು ಓವರ್‌ನಲ್ಲಿ ವಿದ್ಯಾಧರ್ ಅವರು ಮುಷೀರ್ ಖಾನ್ ವಿಕೆಟ್ ಕಬಳಿಸಿದರು. ಗಾಯಗೊಂಡಿದ್ದ ಸರ್ಫರಾಜ್ ಖಾನ್ ಮತ್ತು ಇನ್ನುಳಿದ ಪ್ರಮುಖ ಬ್ಯಾಟರ್‌ಗಳ ಅನುಪಸ್ಥಿತಿಯು ಮುಂಬೈ ತಂಡಕ್ಕೆ ಮುಳುವಾಯಿತು.

ವೈಶಾಖ ವಿಜಯಕುಮಾರ್ ಅವರು ಅಂಗಕ್ರಿಷ್ ಅವರನ್ನು ಬೌಲ್ಡ್ ಮಾಡಿದರು. ಹಾರ್ದಿಕ್ ತಮೊರೆ ವಿಕೆಟ್ ವಿದ್ವತ್ ಪಾಲಾಯಿತು. ಇದರಿಂದಾಗಿ ಮುಂಬೈ ತಂಡವು 60 ರನ್‌ಗಳಿಗೆ 4 ವಿಕೆಟ್ ಕಳೆದುಕೊಂಡಿತು.

ನಾಯಕ ಸಿದ್ಧೇಶ್ ಲಾಡ್ (38 ರನ್) ಮತ್ತು ಶಮ್ಸ್ ಮುಲಾನಿ (86 ರನ್) ಅವರು ಐದನೇ ವಿಕೆಟ್ ಜೊತೆಯಾಟದಲ್ಲಿ 76 ರನ್ ಸೇರಿಸದೇ ಹೋಗಿದ್ದರೆ ಮುಂಬೈ ತಂಡವು ಸಾಧಾರಣ ಮೊತ್ತಕ್ಕೆ ಕುಸಿಯುವ ಆತಂಕವಿತ್ತು. ಎಡಗೈ ವೇಗಿ ಅಭಿಲಾಷ್ ಶೆಟ್ಟಿ ಎಲ್‌ಬಿಡಬ್ಲ್ಯು ಬಲೆಗೆ ಮುಲಾನಿ ಬಿದ್ದರು. ಲಾಡ್ ವಿಕೆಟ್ ಕೂಡ ಶೆಟ್ಟಿ ಖಾತೆ ಸೇರಿತು. ಕೊನೆಯ ಹಂತದಲ್ಲಿ ಸಾಯಿರಾಜ್ ಪಾಟೀಲ (33 ರನ್) ಕೂಡ ಮಹತ್ವದ ಕಾಣಿಕೆ ಕೊಟ್ಟರು.

ಕರ್ನಾಟಕ ತಂಡದ ದೇವದತ್ತ ಪಡಿಕ್ಕಲ್ ಹಾಗೂ ಕರುಣ್ ನಾಯರ್ ಜೊತೆಯಾಟ

ಚಿತ್ರ: ಕೃಷ್ಣ ಕುಮಾರ್ ಪಿ.ಎಸ್.

ಸ್ಕೋರ್ ಕಾರ್ಡ್

ಮುಂಬೈ: 8 ವಿಕೆಟ್‌ಗೆ 254 (50 ಓವರ್‌ಗಳಲ್ಲಿ)

ಅಂಗಕ್ರಿಷ್ ಬಿ ವೈಶಾಖ 27 (50ಎ, 4X2, 6X1)
ಇಶಾನ್ ಸಿ ದೇವದತ್ತ ಬಿ ವಿದ್ಯಾಧರ್ 20 (32ಎ, 4X2)
ಮುಷೀರ್ ಸಿ ದೇವದತ್ತ ಬಿ ವಿದ್ಯಾಧರ್ 9 (7ಎ, 6X1)
ಲಾಡ್ ಸಿ ಶ್ರೀಜಿತ್ ಬಿ ಅಭಿಲಾಷ್ 38 (58ಎ, 4X4)
ತಮೋರೆ ಸಿ ದೇವದತ್ತ ಬಿ ವಿದ್ವತ್ 1 (6ಎ)
ಶಮ್ಸ್ ಎಲ್‌ಬಿಡಬ್ಲ್ಯು ಅಭಿಲಾಷ್ 86 (91ಎ, 4X8)
ಸೂರ್ಯಾಂಶ್ ಸಿ ಸ್ಮರಣ್ ಬಿ ವಿದ್ವತ್ 16 (20ಎ, 4X2)
ತನುಷ್ ಸಿ ಶ್ರೀಜಿತ್ ಬಿ ವಿದ್ಯಾಧರ್ 6 (10ಎ)
ಸಾಯಿರಾಜ್ ಔಟಾಗದೇ 33 (25ಎ, 4X5, 6X1)
ಮೋಹಿತ್ ಔಟಾಗದೇ 1 (1ಎ)
ಇತರೆ: 17 (ವೈಡ್ 11, ಲೆಗ್‌ಬೈ 6)
ವಿಕೆಟ್ ಪತನ: 1–36 (ಇಶಾನ್ ಮೂಲಚಂದಾನಿ 11.5), 2–46 (ಮುಷೀರ್ ಖಾನ್; 13.5), 3–57 (ಅಂಗಕ್ರಿಷ್ ರಘುವಂಶಿ; 14.6), 4–60 (ಹಾರ್ದಿಕ್ ತಮೋರೆ; 17.2), 5–136 (ಸಿದ್ಧೇಶ್ ಲಾಡ್; 33.3), 6–164 (ಸೂರ್ಯಾಂಶ್ ಶೆಡಗೆ; 39.3), 7–191 (ತನುಷ್ ಕೋಟ್ಯಾನ್; 43.4), 8–242 (ಶಮ್ಸ್ ಮುಲಾನಿ;49.1).
ಬೌಲಿಂಗ್: ವಿದ್ವತ್ ಕಾವೇರಪ್ಪ 10–0–43–2, ಅಭಿಲಾಷ್ ಶೆಟ್ಟಿ 10–0–59–2, ವಿದ್ಯಾಧರ್ ಪಾಟೀಲ 10–0–42–3, ವೈಶಾಖ ವಿಜಯಕುಮಾರ್ 10–1–59–1, ಶ್ರೇಯಸ್ ಗೋಪಾಲ್ 10–0–45–0

ಕರ್ನಾಟಕ: 1 ವಿಕೆಟ್‌ಗೆ 187 (33 ಓವರ್‌ಗಳಲ್ಲಿ)

ಮಯಂಕ್ ಸಿ ಅಂಗಕ್ರಿಷ್ ಬಿ ಮೋಹಿತ್ 12 (24ಎ, 4X1)
ದೇವದತ್ತ ಔಟಾಗದೇ 81 (95ಎ, 4X11)
ಕರುಣ್ ಔಟಾಗದೇ 74 (80ಎ, 4X11)
ಇತರೆ: 20 (ಬೈ 4, ನೋಬಾಲ್ 1, ವೈಡ್ 14, ಲೆಗ್‌ಬೈ 1)
ವಿಕೆಟ್ ಪತನ: 1–44 (ಮಯಂಕ್ ಅಗರವಾಲ್; 9.2)
ಬೌಲಿಂಗ್: ಮೋಹಿತ್ ಅವಸ್ತಿ 6–0–24–1, ಓಂಕಾರ್ ತರ್ಮಾಳೆ 6–0–42–0, ಸಾಯಿರಾಜ್ ಪಾಟೀಲ 4–0–24–0, ಸೂರ್ಯಾಂಶ್ ಶೆಡಗೆ 4–0–24–0, ಶಮ್ಸ್ ಮುಲಾನಿ 4–0–32–0, ತನುಷ್ ಕೋಟ್ಯಾನ್ 6–0–28–0, ಮುಷೀರ್ ಖಾನ್ 3–1–8–0
ಪಂದ್ಯದ ಆಟಗಾರ: ದೇವದತ್ತ ಪಡಿಕ್ಕಲ್

ಫಲಿತಾಂಶ: ಕರ್ನಾಟಕ ತಂಡಕ್ಕೆ 55 ರನ್‌ಗಳ ಜಯ (ವಿಜೆಡಿ ನಿಯಮ). ಸೆಮಿಫೈನಲ್‌ಗೆ ಪ್ರವೇಶ

ದೇಸಾಯಿ ಶತಕ: ಸೆಮಿಗೆ ಸೌರಾಷ್ಟ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹರ್ವಿಕ್ ದೇಸಾಯಿ ಶತಕ (ಔಟಾಗದೇ 100, 116ಎ, 4X8, 6X2) ಮತ್ತು ಪ್ರೇರಕ್ ಮಂಕಡ್ ಆಲ್‌ರೌಂಡ್ (67; 66ಎ ಹಾಗೂ 47ಕ್ಕೆ2) ಆಟದ ಬಲದಿಂದ ಸೌರಾಷ್ಟ್ರ ತಂಡವು ವಿಜಯ್ ಹಜಾರೆ ಟ್ರೋಫಿ ಕ್ರಿಕೆಟ್ ಟೂರ್ನಿಯ ಸೆಮಿಫೈನಲ್ ಪ್ರವೇಶಿಸಿತು.

ಬಿಸಿಸಿಐ ಶ್ರೇಷ್ಠತಾ ಕೇಂದ್ರದ ಮೈದಾನ (2)ದಲ್ಲಿ ಸೋಮವಾರ ನಡೆದ ಕ್ವಾರ್ಟರ್‌ಫೈನಲ್‌ನಲ್ಲಿ ಸೌರಾಷ್ಟ್ರ ತಂಡವು ಉತ್ತರ ಪ್ರದೇಶ ಎದುರು ವಿಜೆಡಿ ನಿಯಮದನ್ವಯ 17 ರನ್‌ಗಳಿಂದ ಜಯಿಸಿತು.

ಮೊದಲು ಬ್ಯಾಟಿಂಗ್ ಮಾಡಿದ್ದ ಉತ್ತರ ಪ್ರದೇಶ ತಂಡವು ಅಭಿಷೇಕ್ ಗೋಸ್ವಾಮಿ (88; 82ಎ) ಮತ್ತು ಸಮೀರ್ ರಿಜ್ವಿ (ಔಟಾಗದೇ 88; 77ಎ, 4X10, 6X2) ಅವರ ಆಟದ ಬಲದಿಂದ 50 ಓವರ್‌ಗಳಲ್ಲಿ 8ಕ್ಕೆ 310 ರನ್ ಗಳಿಸಿತು. ಇದಕ್ಕುತ್ತರವಾಗಿ ಸೌರಾಷ್ಟ್ರ ತಂಡವು 40.1 ಓವರ್‌ಗಳಲ್ಲಿ 3 ವಿಕೆಟ್‌ಗಳಿಗೆ 238 ರನ್ ಗಳಿಸಿತು. ಈ ಸಂದರ್ಭದಲ್ಲಿ ಮಳೆ ಸುರಿದ ಕಾರಣ ಪಂದ್ಯ ಸ್ಥಗಿತವಾಯಿತು. ವಿ.ಜಯದೇವನ್ ನಿಯಮದನ್ವಯ ಸೌರಾಷ್ಟ್ರ ತಂಡವು 17 ರನ್ ಮುನ್ನಡೆಯಲ್ಲಿತ್ತು. ಆದ್ದರಿಂದ ವಿಜಯೀ ಎಂದು ಘೋಷಿಸಲಾಯಿತು.

ಸಂಕ್ಷಿಪ್ತ ಸ್ಕೋರು: ಉತ್ತರಪ್ರದೇಶ: 50 ಓವರ್‌ಗಳಲ್ಲಿ 8ಕ್ಕೆ310 (ಅಭಿಷೇಕ್ ಗೋಸ್ವಾಮಿ 88, ಪ್ರಿಯಂ ಗರ್ಗ್ 35, ಸಮೀರ್ ರಿಜ್ವಿ ಔಟಾಗದೇ 88, ಪ್ರಶಾಂತ್ ವೀರ್ 30, ಝೀಷನ್ ಅನ್ಸಾರಿ 20, ಚೇತನ್ ಸಕಾರಿಯಾ 54ಕ್ಕೆ3, ಅಂಕುರ್ ಪನ್ವರ್ 75ಕ್ಕೆ2, ಪ್ರೇರಕ್ ಮಂಕಡ್ 47ಕ್ಕೆ2) ಸೌರಾಷ್ಟ್ರ: 40.1 ಓವರ್‌ಗಳಲ್ಲಿ 3ಕ್ಕೆ238 (ಹರ್ವಿಕ್ ದೇಸಾಯಿ ಔಟಾಗದೇ 100, ಪ್ರೇರಕ್ ಮಂಕಡ್ 67, ಚಿರಾಗ್ ಜಾನಿ ಔಟಾಗದೇ 40, ವಿಪ್ರಜ್ ನಿಗಂ 46ಕ್ಕೆ1, ಪ್ರಶಾಂತ್ ವೀರ್ 53ಕ್ಕೆ1)

ಕ್ವಾರ್ಟರ್‌ಫೈನಲ್ ಇಂದಿನ ಪಂದ್ಯಗಳು

ಪಂಜಾಬ್ Vs ಮಧ್ಯಪ್ರದೇಶ — ಬೆಳಿಗ್ಗೆ 9
ದೆಹಲಿ Vs ವಿದರ್ಭ — ಬೆಳಿಗ್ಗೆ 9
ಲೈವ್: ಸ್ಟಾರ್ ಸ್ಪೋರ್ಟ್ಸ್

ಒಲಿಂಪಿಕ್ ಅಕಾಡೆಮಿಗೆ ಮರುಜೀವ

ನವದೆಹಲಿ (ಪಿಟಿಐ): ಅಹಮದಾಬಾದಿನಲ್ಲಿರುವ ರಾಷ್ಟ್ರೀಯ ಒಲಿಂಪಿಕ್ ಅಕಾಡೆಮಿಯನ್ನು (ಎನ್‌ಒಎ) 'ವಿಧ್ಯುಕ್ತವಾಗಿ ಕ್ರಿಯಾಶೀಲಗೊಳಿಸಲಾಗಿದೆ ಎಂದು ಭಾರತ ಒಲಿಂಪಿಕ್ ಸಮಿತಿ (ಐಒಎ) ಸೋಮವಾರ ಘೋಷಿಸಿದೆ. ಭಾರತದಲ್ಲಿ ಒಲಿಂಪಿಕ್ ಆಂದೋಲನವನ್ನು ಬಲಪಡಿಸುವ ನಿಟ್ಟಿನಲ್ಲಿ ಇದನ್ನು ದೊಡ್ಡ ಹೆಜ್ಜೆ ಎಂದು ಐಒಎ ಬಣ್ಣಿಸಿದೆ.

ಪಿ.ಟಿ.ಉಷಾ

ಈ ಅಕಾಡೆಮಿಗೆ ದಿಗ್ಗಜ ಅಥ್ಲೀಟ್ ಹಾಗೂ ಐಒಎ ಹಾಲಿ ಅಧ್ಯಕ್ಷೆ ಪಿ.ಟಿ.ಉಷಾ ಅವರೇ ಮುಖ್ಯಸ್ಥರಾಗಿರುತ್ತಾರೆ. ರಾಷ್ಟ್ರೀಯ ಒಲಿಂಪಿಕ್ ಶಿಕ್ಷಣ ಮತ್ತು ಅಭಿವೃದ್ಧಿ ಕಾರ್ಯಕ್ರಮವನ್ನೂ (ಎನ್‌ಒಇಡಿಪಿ) ಆರಂಭಿಸಲಾಗುತ್ತಿದೆ ಎಂದೂ ಐಒಎ ತಿಳಿಸಿದೆ.

'ರಾಷ್ಟ್ರೀಯ ಒಲಿಂಪಿಕ್ ಅಕಾಡೆಮಿಗೆ ಪಿ.ಟಿ.ಉಷಾ ಅವರನ್ನು ಅಧ್ಯಕ್ಷರನ್ನಾಗಿ ಮತ್ತು ಐಒಎ ಉಪಾಧ್ಯಕ್ಷ ಹಾಗೂ ಒಲಿಂಪಿಕ್ ಪದಕ ವಿಜೇತ ಗಗನ್ ನಾರಂಗ್ ಅವರನ್ನು ನಿರ್ದೇಶಕನ್ನರಾಗಿ ಮಾಡಲು ಐಒಎ ಸಭೆಯಲ್ಲಿ ಸರ್ವಾನುಮತದಿಂದ ಒಪ್ಪಿಗೆ ನೀಡಲಾಯಿತು' ಎಂದು ಪ್ರಕಟಣೆ ತಿಳಿಸಿದೆ.

ಅಹಮದಾಬಾದಿನಲ್ಲಿ ಜನವರಿ 8ರಂದು ನಡೆದ ಐಒಎ ಕಾರ್ಯನಿರ್ವಾಹಕ ಮಂಡಳಿಯಲ್ಲಿ ಈ ನಿರ್ಧಾರ ಕೈಗೊಳ್ಳಲಾಯಿತು. ಜನವರಿ 9ರಂದು ಐಒಎ ವಾರ್ಷಿಕ ಮಹಾಸಭೆಯಲ್ಲಿ ಇದನ್ನು ಅನುಮೋದಿಸಲಾಯಿತು.

ಗ್ರೇಸ್ ಹ್ಯಾರಿಸ್ ಮಿಂಚಿನ ಆಟ

ಡಬ್ಲ್ಯುಪಿಎಲ್: ಮಂದಾನ ಪಡೆಗೆ ಸತತ ಎರಡನೇ ಗೆಲುವು

ನವಿ ಮುಂಬೈ (ಪಿಟಿಐ): ಆರಂಭ ಆಟಗಾರ್ತಿಯರಾದ ಗ್ರೇಸ್ ಹ್ಯಾರಿಸ್ (85 ರನ್, 40 ಎಸೆತ) ಮತ್ತು ನಾಯಕಿ ಸ್ಮೃತಿ ಮಂದಾನ ಅವರ ಅಮೋಘ ಶತಕದ ಜೊತೆಯಾಟದ ನೆರವಿನಿಂದ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವು ಮಹಿಳಾ ಪ್ರೀಮಿಯರ್ ಲೀಗ್ ಕ್ರಿಕೆಟ್ ಪಂದ್ಯದಲ್ಲಿ ಸೋಮವಾರ ಯುಪಿ ವಾರಿಯರ್ಸ್ ತಂಡದ ವಿರುದ್ಧ 9 ವಿಕೆಟ್‌ಗಳ ಸುಲಭ ಜಯ ಗಳಿಸಿತು. ಇದು ಆರ್‌ಸಿಬಿಗೆ ಸತತ ಎರಡನೇ ಜಯ.

ಗೆಲುವಿಗೆ 144 ರನ್‌ಗಳ ಗುರಿ ಎದುರಿಸಿದ್ದ ಆರ್‌ಸಿಬಿ ಕೇವಲ 12.1 ಓವರುಗಳಲ್ಲಿ 1 ವಿಕೆಟ್‌ಗೆ 145 ರನ್ ಬಾರಿಸಿತು. ಆಸ್ಟ್ರೇಲಿಯಾದ ಗ್ರೇಸ್ ಕೇವಲ 10 ಬೌಂಡರಿ ಮತ್ತು 5 ಸಿಕ್ಸರ್ ಗಳನ್ನು ಸಿಡಿಸಿದರು.

ಡಿಯಾಂಡ್ರ ಡಾಟಿನ್ ಮಾಡಿದ 6ನೇ ಓವರಿನಲ್ಲಿ ಗ್ರೇಸ್ ಅವರು ತಲಾ ಮೂರು ಸಿಕ್ಸರ್ ಹಾಗೂ ಬೌಂಡರಿ ಸಹಿತ 32 ರನ್ ಬಾರಿಸಿದರು. ಇದರಲ್ಲಿ ಒಂದು ನೋಬಾಲ್ ಹಾಗೂ ವೈಡ್ ಸೇರಿತ್ತು. ಮಂದಾನ 32 ಎಸೆತಗಳಲ್ಲಿ ಔಟಾಗದೇ 47 ರನ್ (4x9) ಗಳಿಸಿದ್ದು, ಮೊದಲ ವಿಕೆಟ್‌ಗೆ ಇವರಿಬ್ಬರು 137 ರನ್ ಸೇರಿಸಿ ತಂಡವನ್ನು ಗೆಲುವಿನತ್ತ ಮುನ್ನಡೆಸಿದರು.



ಪಿಟಿಐ ಚಿತ್ರ

ಇದಕ್ಕೆ ಮೊದಲು, ಫೀಲ್ಡಿಂಗ್ ಮಾಡುವ ತಮ್ಮ ನಾಯಕಿಯ ನಿರ್ಧಾರವನ್ನು ಸಮರ್ಥಿಸುವಂತೆ ಆರ್‌ಸಿಬಿ ಬೌಲರ್‌ಗಳು ಪರಿಣಾಮಕಾರಿ ದಾಳಿ ನಡೆಸಿದರು.

ವಾರಿಯರ್ಸ್ ತಂಡವು ಪವರ್‌ಪ್ಲೇ ಅವಧಿಯಲ್ಲಿ 1 ವಿಕೆಟ್‌ಗೆ 36 ರನ್ ಗಳಿಸಿತ್ತು. ನಂತರ ಕುಸಿದು ಒಂಬತ್ತನೇ ಓವರಿನಲ್ಲಿ 50 ರನ್ ಗಳಿಸುವಷ್ಟರಲ್ಲಿ ಐದು ವಿಕೆಟ್‌ಗಳನ್ನು ಕಳೆದುಕೊಂಡು ಸಂಕಷ್ಟಕ್ಕೆ ಸಿಲುಕಿತ್ತು.

ಈ ಹಂತದಲ್ಲಿ, ಆಲ್‌ರೌಂಡರ್ ಗಳಾದ ದೀಪ್ತಿ ಶರ್ಮಾ (ಅಜೇಯ 45) ಮತ್ತು ಡಿಯಾಂಡ್ರ ಡಾಟಿನ್ (ಅಜೇಯ 40) ಅವರ ಉಪಯುಕ್ತ ಆಟದಿಂದ ತಂಡವು 5 ವಿಕೆಟ್‌ಗೆ 143 ರನ್‌ಗಳ ಗೌರವದ ಮೊತ್ತ ಗಳಿಸಿತು.

ವೆಸ್ಟ್ ಇಂಡೀಸ್ ಆಟಗಾರ್ತಿ ಡಾಟಿನ್ ಮತ್ತು ದೀಪ್ತಿ 93 ರನ್‌ಗಳ ಜೊತೆಯಾಟದಲ್ಲಿ ಭಾಗಿಯಾಗಿ ತಂಡಕ್ಕೆ ಆಸರೆಯಾದರು. ಅನುಭವಿ ದೀಪ್ತಿ 35 ಎಸೆತಗಳಲ್ಲಿ ಒಂದು ಸಿಕ್ಸರ್, ಐದು ಬೌಂಡರಿಗಳನ್ನು ಬಾರಿಸಿದರು. ಡಾಟಿನ್ 37 ಎಸೆತಗಳಲ್ಲಿ ಒಂದು ಸಿಕ್ಸರ್, ಮೂರು ಬೌಂಡರಿಗಳನ್ನು ಹೊಡೆದರು.

ಸಂಕ್ಷಿಪ್ತ ಸ್ಕೋರುಗಳು: ಯುಪಿ ವಾರಿಯರ್ಸ್: 20 ಓವರುಗಳಲ್ಲಿ 5 ವಿಕೆಟ್‌ಗೆ 143 (ಫೋಬಿ ಲಿಚ್‌ಫೀಲ್ಡ್ 20, ದೀಪ್ತಿ ಶರ್ಮಾ ಔಟಾಗದೇ 45, ಡಿಯಾಂಡ್ರ ಡಾಟಿನ್ ಔಟಾಗದೇ 40; ಶ್ರೇಯಾಂಕಾ ಪಾಟೀಲ 50ಕ್ಕೆ2, ನದೀನ್ ಡಿ ಕ್ಲರ್ಕ್ 28ಕ್ಕೆ2); ಆರ್‌ಸಿಬಿ: 12.1 ಓವರುಗಳಲ್ಲಿ 1 ವಿಕೆಟ್‌ಗೆ 145 (ಗ್ರೇಸ್ ಹ್ಯಾರಿಸ್ 85, ಸ್ಮೃತಿ ಮಂದಾನ ಔಟಾಗದೇ 47).
ಪಂದ್ಯದ ಆಟಗಾರ್ತಿ: ಗ್ರೇಸ್ ಹ್ಯಾರಿಸ್.

ಮಹಿಳಾ ಪ್ರೀಮಿಯರ್ ಲೀಗ್ — ಇಂದಿನ ಪಂದ್ಯ

ಮುಂಬೈ ಇಂಡಿಯನ್ಸ್ Vs ಗುಜರಾತ್ ಜೈಂಟ್ಸ್
ರಾತ್ರಿ 7.30
ಲೈವ್: ಸ್ಟಾರ್‌ಸ್ಪೋರ್ಟ್ಸ್ ನೆಟ್‌ವರ್ಕ್, ಜಿಯೊ ಹಾಟ್‌ಸ್ಟಾರ್ ಆ್ಯಪ್

ಭಾರತ ತಂಡಕ್ಕೆ ಬಡೋನಿ ಆಯ್ಕೆ

ನವದೆಹಲಿ (ಪಿಟಿಐ): ಆಲ್‌ರೌಂಡರ್ ವಾಷಿಂಗ್ಟನ್ ಸುಂದರ್ ಅವರು ಪಕ್ಕೆಲುಬಿನ ನೋವಿನಿಂದ ಭಾರತ ತಂಡದಿಂದ ಹೊರಬಿದ್ದಿದ್ದಾರೆ. ನ್ಯೂಜಿಲೆಂಡ್ ವಿರುದ್ಧ ಏಕದಿನ ಸರಣಿಯ ಉಳಿದ ಎರಡು ಪಂದ್ಯಗಳಲ್ಲಿ ಆಡುವ ತಂಡದಲ್ಲಿ ದೆಹಲಿಯ ಬ್ಯಾಟರ್ ಆಯುಷ್ ಬಡೋನಿ ಸ್ಥಾನ ಪಡೆದಿದ್ದಾರೆ.

ಇದೇ ಮೊದಲ ಬಾರಿ ಬಡೋನಿ ರಾಷ್ಟ್ರೀಯ ತಂಡದಲ್ಲಿ ಅವಕಾಶ ಪಡೆದಿದ್ದಾರೆ. ವಾಷಿಂಗ್ಟನ್ ಅವರು ಭಾನುವಾರ ಮೊದಲ ಏಕದಿನ ಪಂದ್ಯದ ವೇಳೆ ಗಾಯಗೊಂಡಿದ್ದರು. ಐದು ಓವರ್ ಬೌಲಿಂಗ್ ಮಾಡಿದ ನಂತರ ನೋವಿನಿಂದ ಮೈದಾನ ತೊರೆದಿದ್ದರು. ತಂಡ ಆರು ವಿಕೆಟ್ ಕಳೆದುಕೊಂಡಾಗ ಆಡಲು ಬಂದಿದ್ದರು. ಭಾರತ ನಾಲ್ಕು ವಿಕೆಟ್‌ಗಳ ಜಯಪಡೆದಿತ್ತು.

'ವಡೋದರದ ಬಿಸಿಎ ಕ್ರೀಡಾಂಗಣದಲ್ಲಿ ಭಾನುವಾರ ಮೊದಲ ಪಂದ್ಯದಲ್ಲಿ ಬೌಲಿಂಗ್ ಮಾಡುವ ವೇಳೆ ಪಕ್ಕೆಲುಬಿನ ಕೆಳಭಾಗದಲ್ಲಿ ವಾಷಿಂಗ್ಟನ್ ಅವರು ತೀವ್ರ ನೋವಿಗೆ ಒಳಗಾಗಿದ್ದಾರೆ. ಅವರು ಉಳಿದೆರಡು ಪಂದ್ಯಗಳಿಗೆ ಅಲಭ್ಯರಾಗಿದ್ದಾರೆ' ಎಂದು ಬಿಸಿಸಿಐ ಹೇಳಿಕೆ ತಿಳಿಸಿದೆ.

'ಪುರುಷರ ತಂಡದ ಆಯ್ಕೆ ಸಮಿತಿ ಅವರ ಸ್ಥಾನದಲ್ಲಿ ಆಯುಷ್ ಬಡೋನಿ ಅವರನ್ನು ಹೆಸರಿಸಿದೆ. ಅವರು ಬುಧವಾರ ರಾಜಕೋಟ್‌ನಲ್ಲಿ ತಂಡವನ್ನು ಸೇರಿಕೊಳ್ಳಲಿದ್ದಾರೆ' ಎಂದು ಪ್ರಕಟಣೆ ತಿಳಿಸಿದೆ.

26 ವರ್ಷ ವಯಸ್ಸಿನ ಬ್ಯಾಟರ್ ಬಡೋನಿ ಅವರು ಐಪಿಎಲ್‌ನಲ್ಲಿ ಲಖನೌ ಸೂಪರ್ ಜೈಂಟ್ಸ್ ತಂಡದಲ್ಲಿ ಆಡುವ ಮೂಲಕ ಗಮನ ಸೆಳೆದಿದ್ದರು.

ಪಂತ್ ಬದಲು ಜುರೆಲ್: ವಿಕೆಟ್ ಕೀಪರ್ ರಿಷಭ್ ಪಂತ್ ಅವರು ತಂಡದ ಅಭ್ಯಾಸದ ವೇಳೆ ಪಕ್ಕೆಲುಬಿನ ನೋವಿಗೆ ಒಳಗಾಗಿದ್ದು, ಅವರ ಬದಲು ಧ್ರುವ್ ಜುರೆಲ್ ಅವರನ್ನು ತಂಡಕ್ಕೆ ಸೇರ್ಪಡೆ ಮಾಡಲಾಗಿದೆ.

ಅಖಿಲ ಭಾರತ ಅಂತರ ವಿಶ್ವವಿದ್ಯಾಲಯಗಳ ಅಥ್ಲೆಟಿಕ್ ಕೂಟ

ನೆರಳಾಗಿ ಅಣ್ಣ; ನಿರ್ಮಲಾಗೆ ಚಿನ್ನ

ಪ್ರಜಾವಾಣಿ ವಾರ್ತೆ

ಮೂಡುಬಿದಿರೆ (ದಕ್ಷಿಣ ಕನ್ನಡ): ರಾಜಸ್ಥಾನದ ಚೂರೂ ಜಿಲ್ಲೆಯ ನಿರ್ಮಲಾ ಅವರು ಅಣ್ಣ, ದೂರ ಅಂತರದ ಓಟಗಾರ ಪ್ರೀತಂ ಸಿಂಗ್ ನೆರಳಿನಲ್ಲೇ ಓಟದ ಅಭ್ಯಾಸ ಮಾಡಿದ ಕಾಲೇಜು ವಿದ್ಯಾರ್ಥಿನಿ. ಪ್ರೀತಂ ಸಲಹೆಯಂತೆ 800 ಮೀಟರ್ಸ್ ಓಟದ ಟ್ರ್ಯಾಕ್‌ನಿಂದ 5 ಸಾವಿರ ಮತ್ತು 10 ಸಾವಿರ ಮೀಟರ್ಸ್ ಹಾದಿಗೆ ಹೊರಳಿದ ಅವರು ಮೂಡುಬಿದಿರೆಯ ಸ್ವರಾಜ್ಯ ಮೈದಾನದಲ್ಲಿ ಚಿನ್ನ ಗೆದ್ದು ಸಂಭ್ರಮಿಸಿದರು.

ಆಳ್ವಾಸ್ ಕಾಲೇಜಿನಲ್ಲಿ ಪದವಿ ಓದುತ್ತಿರುವ ನಿರ್ಮಲಾ ಸೋಮವಾರ ಆರಂಭಗೊಂಡ ಅಖಿಲ ಭಾರತ ಅಂತರ ವಿಶ್ವವಿದ್ಯಾಲಯಗಳ ಅಥ್ಲೆಟಿಕ್ ಕೂಟದ ಮಹಿಳೆಯರ 10 ಸಾವಿರ ಮೀ. ಓಟದಲ್ಲಿ ಮೊದಲಿಗರಾದರು. ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ಸಹಯೋಗದಲ್ಲಿ ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿವಿ ಆಯೋಜಿಸಿರುವ ಚಾಂಪಿಯನ್‌ಷಿಪ್‌ನಲ್ಲಿ ಅವರು 34 ನಿಮಿಷ 47:20 ಸೆಕೆಂಡುಗಳಲ್ಲಿ ಗುರಿ ತಲುಪಿದರು.

ಮುಂಜಾನೆಯ ಚಳಿಯಲ್ಲಿ ನಡೆದ ಸ್ಪರ್ಧೆಯಲ್ಲಿ ನಿರ್ಮಲಾ ಅವರು ಪುಣೆಯ ಸಾವಿತ್ರಿಭಾಯಿ ಫುಲೆ ವಿಶ್ವವಿದ್ಯಾಲಯದ ರವೀನಾ ಗಾಯಕವಾಡ್ (34ನಿ 48.7 ಸೆ) ಮತ್ತು ಪಂಜಾಬ್‌ನ ಲವ್ಲಿ ಪ್ರೊಫೆಷನಲ್ ವಿವಿ ಅಂಜಲಿ ದೇವಿ (34:49.54) ಅವರ ಪ್ರಬಲ ಸವಾಲನ್ನು ಮೀರಿ ನಿಂತರು.

ನಿರ್ಮಲಾ ಗೆಲುವಿನ ಸಂಭ್ರಮ

ಚಾಂಪಿಯನ್‌ಷಿಪ್‌ನ ಮೊದಲ ಸ್ಪರ್ಧೆ, ಪುರುಷರ 10,000 ಮೀಟರ್ಸ್ ಓಟದ ಚಿನ್ನ ಉತ್ತರಪ್ರದೇಶದ ಬರೇಲಿಯ ಮಹಾತ್ಮ ಜ್ಯೋತಿಬಾ ಫುಲೆ ವಿಶ್ವವಿದ್ಯಾಲಯದ ಪಾಲಾಯಿತು. 29 ನಿಮಿಷ 19:46 ಸೆಕೆಂಡುಗಳಲ್ಲಿ ಗುರಿ ತಲುಪಿದ ಗೌರವ್ ಚಿನ್ನದ ನಗೆ ಬೀರಿದರು. ರೋಹ್ಟಕ್‌ನ ಮಹರ್ಷಿ ದಯಾನಂದ ವಿವಿಯ ಅವಕಾಶ್ (29:19.91) ಬೆಳ್ಳಿ ಮತ್ತು ಆದಿಕವಿ ಶ್ರೀ ಮಹರ್ಷಿ ವಿವಿಯ ಪ್ರಿನ್ಸ್‌ರಾಜ್ ಯಾದವ್ ಕಂಚಿನ ಪದಕ ಗಳಿಸಿದರು.

ಸಹೋದರನೇ ಕೋಚ್: ನಿರ್ಮಲಾ ಕಳೆದ ಬಾರಿ ಅಖಿಲ ಭಾರತ ಅಂತರ ವಿವಿ ಅಥ್ಲೆಟಿಕ್ಸ್‌ನಲ್ಲಿ ಬಿಕಾನೇರ್‌ನ ಮಹಾರಾಜ್ ಗಂಗಾಸಿಂಗ್ ವಿಶ್ವವಿದ್ಯಾಲಯದ ಪರವಾಗಿ ಕಣಕ್ಕಿಳಿದು 5 ಸಾವಿರ ಮೀಟರ್ಸ್ ಓಟದಲ್ಲಿ ಬೆಳ್ಳಿ ಗೆದ್ದಿದ್ದರು. ನಂತರ ಅಲ್ಲಿನ ದಾಖಲಾತಿಯನ್ನು ರದ್ದುಪಡಿಸಿ ಆಳ್ವಾಸ್‌ನ ದತ್ತು ಯೋಜನೆಯಡಿ ಕಲಿಯಲು ಮೂಡುಬಿದಿರೆಗೆ ಬಂದಿದ್ದಾರೆ.

800 ಮೀಟರ್ಸ್ ಓಡುತ್ತಿದ್ದ ಅವರು ಎರಡು ವರ್ಷಗಳ ಹಿಂದಷ್ಟೇ 5 ಸಾವಿರ ಮತ್ತು 10 ಸಾವಿರ ಮೀಟರ್ಸ್‌ಗೆ ಪದಾರ್ಪಣೆ ಮಾಡಿದ್ದರು. ಸೇನೆಯಲ್ಲಿರುವ ಪ್ರೀತಂ ಸಿಂಗ್ ಅವರು ಹಾಫ್ ಮ್ಯಾರಥಾನ್ ಓಟಗಾರ. ಅವರನ್ನು ನೋಡಿ ಬೆಳೆದ ನಿರ್ಮಲಾ ಅಣ್ಣನ ಬಳಿ ತರಬೇತಿಯನ್ನೂ ಪಡೆಯುತ್ತಿದ್ದಾರೆ.

'800 ಮೀಟರ್ಸ್ ಓಟದಲ್ಲಿ ನಿರೀಕ್ಷಿತ ಯಶಸ್ಸು ಕಾಣಲಿಲ್ಲ. ಆಗ ದೂರ ಅಂತರವನ್ನು ಆಯ್ದುಕೊಳ್ಳುವಂತೆ ಅಣ್ಣನೇ ಸಲಹೆ ನೀಡಿದ. ಇದರಲ್ಲಿ ಯಶಸ್ಸು ಕಾಣುತ್ತಿದ್ದೇನೆ. ಆಳ್ವಾಸ್ ಕಾಲೇಜಿನಲ್ಲಿ ಕ್ರೀಡಾ ಕೋಟಾದಡಿ ಅವಕಾಶ ಲಭಿಸಿದ್ದರಿಂದ ಅನುಕೂಲವಾಯಿತು' ಎಂದು ನಿರ್ಮಲಾ 'ಪ್ರಜಾವಾಣಿ'ಗೆ ತಿಳಿಸಿದರು.

ಇಂಡಿಯಾ ಓಪನ್ ಬ್ಯಾಡ್ಮಿಂಟನ್ ಇಂದಿನಿಂದ

ನವದೆಹಲಿ (ಪಿಟಿಐ): ಭಾರತದ ಪ್ರಮುಖ ಶಟ್ಲರ್‌ಗಳಾದ ಪಿ.ವಿ.ಸಿಂಧು ಮತ್ತು ಲಕ್ಷ್ಯ ಸೇನ್ ಅವರು ಮಂಗಳವಾರ ತವರಿನಲ್ಲಿ ಆರಂಭವಾಗುವ 'ಇಂಡಿಯಾ ಓಪನ್ ಸೂಪರ್ 750' ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಸುಧಾರಿತ ಆಟದ ಪ್ರದರ್ಶನ ನೀಡುವ ವಿಶ್ವಾಸದಲ್ಲಿದ್ದಾರೆ.

ಆದರೆ ಇತ್ತೀಚಿನ ಕೆಲ ವರ್ಷದಿಂದ ಭಾರತದ ಪ್ರಮುಖ ಆಟಗಾರರು ತವರಿನ ಪ್ರಯೋಜನ ಪಡೆಯುವಲ್ಲಿ ಯಶಸ್ವಿಯಾಗುತ್ತಿಲ್ಲ. ಹಿಂದಿನ 15 ವರ್ಷಗಳಲ್ಲಿ ಬೆರಳೆಣಿಕೆಯಷ್ಟು ಆಟಗಾರರು ಟೂರ್ನಿಯಲ್ಲಿ ಯಶಸ್ಸು ಗಳಿಸಿದ್ದಾರೆ.

ಪಿ.ವಿ. ಸಿಂಧು

ಪುರುಷರ ಸಿಂಗಲ್ಸ್ ಮೊದಲ ಸುತ್ತಿನಲ್ಲಿ ಭಾರತದ ಅಗ್ರ ಆಟಗಾರ ಲಕ್ಷ್ಯ ಸೇನ್ ಅವರು ಸ್ವದೇಶದ ಆಟಗಾರ ಆಯುಷ್ ಶೆಟ್ಟಿ ಅವರನ್ನು ಎದುರಿಸಲಿದ್ದಾರೆ. ಸಿಂಧು, ವಿಯೆಟ್ನಾಮಿನ ನೂಯೆನ್ ಥುಯ್ ಲಿನ್ ಅವರನ್ನು ಎದುರಿಸುವ ಮೂಲಕ ಅಭಿಯಾನ ಆರಂಭಿಸಲಿದ್ದಾರೆ.

2017ರ ಚಾಂಪಿಯನ್ ಆಗಿರುವ ಸಿಂಧು, ಕಳೆದ ವಾರ ಮಲೇಷ್ಯಾ ಓಪನ್ ಸೂಪರ್ 1000 ಟೂರ್ನಿಯ ಸೆಮಿಫೈನಲ್ ತಲುಪಿದ್ದು, ವಿಶ್ವಾಸ ಹೆಚ್ಚಿಸಿಕೊಂಡಿದ್ದಾರೆ. ಗಾಯಾಳಾಗಿ ಕೆಲವು ತಿಂಗಳು ಆಟದಿಂದ ದೂರವಿದ್ದ ಸಿಂಧು, ಆ ಟೂರ್ನಿ ಮೂಲಕ ಪುನರಾಗಮನ ಮಾಡಿದ್ದರು.

ಈ ಟೂರ್ನಿಯು ಇಂದಿರಾ ಗಾಂಧಿ ಒಳಾಂಗಣ ಕ್ರೀಡಾಂಗಣದಲ್ಲಿ ನಡೆಯುತ್ತಿದ್ದು, ಸಿಂಧು ಅವರಿಗೆ ಲಯಕ್ಕೆ ಮರಳಲು ವೇದಿಕೆಯಾಗಿದೆ.

2022ರಲ್ಲಿ ಇಂಡಿಯಾ ಓಪನ್ ಚಾಂಪಿಯನ್ ಆಗಿದ್ದ ಸೇನ್, 2025ರ ಕೊನೆಯಲ್ಲಿ ಆಸ್ಟ್ರೇಲಿಯನ್ ಓಪನ್ ಸೂಪರ್ 500 ಟೂರ್ನಿ ಗೆದ್ದರೂ, ಈ ವರ್ಷ ಮಲೇಷ್ಯಾ ಓಪನ್‌ನಲ್ಲಿ ನಿರಾಸೆ ಅನುಭವಿಸಿದ್ದಾರೆ. ಅವರಿಗೂ ಸ್ಥಿರ ಆಟ ಕಂಡುಕೊಳ್ಳಲು ತವರಿನ ಟೂರ್ನಿ ಅವಕಾಶ ಮಾಡಿದೆ.

2025ರಲ್ಲಿ ಅಮೆರಿಕ ಓಪನ್ ಸೂಪರ್ 300 ಟೂರ್ನಿ ಗೆದ್ದಿದ್ದ ಆಯುಷ್, ನಂತರ ವಿವಿಧ ಟೂರ್ನಿಗಳಲ್ಲಿ ಕೊಡೈ ನರವೋಕಾ, ಲೋಹ್ ಕೀನ್ ಯು, ಚೌ ಟಿಯೆನ್ ಚೆನ್, ಬ್ರಿಯಾನ್ ಯಂಗ್ ಅಂಥ ಖ್ಯಾತನಾಮರನ್ನು ಮಣಿಸಿದ್ದಾರೆ. ಒಲಿಂಪಿಕ್ ಕಂಚಿನ ಪದಕ ವಿಜೇತರಾದ ಝಿ ಜಿಯಾ ಅವರನ್ನು ಇತ್ತೀಚೆಗೆ ಮಲೇಷ್ಯಾ ಓಪನ್ ಟೂರ್ನಿಯ ಮೊದಲ ಸುತ್ತಿನಲ್ಲಿ ಮಣಿಸಿದ್ದಾರೆ.

ಕಿದಂಬಿ ಶ್ರೀಕಾಂತ್ ಮೊದಲ ಸುತ್ತಿನಲ್ಲಿ ತೈವಾನ್‌ನ ಲಿನ್ ಚುನ್-ಯಿ ಅವರನ್ನು ಎದುರಿಸಲಿದ್ದಾರೆ.

ಪದಕ ಭರವಸೆ: ಪುರುಷರ ಡಬಲ್ಸ್‌ನಲ್ಲಿ ಸಾತ್ವಿಕ್‌ಸಾಯಿರಾಜ್ ರಣಕಿರೆಡ್ಡಿ–ಚಿರಾಗ್ ಶೆಟ್ಟಿ ಜೋಡಿ ಭಾರತದ ಪದಕ ಭರವಸೆಯಾಗಿದ್ದಾರೆ.

ಸನ್ಮಾನ...

ಅಂತರರಾಷ್ಟ್ರೀಯ ಬ್ಯಾಡ್ಮಿಂಟನ್ ಆಟಗಾರ್ತಿ ಅಶ್ವಿನಿ ಭಟ್ ಅವರನ್ನು ಪಿಇಎಸ್ ವಿಶ್ವವಿದ್ಯಾಲಯವು ಆಯೋಜಿಸಿದ್ದ ಅಖಿಲ ಭಾರತ ಅಂತರ ವಿಶ್ವವಿದ್ಯಾಲಯ ಮಹಿಳಾ ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್‌ನ ಉದ್ಘಾಟನಾ ಕಾರ್ಯಕ್ರಮದಲ್ಲಿ ಭಾನುವಾರ ಸನ್ಮಾನಿಸಲಾಯಿತು. (ಎಡದಿಂದ) ಪ್ರೊ. ಎಂ.ಎಸ್. ವಿನಯ್, ವಿ.ವಿ ಕುಲಾಧಿಪತಿ ಪ್ರೊ.ಜವಾಹರ್ ದೊರೆಸ್ವಾಮಿ, ಕುಲಪತಿ ಜೆ.ಸೂರ್ಯಪ್ರಸಾದ್ ಮತ್ತು ಎಐಯು ವೀಕ್ಷಕ ಕೆ.ಆರ್. ಅಜಿತ್ ಮೋಹನ್ ಭಾಗವಹಿಸಿದ್ದರು

ಐಎಸ್‌ಎಲ್: ಪಾಲ್ಗೊಳ್ಳಲು ಕ್ಲಬ್‌ಗಳ ಒಪ್ಪಿಗೆ

ನವದೆಹಲಿ (ಪಿಟಿಐ): ಫೆಬ್ರುವರಿ 14ರಂದು ಆರಂಭವಾಗಲಿರುವ ಇಂಡಿಯನ್ ಸೂಪರ್ ಲೀಗ್‌ನಲ್ಲಿ (ಐಎಸ್‌ಎಲ್) ತಮ್ಮ ತಂಡಗಳ ಭಾಗವಹಿಸುವಿಕೆಯನ್ನು ಖಚಿತಪಡಿಸಿ ಎಲ್ಲ 14 ಕ್ಲಬ್‌ಗಳು ಅಖಿಲ ಭಾರತ ಫುಟ್‌ಬಾಲ್ ಫೆಡರೇಷನ್ (ಎಐಎಫ್‌ಎಫ್)ಗೆ ಸೋಮವಾರ ಪತ್ರ ಬರೆದಿವೆ.

ವಾಣಿಜ್ಯ ಪಾಲುದಾರ ಸಿಗದ ಕಾರಣ 2025–26ನೇ ಸಾಲಿನ ಐಎಸ್‌ಎಲ್ ಟೂರ್ನಿ ನಡೆಯುವ ಬಗ್ಗೆ ಅನುಮಾನಗಳು ಮೂಡಿದ್ದವು. ಪಾಲ್ಗೊಳ್ಳುವಿಕೆ ಶುಲ್ಕ ವಿಧಿಸದಂತೆ ಹಾಗೂ ನಿರ್ವಹಣಾ ವೆಚ್ಚಗಳ ಹೊಣೆಯನ್ನು ವಹಿಸಿಕೊಳ್ಳುವಂತೆ ಕ್ಲಬ್‌ಗಳು ಎಐಎಫ್‌ಎಫ್‌ಗೆ ಒತ್ತಾಯಿಸಿದ್ದವು.

ಕೇಂದ್ರ ಕ್ರೀಡಾ ಸಚಿವ ಮನ್ಸುಖ್ ಮಾಂಡವೀಯ ಅವರು ಜ.5ರಂದು ಪತ್ರಿಕಾಗೋಷ್ಠಿ ನಡೆಸಿ 'ಟೂರ್ನಿಯು ಫೆಬ್ರುವರಿ 14ರಂದು ಆರಂಭವಾಗಲಿದೆ. ಎಲ್ಲ ಕ್ಲಬ್‌ಗಳು ಭಾಗಿಯಾಗಲಿವೆ' ಎಂದು ಘೋಷಿಸಿದ್ದರು. ಆದರೂ, ಕೆಲವು ಕ್ಲಬ್‌ಗಳು ತಮ್ಮ ತಂಡಗಳ ಪಾಲ್ಗೊಳ್ಳುವಿಕೆಯನ್ನು ಅಧಿಕೃತವಾಗಿ ಘೋಷಿಸಿರಲಿಲ್ಲ.

ಬಾಂಗ್ಲಾ ಮನವಿ: ಐಸಿಸಿ ಒಪ್ಪುವ ಸಾಧ್ಯತೆ ದೂರ

ನವದೆಹಲಿ (ಪಿಟಿಐ): ಭಾರತದಲ್ಲಿ ನಡೆಯಲಿರುವ ಟಿ20 ವಿಶ್ವಕಪ್ ಟೂರ್ನಿಯಲ್ಲಿ ತನ್ನ ಪಂದ್ಯಗಳನ್ನು ಸ್ಥಳಾಂತರಿಸುವಂತೆ ಬಾಂಗ್ಲಾದೇಶ ಮಾಡಿರುವ ಮನವಿಯನ್ನು ತಾನು ಒಪ್ಪಿಕೊಳ್ಳುವ ಸಾಧ್ಯತೆಯಿಲ್ಲ ಎಂದು ಅಂತರರಾಷ್ಟ್ರೀಯ ಕ್ರಿಕೆಟ್ ಸಮಿತಿಯು (ಐಸಿಸಿ) ಸೋಮವಾರ ಸುಳಿವು ನೀಡಿದೆ.

ಭಾರತದಲ್ಲಿ ತನ್ನ ತಂಡ ಆಡುವುದಕ್ಕೆ ಸಂಬಂಧಿಸಿ ಭದ್ರತೆ ವ್ಯವಸ್ಥೆಯ ಬಗ್ಗೆ ಬಿಸಿಬಿ ವ್ಯಕ್ತಪಡಿಸಿರುವ ಕಳವಳವು ಪರಿಣಾಮಕಾರಿ ಮಟ್ಟದಲ್ಲಿಲ್ಲ ಎಂದು ಐಸಿಸಿ ಅಭಿಪ್ರಾಯಪಟ್ಟಿದೆ. ಫೆಬ್ರುವರಿ 7ರಂದು ಆರಂಭವಾಗುವ ಟೂರ್ನಿಯಲ್ಲಿ ಪಾಲ್ಗೊಂಡಲ್ಲಿ ಬಾಂಗ್ಲಾದೇಶ ತಂಡಕ್ಕೆ ನಿರ್ದಿಷ್ಟ ಅಥವಾ ನೇರ ಬೆದರಿಕೆಯಂಥ ಅಪಾಯ ಕಾಣಿಸುತ್ತಿಲ್ಲ ಎಂಬ ಅಂಶವು ಸುರಕ್ಷತೆಗೆ ಸಂಬಂಧಿಸಿ ಐಸಿಸಿಯು ಸಿದ್ಧಪಡಿಸಿದ ವರದಿಯಲ್ಲಿದೆ ಎಂದು ಮೂಲಗಳು ತಿಳಿಸಿವೆ.

ಭದ್ರತೆಗೆ ಸಂಬಂಧಿಸಿ ಅಂತರ ರಾಷ್ಟ್ರೀಯ ಮಟ್ಟದಲ್ಲಿ ಕಾರ್ಯನಿರ್ವಹಿಸಿರುವ ತಜ್ಞರಿಂದ ಐಸಿಸಿಯು ಸ್ವತಂತ್ರ್ಯವಾಗಿ ಮೌಲ್ಯಮಾಪನ ನಡೆಸಿದೆ. ಬಾಂಗ್ಲಾದೇಶ ತಂಡವು ಭಾರತದಲ್ಲಿ ಆಡುವುದಕ್ಕೆ ಯಾವುದೇ ಭದ್ರತಾ ಸಮಸ್ಯೆ ಎದುರಾಗದು ಎಂದು ತಜ್ಞರ ತಂಡ ತೀರ್ಮಾನಕ್ಕೆ ಬಂದಿದೆ' ಎಂದು ಐಸಿಸಿಯ ಮೂಲವು ಹೇಳಿದೆ.

ಸಂಪೂರ್ಣ ಸುಳ್ಳು: ಭಾರತದಲ್ಲಿ ಆಡುವ ಕುರಿತಂತೆ ಬಿಸಿಬಿ ವ್ಯಕ್ತಪಡಿಸಿರುವ ನಿರ್ದಿಷ್ಟ ಭದ್ರತಾ ಕಳವಳವನ್ನು ಐಸಿಸಿ ಒಪ್ಪಿಕೊಂಡಿದೆ ಎಂದು ಬಾಂಗ್ಲಾದೇಶ ಕ್ರೀಡಾ ಸಲಹೆಗಾರ ಆಸಿಫ್ ನಜ್ರುಲ್ ಹೇಳಿದ್ದರು. ಆದರೆ ಅವರ ಹೇಳಿಕೆಯ ಸಂಪೂರ್ಣ ಸುಳ್ಳು ಎಂದು ಐಸಿಸಿ ಹೇಳಿದೆ.

ಐಸಿಸಿ ಪುರುಷರ ಟಿ20 ವಿಶ್ವಕಪ್ 2026